ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಗವಿಮಠದ ಜಾತ್ರೆ ಕೇವಲ ಸಂಭ್ರಮಕ್ಕಷ್ಟೇ ಸೀಮಿತವಾಗಿಲ್ಲ ಅದು ಜಾಗೃತಿ ಜಾತ್ರೆಯೂ ಆಗಿದೆ

ಸಿ.ಟಿ.ರವಿಗೆ ಅನಾಮಿಕ ಬೆದರಿಕೆ ಪತ್ರ 7
ಆಮೆಗತಿಯಲ್ಲಿ ಪೌತಿ ಖಾತೆ ಆಂದೋಲನ
ವೃದ್ಧರಿಗೆ ‘ಆಯುಷ್ಮಾನ್’ ಮರೀಚಿಕೆ 6
ಮೃತರ ಹೆಸರಿನಲ್ಲಿವೆ 37 ಲಕ್ಷ ಪಹಣಿಗಳು 6

ದಲಿತ ವ್ಯಕ್ತಿಯ ದೇಗುಲ ಪ್ರವೇಶಕ್ಕೆ ನಿರಾಕರಣೆ

ಗೌರಿಬಿದನೂರು (ಚಿಕ್ಕಬಳ್ಳಾಪುರ): ವೈಕುಂಠ ಏಕಾದಶಿ ಪ್ರಯುಕ್ತ ತಾಲ್ಲೂಕಿನ ತೊಂಡೇಭಾವಿ ಹೋಬಳಿ ಬೆಳಚಿಕ್ಕನ ಹಳ್ಳಿಯಲ್ಲಿ ಶುಕ್ರವಾರ ವೆಂಕಟರಮಣ ದೇವಾಲಯಕ್ಕೆ ಹೋದ ಪರಿಶಿಷ್ಟ ಜಾತಿಯ ವ್ಯಕ್ತಿಗೆ ದೇವಸ್ಥಾನದೊಳಗೆ ಪ್ರವೇಶ ನಿರಾಕರಿಸಲಾಗಿದೆ.

‘ಜಾತಿಯ ಕಾರಣಕ್ಕಾಗಿ ದೇವಾಲಯ ಪ್ರವೇಶ ದ್ವಾರದಲ್ಲಿಯೇ ನನ್ನನ್ನು ತಡೆದ ಗ್ರಾಮದ ಕೆಲವರು ವಾಪಸ್ ಕಳಿಸಿದ್ದಾರೆ’ ಎಂದು ಗೋಪಾಲಪ್ಪ ಮಂಚೇನಹಳ್ಳಿ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

6ನೇ ಪುಟ ನೋಡಿ

‘ಎರಡನೇ ಅಧಿಕೃತ ಭಾಷೆಯಾಗಿ ತುಳು’

ಉಳ್ಳಾಲ (ದಕ್ಷಿಣ ಕನ್ನಡ): ತುಳು ಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆ ಮಾಡುವ ಪ್ರಸ್ತಾವ ಈಡೇರಿಸಲು ಸರ್ಕಾರ ಗಂಭೀರ ಪ್ರಯತ್ನ ಮಾಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನರಿಂಗಾನ ಕಂಬಳ ಸಮಿತಿ ಆಯೋಜಿಸಿದ್ದ ಲವ-ಕುಶ ಜೋಡು ಕರೆ ಕಂಬಳ ಉದ್ಘಾಟಿಸಿ ಮಾತನಾಡಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಹೈಕೋರ್ಟ್ ತೀರ್ಪು ಪಾಲನೆ; ಯುಜಿಸಿ ವಿದ್ಯಾರ್ಹತೆ ಇಲ್ಲದವರಿಗೆ ಕೊಕ್

5 ಸಾವಿರ ‘ಅತಿಥಿ’ಗಳು ಮನೆಗೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅತ್ಯಂತ ಕಡಿಮೆ ಗೌರವ ಧನಕ್ಕೆ ಎರಡು ದಶಕಗಳಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕೆಲಸ ಮಾಡುತ್ತಾ ಬಂದಿದ್ದ ಐದು ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳಲಿದ್ದಾರೆ.

ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಗದಿ ಮಾಡಿರುವ ಅರ್ಹತೆ ಹೊಂದಿಲ್ಲದ ಅತಿಥಿ ಉಪನ್ಯಾಸಕರ ಸೇವೆಯನ್ನು 2024–25ನೇ ಸಾಲಿಗೆ ಬಳಸಿಕೊಳ್ಳದೇ ಇರಲು ಉನ್ನತ ಶಿಕ್ಷಣ ಇಲಾಖೆ ನಿರ್ಧರಿಸಿದೆ. ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಯುಜಿಸಿ ನಿಗದಿ ಮಾಡಿರುವ ಅರ್ಹತೆಗಳನ್ನೇ ಅತಿಥಿ ಉಪನ್ಯಾಸಕರ ಆಯ್ಕೆಗೂ ಅನ್ವಯಿಸಬೇಕು ಎಂದು ಹೈಕೋರ್ಟ್ ಕಳೆದ ಸೆಪ್ಟೆಂಬರ್‌ನಲ್ಲಿ ತೀರ್ಪು ಪ್ರಕಟಿಸಿತ್ತು. ಹಾಗಾಗಿ, ಕಾಲೇಜು ಶಿಕ್ಷಣ ಇಲಾಖೆ ಯುಜಿಸಿ ಅರ್ಹತೆ ಹೊಂದಿಲ್ಲದವರನ್ನು ಕೈಬಿಟ್ಟು ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿದೆ.

9ನೇ ಪುಟ ನೋಡಿ

ಅಂಕಿ ಅಂಶಗಳು

440
ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು

10,976
2023-24ರಲ್ಲಿದ್ದ ಅತಿಥಿ ಉಪನ್ಯಾಸಕರು

5,623
ಯುಜಿಸಿ ವಿದ್ಯಾರ್ಹತೆ ಹೊಂದಿದವರು

5,353
ಯುಜಿಸಿ ವಿದ್ಯಾರ್ಹತೆ ಪಡೆಯದವರು

ಎಂ.ಫಿಲ್ ಪರಿಗಣನೆಗೆ ನಕಾರ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇದ್ದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ 2007-08ಲ್ಲಿ ನಡೆದಿದ್ದ ನೇಮಕಾತಿಯಲ್ಲಿ ಎಂ.ಫಿಲ್ ಆದವರಿಗೂ ಅವಕಾಶ ನೀಡಲಾಗಿತ್ತು. 2009ರ ಜುಲೈ 11ಕ್ಕೂ ಹಿಂದೆ ಎಂ.ಫಿಲ್ ವಿದ್ಯಾರ್ಹತೆ ಪಡೆದಿದ್ದವರು ಅರ್ಜಿ ಸಲ್ಲಿಸಿ, ನೇಮಕಾತಿ ಆದೇಶವನ್ನೂ ಪಡೆದಿದ್ದರು.

ಆಗ ಸಹಾಯಕ ಪ್ರಾಧ್ಯಾಪಕರಾಗಿ ನೇಮಕವಾದವರು ಈಗ ಸಹ ಪ್ರಾಧ್ಯಾಪಕರಾಗಿ ಬಡ್ತಿ ಪಡೆದಿದ್ದಾರೆ. ಆದರೆ, 2009ಕ್ಕೂ ಮೊದಲು ಪಡೆದಿದ್ದ ಎಂ.ಫಿಲ್ ಅರ್ಹತೆಯನ್ನು ಅತಿಥಿ ಉಪನ್ಯಾಸಕರ ನೇಮಕಕ್ಕೆ ಪರಿಗಣಿಸಲು ಕಾಲೇಜು ಶಿಕ್ಷಣ ಇಲಾಖೆ ನಿರಾಕರಿಸಿದೆ.

ಸೇವಾ ಭದ್ರತೆಗೆ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಭರವಸೆ ನೀಡಿತ್ತು. ವಿದ್ಯಾರ್ಹತೆ ನೆಪದಲ್ಲಿ ಅನ್ಯಾಯ ಮಾಡಬಾರದು
ಎಚ್.ಸೋಮಶೇಖರ ಶಿಮೊಗ್ಗಿ, ಅಧ್ಯಕ್ಷ, ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ

ಹೈಕೋರ್ಟ್ ತೀರ್ಪು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೇವೆ. ಸೆಪ್ಟೆಂಬರ್ ಆದೇಶಕ್ಕೆ ತಡೆ ಸಿಗದ ಕಾರಣ ಯುಜಿಸಿ ಅರ್ಹತೆ ಇರುವವರಿಗೆ ಅವಕಾಶ ನೀಡುತ್ತಿದ್ದೇವೆ
ಎನ್. ಮಂಜುಶ್ರೀ, ಆಯುಕ್ತೆ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಬಹುತೇಕರು 2003ರಿಂದಲೂ ಅತಿಥಿ ಉಪನ್ಯಾಸಕರಾಗಿದ್ದಾರೆ. ಕೆಲವರು ನಿವೃತ್ತಿಯ ಹತ್ತಿರ ಇದ್ದಾರೆ.ಸರ್ಕಾರ ಮಾನವೀಯ ನೆಲಗಟ್ಟಿನಲ್ಲಿ ನಿರ್ಧಾರ ಕೈಗೊಳ್ಳಬೇಕು
ಹನುಮಂತಗೌಡ ಕಲ್ಮನಿ, ಅಧ್ಯಕ್ಷ, ರಾಜ್ಯ ಅತಿಥಿ ಉಪನ್ಯಾಸಕರ ಸಂಘ

‘ನನಗೆ ಯಾರ ಬೆಂಬಲವೂ ಬೇಡ’

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಚಿಕ್ಕಮಗಳೂರು: ‘ನನ್ನ ಪರವಾಗಿ ಶಾಸಕರು, ಕಾರ್ಯಕರ್ತರು ಕೂಗುವುದು ಬೇಡ. ಯಾರೂ ಒತ್ತಾಯ ಮಾಡುವುದೂ ಬೇಡ. ಈ (ಮುಖ್ಯಮಂತ್ರಿ ಹುದ್ದೆ ಗೇರಬೇಕೆಂಬ) ವಿಚಾರದಲ್ಲಿ ಯಾವುದೇ ಶಾಸಕರು ನನಗೆ ಬೆಂಬಲ ನೀಡುವುದೂ ಬೇಡ. ನಾನುಂಟು ಕಾಂಗ್ರೆಸ್ ಪಕ್ಷವುಂಟು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಶೃಂಗೇರಿಯ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಪಕ್ಷದ ನಾಯಕರು ಹೇಳಿದಂತೆ ನಾನು ಕೆಲಸ ಮಾಡಿಕೊಂಡು ಹೋಗುತ್ತೇನೆ’ ಎಂದರು.

ಕೆಲವು ದಿನಗಳಿಂದ ಅಧಿಕಾರ ಹಂಚಿಕೆಯ ವಿಷಯ ರಾಜ್ಯದಲ್ಲಿ ಚರ್ಚೆ ನಡೆಯುತ್ತಿದೆ.

ರಾಜಕಾರಣದಲ್ಲಿ ಯಾವುದೂ ಶಾಶ್ವತವಲ್ಲ. ಜನ ಆಶೀರ್ವಾದ ಇದ್ದರೆ ನಾವು ಕುರ್ಚಿಯಲ್ಲಿ ಕೂರಬಹುದು, ಇಲ್ಲದಿದ್ದರೆ ಕುರ್ಚಿಯಲ್ಲಿ ಕೂರಲು ಸಾಧ್ಯವಿಲ್ಲ
ಸಿದ್ದರಾಮಯ್ಯ, ಮುಖ್ಯಮಂತ್ರಿ

6ನೇ ಪುಟ ನೋಡಿ

ನಕ್ಸಲರು ಹೊರಬಂದಿದ್ದ ಕಾಡಿನಲ್ಲಿ ಶಸ್ತ್ರಾಸ್ತ್ರ ವಶ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಆರು ನಕ್ಸಲರು ಮುಖ್ಯವಾಹಿನಿಗೆ ಬಂದ ಬೆನ್ನಲ್ಲೇ ಪೊಲೀಸರು ಅರಣ್ಯ ದಲ್ಲಿದ್ದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಕೊಪ್ಪ ತಾಲ್ಲೂಕಿನ ಜಯಪುರ ವ್ಯಾಪ್ತಿಯ ಕಿತ್ತಲೆಗುಳಿ ಬಳಿಯ ಅರಣ್ಯದಲ್ಲಿ ಆರು ಬಂದೂಕು ಹಾಗೂ ಮದ್ದು- ಗುಂಡು ದೊರೆತಿವೆ. ಒಂದು ಎ.ಕೆ-56, ಮೂರು 303 ರೈಫಲ್, ಹನ್ನೆರಡು ಬೋರ್ ಎಸ್‌ಬಿಬಿಎಲ್, ಒಂದು ಸ್ವದೇಶ ನಿರ್ಮಿತ ಬಂದೂಕು ಸಿಕ್ಕಿದೆ.

7.62 ಎಂಎಂ ಎ.ಕೆ. ಮದ್ದುಗುಂಡು-11, 303 ರೈಫಲ್ ಮದ್ದುಗುಂಡು - 133, 12 ಬೋರ್ ಕಾರ್ಟ್ರಿಜ್-24, ಸ್ವದೇಶ ನಿರ್ಮಿತ ಪಿಸ್ತೂಲ್ ಮದ್ದುಗುಂಡು- 8 ಸೇರಿ ಒಟ್ಟು 176 ಮದ್ದುಗುಂಡು ಹಾಗೂ ಒಂದು ಎ.ಕೆ-56 ಖಾಲಿ ಮ್ಯಾಗಜಿನ್ ದೊರೆತಿದೆ. ಜಯಪುರ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ತಿಳಿಸಿದ್ದಾರೆ.

7ನೇ ಪುಟ ನೋಡಿ

ಸಂಕ್ರಾಂತಿಗೆ ಸಿದ್ಧತೆ

ಬೆಂಗಳೂರಿನ ಪಾಟರಿ ಟೌನ್‌ನಲ್ಲಿ ಮಕರ ಸಂಕ್ರಾಂತಿ ಅಂಗವಾಗಿ ಶನಿವಾರ ಮಡಕೆಗಳಿಗೆ ಮಹಿಳೆಯೊಬ್ಬರು ಅಂತಿಮ ಸ್ಪರ್ಶ ನೀಡಿದರು

ಪ್ರಜಾವಾಣಿ ಚಿತ್ರ: ರಂಜು ಪಿ.

ಎರಡನೇ ವೈದ್ಯಕೀಯ ಅಭಿಪ್ರಾಯಕ್ಕೆ 90ಕ್ಕೂ ಅಧಿಕ ಮಂದಿ ಕರೆ

ಶಸ್ತ್ರಚಿಕಿತ್ಸೆ: ತಜ್ಞರ ಸಲಹೆಗೆ ಸಹಾಯವಾಣಿ

• ವರುಣ ಹೆಗಡೆ

ಬೆಂಗಳೂರು: ಮೊಣಕಾಲು ಮತ್ತು ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯ ಉಚಿತ ಸಹಾಯವಾಣಿಯ ಅಡಿ ತಜ್ಞ ವೈದ್ಯರು ಎರಡನೇ ವೈದ್ಯಕೀಯ ಅಭಿಪ್ರಾಯ ಒದಗಿಸಲಾಗುತ್ತಿದೆ.

ಈ ಸಹಾಯವಾಣಿಯ ಅಡಿ ಒಂದೂವರೆ ತಿಂಗಳಲ್ಲಿ 90ಕ್ಕೂ ಅಧಿಕ ಮಂದಿಗೆ ಶಸ್ತ್ರಚಿಕಿತ್ಸೆ ಬಗೆಗಿನ ಗೊಂದಲ ನಿವಾರಿಸಲಾಗಿದೆ.

ಶಸ್ತ್ರಚಿಕಿತ್ಸೆಗಳ ಅಗತ್ಯದ ಬಗ್ಗೆ ಗೊಂದಲಗಳು ಇರುವುದರಿಂದ, ಮೊಣಕಾಲು ಹಾಗೂ ಸೊಂಟದ ಕೀಲು ಬದಲಾವಣೆಯಂತಹ ಕ್ಲಿಷ್ಟಕರ ಶಸ್ತ್ರಚಿಕಿತ್ಸೆಗಳಿಗೆ ಎರಡನೇ ಅಭಿಪ್ರಾಯ ಒದಗಿಸಲು ಇಲಾಖೆಯು ನವೆಂಬರ್ ತಿಂಗಳಲ್ಲಿ ಯೋಜನೆ ಪ್ರಾರಂಭಿಸಿತ್ತು.

> ಕ್ಲಿಷ್ಟಕರ ಶಸ್ತ್ರಚಿಕಿತ್ಸೆ ಕುರಿತು ಗೊಂದಲವಿದ್ದಲ್ಲಿ ಸಹಾಯವಾಣಿ ಮೂಲಕ, ಉಚಿತವಾಗಿ ಸಲಹೆ ಪಡೆಯಬಹುದು. ತಜ್ಞವೈದ್ಯರ ಮಾರ್ಗದರ್ಶನವೂ ಲಭ್ಯ.
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

ಯೋಜನೆಯ ಅಡಿ ಇಲಾಖೆಯು ಗುರುತಿಸಿದ ವೈದ್ಯಕೀಯ ತಜ್ಞರು ರೋಗಿಯ ದಾಖಲಾತಿ ಹಾಗೂ ಸಮಸ್ಯೆಯ ತೀವ್ರತೆ ಬಗ್ಗೆ ಪರಿಶೀಲಿಸಿ, ಅಗತ್ಯ ಸಲಹೆ ಒದಗಿಸುತ್ತಿದ್ದಾರೆ. ವಾರದ ಎಲ್ಲ ದಿನಗಳು 24 ಗಂಟೆ ಈ ಸೇವೆ ಲಭ್ಯವಾಗುತ್ತಿದೆ. ಕರೆ ಮಾಡುತ್ತಿರುವವರಲ್ಲಿ ಹೆಚ್ಚಿನವರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವವರೇ ಆಗಿದ್ದಾರೆ.

ಮೊಣಕಾಲು, ಸೊಂಟದ ಕೀಲು ಬದಲಿ ಕ್ಲಿಷ್ಟಕರ ಶಸ್ತ್ರಚಿಕಿತ್ಸೆಗಳು ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿ. ಕೆಲವರು ಆರ್ಥಿಕ ಸಮಸ್ಯೆಯ ಕಾರಣದಿಂದಲೂ ಶಸ್ತ್ರಚಿಕಿತ್ಸೆಯ ಅಗತ್ಯದ ಬಗ್ಗೆ ಎರಡನೇ ಅಭಿಪ್ರಾಯಕ್ಕೆ ವೈದ್ಯರನ್ನು ಸಂಪರ್ಕಿಸುತ್ತಿದ್ದಾರೆ. ಈ ಸಹಾಯವಾಣಿಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ನಿರ್ವಹಿಸುತ್ತಿದೆ.

ದಾಖಲಾತಿ ಹಂಚಿಕೊಳ್ಳಲು ಅವಕಾಶ: ಶಸ್ತ್ರಚಿಕಿತ್ಸೆ ಕುರಿತು ಎರಡನೇ ಅಭಿಪ್ರಾಯ ಪಡೆಯಲು ಬಯಸುವವರು ಸಹಾಯವಾಣಿ ಸಂಖ್ಯೆ 1800 4258 330 ಸಂಪರ್ಕಿಸಬಹುದು. ಶಸ್ತ್ರಚಿಕಿತ್ಸೆಗೆ ತಯಾರಿ, ಚೇತರಿಕೆಯ ಸಮಯ ಮತ್ತು ಶಸ್ತ್ರಚಿಕಿತ್ಸೆ ನಂತರದ ಅವಧಿಯಲ್ಲಿನ ಆರೈಕೆ ಕ್ರಮಗಳ ಬಗ್ಗೆ ಮಾಹಿತಿ ಒದಗಿಸಲಾಗುತ್ತದೆ. ತಜ್ಞ ವೈದ್ಯರ ಎರಡನೇ ಅಭಿಪ್ರಾಯಕ್ಕೆ ಅಗತ್ಯ ವೈದ್ಯಕೀಯ ದಾಖಲಾತಿ ಒದಗಿಸಲು ವಾಟ್ಸ್‌ಆ್ಯಪ್ ಸಂಖ್ಯೆಯನ್ನು ಒದಗಿಸಲಾಗುತ್ತದೆ. ಈ ಸಂಖ್ಯೆಗೆ ವೈದ್ಯಕೀಯ ದಾಖಲಾತಿಗಳನ್ನು ಕಳುಹಿಸಿದ 48 ಗಂಟೆಗಳಲ್ಲಿ ಸಮಸ್ಯೆ ಎದುರಿಸುತ್ತಿರುವ ವ್ಯಕ್ತಿಯನ್ನು ಸಂಪರ್ಕಿಸಿ, ಎರಡನೇ ಅಭಿಪ್ರಾಯ ಒದಗಿಸಲಾಗುತ್ತದೆ.

‘ಸಂಧಿವಾತ, ವಯಸ್ಸಿಗೆ ಸಂಬಂಧಿಸಿದ ಕೀಲುಗಳ ಕ್ಷೀಣತೆ ಮತ್ತು ಗಾಯಗಳಿಂದ ಮೊಣಕಾಲು ಹಾಗೂ ಸೊಂಟದ ಕೀಲು ಬದಲಾವಣೆ ಅಂತಹ ಶಸ್ತ್ರಚಿಕಿತ್ಸೆಗಳು ಹೆಚ್ಚುತ್ತಿವೆ. ರೋಗಿಗಳ ಕಡೆಯವರು ಶಸ್ತ್ರಚಿಕಿತ್ಸೆ ಅವಶ್ಯತೆ ಕುರಿತು ಸಲಹೆ ಪಡೆಯಬಹುದಾಗಿದೆ’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಇತರ ಶಸ್ತ್ರಚಿಕಿತ್ಸೆಗಳಿಗೂ ವಿಸ್ತರಣೆ

ಸಹಾಯವಾಣಿ ಮೂಲಕ ಸದ್ಯ ಮೊಣಕಾಲು ಹಾಗೂ ಸೊಂಟದ ಕೀಲು ಬದಲಾವಣೆ ಕ್ಲಿಷ್ಟಕರ ಶಸ್ತ್ರಚಿಕಿತ್ಸೆಗಳ ಬಗ್ಗೆ ಮಾತ್ರ ಎರಡನೇ ಅಭಿಪ್ರಾಯ ಒದಗಿಸಲಾಗುತ್ತಿದೆ. ಮುಂದೆ ಬೇರೆ ಸಮಸ್ಯೆಗಳಿಗೆ ಸಂಬಂಧಿಸಿದ ಕ್ಲಿಷ್ಟಕರ ಶಸ್ತ್ರಚಿಕಿತ್ಸೆಗಳಿಗೂ ಈ ಸೇವೆ ವಿಸ್ತರಿಸಲು ಇಲಾಖೆ ಯೋಜನೆ ರೂಪಿಸಿದೆ.

ಸಿಯುಕೆ: ಪಿ.ಜಿ ಕೋರ್ಸ್‌ಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ (ಸಿಯುಕೆ) ವಿವಿಧ ಸ್ನಾತಕೋತ್ತರ ಕೋರ್ಸ್‌ಗಳಿಗೆ ‘ಸಿಯುಇಟಿ–ಪಿಜಿ 2025’ ಮೂಲಕ ಪ್ರವೇಶ ನೀಡುವ ಪ್ರಕ್ರಿಯೆ ಆರಂಭವಾಗಿದೆ ಎಂದು ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ತಿಳಿಸಿದರು.

‘https://exams.nta.ac.in/CUET-PG/ ವೆಬ್‌ಸೈಟ್ ಮೂಲಕ ಆಸಕ್ತರು ಫೆಬ್ರುವರಿ 1ರೊಳಗೆ ಅರ್ಜಿ ಸಲ್ಲಿಸಬಹುದು. ಫೆಬ್ರುವರಿ 3ರಿಂದ ಫೆ. 5ರವರೆಗೆ ಅರ್ಜಿ ತಿದ್ದುಪಡಿಗೆ ಅವಕಾಶ ನೀಡಲಾಗಿದೆ’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಮಾರ್ಚ್ 13ರಿಂದ 31ರವರೆಗೆ ಕರ್ನಾಟಕದ 15 ಕೇಂದ್ರಗಳು ಸೇರಿ ವಿವಿಧ ಕೇಂದ್ರಗಳಲ್ಲಿ ಪ್ರವೇಶ ಪರೀಕ್ಷೆ ನಡೆಯಲಿದೆ’ ಎಂದರು.

ಹೆಚ್ಚಿನ ಮಾಹಿತಿಗೆ www.nta.ac.in ಮತ್ತು https://exams.nta.ac.in/CUET-PG ವೆಬ್‌ಸೈಟ್ ವೀಕ್ಷಿಸಬಹುದು ಎಂದು ಸತ್ಯನಾರಾಯಣ ಅವರು ಹೇಳಿದರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/44/2025

ದಿನಾಂಕ : 06–01–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹಾಸನ – ಮಂಗಳೂರು ನಡುವೆ 247 ಕಿಮೀ. ಉದ್ದದ ಹೊಸ ಮಾರ್ಗ ಮತ್ತು ಕ್ಯಾಸಲ್‌ರಾಕ್ – ಕುಳೇಮ್ ಹೊಸ ಡಬಲ್ ಮಾರ್ಗದೊಂದಿಗೆ (72 ಕಿಮೀ) ಸ್ಥಳದ ಅಂತಿಮ ಸರ್ವೆ ನಡೆಸುವುದು. (ಟೆಂಡರ್ ಉಲ್ಲೇಖ ಸಂ. ಎಫ್‌ಎಲ್‌ಎಸ್–ಹೆಚ್‌ಎಎಸ್–ಎಂಎಕ್ಯು–ಸಿಎಲ್‌ಆರ್–ಕ್ಯುಎಲ್‌ಎಂ)	ರೂ. 21,36,08,835/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29–01–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು

ಪಿಯುಬಿ/696/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

ಮಲೆನಾಡಿಗರ ಕ್ರೀಡಾಕೂಟ ಇಂದು

ಬೆಂಗಳೂರು: ಮಲೆನಾಡು ಮಿತ್ರ ವೃಂದವು ಜನವರಿ 12ರಂದು ಜಾಲಹಳ್ಳಿಯ ಎಚ್‌ಎಂಟಿ ಆಟದ ಮೈದಾನದಲ್ಲಿ ‘ಮಲೆನಾಡಿಗರ ಕ್ರೀಡಾಕೂಟ–2025’ ಏರ್ಪಡಿಸಿದೆ. ಎರಡು ನಿಮಿಷಗಳಲ್ಲಿ ಹೆಚ್ಚು ಕಡುಬು ತಿನ್ನುವವರಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ನೀಡಲಾಗುವುದು ಎಂದು ಮಿತ್ರ ವೃಂದದ ನಿರ್ದೇಶಕ ಅನಿಲ್ ಹೊಸಕೊಪ್ಪ ತಿಳಿಸಿದ್ದಾರೆ.

ಕೊಡು ಕೊಳ್ಳುವವರ ಸಮಾವೇಶದಲ್ಲಿ ‘ಚರಕ’ದ ಪ್ರಸನ್ನ ಅಭಿಮತ

ಕೈ ಉತ್ಪನ್ನಗಳ ಬಳಕೆಯೇ ಚಳವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬದುಕು ಯಂತ್ರ ಕೇಂದ್ರಿತವಾಗಿರುವಾಗ ಕೇವಲ ಕೈ ಉತ್ಪನ್ನಗಳನ್ನು ಉತ್ಪಾದಿಸುವುದು, ಕೈ ಉತ್ಪನ್ನಗಳಿಂದಲೇ ಬದುಕಲು ಪ್ರಯತ್ನಿಸುವುದೇ ಚಳವಳಿ. ಇದು ಕೇವಲ ಆರ್ಥಿಕ ಚಳಿವಳಿ ಅಲ್ಲ, ಆಧ್ಯಾತ್ಮಿಕ ಚಳವಳಿಯೂ ಹೌದು’ ಎಂದು ಚರಕ ಸಂಸ್ಥಾಪಕ ಪ್ರಸನ್ನ ಪ್ರತಿಪಾದಿಸಿದರು.

ಚಿತ್ರಕಲಾ ಪರಿಷತ್ತಿನಲ್ಲಿ ಕವಿ- ಕಾವ್ಯ ಟ್ರಸ್ಟ್, ದೇಸಿ ಟ್ರಸ್ಟ್ ಸಂಯುಕ್ತವಾಗಿ ಹಮ್ಮಿಕೊಂಡಿರುವ ಮೂರು ದಿನಗಳ ಕೊಡು- ಕೊಳ್ಳುವವರ ಸಮಾವೇಶ, ಫ್ಯಾಷನ್ ಶೋ ಹಾಗೂ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು.

‘ಧರ್ಮ ಎಂಬುದು ಸಂಕೇತವಲ್ಲ. ಅದು ಕಾಯಕ. ಕಾಯಕವೇ ಧರ್ಮ. ಬಸವಣ್ಣ ಮಾತ್ರವಲ್ಲ ಎಲ್ಲ ಧರ್ಮಗಳೂ ಹೇಳುವಂತೆ ಕಾಯಕವೇ ಕೈಲಾಸ. ಇದನ್ನು ವಾಸ್ತವದಲ್ಲಿ ನಿಜಗೊಳಿಸುತ್ತಿರುವ ಗ್ರಾಮೀಣ ಹೆಣ್ಣುಮಕ್ಕಳು ಹೊಸ ಮಾದರಿಯನ್ನು ನಿರ್ಮಿಸಿದ್ದಾರೆ’ ಎಂದರು.

ಚಿತ್ರಕಲಾ ಪರಿಷತ್ತಿನಲ್ಲಿ ನಡೆಯುತ್ತಿರುವ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳದ ಉದ್ಘಾಟನೆ ವೇಳೆ ಚರಕ ಸಂಸ್ಥೆಯ ಪ್ರಸನ್ನ, ಚಂದ್ರಾ ಜೈನ್, ಪ್ರಸಾದ್ ಬಿದ್ದಪ್ಪ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕರ್ನಾಟಕ ಕ್ರಾಫ್ಟ್ ಕೌನ್ಸಿಲ್ ಕಾರ್ಯಕಾರಿ ಸಮಿತಿ ಸದಸ್ಯೆ ಚಂದ್ರಾ ಜೈನ್ ಮಾತನಾಡಿ, ‘ಖಾದಿಯನ್ನು ಗಾಂಧೀಜಿ ಕೇವಲ ಒಂದು ವಸ್ತ್ರವನ್ನಾಗಿ ಭಾವಿಸಿರಲಿಲ್ಲ. ಅದೊಂದು ಸ್ವಾಭಿಮಾನ, ಸ್ವಾವಲಂಬಿ ಸಂಕೇತವಾಗಿ ರೂಪಿಸಿದರು. ಸ್ವಾತಂತ್ರ್ಯ ಚಳವಳಿಯಲ್ಲಿ ಕೈಮಗ್ಗ ಉತ್ಪಾದನೆಯ ಮಾದರಿ ಬಹಳಷ್ಟು ಪರಿಣಾಮಕಾರಿಯಾಗಿ ಬಳಕೆಯಾಗಿತ್ತು’ ಎಂದು ತಿಳಿಸಿದರು.

ಫ್ಯಾಷನ್ ಗುರು ಪ್ರಸಾದ್ ಬಿದ್ದಪ್ಪ ಮಾತನಾಡಿ, ‘ಕೈಮಗ್ಗ ಉತ್ಪಾದನೆಗಳಿಗೆ ಬೇಡಿಕೆ ಇದೆ. ಆದರೆ, ಅವುಗಳಿಗೆ ಸೂಕ್ತ ಮಾರುಕಟ್ಟೆ ರೂಪಿಸುವಲ್ಲಿ ಇನ್ನಷ್ಟು ಪ್ರಯತ್ನಗಳು ನಡೆಯಬೇಕು’ ಎಂದರು.

ಸಮಾರಂಭದಲ್ಲಿ ತುಲಾ, ಬಂಜಾರ ಕಸೂತಿ, ಟಿಂಬಕ್ಟು ಕಲೆಕ್ಟೀವ್, ಚೇತನಾ ಫೌಂಡೇಷನ್, ದಖನಿ ಡೈರಿ ಮತ್ತಿತರ ಸಂಸ್ಥೆಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಿದವು.

ದೇಸಿ ಟ್ರಸ್ಟ್‌ನ ಶಾರದಾ ರತೀಶ್, ಚರಕದ ಮಹಾಲಕ್ಷ್ಮಿ, ರಮೇಶ್, ಕೃಷ್ಣ, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿನ ಟೆರೆನ್ಸ್ ಪೀಟರ್, ಪದ್ಮಶ್ರೀ ಉಪಸ್ಥಿತರಿದ್ದರು.

ನಂತರ ಪ್ರಸಾದ್ ಬಿದ್ದಪ್ಪ ನೇತೃತ್ವದಲ್ಲಿ ಕೈಮಗ್ಗ ವಸ್ತ್ರ ತೊಟ್ಟ ರೂಪದರ್ಶಿಗಳಿಂದ ಫ್ಯಾಷನ್ ಶೋ ನಡೆಯಿತು.

ಬಿಎಚ್‌ಇಎಲ್‌ಗೆ ಉಪರಾಷ್ಟ್ರಪತಿ ಧನಕರ್ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಿಎಚ್‌ಇಎಲ್ ಘಟಕಕ್ಕೆ ಉಪರಾಷ್ಟ್ರಪತಿ ಜಗದೀಪ್ ಧನಕರ್ ಮತ್ತು ಅವರ ಪತ್ನಿ ಸುದೇಶ ಧನಕರ್ ಹಾಗೂ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಶನಿವಾರ ಭೇಟಿ ನೀಡಿ, ಕಾರ್ಮಿಕರ ಜತೆ ಮಾತುಕತೆ ನಡೆಸಿದರು.

ಬಿಎಚ್‌ಇಎಲ್‌ನ ಕಾರ್ಯವೈಖರಿ ಮತ್ತು ಸ್ಥಿತಿಗತಿ ಕುರಿತು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಧನಕರ್ ಅವರಿಗೆ ಮಾಹಿತಿ ನೀಡಿದರು.

ಈ ವೇಳೆ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ ಕುಮಾರಸ್ವಾಮಿ, ‘ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತ–2047 ಗುರಿಯ ಸಾಕಾರಕ್ಕಾಗಿ ಬಿಎಚ್‌ಇಎಲ್ ಕಾರ್ಯನಿರ್ವಹಿಸುತ್ತಿದೆ’ ಎಂದರು.

‘ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಂಪನಿಯ ಕಾರ್ಯಾದೇಶಗಳ ಒಟ್ಟು ಮೊತ್ತ ₹1.70 ಲಕ್ಷ ಕೋಟಿ ದಾಟಿದೆ’ ಎಂದು ಮಾಹಿತಿ ನೀಡಿದರು.

ನಗರದಲ್ಲಿ ಇಂದು

ಯುವ ಜಾಗೃತಿ ನಡಿಗೆ: ಕೆ.ಗೋಪಾಲಯ್ಯ, ನೆ.ಲ.ನರೇಂದ್ರಬಾಬು, ಆಯೋಜನೆ: ಅನುಶ್ರುತ ಫೌಂಡೇಷನ್ ಟ್ರಸ್ಟ್, ಮಹಾಲಕ್ಷ್ಮಿ ಎಜುಕೇಷನಲ್ ಟ್ರಸ್ಟ್, ಸಮಾನ ಮನಸ್ಕರ ವೇದಿಕೆ, ರಾಜಾಜಿನಗರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ, ಸ್ಥಳ: ಹಾವನೂರು ವೃತ್ತದಿಂದ ಸ್ವಾಮಿ ವಿವೇಕಾನಂದ ಉದ್ಯಾನದವರೆಗೆ, ಬೆಳಿಗ್ಗೆ 6ರಿಂದ

ಬೆಂಗಳೂರು ದಿವ್ಯ ಜೀವನ ಸಂಘದ 80ನೇ ವಾರ್ಷಿಕೋತ್ಸವದ ಉದ್ಘಾಟನೆ: ಸಂಕೀರ್ತನೆ, ಯೋಗಾಸನ: ದೇವಾನಂದ, ಭಜನೆ, ಪಾದಪೂಜೆ, ಉದ್ಘಾಟನೆ: ಶಿವರುದ್ರ ಸ್ವಾಮೀಜಿ, ಪದ್ಮನಾಭನಂದ ಮಹಾರಾಜ್, ಆಧ್ಯಾತ್ಮಿಕ ರಸಪ್ರಶ್ನೆ: ಸುಜಾತಾ ಲಿಂಗರಾಜ್, ಆಯೋಜನೆ ಮತ್ತು ಸ್ಥಳ: ಸ್ವಾಮಿ ಚಿದಾನಂದ ಜನ್ಮಶತಾಬ್ದಿ ಸ್ಮಾರಕ ಭವನ, ತ್ಯಾಗಿ ವಿ.ರಾಮಾನುಜಲು ನಾಯ್ಡು ರಸ್ತೆ, ಸ್ವಾಮಿ ಶಿವಾನಂದಪುರ, ಬೆಳಿಗ್ಗೆ 6.30ರಿಂದ

ವಾರ್ಷಿಕೋತ್ಸವ: ರಾಷ್ಟ್ರೀಯ ಯುವ ದಿನಾಚರಣೆ: ಬೆಳಿಗ್ಗೆ 8ಕ್ಕೆ ರಾಮಕೃಷ್ಣ ಮಠದಲ್ಲಿ ವಿದ್ಯಾರ್ಥಿಗಳ ಸಮಾವೇಶ, ಬೆಳಿಗ್ಗೆ 8.15ಕ್ಕೆ ಮೆರವಣಿಗೆಗೆ ಚಾಲನೆ, 9ಕ್ಕೆ ರಾಮಕೃಷ್ಣ ಚೌಕದಲ್ಲಿನ ಸ್ವಾಮಿ ವಿವೇಕಾನಂದರ ಪ್ರತಿಮೆಗೆ ಮಾಲಾರ್ಪಣೆ, ಬೆಳಿಗ್ಗೆ 10ರಿಂದ ‘ಸ್ವಾಮಿ ವಿವೇಕಾನಂದರ ವಿಚಾರ ವೈವಿಧ್ಯ’ ಕುರಿತು ವಿಚಾರಸಂಕಿರಣ: ಅಧ್ಯಕ್ಷತೆ: ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್, ಅತಿಥಿ: ವೂಡೇ ಪಿ. ಕೃಷ್ಣ, ವಿಚಾರ ಮಂಡಿಸುವವರು: ಬ್ರ. ಅಭಿರಾಮ್, ಪ್ರಣಬ್, ವಿಜಯ್ ಹಜ್ಜಾಜಿ, ಸಂಜಯ್ ಕೆ., ರಿಷಬ್ ಜಿ. ರಾವ್, ಸಂದೀಪ್ ಎಸ್. ವಸಿಷ್ಠ, ಪ್ರಖ್ಯಾತ್, ನಂದೀಶ್ ಬಿ.ಎಸ್., ನಿರೀಕ್ಷಕರು: ಎಚ್.ಎನ್. ಮುರಳೀಧರ, ಎಂ.ಎ. ಬಾಲಸುಬ್ರಮಣ್ಯ, ವಿ. ರಘು, ಉಷಾ ವಸ್ತಾರೆ, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಬಸವನಗುಡಿ

ಟಿ.ಎಸ್. ನಾಗಾಭರಣ

53ನೇ ವಾರ್ಷಿಕೋತ್ಸವ ಸಮಾರಂಭ ‘ಮ್ಯಾಗ್ನಮ್’: ಅತಿಥಿಗಳು: ಟಿ.ಎಸ್. ನಾಗಾಭರಣ, ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಎನ್. ಆರ್.ಪಂಡಿತಾರಾಧ್ಯ, ಆಯೋಜನೆ: ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ಸ್ಥಳ: ಕಾಲೇಜು ಆವರಣ, ಶೇಷಾದ್ರಿಪುರ, ಬೆಳಿಗ್ಗೆ 8ರಿಂದ

ಕೊಡು–ಕೊಳ್ಳುವವರ ಸಮಾವೇಶ, ಫ್ಯಾಶನ್ ಶೊ, ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಆಯೋಜನೆ: ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ ಹೆಗ್ಗೋಡು, ಸ್ಥಳ: ಕರ್ನಾಟಕ ಚಿತ್ರಕಲಾ ಪ್ರದರ್ಶನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ

‘ಅನಂತ ಸೇವಾ ಉತ್ಸವ’: ಅಸ್ಮಿತಾ– ಕ್ಷಾತ್ರತೇಜ: ಅಖಂಡ ವಂದೇ ಮಾತರಂ ಗಾಯನ, ದೇಸಿ ಆಟ–ಮಿಲ್ಲೆಟ್ ಊಟ ಪರಿಸರ ಪಾಠ, ವಿಶಿಷ್ಟ ಸ್ಪರ್ಧೆಗಳು ವಿಶೇಷ ಕಾರ್ಯಾಗಾರ, ನಾಟಕ, ಸಂಗೀತ, ನೃತ್ಯ, ಹಸಿರು ಜೀವನ ಶೈಲಿ ಪ್ರಾತ್ಯಕ್ಷಿಕೆ, ಆಯೋಜನೆ: ಅದಮ್ಯ ಚೇತನ, ಸ್ಥಳ: ಎಂ.ಇ.ಎಸ್. ಮೈದಾನ, ಐದನೇ ಹಂತ, ಜಯನಗರ, ಬೆಳಿಗ್ಗೆ 10ರಿಂದ



ಹಂ.ಪ. ನಾಗರಾಜಯ್ಯ

ಸಂಕ್ರಾಂತಿ ಸಂಭ್ರಮ, ನಾಲ್ಕು ಗ್ರಂಥಗಳ ಬಿಡುಗಡೆ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಎ. ರಾಧಾಕೃಷ್ಣರಾಜು, ಅತಿಥಿಗಳು: ಆಮುದಾಲ ಮುರಳಿ, ಗುಡಿವಾಡ ಅಣ್ಣಯ್ಯ ನಾಯುಡು, ಸುಮ್ಮೇಟ ಮಾಧವರಾಜು, ವೊಲೇಟಿ ದುರ್ಗಾ ಭಗವಾನ್, ಆಯೋಜನೆ ಮತ್ತು ಸ್ಥಳ: ತೆಲುಗು ವಿಜ್ಞಾನ ಸಮಿತಿ, ಬೆಳಿಗ್ಗೆ 10ರಿಂದ

ಸುಭಾಷ್ ರಾಜಮಾನೆ ಅವರ ‘ಕಂಡದ್ದು ಕಾಣದ್ದು’ ಪುಸ್ತಕ ಬಿಡುಗಡೆ: ಅಗ್ರಹಾರ ಕೃಷ್ಣಮೂರ್ತಿ, ಪುಸ್ತಕದ ಕುರಿತು: ಎಸ್. ಗಂಗಾಧರಯ್ಯ, ಅನುಪಮಾ ಪ್ರಸಾದ್, ಅಧ್ಯಕ್ಷತೆ: ಚಂದ್ರಶೇಖರ ಬಿ., ಆಯೋಜನೆ: ಆಕೃತಿ ಪುಸ್ತಕ, ಸ್ಥಳ: ಸರ್ಕಾರಿ ರಾಂನಾರಾಯಣ್, ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ಎನ್.ಸಂತೋಷ್ ಹೆಗ್ಡೆ

ಗ.ನಾ ಭಟ್ಟ ಅವರ ‘ಸಮ್ಮುಖ’ ಪುಸ್ತಕ ಬಿಡುಗಡೆ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಎಸ್. ಆರ್.ಲೀಲಾ, ಪುಸ್ತಕದ ಕುರಿತು: ಶುಭಾ ಮರವಂತೆ, ಅತಿಥಿ: ಪ್ರೊಲ್ಯ ಉಮೇಶ ಡಿ. ಶೆಟ್ಟಿ, ಉಪಸ್ಥಿತಿ: ಗಣಪತಿ ಎಸ್. ಹೆಗಡೆ, ಕೆ.ವಿ. ಶ್ರೀನಿವಾಸ, ಆಯೋಜನೆ: ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ ಶ್ರೀರಂಗಪಟ್ಟಣ, ಕೊಬಾಲ್ಟ್ ಕಲೆ ಮತ್ತು ಸಂಗೀತ ವೇದಿಕೆ, ಮಹಿಮಾ ಪ್ರಕಾಶನ, ಸ್ಥಳ: ಕೊಬಾಲ್ಟ್ ಕಲೆ ಮತ್ತು ಸಂಗೀತ ವೇದಿಕೆ, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, 5ನೇ ಹಂತ, 2ನೇ ಘಟ್ಟ, ಬಿ.ಇ.ಎಂ.ಎಲ್ ಬಡಾವಣೆ, ರಾಜರಾಜೇಶ್ವರಿನಗರ, ಬೆಳಿಗ್ಗೆ 10.30

39ನೇ ಎಸ್ಸೆಸ್ಸೆಲ್ಸಿ ಉಚಿತ ತರಬೇತಿ ತರಗತಿಗಳ ಸಮಾರೋಪ: ಅತಿಥಿಗಳು: ವಿ.ಸೋಮಣ್ಣ, ಪಿ.ಸಿ.ಮೋಹನ್, ಎಸ್.ಪಿ.ದಯಾನಂದ್, ಎಂ.ಆರ್. ನರಸಿಂಹಮೂರ್ತಿ, ಆಯೋಜನೆ: ಕಬಿರ್ ಟ್ರಸ್ಟ್, ಸ್ಥಳ: ಪಟೇಲ್ಸ್ ಇನ್, ಎರಡನೇ ಬ್ಲಾಕ್, 15ನೇ ಕ್ರಾಸ್, ಆರ್.ಟಿ. ನಗರ, ಬೆಳಿಗ್ಗೆ 10.30

ಪತ್ತೇದಾರಿ ಸಾಹಿತಿ ‘ಎನ್. ನರಸಿಂಹಯ್ಯ’ ಅವರ ಜನ್ಮ ಶತಮಾನೋತ್ಸವ ವರ್ಷಾಚರಣೆ, ಸಂಕ್ರಾಂತಿ ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ನಂಜುಂಡಸ್ವಾಮಿ ಬಿ.ಎ., ಅಭಿನಂದನಾ ನುಡಿ: ಬಿ. ಶೃಂಗೇಶ್ವರ್, ಅಧ್ಯಕ್ಷತೆ: ರತ್ನಾರಾವ್, ಕುವರ ಯಲ್ಲಪ್ಪ, ಉಪಸ್ಥಿತಿ: ಬಿ.ಎನ್. ಮಹದೇವ್, ನಾಗೇಶ್ ಡಿ. ಪಾಟಕ್, ಪ್ರಶಸ್ತಿ ಪುರಸ್ಕೃತರು: ಸಿದ್ಧಪ್ಪ, ಬೆಮೆಲ್ ಸೆಲ್ವಕುಮಾರ್, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30ರಿಂದ

ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ: ಅತಿಥಿಗಳು: ವೇದವ್ಯಾಸಾಚಾರ್ ಶ್ರೀಶಾನಂದ, ಸಂತೋಷ್ ನಾಗರಾಳೆ, ಸಂಕೇತ ಅಶೋಕ ಪೂಜಾರ, ಕಿರಣ್ ಶಂಕರ್ ಆರ್.ಪಿ., ಅಧ್ಯಕ್ಷತೆ: ಬಿ. ರವಿಗೌಡ, ಆಯೋಜನೆ: ಸ್ವಾಮಿ ವಿವೇಕಾನಂದ ಅಭ್ಯುದಯ ಪ್ರತಿಷ್ಠಾನ, ಸ್ಥಳ: ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಂಘದ ಕಟ್ಟಡ, ಎಂಟನೇ ಮುಖ್ಯರಸ್ತೆ, ನ್ಯಾಯಾಂಗ ಬಡಾವಣೆ, ಬೆಳಿಗ್ಗೆ 10.30



ಡಾ. ಸಿ.ಆರ್. ಚಂದ್ರಶೇಖರ್

‘ಅನಿತಾಕೌಲ್ ಸ್ಮರಣೆ’, ‘ರಾಜ್ಯಮಟ್ಟದ ಉತ್ತಮ ಶಿಕ್ಷಕ’ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎಲ್.ಕೆ. ಅತೀಕ್, ಅಧ್ಯಕ್ಷತೆ: ಡಾ.ಸಿ. ಆರ್. ಚಂದ್ರಶೇಖರ್, ಅತಿಥಿಗಳು: ಕರೀಗೌಡ, ಎಸ್.ಜಿ. ಸುಶೀಲಮ್ಮ, ಎಚ್. ಕೆ. ವಿವೇಕಾನಂದ, ಪ್ರಾಸ್ತಾವಿಕ ನುಡಿ: ಈ. ಬಸವರಾಜು, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಬಿ.ಎಂ. ಎಸ್. ಎಂಜಿನಿಯರಿಂಗ್ ಕಾಲೇಜಿನ ಸಭಾಂಗಣ, ಬಸವನಗುಡಿ, ಬೆಳಿಗ್ಗೆ 11

‘ಜೈಲಿನಿಂದ ಬಯಲಿಗೆ... ಬದಲಾದ ಬದುಕು’ ಒಂದು ಮೆಲುಕು ಕಾರ್ಯಕ್ರಮ: ಅತಿಥಿಗಳು: ಬಿ.ಎಲ್.ಶಂಕರ್, ಮಾಲಿನಿ ಕೃಷ್ಣಮೂರ್ತಿ, ಗಿರೀಶ್ ಕಾಸರವಳ್ಳಿ, ಜಯಂತಿ ಕಾಯ್ಕಿಣಿ, ಆಯೋಜನೆ: ಡಾ. ಗೋಪಾಲ ಹೊಸೂರು, ಹುಲುಗಪ್ಪ ಕಟ್ಟಿಮನಿ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

‘ಪ್ರವಾಸಿಗರ ದಿನ’: ಉಪಸ್ಥಿತಿ: ಎಂ.ಜಿ. ರಾಜಗೋಪಾಲ್, ವಿಶ್ವೇಶ್ವರ ಭಟ್, ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಅಡಿಗಾಸ್ ಯಾತ್ರಾ, ಸ್ಥಳ: ಕಾಸಿಯಾ ಸಭಾಂಗಣ, 3ನೇ ಮಹಡಿ, ಹೊಸಹಳ್ಳಿ ಮೆಟ್ರೊ ನಿಲ್ದಾಣದ ಎದುರು, ವಿಜಯನಗರ, ಮಧ್ಯಾಹ್ನ 3.30

‘ಕಾನನ ಇ–ಮಾಸಿಕ ಪತ್ರಿಕೆ 15ನೇ ವಾರ್ಷಿಕೋತ್ಸವ, ಅಶ್ವಥ ಕೆ.ಎನ್., ಅವರ ‘ಜಂಗಾಲ’ ಪುಸ್ತಕ ಬಿಡುಗಡೆ: ಅತಿಥಿಗಳು: ಸ್ವಾಮಿ ವಿಷ್ಣುಮಯಾನಂದ, ಸಂಜಯ್ ಗುಬ್ಬಿ, ಗಣೇಶ್ ವಿ. ತಡಗಣಿ, ಕ್ಷಮಾ ವಿ. ಭಾನುಪ್ರಕಾಶ್, ಆಯೋಜನೆ: ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್, ಸ್ಥಳ: ಶ್ರೀಕೃಷ್ಣ ರಾಜೇಂದ್ರ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ಜಾಸ್ಮಿನ್ ಶಾ ಅವರ ‘ದಿ ದೆಹಲಿ ಮಾಡೆಲ್’ ಪುಸ್ತಕ ಬಿಡುಗಡೆ: ಜಾಸ್ಮಿನ್ ಶಾ ಅವರೊಂದಿಗೆ ಚರ್ಚೆ: ಧನ್ಯಾ ರಾಜೇಂದ್ರನ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 5ರಿಂದ

‘ಕರುನಾಡ ಕಣ್ಮಣಿ’ ಪ್ರಶಸ್ತಿ ಪ್ರದಾನ: ಪಿ.ಸಿ. ಮೋಹನ್, ಪ್ರಶಸ್ತಿ ಪುರಸ್ಕೃತರು: ಚರಣ್‌ರಾಜ್, ಕಾ.ವೆಂ. ಶ್ರೀನಿವಾಸಮೂರ್ತಿ, ಪ್ರಿಯದರ್ಶಿನಿ ಸಾಣೆಕೊಪ್ಪ, ಸಾರ್ಥವಳ್ಳಿ ನಾರಾಯಣಸ್ವಾಮಿ, ಗೋ.ನಾ. ಸ್ವಾಮಿ, ವೆಂಕಟೇಶಮೂರ್ತಿ ಶಿರೂರ, ದಯಾನಂದ್, ಡಾ.ನಾ. ಸೋಮೇಶ್ವರ, ವಿದ್ಯಾಸಾಗರ್, ಜನಕ್ ಮದಾನ್, ಮನು, ರಮಾಕಾಂತ್ ನರಗುಂದ, ಆಯೋಜನೆ: ಸೃಜಕ ಲಲಿತಕಲಾ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ‘2024ನೇ ಸಾಲಿನ ವರ್ಷದ ವ್ಯಕ್ತಿ, ವಿಶೇಷ ಪ್ರಶಸ್ತಿ, ಸುವರ್ಣ ಮಹೋತ್ಸವ ಪ್ರಶಸ್ತಿ ಹಾಗೂ ವಾರ್ಷಿಕ ಪ್ರಶಸ್ತಿ’ಗಳ ಪ್ರದಾನ: ಸಿದ್ದರಾಮಯ್ಯ, ಅತಿಥಿಗಳು: ಎಚ್.ಸಿ. ಮಹದೇವಪ್ಪ, ಜಮೀರ್ ಅಹಮದ್ ಖಾನ್, ಆರ್.ಬಿ. ತಿಮ್ಮಾಪುರ, ಕೆ. ಗೋವಿಂದರಾಜು, ಕೆ.ವಿ. ಪ್ರಭಾಕರ್, ಆಯೋಜನೆ ಮತ್ತು ಸ್ಥಳ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಕಬ್ಬನ್ ಉದ್ಯಾನ, ಸಂಜೆ 5.30

ವಜ್ರ ಮಹೋತ್ಸವ ಸಂಭ್ರಮ–2024–25: ಗಾಯನ: ಎಂ.ಎಸ್.ವಿದ್ಯಾ, ಪಿಟೀಲು: ಸಿ.ವಿ. ಶೃತಿ, ಮೃದಂಗ: ಡಿ.ಆರ್. ಚೇತನ್ ಮೂರ್ತಿ, ಖಂಜೀರಾ: ನವೀನ್ ಚಂದ್ರ ಪ್ರಕಾಶ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

‘ಶ್ರೀಹರಿಕಥಾಮೃತಸಾರ’ ಪ್ರವಚನ: ಪ್ರಶಾಂತ ಭಾರ್ಗವಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ಶ್ರೀನಿವಾಸ ಸ್ವಾಮಿ ಮಠ, ಆರನೇ ಅಡ್ಡರಸ್ತೆ, ಸುಧೀಂದ್ರನಗರ, ಸಂಜೆ 7

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

JOB OPPORTUNITIES

Teachers/ Professors

515 ABW HIGH SCHOOL Halasuru, Bangalore-08 REQUIRES TEACHING STAFF ON CONTRACT BASIS Kindly visit: http://515armyschool.co.in/recruitment For detailed advertisement or Contact: 080-25307559

ARVIND Residential School & PU College, Kunigal Ph: 08132-210000/ 01. Mob: 9945210041/ 9483683002. Website: www.arvindinternationalschool.com, www.arvindpucollege.com REQUIRES DEDICATED & PASSIONATE PROFESSIONALS WITH GOOD COMMUNICATION SKILLS

- PUC LECTURERS (Science & Commerce Stream) Well Experienced NEET & JEE faculties
- CO-ORDINATOR (ICSE/ CBSE)
- Nursery/ Primary/ Middle School/ High school Teachers (ICSE/ CBSE)
- Warden (M/F), Nurse (F), Cooks, PE Teachers Experienced in all streams with desired qualification

Send your resume with recent passport size photo to airsjobs@gmail.com within 7 days

WANTED FRESH/ Experienced CHEMIST/ LAB-INCHARGE 'VISHVESHWARIAH SPECTRO METALLURGICAL LABORATORY PVT LTD' #69,6th Main Road, 3rd phase,Peenya Industrial Area, Bangalore-58 Contact 9242997018, 9380861774

Overseas

DUBAI JOBS Free Placement Walk In Drive 13th Jan – 18th Jan 2025 (9:30AM – 6:30PM) BMS Engineer/ BMS Operator - Data Center TASC OUTSOURCING Aurbis Concord Building, Richmond Rd, Bangalore. OR Apply: datacenterjobs@tascoutsourcing.com Ph No - 080 41154001

POORNAPRAJNA EDUCATION CENTRE, INDIRANAGAR (Promoted & Managed by Udupi Shree Adamaru Matha Education Council) C.A Site No. 48, New Thippasandra, HAL 3rd Stage, Bangalore -75. Ph: 080-25292930 English medium school under Karnataka State syllabus invites applications for the following posts:

- PRINCIPAL: Master's degree with M Ed, 5 yrs experience as Principal & 10 yrs in teaching.
- ENGLISH LANGUAGE TEACHER: B A/ M A (English) with B Ed, 5 yrs experience in teaching.
- KANNADA LANGUAGE TEACHER: B A/ M A (Kannada) with B Ed, 5 yrs experience in teaching
- ASSISTANT LIBRARIAN: Any Graduate with proficiency in Computer
- PRE PRIMARY ASSISTANT TEACHER: Any Graduate with NTTE

Apply to the Hon. Secretary before 15-01-2025 through post or email to contact.indiranagar@ppec.edu.in

MOUNT CARMEL PU COLLEGE Palace Road Bengaluru-01 mountcarmelpucollege@yahoo.co.in Phone-22370404 requires Post Graduates with B.Ed in ENGLISH, HINDI, FRENCH, ECONOMICS, BASIC MATH, ACCOUNTANCY, BUSINESS STUDIES, CHEMISTRY, MATHEMATICS, ELECTRONICS, COMPUTER SCIENCE, PHYSICAL EDUCATION(M.P.Ed). Apply before 28.01.2025

Accounts & Finance

WANTED IMMEDIATELY MANAGER, FDC & ACCOUNTS ASSISTANT For Global City Credit Co-Operative Society Ltd,. Malleswaram. 080-41234580

Multiple Vacancy

REQUIRED TEACHERS Centre Head House keeping Security for upcoming Preschool JPNagar Phase2 Please Contact: 9341273990

General

WANTED FACTORY HELPERS for a Laundry in Bannergatta Road, Bangalore Salary 15,000 + Food + accommodation Timings 7am to 7pm Contact: 8050666007

Part-Time Jobs

RETIRED/VRS PERSONS, Age Above 45 Years Earn 2nd Income 35K To 40K PM. 9886641282/ 6362220162

MORE Classifieds Ads on Subsequent Pages

Smt. Bylamma Educational & Charitable Trust (R) **HARWARD INTERNATIONAL SCHOOL** Affiliated to CBSE No.830335 Dasanapura, Tumkur Road, Bengaluru North 562162 IMMEDIATE REQUIRED CHEMISTRY Teacher (PGT) FRONT OFFICE - PRO (Female) MARKETING PERSON - MBA HIRING FOR THE ACADEMIC YEAR 2025-26 PRT & TGT Science/ Maths/ Social Science/ English/ Kannada/ Hindi/ Computer/ PE Teacher/ Pre Primary Teachers (NTT, MTT, ECCEd) Eligible candidates mail your application with updated Bio-data to : email: infoharwardints@gmail.com Contact : 9880112833 / 9945230286

NIRMAN INTERNATIONAL PUBLIC SCHOOL (CBSE), Near Automated RTO,7th Block, Vishweshwaraiah Layout, Bangalore-91 Requires Qualified, Experienced TEACHERS for All Subjects, from Nursery to X. Contact: 8123030731/ 9986055970. Email: nirmaninfo24@gmail.com Walk-in Interview on all working days between 9:30am to 2:00pm

DH Classifieds More value, more impact | ಪ್ರಜಾವಾಣಿ | NAME CHANGE @50/-* PER WORDS Book your Name change Ad in DH All Karnataka + Prajavani Bengaluru City All Days *Conditions apply www.dhclassifieds.com BOOK NOW For more details contact: 7795158424 9900428036

MOUNT CARMEL ENGLISH SCHOOL REQUIRED EXPERIENCED TEACHERS for N.T.T (Montessori training), Primary, Middle and High school for all the subjects including Art & Craft, Physical Education and Computer Science. Candidates should have Masters/Bachelor's Degree with B.Ed/D.Ed/ B.P.Ed/ M.P.Ed Training. Walk-in interview from 16-01-2025 to 01-02-2025 Timings: 10.00am to 3.00pm Venue: Mount Carmel English School Campus, No.3, 12th Cross, Ideal Homes, Rajarajeshwari Nagar, Bangalore-560 098. Contact: 080-28602294/95, 7899070902 Email: mountcarmel.rrnagar@gmail.com

ಮುಟ್ಟಿನ ಸ್ವಚ್ಛತೆಯ ಜಾಗೃತಿ ನಡೆಸುತ್ತಿರುವ ಸಕ್ರಿಯ ಚಾರಿಟಬಲ್ ಟ್ರಸ್ಟ್‌ನಿಂದ ಹೊಸ ಹೆಜ್ಜೆ

ಆಟೊದಲ್ಲಿ ಸಿಗಲಿದೆ ಸ್ಯಾನಿಟರಿ ಪ್ಯಾಡ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಮುಟ್ಟು, ಮುಟ್ಟಿನ ಸ್ವಚ್ಛತೆ ಬಗ್ಗೆ ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿರುವ ಸಕ್ರಿಯ ಚಾರಿಟಬಲ್ ಟ್ರಸ್ಟ್ ಈಗ ಮಹಿಳೆಯರಿಗೆ, ಆಟೊಗಳಲ್ಲಿ ಸ್ಯಾನಿಟರಿ ಪ್ಯಾಡ್ ದೊರಕುವಂತೆ ಮಾಡುವ 'ಕ್ಷೇಮ' ಯೋಜನೆಗೆ ಕೈ ಹಾಕಿದೆ.

ಮೊದಲ ಹಂತದಲ್ಲಿ 10 ಆಟೊಗಳಲ್ಲಿ ಸ್ಯಾನಿಟರಿ ಪ್ಯಾಡ್‌ಗಳನ್ನು ಇಡಲಾಗಿದೆ. ಇದರಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಓಡಿಸುವ ಆಟೊ, ಮಹಿಳೆಯರು, ಪುರುಷರು ಓಡಿಸುವ ಆಟೊಗಳು ಸೇರಿವೆ. ಮಹಿಳೆಯರೇ ಓಡಿಸುವ 100ಕ್ಕೂ ಅಧಿಕ ಆಟೊಗಳು ನಗರದಲ್ಲಿದ್ದು, ಅದರಲ್ಲಿ 35 ಆಟೊಗಳಿಗೆ ಇದೇ ವಾರ ಸ್ಯಾನಿಟರಿ ಪ್ಯಾಡ್ ಬರಲಿದೆ.

ಎಲ್ಲ ಸ್ತರದ ಮಹಿಳೆಯರಲ್ಲಿ ಮುಟ್ಟು ಮತ್ತು ಮುಟ್ಟಿನ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಮಾಜಿ ಗಗನಸಖಿ ಅನಿತಾ ರಾವ್ ಈ ಯೋಜನೆಯನ್ನು ರೂಪಿಸಿದ್ದಾರೆ.

ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್ ಬಾಕ್ಸ್‌ಗಳನ್ನು ಆಟೊ ಚಾಲಕರಿಗೆ ವಿತರಣೆ ಮಾಡಲಾಯಿತು

'ಯಾವುದೇ ಸ್ಥಳದಲ್ಲೂ ಆಟೊದಲ್ಲಿ ಈ ರೀತಿ ಸ್ಯಾನಿಟರಿ ಪ್ಯಾಡ್ ಸಿಗುವುದಿಲ್ಲ. ಭಾರತದಲ್ಲಿ ಹೆಜ್ಜೆ ಹೆಜ್ಜೆಗೆ ಪ್ರಾರ್ಥನಾ ಮಂದಿರ ಸಿಗಬಹುದು. ಶೌಚಾಲಯ, ಮಹಿಳೆಯರ ಬಳಕೆಗೆ ಬೇಕಾದವು ಮಾತ್ರ ಸುಲಭದಲ್ಲಿ ಸಿಗಲಾರದು. ಈ ಸ್ಥಿತಿ ಬದಲಾಯಿಸಲು ಇಂಥ ಯೋಜನೆ ಅಗತ್ಯ' ಎಂದು ಅನಿತಾ ರಾವ್ ಪ್ರತಿಪಾದಿಸಿದರು.

'ಉದ್ಯೋಗದಲ್ಲಿರುವ ಹೆಣ್ಣು ಮಕ್ಕಳು ಉದ್ಯೋಗದ ಒತ್ತಡದಲ್ಲಿ ಮುಟ್ಟಿನ ದಿನ ಮರೆತುಬಿಟ್ಟಿರುತ್ತಾರೆ. ಅಂಥವರಿಗೆ ಸುಲಭದಲ್ಲಿ ಸ್ಯಾನಿಟರಿ ಪ್ಯಾಡ್ ಸಿಗುವಂತೆ ಆಟೊದಲ್ಲಿ ಅಳವಡಿಸಲು ನಮ್ಮನ್ನು ಸಕ್ರಿಯ ಟ್ರಸ್ಟ್‌ನವರು ಕೇಳಿದರು. ಜನರಿಗೆ ಉಪಯೋಗ ಆಗುವಂಥ ಯೋಜನೆ. ಎರಡು ದಿನದ ಹಿಂದೆ ಇಟ್ಟಿದ್ದಾರೆ. ಇಲ್ಲಿವರೆಗೆ ಇಬ್ಬರು ಪಡೆದಿದ್ದಾರೆ' ಎಂದು ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಆಟೊ ಚಾಲಕಿ ಪ್ರೀತಿ ತಿಳಿಸಿದರು.

'ಮಹಿಳೆಯರ ಸಂಕಷ್ಟ ಅನ್ಯರಿಗೆ ಅರ್ಥವಾಗುವುದಿಲ್ಲ. ಅಗತ್ಯವಿದ್ದಾಗ ಸ್ಯಾನಿಟರಿ ಪ್ಯಾಡ್ ಒದಗಿಸುವುದು ಪುಣ್ಯದ ಕೆಲಸ. ಅದಕ್ಕೆ ನಾನು ದುಡ್ಡು ತೆಗೆದುಕೊಳ್ಳುವುದಿಲ್ಲ. ಸೇವೆಯ ಬಗ್ಗೆ ವಿಡಿಯೊದಲ್ಲಿ ಮಾತನಾಡಿ ಎಂದು ಕೇಳಿದಾಗ ಸಂಕೋಚಪಟ್ಟುಕೊಂಡರು. ಅವರ ನಿರ್ಧಾರ ಗೌರವಿಸಿ ವಿಡಿಯೊ ಮಾಡಿಲ್ಲ' ಎಂದು ಆಟೊ ಚಾಲಕಿ ದೇವಿ ಪ್ರತಿಕ್ರಿಯಿಸಿದರು.

'ಆಟೊ ಚಾಲಕರು ಪುರುಷರಾದರೆ ಹೆಣ್ಮಕ್ಕಳು ಪ್ಯಾಡ್ ಕೇಳಲು ಸಂಕೋಚ ಪಡಬಹುದು. ಕೇಳದೆಯೇ ಆಟೊಗಳಲ್ಲಿ ಪ್ಯಾಡ್ ತೆಗೆದುಕೊಳ್ಳಬಹುದು' ಎಂದು ಆಟೊ ಕನ್ನಡಿಗ ಅಜ್ಜು (ಅಜ್ಮಲ್ ಹುಸೇನ್) ತಿಳಿಸಿದ್ದಾರೆ.

'ಸಾರ್ವಜನಿಕ ಸಾರಿಗೆಯಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು ಲಭ್ಯಗೊಳಿಸುವ ನಿಟ್ಟಿನಲ್ಲಿ ದೇಶದಲ್ಲೇ ಮೊದಲ ಬಾರಿಗೆ ಕೈಗೊಂಡಿರುವ ಯೋಜನೆ ಇದು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ 'ಎಕ್ಸ್'ನಲ್ಲಿ ಬಣ್ಣಿಸಿದ್ದಾರೆ.

'ರಾಜ್ಯ ಸಾರಿಗೆ ಬಸ್‌ಗಳಲ್ಲಿ ಜಾರಿಗೆ ಬರಲಿ'

ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ವಿಮಾನ ಹೊರತುಪಡಿಸಿ ಮತ್ತೆಲ್ಲಿಯೂ ಮಹಿಳೆಯರಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳಿಲ್ಲ. ಆಟೊ, ಟ್ಯಾಕ್ಸಿ, ಬಸ್, ರೈಲು ಸೇರಿವಿವಿಧ ಸಾರಿಗೆಗಳಲ್ಲಿ ಸಂಚರಿಸುವಾಗ ಮುಟ್ಟಾದರೆ ಮಹಿಳೆ ಏನು ಮಾಡಬೇಕು? ಈ ಪ್ರಶ್ನೆಯೇ ಯೋಜನೆಗೆ ಕಾರಣವಾಯಿತು ಎಂದು ಯೋಜನೆ ರೂವಾರಿ, ಸಕ್ರಿಯ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕಿ ಅನಿತಾ ರಾವ್ ಹೇಳಿದರು.

ಸಾರಿಗೆ ನಿಗಮದ ಬಸ್‌ಗಳಲ್ಲಿ ಇದೇ ಸೌಲಭ್ಯ ಕಲ್ಪಿಸಿದರೆ ಮಹಿಳಾ ಪ್ರಯಾಣಿಕರಿಗೆ ಅನುಕೂಲ. ಪ್ಯಾಡ್ ಮುಗಿದಾಗ ಮತ್ತೆ ತಂದಿಡಲು ಚಾಲಕರು, ನಿರ್ವಾಹಕರು ತಯಾರಾದರಷ್ಟೇ ಯಶಸ್ವಿ ಆಗಲಿದೆ. ಸದ್ಯ ಆಟೊದಲ್ಲಿ ಸ್ಯಾನಿಟರಿ ಪ್ಯಾಡ್ ಇಡುವ ಪ್ರಕ್ರಿಯೆ ನಡೆಯುತ್ತಿದೆ ಎಂದರು.

ರಾಜಾಜಿನಗರದ ಹೋಟೆಲ್ ನಳಪಾಕದಲ್ಲಿ 'ಸಂಕ್ರಾಂತಿ ಆಹಾರ ಮೇಳ'ಕ್ಕೆ ಶನಿವಾರ ಸಚಿವರಾದ ಚಲುವರಾಯಸ್ವಾಮಿ ಮತ್ತು ಶಾಸಕ ಗೋಪಾಲಯ್ಯ, ಮಾಜಿ ಶಾಸಕ ಎಚ್‌.ಎಂ.ರೇವಣ್ಣ ಅವರ ಉಪಸ್ಥಿತಿಯಲ್ಲಿ ಚಾಲನೆ ನೀಡಲಾಯಿತು. ಜನವರಿ 14ರವರೆಗೂ ಮೇಳ ನಡೆಯಲಿದೆ. ಲಿಂಗಯ್ಯ ಮತ್ತು ಕವಿತಾ ಕಾಡದೇವರಮಠ ಅವರ ನೇತೃತ್ವದಲ್ಲಿ ಮೇಳವನ್ನು ಆಯೋಜಿಸಲಾಗುತ್ತಿದೆ.

'ಗಡಿ ವಿವಾದ ವ್ಯಾಪ್ತಿ: 'ಸುಪ್ರೀಂ' ಸ್ಪಷ್ಟಪಡಿಸಲಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮಹಾರಾಷ್ಟ್ರ ಸರ್ಕಾರವು 2004ರಲ್ಲಿ ಹೂಡಿದ ಗಡಿ ವಿವಾದದ ವ್ಯಾಜ್ಯವು ತನ್ನ ವ್ಯಾಪ್ತಿಗೆ ಬರುವುದೇ ಅಥವಾ ಇಲ್ಲವೇ ಎಂಬುದನ್ನು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಲಿ. ಅಲ್ಲಿಯವರೆಗೆ ಗಡಿ ಕುರಿತು ತೀರ್ಮಾನ ಕೈಗೊಳ್ಳಲು ಆಗದು' ಎಂದು ಕರ್ನಾಟಕ ಗಡಿ ಮತ್ತು ನದಿಗಳ ಸಂರಕ್ಷಣಾ ಆಯೋಗದ ಅಧ್ಯಕ್ಷ ಶಿವರಾಜ್ ವಿ. ಪಾಟೀಲ ಹೇಳಿದರು.

'ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದ ದಾವೆ ಸಂಬಂಧಿಸಿದಂತೆ ಕರ್ನಾಟಕವು ಸುಪ್ರೀಂ ಕೋರ್ಟ್‌ನ



ಶಿವರಾಜ್ ಪಾಟೀಲ

ಅಧಿಕಾರ ವ್ಯಾಪ್ತಿ ಪ್ರಶ್ನಿಸಿತ್ತು. ಗಡಿ ವಿವಾದ ವ್ಯಾಜ್ಯ ಈ ಹಿಂದೆ ನಾಲ್ಕು ಸಲ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಂದಿತ್ತು. ಆದರೆ, ಕರ್ನಾಟಕದ ನ್ಯಾಯಮೂರ್ತಿ ಪೀಠದಲ್ಲಿದ್ದ ಕಾರಣ ವಿಚಾರಣೆ ಆಗಲಿಲ್ಲ. ಮುಂದೆ ಪೀಠ ರಚನೆ ವೇಳೆ ಕರ್ನಾಟಕದ ನ್ಯಾಯಮೂರ್ತಿ ಇರದಂತೆ ನೋಡಿಕೊಳ್ಳುವಂತೆ ಕೋರಲಾಗಿದೆ' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಗಡಿ ವಿವಾದ ವ್ಯಾಜ್ಯದಲ್ಲಿ ಕರ್ನಾಟಕದ ಪರ ವಾದ ಮಂಡನೆಗೆ ನಾವು ಅನುಭವಿ ವಕೀಲರನ್ನು ಹೊಂದಿದ್ದೇವೆ. ಸುಪ್ರೀಂ ಕೋರ್ಟ್‌ನಲ್ಲಿ ವ್ಯಾಜ್ಯ ವಿಚಾರಣೆಗೆ ಬಂದರೆ, ಹಿರಿಯ ವಕೀಲರನ್ನೂ ನಿಯೋಜಿಸಲಾಗುವುದು' ಎಂದರು.

'ಗಡಿಭಾಗದ ಜನರನ್ನು ಸಂಪರ್ಕಿಸಲು ಮತ್ತು ಅವರ ಬೇಡಿಕೆಗಳನ್ನು ಆಲಿಸಲು ಸುವರ್ಣ ವಿಧಾನಸೌಧದಲ್ಲಿ ಕಚೇರಿ ಆರಂಭಿಸಲು ತೀರ್ಮಾನಿಸಲಾಗಿದೆ. ಇಲ್ಲಿ ಆಯೋಗದ ಸದಸ್ಯರೊಬ್ಬರನ್ನು ನೇಮಿಸುತ್ತೇವೆ. ಕಚೇರಿ ಆರಂಭದ ಕುರಿತಾಗಿ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ' ಎಂದರು.

ಜಾಗತಿಕ ಭಗವದ್ಗೀತಾ ಕ್ವಿಜ್: ವಿಜೇತರಿಗೆ ₹5 ಲಕ್ಷ ಬಹುಮಾನ

ಉಡುಪಿ: ಪುತ್ತಿಗೆ ಮಠದ ವಿಶ್ವ ಗೀತಾ ಪರ್ಯಾಯ ಅಂಗವಾಗಿ ಜಾಗತಿಕ ಭಗವದ್ಗೀತಾ ಕ್ವಿಜ್ ಆಯೋಜಿಸಲಾಗಿದೆ.

ಭಗವದ್ಗೀತೆಯನ್ನು ಆನ್‌ಲೈನ್‌ನಲ್ಲಿ ಓದಿ, ಆನ್‌ಲೈನ್‌ನಲ್ಲೇ ಬಹು ಆಯ್ಕೆಯ ಪ್ರಶ್ನೆಗಳ ಕ್ವಿಜ್‌ಗಳಿಗೆ ಉತ್ತರಿಸಿದ ವಿಜೇತರಿಗೆ ಪ್ರಥಮ ₹1ಲಕ್ಷ ಸಹಿತ ಒಟ್ಟು ₹5 ಲಕ್ಷ ಬಹುಮಾನವಿದೆ.

ವರ್ಗ ಎ: 18 ವರ್ಷಕ್ಕಿಂತ ಕೆಳಗಿನವರು, ವರ್ಗ ಬಿ: 18 ವರ್ಷ ಮತ್ತು ಮೇಲ್ಪಟ್ಟವರ ವಿಭಾಗದಲ್ಲಿ ಸ್ಪರ್ಧೆಗಳ ಮೊದಲ ಸುತ್ತು ಜ.14ರಿಂದ 20ರ ವರೆಗೆ, ಎರಡನೇ ಸುತ್ತು ಜ.25, ಮೂರನೇ ಸುತ್ತು ಜ. 26ರಿಂದ ಫೆ.1ರ ತನಕ ನಡೆಯಲಿದೆ.

ಫೆ. 6ರಂದು ಬಹುಮಾನ ವಿತರಿಸಲಾಗುವುದು. ಭಾಗವಹಿಸಿದವರಿಗೆ ಡಿಜಿಟಲ್ ಪ್ರಮಾಣ ಪತ್ರ ನೀಡಲಾಗುವುದು. ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಅವಕಾಶವಿದೆ. ಜ.20ರಂದು ನೋಂದಣಿ ಮುಕ್ತಾಯವಾಗಲಿದೆ.

ಒಂದು ಬಾರಿ ನೋಂದಣಿಗೆ ₹199 ಶುಲ್ಕವಿದ್ದು, ಶಾಲೆಗಳು ಮತ್ತು ವಿದ್ಯಾಪೀಠದಿಂದ ಸಾಮೂಹಿಕ ನೋಂದಣಿ ಉಚಿತ. ಮಾಹಿತಿಗೆ 77955 36912/ 9481904283 ಅಥವಾ vishwagitaforum@gmail.com ಸಂಪರ್ಕಿಸಿ.

ನಗರದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಗಳು • ದೆಹಲಿ ಪೊಲೀಸರ ಕಾರ್ಯಾಚರಣೆ

ಇಬ್ಬರು ಶಾರ್ಪ್ ಶೂಟರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯಲ್ಲಿ ಗುಂಡು ಹಾರಿಸಿ ಮೂವರ ಹತ್ಯೆ ಮಾಡಿ ತಲೆಮರೆಸಿಕೊಂಡಿದ್ದ ಇಬ್ಬರು ಶಾರ್ಪ್ ಶೂಟರ್‌ಗಳನ್ನು ಅಲ್ಲಿನ ಪೊಲೀಸರು ನಗರದಲ್ಲಿ ಬಂಧಿಸಿದ್ದಾರೆ.

ಅಶೋಕನಗರ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ ದೆಹಲಿ ಪೊಲೀಸರು ಸಾಹಿಲ್ ಹಾಗೂ ವಿಜಯ್ ಗೆಹ್ಲೋತ್ ಎಂಬವರನ್ನು ಬಂಧಿಸಿದ್ದಾರೆ.

ಸ್ಥಳೀಯ ಪೊಲೀಸರ ನೆರವಿನಿಂದ ಸಿನಿಮೀಯ ರೀತಿಯಲ್ಲಿ ಕಾರ್ಯಾಚರಣೆ ನಡೆದಿದೆ. ಬಂಧಿತರಿಂದ ಬಂದೂಕು ಜಪ್ತಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

'ದೆಹಲಿಯಲ್ಲಿ ಡಿ. 23ರಂದು ಜನ್ಮ ದಿನದ ಸಂಭ್ರಮಾಚರಣೆ ವೇಳೆ ಆದ ಗಲಾಟೆಯಲ್ಲಿ ಆರೋಪಿಗಳು 16 ಸುತ್ತು ಗುಂಡು ಹಾರಿಸಿ ಮೂವರ ಹತ್ಯೆ ಮಾಡಿದ್ದರು. ಬಳಿಕ ವಿವಿಧ ರಾಜ್ಯಗಳಲ್ಲಿ ಸುತ್ತಾಡಿದ್ದ ಆರೋಪಿಗಳು ನಗರಕ್ಕೆ ಬಂದು ತಲೆಮರೆಸಿಕೊಂಡಿದ್ದರು. ಇವರ ಪತ್ತೆಗೆ ದೆಹಲಿ ಪೊಲೀಸರು ವಿಶೇಷ ತಂಡ ರಚಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಅಶೋಕನಗರ ಠಾಣೆ ಎದುರು ಬಂಧಿತ ಆರೋಪಿಗಳು (ಮುಖಕ್ಕೆ ಬಟ್ಟೆ ಕಟ್ಟಿಕೊಂಡವರು). ಜತೆಗೆ ಕಾರ್ಯಾಚರಣೆ ತಂಡ ಇದೆ

'ಆರೋಪಿಗಳು ನಗರದ ಹೋಟೆಲ್‌ವೊಂದರಲ್ಲಿ ವಾಸ್ತವ್ಯ ಮಾಡಿದ್ದರು. ಇವರು ತಲೆಮರೆಸಿಕೊಳ್ಳಲು ಸಾಂಗ್ವಾನ್ ಅಲಿಯಾಸ್ ನಂದ ಎಂಬಾತ ನೆರವು ನೀಡಿದ್ದರು' ಎಂದು ತಿಳಿಸಿವೆ.

'ಪಬ್‌ವೊಂದರಲ್ಲಿ ಆರೋಪಿಗಳು ಪಾರ್ಟಿ ಮಾಡುತ್ತಿದ್ದು, ಮಾಹಿತಿ ಪಡೆದು ಅಲ್ಲಿಗೆ ತೆರಳಿ ವಶಕ್ಕೆ ಪಡೆಯಲು ಮುಂದಾದರು. ಆಗ ಆರೋಪಿಗಳು, ದೆಹಲಿ ಪೊಲೀಸರನ್ನು ನಕಲಿ ಪೊಲೀಸರೆಂದು ಬಿಂಬಿಸಿ ತಪ್ಪಿಸಿಕೊಳ್ಳಲು ಯತ್ನಿಸಿದ್ದರು. ಪಬ್ ಸಿಬ್ಬಂದಿ, ಗ್ರಾಹಕರು, ಸಹಾಯವಾಣಿಗೆ ಕರೆ ಮಾಡಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಹೊಯ್ಸಳ ಸಿಬ್ಬಂದಿ, ದೆಹಲಿ ಪೊಲೀಸರ ಕಾರ್ಯಾಚರಣೆಗೆ ನೆರವು ನೀಡಿದರು' ಎಂದು ಗೊತ್ತಾಗಿದೆ.

'ಇಬ್ಬರನ್ನು ದೆಹಲಿ ಪೊಲೀಸರು ಬಂಧಿಸಿ ಕರೆದೊಯ್ದಿದ್ದಾರೆ. ಪ್ರಕರಣದ ಕುರಿತು ನಮಗೂ ಮಾಹಿತಿ ನೀಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಖಚಿತ ಪಡಿಸಿದ್ದಾರೆ.

ನಕಲಿ ಸಿಗರೇಟ್ ಮಾರಾಟ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಟಿಸಿ ಸಿಗರೇಟ್ ಬ್ರ್ಯಾಂಡ್ ಹೆಸರಿನಲ್ಲಿ ನಕಲಿ ಸಿಗರೇಟ್ ಮಾರುತ್ತಿದ್ದ ಕೇರಳದ ಇಬ್ಬರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಠಾಣಾ ಪೊಲೀಸರು ಬಂಧಿಸಿದ್ದಾರೆ.

ನಿಶಾಂತ್ ಹಾಗೂ ಶಕೀಲ್ ಬಂಧಿತರು. ಇವರಿಂದ ₹40 ಲಕ್ಷ ಮೌಲ್ಯದ ಸಿಗರೇಟ್ ಜಪ್ತಿ ಮಾಡಲಾಗಿದೆ. ಪ್ರಮುಖ ಆರೋಪಿ ಶಬ್ಬೀರ್ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

'ಪ್ರಮುಖ ಆರೋಪಿ ಪತ್ತೆಯಾದ ಮೇಲೆ ಪ್ರತಿಷ್ಠಿತ ಕಂಪನಿ ಹೆಸರು ಬಳಸಿ ಯಾವ ಸ್ಥಳದಲ್ಲಿ ನಕಲಿ ಸಿಗರೇಟ್ ತಯಾರಿಸಲಾಗುತ್ತಿತ್ತು. ಯಾವ ಸ್ಥಳಗಳಿಗೆ ಪೂರೈಕೆ ಮಾಡಲಾಗುತ್ತಿತ್ತು ಎಂಬುದು ಗೊತ್ತಾಗಲಿದೆ. ನಕಲಿ ಸಿಗರೇಟ್ ಪೊಟ್ಟಣಗಳನ್ನು ಕಡಿಮೆ ದರಕ್ಕೆ ಆರೋಪಿಗಳು ಮಾರಾಟ ಮಾಡುತ್ತಿದ್ದರು. ಐಟಿಸಿ ಕಂಪನಿ ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಶಾಸಕ ವಿನಯ ಕುಲಕರ್ಣಿ ಬಳಸುತ್ತಿದ್ದ ಕಾರು ಜಪ್ತಿ

ಬೆಂಗಳೂರು: ಹಲವರಿಂದ ಚಿನ್ನಾಭರಣ, ಹಣ ಪಡೆದು ವಂಚಿಸಿದ್ದ ಆರೋಪವುಳ್ಳ ಐಶ್ವರ್ಯಗೌಡ–ಹರೀಶ್ ದಂಪತಿ ಹೆಸರಿನಲ್ಲಿದ್ದ ಮತ್ತೊಂದು ವಿಲಾಸಿ ಐಷಾರಾಮಿ ಕಾರನ್ನು ರಾಜರಾಜೇಶ್ವರಿನಗರ ಠಾಣೆಯ ಪೊಲೀಸರು ಜಪ್ತಿ ಮಾಡಿದ್ದಾರೆ.

ಜ.2ರಂದು ಆರೋಪಿಗಳಿಂದ ಔಡಿ, ಬಿಎಂಡಬ್ಲ್ಯು, ಫಾರ್ಚೂನರ್ ಕಾರು ಜಪ್ತಿ ಮಾಡಿದ್ದು, ಈಗ ಮತ್ತೊಂದು ಕಾರು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. 'ವಂಚನೆ ಹಣದಿಂದ ಕಾರು ಖರೀದಿಸಲಾಗಿತ್ತು. ಕಾರನ್ನು ವಿನಯ ಕುಲಕರ್ಣಿ ಅವರಿಗೆ ಉಡುಗೊರೆ ನೀಡಿದ್ದರು ಎಂಬ ಆರೋಪವಿದೆ. ಈ ಸಂಬಂಧ ಕೆಲವು ದಾಖಲೆಗಳು ಲಭಿಸಿದ್ದವು. ಅದನ್ನು ಆಧರಿಸಿ ಕಾರನ್ನು ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

ವಂಚನೆ ಸಂಬಂಧ ಐಶ್ವರ್ಯಗೌಡ ದಂಪತಿ ವಿರುದ್ಧ ಚಂದ್ರಾಲೇಔಟ್ ಠಾಣೆಯಲ್ಲಿ ಒಂದು ಹಾಗೂ ರಾಜರಾಜೇಶ್ವರಿ ನಗರ ಠಾಣೆಯಲ್ಲಿ ಎರಡು ಪ್ರಕರಣ ದಾಖಲಾಗಿದ್ದವು. ಪೊಲೀಸರು ಆರೋಪಿಗಳನ್ನು ಬಂಧಿಸಿದ್ದರು. ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ.

ಕಾಣೆಯಾಗಿದ್ದಾರೆ

ಜಯಶ್ರೀ
ವಯಸ್ಸು– 17 ವರ್ಷ 6 ತಿಂಗಳು



ಗಂಗಾಧರ್ (ಗಂಗ)
ವಯಸ್ಸು 19 ವರ್ಷ

ದಿನಾಂಕ: 05–09–2024ರಂದು ಮಧ್ಯಾಹ್ನ 3–00 ಗಂಟೆಗೆ ಕಾಣೆಯಾಗಿದ್ದಾರೆ

ಮೇಲ್ಕಂಡ ಕಾಣೆಯಾದ ಹುಡುಗಿ ಹುಡುಗ ಕಂಡುಬಂದಲ್ಲಿ ಈ ಕೆಳಕಂಡ ಯಾವುದಾದರು ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ ಮಾಹಿತಿ ನೀಡಲು ಕೋರಿರುತ್ತೆ.

ದೂರವಾಣಿ ಸಂಖ್ಯೆಗಳು:
99019 15062
90369 14473
94808 03054

ಉದ್ಯೋಗ ಕೊಡಿಸುವ ಆಮಿಷ: ₹ 6 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಆಪ್ತನ ಸೋಗಿನಲ್ಲಿ ವ್ಯಕ್ತಿಯೊಬ್ಬರಿಗೆ ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ₹6 ಲಕ್ಷ ವಂಚಿಸಿರುವ ಘಟನೆ ನಗರದಲ್ಲಿ ನಡೆದಿದೆ.

ರಾಣೆಬೆನ್ನೂರಿನ ಪಿ.ಎಚ್.ಅಡವಿ ದೂರು ನೀಡಿದ್ದು, ಕೆ.ಪಿ.ವೀರೇಶ್ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'2023ರಲ್ಲಿ ಅಡವಿ ಅವರಿಗೆ ಪರಿಚಯವಾಗಿದ್ದ ವೀರೇಶ್, 'ನಾನು ಅರಣ್ಯ ಸಚಿವರ ಆಪ್ತ' ಎಂದು ಹೇಳಿಕೊಂಡಿದ್ದ. ಡಿಸೆಂಬರ್‌ನಲ್ಲಿ ಅರಣ್ಯ ರಕ್ಷಕ, ಅರಣ್ಯ ವೀಕ್ಷಕ ಹುದ್ದೆಗಳಿಗೆ ಅರ್ಜಿ ಕರೆಯಲಾಗಿದ್ದು, ಉದ್ಯೋಗ ಕೊಡಿಸುವ ಭರವಸೆ ನೀಡಿದ್ದ. ಭರವಸೆ ನಂಬಿ ಅಡವಿ ಅವರು ತನ್ನ ಮತ್ತು ಸಹೋದರನ ಮಕ್ಕಳು ಸೇರಿದಂತೆ ಮೂವರಿಂದ ಧಾರವಾಡ, ಶಿವಮೊಗ್ಗ, ಚಾಮರಾಜನಗರ ಜಿಲ್ಲೆಗಳಿಗೆ ಅರ್ಜಿ ಸಲ್ಲಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ಉದ್ಯೋಗ ಕೊಡಿಸಲು ಮುಂಗಡ ಪಾವತಿಸುವಂತೆ ವಿಕಾಸಸೌಧದ ಸಮೀಪ ಹಾಗೂ ವಿವಿಧೆಡೆ ಹಂತ ಹಂತವಾಗಿ ₹6 ಲಕ್ಷ ಪಡೆದುಕೊಂಡಿದ್ದಾನೆ' ಎಂದು ಹೇಳಿದರು.

'ವರ್ಷ ಕಳೆದರೂ ಉದ್ಯೋಗ ಕೊಡಿಸದಿದ್ದಾಗ ಶಂಕೆಯಿಂದ ವಿಚಾರಿಸಿದಾಗ ತಾನು ವಂಚನೆಗೆ ಒಳಗಾಗಿರುವುದು ಗೊತ್ತಾಗಿದೆ. ಆರೋಪಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಡವಿ ಅವರು ದೂರು ನೀಡಿದ್ದಾರೆ' ಎಂದು ತಿಳಿಸಿದರು.

ಡಿಜಿಟಲ್ ಅರೆಸ್ಟ್: ಟೆಕಿಗೆ ₹1.2 ಕೋಟಿ ವಂಚನೆ

ವಂಚಕರಿಗೆ ಹಣ ನೀಡಲು ವಿವಿಧೆಡೆ ₹40 ಲಕ್ಷ ಸಾಲ ಮಾಡಿದ್ದ ಉದ್ಯೋಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 28 ವರ್ಷದ ಟೆಕ್ಕಿಯೊಬ್ಬರನ್ನು ಸೈಬರ್ ವಂಚಕರು ಡಿಜಿಟಲ್ ಅರೆಸ್ಟ್‌ಗೆ ಒಳಪಡಿಸಿ ಡಿ.21ರಿಂದ ಜ.3ರ ನಡುವೆ ₹1.2 ಕೋಟಿ ದೋಚಿದ್ದಾರೆ.

ಈ ಸಂಬಂಧ ಪೂರ್ವ ವಿಭಾಗದ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸೈಬರ್ ವಂಚಕರಿಗೆ ಹಣ ನೀಡಲು ಟೆಕಿ ವಿವಿಧೆಡೆ ₹40 ಲಕ್ಷ ಸಾಲ ಮಾಡಿದ್ದರು. ಅಲ್ಲದೇ ಉಳಿತಾಯ ಖಾತೆಯಲ್ಲಿದ್ದ ಹಣವನ್ನೂ ಕಳೆದುಕೊಂಡಿದ್ದಾರೆ ಎಂದು ಗೊತ್ತಾಗಿದೆ.

'ಸವಿತಾ (ಹೆಸರು ಬದಲಾವಣೆ ಮಾಡಲಾಗಿದೆ) ಅವರಿಗೆ ಡಿ.11ರಂದು ಅಪರಿಚಿತ ಸಂಖ್ಯೆಯಿಂದ ಕರೆ ಬಂದಿತ್ತು. ಕರೆ ಮಾಡಿದ್ದ ಸೈಬರ್ ವಂಚಕ, ಡಿಎಚ್‌ಎಲ್ ಕೊರಿಯರ್‌ನ ಕಾರ್ಯನಿರ್ವಾಹಕ ಎಂದು ಪರಿಚಯಿಸಿಕೊಂಡಿದ್ದ. ತಮ್ಮ ಹೆಸರಿಗೆ ಬಂದಿರುವ ಕೊರಿಯರ್‌ನ ಪಾರ್ಸೆಲ್‌ನಲ್ಲಿ ಆರು ನಕಲಿ ಪಾಸ್‌ಪೋರ್ಟ್, ಎಟಿಎಂ ಕಾರ್ಡ್ ಹಾಗೂ ಡ್ರಗ್ಸ್ ಇರುವುದಾಗಿ ಬೆದರಿಸಿದ್ದ' ಎಂದು ಸೈಬರ್ ಪೊಲೀಸರು ತಿಳಿಸಿದ್ದಾರೆ.

'ಆಗ ಸವಿತಾ ನಾನು ಪಾರ್ಸೆಲ್ ಬುಕ್ ಮಾಡಿಲ್ಲ' ಎಂದು ಹೇಳಿದ್ದರು. ಮುಂಬೈ ಪೊಲೀಸರ ಎದುರು ಬಂದು ಮಾಹಿತಿ ನೀಡುವಂತೆ ಆ ವ್ಯಕ್ತಿ ಸೂಚಿಸಿದ್ದ. ಮುಂಬೈಗೆ ಬರಲು ಸಾಧ್ಯವಿಲ್ಲ ಎಂದಾಗ, ಮುಂಬೈ ಪೊಲೀಸರ ಸೋಗಿನಲ್ಲಿ ಮತ್ತೊಬ್ಬ ಸೈಬರ್ ವಂಚಕ ಸುನಿಲ್ ದತ್ ದುಬೆ ಹೆಸರಿನಲ್ಲಿ ಕರೆ ಮಾಡಿ ನಾಲ್ಕು ರಾಜ್ಯಗಳಲ್ಲಿ ತಮ್ಮ ಹೆಸರಿನಲ್ಲಿ ಖಾತೆ ತೆರೆಯಲಾಗಿದೆ. ಆ ಖಾತೆಗಳಲ್ಲಿ ಅಕ್ರಮವಾಗಿ ಹಣ ವರ್ಗಾವಣೆ ಆಗುತ್ತಿದೆ. ಈ ಸಂಬಂಧ ಇ.ಡಿ ಪ್ರಕರಣ ದಾಖಲಿಸಿಕೊಂಡಿದೆ ಎಂಬುದಾಗಿ ಬೆದರಿಕೆ ಹಾಕಿದ್ದ' ಎಂದು ಮೂಲಗಳು ಹೇಳಿವೆ.

'ಯಾರಿಗೂ ಈ ವಿಚಾರ ತಿಳಿಸದಂತೆ ತಾಕೀತು ಮಾಡಿ ಡಿಜಿಟಲ್ ಅರೆಸ್ಟ್‌ಗೆ ಒಳಪಡಿಸಿದ್ದ' ಎಂದು ಮೂಲಗಳು ತಿಳಿಸಿವೆ.

'ತನಿಖಾ ದೃಷ್ಟಿಯಿಂದ ಖಾತೆಯಲ್ಲಿದ್ದ ಶೇ 95ರಷ್ಟು ಹಣವನ್ನು ಸೈಬರ್ ವಂಚಕರು ನೀಡಿದ್ದ ಖಾತೆಗೆ ವರ್ಗಾಯಿಸಿ ಹಣ ಕಳೆದುಕೊಂಡಿದ್ದೆ' ಎಂದು ಟೆಕಿ ದೂರು ನೀಡಿದ್ದಾರೆ.

ಆತ್ಮಹತ್ಯೆಗೆ ಯತ್ನಿಸಿದ ಟೆಕಿ ರಕ್ಷಣೆ

ಬೆಂಗಳೂರು: ಸ್ನೇಹಿತೆಯ ಮೇಲಿನ ಸಿಟ್ಟಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ ಸಾಫ್ಟ್‌ವೇರ್ ಉದ್ಯೋಗಿಯನ್ನು ಮಹದೇವಪುರ ಠಾಣೆ ಸಿಬ್ಬಂದಿ ರಕ್ಷಿಸಿದ್ದಾರೆ.

'ಯುವಕ, ಕೇರಳದ ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದು, ಆಕೆ ನಗರದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಳು. ಇತ್ತೀಚೆಗೆ ಇಬ್ಬರ ನಡುವೆ ಮನಸ್ತಾಪ ಉಂಟಾಗಿತ್ತು. ಗುರುವಾರ ಮಧ್ಯರಾತ್ರಿ ಆಕೆಗೆ ವಿಡಿಯೊ ಕರೆ ಮಾಡಿ, ಮದ್ಯದ ಬಾಟಲ್ ಒಡೆದು ಅದರಿಂದ ಕೈ ಕೊಯ್ದುಕೊಂಡು ಕರೆ ಸ್ಥಗಿತಗೊಳಿಸಿದ್ದ. ಆಕೆ ವಾಪಸ್ ಕರೆ ಮಾಡಿದರೆ ಸ್ವೀಕರಿಸಿರಲಿಲ್ಲ. ಆತಂಕಗೊಂಡು ಠಾಣೆಗೆ ಮಾಹಿತಿ ನೀಡಿದ್ದಳು' ಎಂದು ಪೊಲೀಸರು ತಿಳಿಸಿದ್ದಾರೆ.

'ಮೊಬೈಲ್ ನಂಬರ್ ಲೊಕೇಶನ್ ಆಧರಿಸಿ ಆತ ವಾಸವಿದ್ದ ಪಿ.ಜಿ ಪತ್ತೆ ಹಚ್ಚಿದ ಸಬ್ ಇನ್‌ಸ್ಪೆಕ್ಟರ್‌ಗಳಾದ ಪರಶುರಾಮ್, ಮಲ್ಲೇಶ್, ಸ್ಥಳಕ್ಕೆ ತೆರಳಿ ಯುವಕನ ರಕ್ಷಿಸಿದ್ದಾರೆ. ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾನೆ' ಎಂದು ಪೊಲೀಸರು ಹೇಳಿದ್ದಾರೆ.

ಅಪರಾಧ ಸುದ್ದಿ

ಪ್ರಾಣಿ ಬೇಟೆ: ಮೂವರ ಬಂಧನ

ಅಪರಾಧ ನಿಯಂತ್ರಣ ಕೋಶ, ಸಂಚಾರಿ ಜಾಗೃತ ದಳದಿಂದ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಹೋಬಳಿಯ ನಂಜೇಗೌಡನದೊಡ್ಡಿ, ಸುತ್ತಲಿನ ಅರಣ್ಯ ಪ್ರದೇಶದಲ್ಲಿ 2 ಜಿಂಕೆ ಹಾಗೂ 2 ಕಾಡುಹಂದಿ ಬೇಟೆಯಾಡಿ, ಬೆಂಗಳೂರಿಗೆ ಸಾಗಿಸುತ್ತಿದ್ದ ಮೂವರನ್ನು ಅರಣ್ಯ ಇಲಾಖೆಯ ಬೆಂಗಳೂರಿನ ಅಪರಾಧ ನಿಯಂತ್ರಣ ಕೋಶ ಮತ್ತು ಜಾಗೃತ ದಳ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿ, ಬಿಡದಿ ಸಮೀಪ ಶುಕ್ರವಾರ ನಸುಕಿನಲ್ಲಿ ಬಂಧಿಸಿದೆ.

ಬೆಂಗಳೂರಿನ ತೋಟದ-ಗುಡ್ಡನಹಳ್ಳಿ ಶ್ರೀನಿವಾಸ್ (47), ನೆಲಮಂಗಲ ತಾಲ್ಲೂಕು ಪಾದನಕುಂಟೆ ಗ್ರಾಮದ ಹನುಮಂತರಾಜು (44), ರಾಮನಗರ ತಾಲ್ಲೂಕು ನಂಜೇಗೌಡನ ದೊಡ್ಡಿ ಗ್ರಾಮದ ಮುನಿರಾಜು (38) ಬಂಧಿತರು.

ಆರೋಪಿಗಳಿಂದ ಥಾರ್ ವಾಹನ, ಪ್ರಾಣಿಗಳ ಕಳೇಬರ, ಸಿಂಗಲ್ ಬ್ಯಾರೆಲ್ ರೈಫಲ್, ಏರ್‌ಗನ್, ಬುಲೆಟ್‌ಗಳು, 3 ಮೊಬೈಲ್, ಬ್ಯಾಟರಿಗಳು, ಚಾಕು ವಶಪಡಿಸಿಕೊಳ್ಳಲಾಗಿದೆ.

ಶ್ರೀನಿವಾಸ್ ಮತ್ತು ಹನುಮಂತರಾಜು, ಸ್ಥಳೀಯನಾದ ಮುನಿರಾಜು ಪರಿಚಯ ಮಾಡಿಕೊಂಡಿದ್ದರು. ನಂಜೇಗೌಡನದೊಡ್ಡಿ ಹಾಗೂ ಸುತ್ತಲಿನ ಭಾಗದಲ್ಲಿ ಕಾಡುಹಂದಿ ಮತ್ತು ಜಿಂಕೆ ಓಡಾಡುವುದರ ಮಾಹಿತಿ ಪಡೆದಿದ್ದ ಇಬ್ಬರೂ, ಮುನಿರಾಜು ಸಹಕಾರದೊಂದಿಗೆ ಬೇಟೆಯಾಡುತ್ತಿದ್ದರು ಎಂದು ಇಲಾಖೆಯ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದರು.

ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿ ವ್ಯಾಪ್ತಿಯಲ್ಲಿ 2 ಜಿಂಕೆ ಹಾಗೂ 2 ಕಾಡುಹಂದಿ ಬೇಟೆಯಾಡಿದ್ದ ಆರೋಪಿಗಳನ್ನು (ಕುಳಿತಿರುವವರು) ಬಂಧಿಸಿದ ಅರಣ್ಯ ಇಲಾಖೆಯ ಬೆಂಗಳೂರಿನ ಅಪರಾಧ ನಿಯಂತ್ರಣ ಕೋಶ ಮತ್ತು ಜಾಗೃತ ದಳದ ಸಿಬ್ಬಂದಿ

ಪ್ರಾಣಿಗಳ ಮಾಂಸ ಭಕ್ಷಣೆ ಜೊತೆಗೆ, ಇತರರಿಗೂ ಮಾರುತ್ತಿದ್ದರು. ಆರೋಪಿಗಳು ಗುರುವಾರ (ಜ. 9) ರಾತ್ರಿ ನಂಜೇಗೌಡನದೊಡ್ಡಿಗೆ ಬೇಟೆಗೆ ಬಂದಿರುವ ಖಚಿತ ಆಧರಿಸಿ ಕಾರ್ಯಾಚರಣೆ ಬಿಡದಿ ಸಮೀಪದ ಚಿಕ್ಕಕುಂಟನಹಳ್ಳಿ ಬಳಿ ಬಂಧಿಸಲಾಯಿತು ಎಂದು ತಿಳಿಸಿದರು.

ಆರೋಪಿಗಳು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಸಂಚಾರಿ ಜಾಗೃತ ದಳದ ಡಿಸಿಎಫ್ ಸುನೀತಾ ಬಾಯಿ, ಅಪರಾಧ ನಿಯಂತ್ರಣ ಕೋಶದ ಆರ್‌ಎಫ್‌ಒ ರಮೇಶ್, ನೇತೃತ್ವದಲ್ಲಿ ಡಿಆರ್‌ಎಫ್‌ಒಗಳಾದ ಅಮೃತ ದೇಸಾಯಿ, ಸಿದ್ದರಾಜು, ರಾಜು, ಫಾರೆಸ್ಟ್ ಗಾರ್ಡ್ ಅಶ್ವಿನ್, ಚಾಲಕ ಸುರೇಶ್ ಅವರಿದ್ದ ತಂಡ ಕಾರ್ಯಾಚರಣೆ ನಡೆಸಿತ್ತು.

ಪ್ರಿಯಕರ ಸಾವು: ಮಹಿಳೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಿಯಕರನ ಆತ್ಮಹತ್ಯೆಯಿಂದ ಮನನೊಂದು ವಿವಾಹಿತೆಯೂ ಆತ್ಮಹತ್ಯೆ ಮಾಡಿಕೊಂಡ ಘಟನೆ ಸಂಪಿಗೆಹಳ್ಳಿ ಠಾಣಾ ವ್ಯಾಪ್ತಿಯ ರಾಚೇನಹಳ್ಳಿಯಲ್ಲಿ ಶನಿವಾರ ನಡೆದಿದೆ.

ದಿಲ್ಶಾದ್ (23) ಆತ್ಮಹತ್ಯೆಗೆ ಶರಣಾದವರು. 'ವಿಜಯಪುರದ ದಿಲ್ಶಾದ್ ರಾಚೇನಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಕೃಷ್ಣ ಎಂಬವರನ್ನುಪ್ರೀತಿಸಿಮದುವೆಆಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಇತ್ತೀಚೆಗೆ ಜಾನ್ಸನ್ ಎಂಬಾತನನ್ನು ಪ್ರೀತಿಸುತ್ತಿದ್ದರು.

ಇಬ್ಬರ ನಡುವೆ ಮನಸ್ತಾಪ ಉಂಟಾಗಿ ಜಾನ್ಸನ್ ಶುಕ್ರವಾರ ಸಂಜೆ ಥಣಿಸಂದ್ರದ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ವಿಚಾರವನ್ನು ಆತನ ಸ್ನೇಹಿತರು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದು, ದಿಲ್ಶಾದ್ ಗಮನಿಸಿದ್ದರು' ಎಂದು ಪೊಲೀಸರು ತಿಳಿಸಿದರು.

ಅಂತಿಮ ದರ್ಶನ ಪಡೆದಿದ್ದರು: 'ಶುಕ್ರವಾರ ಮಧ್ಯಾಹ್ನ ಜಾನ್ಸನ್ ಮನೆಗೆ ತೆರಳಿ ಅಂತಿಮ ದರ್ಶನ ಪಡೆದು ಬಂದ ಬಳಿಕ ದಿಲ್ಶಾದ್ ನೊಂದುಕೊಂಡಿದ್ದರು. ಶನಿವಾರ ಬೆಳಿಗ್ಗೆ ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ದಿಲ್ಶಾದ್ ತಾಯಿ ಬೇಗಂ ಅವರು ನೀಡಿದ ದೂರು ಆಧರಿಸಿ ಅಸಹಜ ಸಾವು ಪ್ರಕರಣ ದಾಖಲಿಸಿ ಕೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

ನಿಧನ ವಾರ್ತೆ

ಎಸ್. ಅನಿಲ್‌ಕುಮಾರ್

ಬೆಂಗಳೂರು: ದಾಸರಹಳ್ಳಿಯ ಎಂಟನೇ ಮೈಲಿ ನಿವಾಸಿ ಅನಿಲ್‌ಕುಮಾರ್ (52) ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಭಾನುವಾರ ಬೆಳಿಗ್ಗೆ 10ಕ್ಕೆ ಮಾಗಡಿ ರಸ್ತೆಯ ಕನ್ನಲಿಯ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಆವಿಷ್ಕಾರಗಳ ಪೇಟೆಂಟ್ ರೇಸ್‌ನಲ್ಲಿ ಹಿಂದೆ ಬಿದ್ದ ಕರ್ನಾಟಕ

ಪೇಟೆಂಟ್ ಇದ್ದವನೇ ಬಾಸು

• ಎಸ್.ರವಿಪ್ರಕಾಶ್

‘ಕಾಸಿದ್ದವನೇ ಬಾಸು’ ಎಂಬುದು ಹಳೆಯ ನುಡಿ. ಈಗ ‘ಪೇಟೆಂಟ್ ಪಡೆದವನೇ ಬಾಸು’ ಎಂಬ ಮಾತು ಜಾಗತಿಕ ವೇದಿಕೆಯಲ್ಲಿ ಚಾಲ್ತಿಯಲ್ಲಿದೆ. ಒಂದೇ ಒಂದು ‘ಕ್ರಾಂತಿಕಾರಿ ಐಡಿಯಾ’ ಹೊಂದಿದ ಪೇಟೆಂಟ್‌ನ ಕಿಮ್ಮತ್ತು ಹಲವು ಕೋಟಿಗಳು. ಪೇಟೆಂಟ್‌ಗಾಗಿ ದೇಶ ದೇಶಗಳ ಮಧ್ಯೆ, ದೈತ್ಯ ಕಂಪನಿಗಳ ಮಧ್ಯೆ ದೊಡ್ಡ ಕಾನೂನು ಸಮರವೇ ನಡೆಯುತ್ತಿದೆ. ಸಂಶೋಧನೆ ಸೇರಿದಂತೆ ಹಲವು ವಿಷಯಗಳಲ್ಲಿ ಭಾರತ ಮುಂದೆ ಇದ್ದರೂ ಪೇಟೆಂಟ್ ಪಡೆಯುವ ರೇಸ್‌ನಲ್ಲಿ ಹಿಂದೆ ಉಳಿದಿದೆ. ಪ್ರಖ್ಯಾತ ವೈಜ್ಞಾನಿಕ ಸಂಸ್ಥೆಗಳು ಹಲವಿದ್ದರೂ ಪೇಟೆಂಟ್ ಅರ್ಜಿ ಸಲ್ಲಿಕೆಯ ರೇಸ್‌ನಲ್ಲಿ ಕರ್ನಾಟಕಕ್ಕೆ ನಾಲ್ಕನೇ ಸ್ಥಾನ!

ಯಾವುದೇ ಒಂದು ದೇಶ, ರಾಜ್ಯ, ಕಂಪನಿ, ಶೈಕ್ಷಣಿಕ ಸಂಸ್ಥೆಗಳು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕವಾಗಿ ಪಾರಮ್ಯ ಸಾಧಿಸಲು ಹೊಸ ಆವಿಷ್ಕಾರಗಳು ಮತ್ತು ಅದರ ಸಾರ್ವಜನಿಕ ಉಪಯೋಗ ಅಥವಾ ಅನ್ವಯ ಅತಿ ಮುಖ್ಯ. ಇಂತಹ ಆವಿಷ್ಕಾರಗಳಿಗೆ ಕಾನೂನು ಬದ್ಧ ಸಂಪೂರ್ಣ ರಕ್ಷಣೆ ಮತ್ತು ಹಕ್ಕು ಪಡೆಯುವುದಕ್ಕೆ ಪೇಟೆಂಟ್ (ಬೌದ್ಧಿಕ ಆಸ್ತಿ ಹಕ್ಕು) ಎನ್ನಲಾಗುತ್ತದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪೇಟೆಂಟ್ ಪಡೆಯಲು ಜಗತ್ತಿನ ಬಲಾಢ್ಯ ದೇಶಗಳ ಮಧ್ಯೆ ಭಾರೀ ಪೈಪೋಟಿಯೇ ಏರ್ಪಟ್ಟಿದೆ. ಖಾಸಗಿ ದೈತ್ಯ ಕಂಪನಿಗಳ ನಡುವೆಯೂ ತುರುಸಿನ ಸ್ಪರ್ಧೆ ನಡೆದಿದೆ. ಪಿಎಚ್.ಡಿ ಹಾಗೂ ಎಂ.ಫಿಲ್ ಪಡೆಯುವುದು ಹೆಚ್ಚುಗಾರಿಕೆಯಲ್ಲ, ಸಂಶೋಧನೆಯ ಹಕ್ಕು ಪಡೆಯುವುದೇ ಅತಿ ಮುಖ್ಯ ಎನ್ನುವುದು ಇಂದಿನ ಔದ್ಯೋಗಿಕ ಪೈಪೋಟಿಯಲ್ಲಿ ಮೈಲಿಗಲ್ಲು.

ನಿಮಗೆ ನೆನಪಿರಬಹುದು ದಶಕಗಳ ಹಿಂದೆ ಅರಿಶಿಣಕ್ಕೆ ಪೇಟೆಂಟ್ ಪಡೆಯಲು ಭಾರತ ದೊಡ್ಡ ಸಮರವನ್ನೇ ನಡೆಸಿತ್ತು. ಅಮೆರಿಕಾದ ಕಂಪನಿಗಳೂ ಇದಕ್ಕೆ ಪೈಪೋಟಿ ಒಡ್ಡಿದ್ದವು. ಅಂತಿಮವಾಗಿ ಭಾರತಕ್ಕೆ ಜಯ ಸಿಕ್ಕಿತ್ತು. ಭಾರತದ ಮನೆ–ಮನೆಗಳಲ್ಲೂ ಅರಿಶಿಣ ಔಷಧವಾಗಿ ಸಾವಿರಾರು ವರ್ಷಗಳಿಂದಲೂ ಬಳಸುತ್ತಾ ಬರಲಾಗಿತ್ತು. ಆದರೆ, ಅದರ ಹಕ್ಕುಸ್ವಾಮ್ಯ ಪಡೆಯುವ ಪ್ರಯತ್ನ ಎಂದೂ ಮಾಡಿರಲಿಲ್ಲ. ಭಾರತದಲ್ಲಿ ಆವಿಷ್ಕಾರಗಳಿಗೆ ಪೇಟೆಂಟ್ ಪಡೆಯುವ ಕಾಯ್ದೆಯನ್ನು 1970 ರಲ್ಲಿ ಕೇಂದ್ರ ಜಾರಿ ತಂದಿತ್ತಾದರೂ, ಅದರ ಬಗ್ಗೆ ತಲೆ ಕೆಡಿಸಿಕೊಂಡವರು ಕಡಿಮೆ. ಜಾಗತೀಕರಣದ ಪ್ರಬಲ ಚಂಡ ಮಾರುತ ಜಗತ್ತಿನೆಲ್ಲೆಡೆ ತಂತ್ರಜ್ಞಾನದ ಕ್ರಾಂತಿಯ ಕಿಚ್ಚೂ ಹಬ್ಬಿಸಿತು. ವಿಶೇಷವಾಗಿ ಮಾಹಿತಿ ತಂತ್ರಜ್ಞಾನ ಮತ್ತು ಅದಕ್ಕೆ ಸಂಬಂಧಿಸಿದ ಶಾಖೆಗಳಲ್ಲಿ ವಿಶ್ವವೇ ಊಹಿಸಲಾಗದ ಹೊಸ ಆವಿಷ್ಕಾರಗಳಾದವು. ಈ ಹೊಸತುಗಳಿಗೆ ಪೇಟೆಂಟ್ ಪಡೆಯುವ ಪರಿಪಾಠವೂ ಹೆಚ್ಚಾಯಿತು.

ಯಾವುದೇ ಒಂದು ಹೊಸ ಉತ್ಪನ್ನ ತಯಾರು ಮಾಡಿದರೆ ಅದರ ನಕಲು ಮಾರನೇ ದಿನವೇ ಮಾರುಕಟ್ಟೆಗಳಿಗೆ ಕಾಲಿಡುತ್ತವೆ. ಕರೆನ್ಸಿ ನೋಟುಗಳಿಂದ ಹಿಡಿದು, ಮದ್ಯದವರೆಗೆ ಎಲ್ಲದರ ನಕಲು ಮಾಲು ಸಿಗುತ್ತವೆ. ಅದೇ ರೀತಿಯಲ್ಲಿ ಅಮೆರಿಕಾವೋ, ರಷ್ಯಾ ಅಥವಾ ಫ್ರಾನ್ಸ್ ಐದನೇ ತಲೆಮಾರಿನ ಯುದ್ಧ ವಿಮಾನ ತಯಾರಿಸಿದರೆ, ಮತ್ಯಾವುದೋ ದೇಶ ಅದರ ತಂತ್ರಜ್ಞಾನ ಮತ್ತು ಮಾದರಿಯ ವಿನ್ಯಾಸವನ್ನು ಕದ್ದು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ತಯಾರಿಸುವ ಚಾಕಚಕ್ಯತೆ ಹೊಂದಿವೆ. ಅದೇ ರೀತಿಯಲ್ಲಿ ಔಷಧ, ಲಸಿಕೆಗಳ ಫಾರ್ಮುಲಾಗಳನ್ನೇ ಕದಿಯುವ ಅಥವಾ ಬೌದ್ಧಿಕ ಚೌರ್ಯ ನಡೆಸುವ ಕಲೆ ಹಲವು ದೇಶಗಳ ಬುದ್ಧಿವಂತ ಕಳ್ಳರಿಗೆ ಲಭಿಸಿದೆ. ‘ಪೇಟೆಂಟ್’ ಇದಕ್ಕೆ ಕಡಿವಾಣ ಹಾಕಬಲ್ಲದು. ವಾಣಿಜ್ಯಿಕವಾಗಿ ರಕ್ಷಣೆ ಒದಗಿಸಬಲ್ಲದು. ಕದ್ದವರನ್ನು ಅಂತರರಾಷ್ಟ್ರೀಯ ನ್ಯಾಯಾಲಯದ ಕಟಕಟೆಗೆ ತಂದು ನಿಲ್ಲಿಸಿ, ಭಾರೀ ಮೊತ್ತದ ದಂಡ ಕಕ್ಕಿಸಲು ಪೇಟೆಂಟ್‌ನಿಂದ ಮಾತ್ರ ಸಾಧ್ಯ.

ವಿಶ್ವಕ್ಕೆ ‘ಸೊನ್ನೆ’ ಕೊಟ್ಟವರು ನಾವು. ವಿಶ್ವದಲ್ಲೇ ಮೊದಲ ಬಾರಿಗೆ ಭಾರತೀಯರೇ ತುಕ್ಕು ಹಿಡಿಯದ ಉಕ್ಕು ತಯಾರಿಕೆ ಮಾಡಿದ್ದರು... ಹೀಗೆ ಹಲವು ಪ್ರಥಮಗಳನ್ನು ಹೇಳಿಕೊಳ್ಳುವ ನಾವು ಆಧುನಿಕ ಯುಗದಲ್ಲಿ ನಮ್ಮಲ್ಲಿ ಆಗುತ್ತಿರುವ ಸಂಶೋಧನೆ ಮತ್ತು ಆವಿಷ್ಕಾರಗಳಿಗೆ ಎಷ್ಟು ಪೇಟೆಂಟ್ ಪಡೆದುಕೊಂಡಿದ್ದೇವೆ ಎಂಬುದನ್ನು ಜಾಗತಿಕ ಮಾಪನದಲ್ಲಿಟ್ಟು ಅಳೆಯಲು ಹೋದರೆ ಸ್ಥಿತಿ ಅಷ್ಟೇನೂ ಉತ್ತೇಜನದಾಯಕವಾಗಿಲ್ಲ. ಮೊದಲಿಗೆ ಸಂಶೋಧಕರ ಸಂಖ್ಯೆಯನ್ನು ತೆಗೆದುಕೊಳ್ಳೋಣ, ಆ ಮೇಲೆ ಪೇಟೆಂಟ್ ವಿಷಯಕ್ಕೆ ಬರೋಣ; ಯುನೆಸ್ಕೋ ಇನ್ಸ್‌ಟಿಟ್ಯೂಟ್ ಆಫ್ ಸ್ಟಾಟಿಸ್ಟಿಕ್ಸ್ 2016 ರಲ್ಲಿ ಪ್ರಕಟಿಸಿದ ವರದಿಯ ಪ್ರಕಾರ, ಪ್ರತಿ 10 ಲಕ್ಷ ಜನರಲ್ಲಿ ದಕ್ಷಿಣ ಕೊರಿಯಾದಲ್ಲಿ 7,100, ಜಪಾನ್‌ನಲ್ಲಿ 5,210, ಅಮೆರಿಕಾ 4,313, ಯೂರೋಪಿಯನ್ ಒಕ್ಕೂಟ 3,749, ಚೀನಾ 1,206 ಸಂಶೋಧಕರಿದ್ದರೆ, ಭಾರತದಲ್ಲಿ 216 ಮಂದಿ ಮಾತ್ರ ಇದ್ದರು.

ಪೇಟೆಂಟ್ ಪಡೆಯುವ ರೇಸ್‌ನಲ್ಲಿ ಭಾರತ ತೀರಾ ಹಿಂದುಳಿದಿದೆ ಎಂಬುದನ್ನು ಅಂಕಿ– ಅಂಶಗಳು ಬೊಟ್ಟು ಮಾಡುತ್ತವೆ. ಇತ್ತೀಚಿನ ವರ್ಷಗಳಲ್ಲಿ ಸರ್ಕಾರದಿಂದ ಸ್ವಲ್ಪಮಟ್ಟಿನ ಉತ್ತೇಜನ ಸಿಗುತ್ತಿದೆ. ವರ್ಲ್ಡ್ ಇಂಟೆಲೆಕ್ಚುವಲ್ ಪ್ರಾಪರ್ಟಿ ಆರ್ಗನೈಸೇಷನ್‌ನ (ಡಬ್ಲ್ಯುಐಪಿಒ) ವರದಿಯ ಪ್ರಕಾರ ಚೀನಾ 13,81,594 ಅರ್ಜಿಗಳನ್ನು ಸಲ್ಲಿಸಿದ್ದರೆ 4,20,144 ಗೆ ಒಪ್ಪಿಗೆ ಸಿಕ್ಕಿದೆ. ಅಮೆರಿಕಾದಲ್ಲಿ 6,06,956 ಅರ್ಜಿಗಳು ಸಲ್ಲಿಕೆಯಾಗಿದ್ದರೆ, 3,18,829ಕ್ಕೆ ಒಪ್ಪಿಗೆ ಸಿಕ್ಕಿದೆ. ಜಪಾನ್‌ನಲ್ಲಿ 3,18,481 ಅರ್ಜಿಗಳು ಸಲ್ಲಿಕೆಯಾಗಿದ್ದರೆ 1,99,577 ಕ್ಕೆ ಒಪ್ಪಿಗೆ ಸಿಕ್ಕಿದೆ. ಯುರೋಪ್ ಒಕ್ಕೂಟದಿಂದ 1,66,585 ಅರ್ಜಿ ಸಲ್ಲಿಕೆಯಾಗಿದ್ದರೆ 1,05,645 ಕ್ಕೆ ಒಪ್ಪಿಗೆ ಸಿಕ್ಕಿದೆ. ಭಾರತದಲ್ಲಿ 46,582 ಅರ್ಜಿ ಸಲ್ಲಿಕೆಯಾಗಿದ್ದು, 12,387 ಕ್ಕೆ ಒಪ್ಪಿಗೆ ಸಿಕ್ಕಿದೆ. ಯಾರು ಯಾವುದೇ ದೇಶಕ್ಕೆ ಹೋಗಿ ಅಲ್ಲಿಂದ ಪೇಟೆಂಟ್‌ಗೆ ಅರ್ಜಿ ಸಲ್ಲಿಸಬಹುದು. ವಿದೇಶಗಳಲ್ಲಿ ಆ ಪ್ರಕ್ರಿಯೆ ಬೇಗನೆ ನಡೆಯುತ್ತದೆ. ಆರು ತಿಂಗಳು ಅಥವಾ ಒಂದು ವರ್ಷದಲ್ಲಿ ಪಡೆಯಬಹುದು.

ಪೇಟೆಂಟ್ ಪಡೆಯಲು ವೈಯಕ್ತಿಕವಾಗಿ ಅರ್ಜಿ ಸಲ್ಲಿಸಲು ₹1.30 ಲಕ್ಷದವರೆಗೆ ಆಗುತ್ತದೆ. ಕಂಪನಿಗಳು ಪೇಟೆಂಟ್‌ಗೆ ಸಲ್ಲಿಸಿದರೆ ಆ ಮೊತ್ತ ಹಲವು ಪಟ್ಟು ಹೆಚ್ಚಾಗುತ್ತದೆ, ಅಂದರೆ, ₹30 ಲಕ್ಷದಿಂದ ₹50 ಲಕ್ಷದವರೆಗೆ ವೆಚ್ಚವಾಗುತ್ತದೆ. ನಿರ್ದಿಷ್ಟ ಆವಿಷ್ಕಾರಕ್ಕೆ ಸಂಬಂಧಿಸಿದಂತೆ ಬೇರೆ ಯಾರು ಅರ್ಜಿ ಸಲ್ಲಿಸಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಮತ್ತು ತಮ್ಮದೇ ವಿಶಿಷ್ಟ ಎಂಬುದನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸಿ ಪೇಟೆಂಟ್ ಪಡೆದುಕೊಳ್ಳಬೇಕು. ಆಗ ಮಾತ್ರ ಆವಿಷ್ಕಾರಕ್ಕೆ ಕಾನೂನಿನ ರಕ್ಷಣೆ ಸಿಗುತ್ತದೆ.

ವಿವಿಧ ರಾಜ್ಯಗಳಲ್ಲಿ ಪೇಟೆಂಟ್‌ಗೆ ಅರ್ಜಿ ಸಲ್ಲಿಸುವ ಪ್ರವೃತ್ತಿ ಆಶಾದಾಯಕವಾಗಿಲ್ಲ. ಮೊದಲ ಸ್ಥಾನದಲ್ಲಿ ತಮಿಳುನಾಡು, ಎರಡನೇ ಸ್ಥಾನದಲ್ಲಿ ಮಹಾರಾಷ್ಟ್ರ, ಮೂರನೇ ಸ್ಥಾನದಲ್ಲಿ ಉತ್ತರ ಪ್ರದೇಶವಿದೆ. ವಿಜ್ಞಾನ–ತಂತ್ರಜ್ಞಾನ ಮತ್ತು ಐಟಿ ರಾಜಧಾನಿ ಎಂದು ಬೆನ್ನು ತಟ್ಟಿಕೊಳ್ಳುವ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ ಎನ್ನುತ್ತದೆ ನೀತಿ ಆಯೋಗದ ಅಂಕಿ– ಅಂಶಗಳು. ಇನ್ನೂ ಅಚ್ಚರಿಯ ಸಂಗತಿ ಎಂದರೆ ವಿಜ್ಞಾನ–ತಂತ್ರಜ್ಞಾನ ಬೋಧಿಸುವ ಶೈಕ್ಷಣಿಕ ಸಂಸ್ಥೆಗಳ ಪೈಕಿ ಪೇಟೆಂಟ್‌ಗೆ ಅರ್ಜಿ ಸಲ್ಲಿಸುವ ಸಂಖ್ಯೆ ಸರ್ಕಾರಿ ಸಂಸ್ಥೆಗಳಿಗಿಂತ ಮತ್ತು ಖಾಸಗಿ ಸಂಸ್ಥೆಗಳೇ ಹೆಚ್ಚು. ಭಾರತದ ಪ್ರತಿಷ್ಠಿತ ಭಾರತೀಯ ವಿಜ್ಞಾನ ಸಂಸ್ಥೆಯಾಗಲಿ, ಐಐಟಿಗಳಾಗಲಿ ಮೊದಲ ಹತ್ತು ಸಂಸ್ಥೆಗಳಲ್ಲಿ ರ‍್ಯಾಂಕಿಂಗ್ ಪಡೆದುಕೊಂಡಿಲ್ಲ. ಹಾಗೆಂದು ಅಲ್ಲಿ ಸಂಶೋಧನೆಗಳು ಆವಿಷ್ಕಾರಗಳು ನಡೆಯುತ್ತಾ ಇಲ್ಲ ಎಂದೇನಲ್ಲ, ಪೇಟೆಂಟ್ ಪಡೆಯುವತ್ತ ವಿಶೇಷ ಗಮನ ಹರಿಸಿಲ್ಲ.

‘2023 ರ ಪ್ರಕಾರ, ಜಾಗತಿಕ ಆವಿಷ್ಕಾರ ಸೂಚ್ಯಂಕದ ಪ್ರಕಾರ 132 ದೇಶಗಳಲ್ಲಿ ಭಾರತ 40 ನೇ ಸ್ಥಾನವನ್ನು ಉಳಿಸಿಕೊಂಡಿದೆ. 10 ವರ್ಷಗಳಿಂದೀಚೆಗೆ ಪೇಟೆಂಟ್‌ಗೆ ಅರ್ಜಿ ಹಾಕುವ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ಭಾರತದಲ್ಲಿ ಅರ್ಜಿ ಸಲ್ಲಿಸುವ ಪ್ರಮಾಣ ಶೇ 31.6 ಇದು ಇತ್ತೀಚಿನ ವರ್ಷಗಳಲ್ಲೇ ಅಧಿಕ’ ಎನ್ನುತ್ತಾರೆ ನೀತಿ ಆಯೋಗ ಉಪಾಧ್ಯಕ್ಷ, ಸುಮನ್ ಬೆರಿ.

ವೈಸ್ ವರ್ಕ್ ಕಂಪನಿಯ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಡಾ.ಮದನ್ ಕುಮಾರ್ ಶ್ರೀನಿವಾಸನ್ ಅವರ ಪ್ರಕಾರ, ಭಾರತದಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ. ಆದರೆ, ಅರಿವಿನ ಕೊರತೆ ಮತ್ತು ಇತರ ಕಾರಣಗಳಿಂದ ಪೇಟೆಂಟ್‌ಗೆ ಅರ್ಜಿ ಸಲ್ಲಿಸುವವರು ಕಡಿಮೆ. ಇತ್ತೀಚಿನ ವರ್ಷಗಳಲ್ಲಿ ಸರ್ಕಾರದ ಉತ್ತೇಜನದ ಕಾರಣ ಅರ್ಜಿ ಹಾಕುವವರ ಸಂಖ್ಯೆ ಗಣನೀಯವಾಗಿ ಏರಿದೆ. ಆದರೆ ಏನೇನೂ ಸಾಲದು.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ
ಚಿತ್ರಗಳು: ಕಣಕಾಲಮಠ

ಸಿಎಫ್‌ಟಿಆರ್‌ಐ ಹೆಗ್ಗಳಿಕೆ

ಸಂಶೋಧನೆ ಮತ್ತು ಆವಿಷ್ಕಾರಗಳ ಅನ್ವಯ ಹೆಚ್ಚಾಗಿ ಕೃಷಿ, ಆಹಾರ, ಕೈಗಾರಿಕೆ, ಔಷಧ ಮತ್ತು ಜೀವ ವಿಜ್ಞಾನ ಕ್ಷೇತ್ರಗಳಲ್ಲಿ ವ್ಯಾಪಕ ಪ್ರಮಾಣದಲ್ಲಿ ಬಳಕೆಯಾಗುತ್ತದೆ. ಕೋವಿಡ್ ಸಂದರ್ಭದಲ್ಲಿ ಕಂಡು ಹಿಡಿದ ಲಸಿಕೆ ಇದಕ್ಕೆ ತೀರಾ ಇತ್ತೀಚಿನ ಉದಾಹರಣೆ. ವಂಶವಾಹಿ ತಿದ್ದುಪಡಿಗೆ ಬಳಸುವ ಕ್ರಿಸ್ಪಾರ್ ಟೂಲ್ ಕೂಡಾ ಮತ್ತೊಂದು ಜನಪ್ರಿಯ ನಿದರ್ಶನ. ಕೃಷಿ ವಿಶ್ವವಿದ್ಯಾಲಯಗಳ ಸಾಕಷ್ಟು ಪೇಟೆಂಟ್‌ಗಳು ಬಳಕೆಗೆ ಬರುತ್ತವೆ. ವೈವಿಧ್ಯ ತಳಿಗಳು, ಕೃಷಿ ಯಂತ್ರೋಪಕರಣಗಳ ತಂತ್ರಜ್ಞಾನ ಇತ್ಯಾದಿ. ಈ ನಿಟ್ಟಿನಲ್ಲಿ ಮೈಸೂರಿನ ಸಿಎಫ್‌ಟಿಆರ್‌ಐ ಆವಿಷ್ಕಾರಗಳನ್ನು ಕಾರ್ಯಗತಗೊಳಿಸಿ ‘ಅನ್ನದ ಬಟ್ಟಲಿಗೆ’ ಬರುವಂತೆ ಮಾಡಿರುವ ಕಾರಣ, ಆ ಉತ್ಪನ್ನಗಳು ಸಾಕಷ್ಟು ಜನಪ್ರಿಯವಾಗಿವೆ.

ಮೈಸೂರಿನ ಸಿಎಫ್‌ಟಿಆರ್‌ಐ 65 ಭಾರತೀಯ ಪೇಟೆಂಟ್ ಮತ್ತು 4 ಅಂತರರಾಷ್ಟ್ರೀಯ ಪೇಟೆಂಟ್‌ಗಳನ್ನು ಹೊಂದಿದೆ. ಇವೆಲ್ಲವೂ ಆಹಾರ ಸಂಸ್ಕರಣೆ ಹಾಗೂ ಉತ್ಪನ್ನಗಳ ಆವಿಷ್ಕಾರವಾಗಿವೆ. ಕಳೆದ ವರ್ಷ 150ಕ್ಕೂ ಹೆಚ್ಚು ತಂತ್ರಜ್ಞಾನಗಳನ್ನು ನವೋದ್ಯಮಗಳಿಗೆ ನೀಡುವ ಒಪ್ಪಂದ ಮಾಡಿಕೊಂಡಿದೆ. ಪ್ರತಿ ವರ್ಷ 20ರಿಂದ 30 ಹೊಸ ತಂತ್ರಜ್ಞಾನವನ್ನು ಆವಿಷ್ಕರಿಸುತ್ತಿದೆ ಎನ್ನುತ್ತಾರೆ ಸಂಸ್ಥೆಯ ನಿರ್ದೇಶಕಿ ಶ್ರೀದೇವಿ ಅನ್ನಪೂರ್ಣ ಸಿಂಗ್.

121 ಪೇಟೆಂಟ್‌ಗಳ ‘ಒಡೆಯ’ ಡಾ.ಮದನ್ ಕುಮಾರ್

ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಮೆಷಿನ್ ಲರ್ನಿಂಗ್, ಅನಾಲಿಟಿಕ್ಸ್, ಕ್ಲೌಡ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆಗಳನ್ನು ನಡೆಸಿ 121 ಪೇಟೆಂಟ್‌ಗಳನ್ನು ಪಡೆದಿರುವ ಬೆಂಗಳೂರಿನ ಯುವ ಸಂಶೋಧಕ ಡಾ.ಮದನ್ ಕುಮಾರ್ ಶ್ರೀನಿವಾಸನ್ ಅವರು ಪೇಟೆಂಟ್ ಪಡೆಯುವ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಇದಕ್ಕಾಗಿ ‘ಇಂಡಿಯಾ ಪೇಟೆಂಟ್ ಇನಿಷಿಯೇಟಿವ್’ ಎನ್ನುವ ಸಂಸ್ಥೆಯನ್ನು ಹುಟ್ಟು ಹಾಕಿ ಅದರ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ. ಇವರ ಬಹುತೇಕ ಎಲ್ಲ ಪೇಟೆಂಟ್‌ಗಳು ವಾಣಿಜ್ಯಿಕವಾಗಿ ಯಶಸ್ವಿ ಉತ್ಪನ್ನವಾಗಿ ಮಾರುಕಟ್ಟೆಯಲ್ಲಿವೆ. ವಿಶ್ವವ್ಯಾಪಿ 300 ಕ್ಕೂ ಹೆಚ್ಚು ಕಂಪನಿಗಳು ಇವರ ಆವಿಷ್ಕಾರದ ಗ್ರಾಹಕರಾಗಿ ಸೇವೆ ಪಡೆದಿವೆ. ಆಕ್ಸೆಂಚರ್‌ನ ಕ್ಲೌಡ್ ಎಐ ವಿಭಾಗದ ಸ್ಥಾಪಕರು ಇವರು.

‘ಭಾರತದಲ್ಲಿ ಸಾಕಷ್ಟು ಸಂಶೋಧನೆ ಮತ್ತು ಆವಿಷ್ಕಾರಗಳೂ ನಡೆಯುತ್ತಿವೆ. ಆದರೆ ಪೇಟೆಂಟ್ ಪಡೆಯುವ ಬಗ್ಗೆ ಯಾರೂ ಹೆಚ್ಚಿನ ಆಸಕ್ತಿ ತೋರುತ್ತಿಲ್ಲ. ಅರಿವಿನ ಕೊರತೆ ಬಹಳ ಮುಖ್ಯ. ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಈ ಬಗ್ಗೆ ಆಸಕ್ತಿ ಹೊಂದಿಲ್ಲ. ಎಲ್ಲದಕ್ಕೂ ಅನುದಾನದ ಕೊರತೆ ಎಂದು ಕಾರಣ ಮುಂದಿಡುತ್ತಾರೆ’ ಎಂದು ಅವರು ತಿಳಿಸಿದರು.

‘ಐಐಟಿ, ಐಐಎಸ್‌ಸಿ ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳು ಸೈನ್ಸ್ ಪೇಪರ್ ಮಂಡಿಸುವುದಕ್ಕೆ ಹೆಚ್ಚಿನ ಒತ್ತು ನೀಡುತ್ತವೆಯೇ ಹೊರತು ಪೇಟೆಂಟ್‌ಗೆ ಆದ್ಯತೆ ನೀಡುತ್ತಿಲ್ಲ. ಪೇಟೆಂಟ್ ಪಡೆದೂ ಆ ಬಳಿಕ ಸೈನ್ಸ್ ಪೇಪರ್ ಮಂಡಿಸುವುದಕ್ಕೆ ಯಾವುದೇ ಅಡ್ಡಿ ಇರುವುದಿಲ್ಲ. ಐಐಟಿಗಳಲ್ಲಿ ಪಿಎಚ್.ಡಿ ಪಡೆಯಲು ಎರಡು ಸೈನ್ಸ್ ಪೇಪರ್ ಅಥವಾ ಒಂದು ಪೇಟೆಂಟ್ ಪಡೆದಿರಬೇಕು ಎಂಬ ನಿಯಮವಿದೆ. ಆದರೂ ಯಾರೂ ಪೇಟೆಂಟ್ ಪಡೆಯಲು ಹೋಗುವುದಿಲ್ಲ’ ಎಂದು ವಿವರಿಸಿದರು.

ಐಐಎಸ್‌ಸಿ ಪಡೆದ ಪೇಟೆಂಟ್‌ಗಳೆಷ್ಟು?

ಕಳೆದ ಹತ್ತು ವರ್ಷಗಳಲ್ಲಿ 1,143 ಅರ್ಜಿಗಳನ್ನು ಸಲ್ಲಿಸಿದ್ದು, 694 ಪೇಟೆಂಟ್‌ಗಳನ್ನು ಪಡೆದುಕೊಂಡಿದೆ. ಇವುಗಳಲ್ಲಿ ಫಾರ್ಮಾಸ್ಯುಟಿಕಲ್ ಉತ್ಪನ್ನಗಳಿಗೆ ಸಂಬಂಧಿಸಿದಂತೆ 481, ಮಾಪನ, ಪರೀಕ್ಷೆ ಮತ್ತು ನ್ಯಾವಿಗೇಷನ್‌ಗೆ ಸಂಬಂಧಿಸಿದಂತೆ 417 ಮತ್ತು ಎಲೆಕ್ಟ್ರಾನಿಕ್ ಸಾಧನಗಳಿಗೆ 406 ಪೇಟೆಂಟ್‌ಗಳನ್ನು ಪಡೆದುಕೊಂಡಿದೆ.

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಪೇಟೆಂಟ್‌ಗೆ ಅರ್ಜಿ ಸಲ್ಲಿಸುವವರ ಸಂಖ್ಯೆ ಹೆಚ್ಚುತ್ತಿದೆ. ಪೇಟೆಂಟ್ ಹೊಂದಿದ ಸಾಕಷ್ಟು ಉತ್ಪನ್ನಗಳು ಮಾರುಕಟ್ಟೆಯನ್ನು ಪ್ರವೇಶಿಸುವ ಮೂಲಕ ವಾಣಿಜ್ಯಿಕವಾಗಿ ಮಹತ್ವ ಪಡೆದಿವೆ. ಸಂಶೋಧನೆಗಳು ಕೇವಲ ಪ್ರಯೋಗಾಲಯದಲ್ಲಿ ಉಳಿಯದೇ ಉತ್ಪನ್ನವಾಗಿ ಮಾರುಕಟ್ಟೆಗೆ ಹೋಗುತ್ತಿದೆ. ಈ ವಿದ್ಯಮಾನ ಸಕಾರಾತ್ಮಕ ಪರಿಣಾಮ ಬೀರಿದೆ ಎಂದು ಐಐಎಸ್‌ಸಿಯ ಐಪಿಟಿಇಎಲ್ (ಇಂಟೆಲಕ್ಚ್ಯುವಲ್ ಪ್ರಾಪರ್ಟಿ ಅಂಡ್ ಟೆಕ್ನಾಲಜಿ ಲೈಸೆನ್ಸಿಂಗ್) ಅಧ್ಯಕ್ಷ ಪ್ರೊ. ಸೂರ್ಯಸಾರಥಿ ಬೋಸ್ ಹೇಳಿದ್ದಾರೆ.

ಅಭಿಪ್ರಾಯಗಳು

ಎರಡು ವರ್ಷಗಳಲ್ಲಿ ರಾಜ್ಯದಿಂದ ಪೇಟೆಂಟ್‌ಗೆ ಅರ್ಜಿ ಹಾಕುವವರ ಸಂಖ್ಯೆ ಹೆಚ್ಚಾಗಿದೆ. 2,100 ಅರ್ಜಿಗಳು ಸಲ್ಲಿಕೆಯಾಗಿದ್ದು, 80 ಕ್ಕೆ ಪೇಟೆಂಟ್ ಸಿಕ್ಕಿದೆ. ನಮ್ಮ ಸಂಸ್ಥೆ ವತಿಯಿಂದ ಪೇಟೆಂಟ್‌ಗೆ ಅರ್ಜಿ ಹಾಕುವುದರಿಂದ ಹಿಡಿದು ವಿವಿಧ ಪ್ರಕ್ರಿಯೆಗಳ ಬಗ್ಗೆ ಉಚಿತವಾಗಿ ಮಾರ್ಗದರ್ಶನ ಮಾಡುತ್ತೇವೆ. ಎಂಜಿನಿಯರಿಂಗ್ ಕಾಲೇಜುಗಳು, ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಈ ಸಂಬಂಧ ತರಬೇತಿ ನೀಡುತ್ತಿದ್ದೇವೆ. ಈಗಿಗ ವಿದ್ಯಾರ್ಥಿಗಳು ಆಸಕ್ತಿ ಬೆಳೆಸಿಕೊಳ್ಳುತ್ತಿದ್ದಾರೆ
ಡಾ.ಯು.ಟಿ.ವಿಜಯ್, ಕಾರ್ಯದರ್ಶಿ (ಕಾರ್ಯನಿರ್ವಾಹಕ), ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪೇಟೆಂಟ್‌ಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ದುಬಾರಿ ಆಗಿದ್ದರಿಂದ ಕಡಿಮೆ ಗ್ರೇಡ್ ಹೊಂದಿದ ವಿ.ವಿ.ಗಳು ಇಷ್ಟು ಹಣ ಖರ್ಚು ಮಾಡಲು ಮುಂದಾಗುವುದಿಲ್ಲ. ಸರ್ಕಾರ ಅನುದಾನ ನೀಡಿದರೆ ಪೇಟೆಂಟ್ ಪಡೆಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬಹುದು
ಪ್ರೊ.ದಯಾನಂದ ಅಗಸರ, ಕುಲಪತಿ, ಗುಲಬರ್ಗಾ ವಿಶ್ವವಿದ್ಯಾಲಯ

ಕೋವಿಡ್– 19 ಪೂರ್ವದಲ್ಲಿ ಯುಜಿಸಿ ಹಾಗೂ ಬೇರೆ ಬೇರೆ ಏಜೆನ್ಸಿಗಳಿಂದ ಸಂಶೋಧನೆಗೆ ಆರ್ಥಿಕ ನೆರವು ದೊರೆಯುತ್ತಿತ್ತು. ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಭಾಗಗಳಿಗೆ ಫೆಲೋಷಿಪ್‌ಗಳು ಸಿಗುತ್ತಿದ್ದವು. ಯುವ ಸಂಶೋಧಕರಿಗೆ ಇದು ವರದಾನವಾಗಿತ್ತು. ಅದು ಈಗ ನಿಂತು ಹೋಗಿದೆ
ಪ್ರೊ. ಪಿ.ಎಲ್.ಧರ್ಮ, ಕುಲಪತಿ, ಮಂಗಳೂರು ವಿಶ್ವವಿದ್ಯಾಲಯ

ವಿಜ್ಞಾನಿಗಳು ಸಂಶೋಧಿಸಿದ ಹೊಸ ತಳಿಗಳನ್ನು ಪ್ರೊಟೆಕ್ಷನ್ ಆಫ್ ಪ್ಲ್ಯಾಂಟ್ ವೆರೈಟೀಸ್ ಅಂಡ್ ಫಾರ್ಮರ್ಸ್ ರೈಟ್ಸ್ ಅಥಾರಿಟಿಗೆ (ಪಿಪಿವಿಎಫ್‌ಆರ್‌ಎ) ಸಲ್ಲಿಸುತ್ತೇವೆ. ಆ ಸಂಸ್ಥೆಯು ಪರಿಶೀಲಿಸಿ ಪ್ರಮಾಣ ಪತ್ರ ನೀಡುತ್ತದೆ. ಪೇಟೆಂಟ್ ನಿಟ್ಟಿನಲ್ಲಿ ಏಜೆಂಟ್ ಮೂಲಕ ಸಂಬಂಧಪಟ್ಟ ಸಂಸ್ಥೆಗೆ ಅರ್ಜಿ ಸಲ್ಲಿಸುತ್ತೇವೆ. ಕಾನೂನು ವಿಚಾರ ಮೊದಲಾದವನ್ನು ಏಜೆಂಟ್ ನಿರ್ವಹಿಸುತ್ತಾರೆ
ಪ್ರೊ. ಬಿ.ಡಿ.ಬಿರಾದಾರ, ಧಾರವಾಡ ಕೃಷಿ ವಿವಿ

ಸಾಕಷ್ಟು ಸಂಶೋಧಕರು ಅಕಾಡೆಮಿಕ್ ವಲಯದ ಸಂಶೋಧನೆಗಳನ್ನು ತಂತ್ರಜ್ಞಾನ ಅನ್ವಯಕ್ಕೆ ಉದ್ಯಮಗಳಿಗೆ ಕೊಡುತ್ತಿಲ್ಲ. ಕೈಗಾರಿಕೆಗಳು ನಮ್ಮ ಅನ್ವೇಷಣೆಯನ್ನೇ ಅಲ್ಪಸ್ವಲ್ಪ ಮಾರ್ಪಾಡು ಮಾಡಿ ಅದಕ್ಕೆ ಪೇಟೆಂಟ್ ಪಡೆದು ಉತ್ಪನ್ನ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಾರೆ. ನಾನು 100 ಅರ್ಜಿ ಹಾಕಿದ್ದು, 40 ಕ್ಕೆ ಪೇಟೆಂಟ್ ಪಡೆದಿದ್ದೇನೆ.
ಪ್ರೊ.ಕೆ.ಆರ್.ವೇಣುಗೋಪಾಲ, ವಿಶ್ರಾಂತ ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ

ರಾಜ್ಯದ ಕೆಲ ವಿಶ್ವವಿದ್ಯಾಲಯಗಳ ಸ್ಥಿತಿಗತಿ

ಕರ್ನಾಟಕದ ಹಳೆಯ ಮತ್ತು ಆಯ್ದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ, ಆವಿಷ್ಕಾರ ಮತ್ತು ಪೇಟೆಂಟ್ ಸ್ಥಿತಿಗತಿ ಚಿಂತಾಜನಕ ಸ್ಥಿತಿಯಲ್ಲಿವೆ. ಈ ಹಿನ್ನಡೆಗೆ ಅನುದಾನದ ಕೊರತೆಯೇ ಪ್ರಮುಖ ಕಾರಣ ಎಂಬುದು ಈ ವಿಶ್ವವಿದ್ಯಾಲಯಗಳ ಕುಲಪತಿಗಳ ಒಕ್ಕೊರಲಿನ ಅಭಿಪ್ರಾಯ. ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಮೈಸೂರಿನ ಸಿಎಫ್‌ಟಿಆರ್‌ಐನಿಂದ ಮಾಹಿತಿ ಸಂಗ್ರಹಿಸಲಾಗಿದೆ.

- ಕಲ್ಯಾಣ ಕರ್ನಾಟಕ ಭಾಗದ ಗುಲಬರ್ಗಾ ವಿಶ್ವವಿದ್ಯಾಲಯ ಈವರೆಗೆ 3 ಪೇಟೆಂಟ್ ಮಾತ್ರ ಪಡೆದಿದೆ.
- ಕಲಬುರಗಿ ಜಿಲ್ಲೆಯ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು ಇದುವರೆಗೆ 12 ಪೇಟೆಂಟ್‌ಗಳನ್ನು ಪಡೆದುಕೊಂಡಿದೆ.
- ಮಂಗಳೂರು ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗವು ಆರು ಅಮೆರಿಕದ ಪೇಟೆಂಟ್ ಹಾಗೂ ಐದು ಭಾರತದ ಪೇಟೆಂಟ್ ಪಡೆದುಕೊಂಡಿದೆ.
- ಸುರತ್ಕಲ್‌ನ ಎನ್ ಐ ಟಿಕೆ ಯಲ್ಲಿ ಪೇಟೆಂಟ್ ಗಾಗಿ 148 ಅರ್ಜಿಗಳು ಸಲ್ಲಿಕೆಯಾಗಿವೆ. 75 ಕ್ಕೆ ಪೇಟೆಂಟ್ ದೊರೆತಿದೆ.
- ಮೈಸೂರು ವಿಶ್ವವಿದ್ಯಾಲಯ 49 ಅರ್ಜಿಗಳನ್ನು ಸಲ್ಲಿಸಿತ್ತು. ಅವುಗಳಲ್ಲಿ 31ಕ್ಕೆ ಪೇಟೆಂಟ್ ಸಿಕ್ಕಿದೆ.
- ಧಾರವಾಡದ ಕೃಷಿ ವಿಶ್ವವಿದ್ಯಾಲಯ ಆರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಎರಡು ಪೇಟೆಂಟ್ ಪಡೆದಿವೆ.
- ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕೃಷಿ ಸಂಶೋಧನೆಗೆ ಸಂಬಂಧಿಸಿದಂತೆ ಒಟ್ಟು 23 ಪೇಟೆಂಟ್‌ಗಳನ್ನು ಪಡೆದಿದೆ.
- ಬೆಂಗಳೂರು ವಿಶ್ವವಿದ್ಯಾಲಯ 70 ಪೇಟೆಂಟ್‌ಗಳನ್ನು ಪಡೆದಿದೆ.
- ಬೆಂಗಳೂರಿನ ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ (ಜೆಎನ್‌ಸಿಎಎಸ್) 2012 ರಿಂದ 21 ರ ಅವಧಿಯಲ್ಲಿ 83 ಪೇಟೆಂಟ್‌ಗಳನ್ನು ಪಡೆದಿದೆ.
- ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಪೇಟೆಂಟ್ ಅರ್ಜಿ ಸಲ್ಲಿಕೆ ಮತ್ತು ಪೇಟೆಂಟ್ ಪಡೆದ ದತ್ತಾಂಶ ಇಟ್ಟುಕೊಂಡಿಲ್ಲ ಎಂದು ಸಂಸ್ಥೆಯ ನಿರ್ದೇಶಕಿ ಪ್ರತಿಮಾ ಮೂರ್ತಿ ಹೇಳಿದ್ದಾರೆ.
- ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯುವ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪೇಟೆಂಟ್ ಪಡೆಯುವ ಕುರಿತು ಅರಿವು ಮೂಡಿಸುವ ಕೆಲಸ ಮಾಡುತ್ತಿದೆ.



ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 12-01-2000

• ರೈತರ ವಿರುದ್ಧದ ಮೊಕದ್ದಮೆ ವಾಪಸ್

ಬೆಂಗಳೂರು, ಜ.11— ವಿವಿಧ ಚಳವಳಿಗಳ ಸಂದರ್ಭದಲ್ಲಿ ರೈತರ ವಿರುದ್ಧ ಹೂಡಲಾಗಿರುವ ನೂರಾರು ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲಾಗುವುದು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ಇಲ್ಲಿ ತಿಳಿಸಿದರು.

ವೇಣುಗೋಪಾಲಸ್ವಾಮಿ ರೇಷ್ಮೆ ಮೊಟ್ಟೆ ಉತ್ಪಾದನಾ ಕೇಂದ್ರದ ಆಶ್ರಯದಲ್ಲಿ ನಡೆದ 1998–99ನೇ ಸಾಲಿನ ಪ್ರಗತಿಪರ ರೇಷ್ಮೆ ಬೆಳೆಗಾರರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಸರ್ಕಾರ ಹೊಸ ಪರಂಪರೆಗೆ ನಾಂದಿ ಹಾಡಲಿದೆ’ ಎಂದರು.

50 ವರ್ಷಗಳ ಹಿಂದೆ

ಭಾನುವಾರ, 12-01-1975

• ನವಮಂಗಳೂರು ಬಂದರು ಕ್ರಿಯಾಶಕ್ತಿ ಸಂಕೇತ: ಪ್ರಧಾನಿ

ಮಂಗಳೂರು, ಜ.11– ಕರ್ನಾಟಕದ ಭಾಗ್ಯದ ಬಾಗಿಲು ಎಂಬ ಕೀರ್ತಿಗೆ ಪಾತ್ರವಾದ ನವಮಂಗಳೂರು ಬಂದರನ್ನು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಉದ್ಘಾಟಿಸಿ ಸಾರ್ವತ್ರಿಕವಾಗಿ ರಾಷ್ಟ್ರದ ವಿಶೇಷತೆ ಮತ್ತು ರಾಜ್ಯದ ಆರ್ಥಿಕ ಪ್ರಗತಿಗೆ ಸಮರ್ಪಣೆ ಮಾಡಿದರು.

ನವಮಂಗಳೂರು ‘ರಾಷ್ಟ್ರದ ಕ್ರಿಯಾ ಶಕ್ತಿಯ ಸಂಕೇತ’ ಎಂದೂ ಅವರು ವರ್ಣಿಸಿದರು. ಹಬ್ಬದ ವಾತಾವರಣದಿಂದ ಕಂಗೊಳಿಸುತ್ತಿದ್ದ ಬಂದರು ಮಾರುಕಟ್ಟೆಯಲ್ಲಿದ್ದ ಸಹಸ್ರಾರು ಜನರು ಹರ್ಷೋದ್ಗಾರಗಳಿಂದ ಅವರನ್ನು ಸ್ವಾಗತಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಜನವರಿ 12, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಚತುರ್ದಶಿ ಗಂ. 29-03 ನಕ್ಷತ್ರ: ಮೃಗಶಿರ ಗಂ. 11-25 ಯೋಗ: ಬ್ರಹ್ಮ ಗಂ. 09-09 ಕರಣ: ಗರ ಗಂ. 17-46, ಧನು ಮಾಸದ 27 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 1.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 07-00 **ಸೂರ್ಯಾಸ್ತ:** 06-17
ಮುಸ್ಲಿಂ ದಿನಾಂಕ: 11 ರಜಬ್‌ಅ
ದೃಷ್ಟ ಸಂಖ್ಯೆ: 4, 11

ಮೇಷ: ಅರ್ಥಪೂರ್ಣ ಮಾತುಕತೆಗಳಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ ಪಡೆಯುವಿರಿ. ಅವಶ್ಯಕತೆಗಿಂತ ಹೆಚ್ಚಾಗಿ ಹಣ ಸಂಗ್ರಹವಾಗುವುದು. ನಿಮ್ಮ ಕೆಲಸಕ್ಕೆ ಇತರ ಸಿಬ್ಬಂದಿಗಳಿಂದ ಅಡೆತಡೆಗಳು ಎದುರಾಗಬಹುದು.

ವೃಷಭ: ಶ್ರಮಕ್ಕೆ ಅನುಗುಣವಾಗಿ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಳ್ಳುವುದು. ರೇಷ್ಮೆ ಹಾಗೂ ಕಬ್ಬು ಬೆಳೆಗಳಿಂದ ನಿರೀಕ್ಷೆಗೂ ಮೀರಿದ ಲಾಭವಿರುವುದು. ಮಕ್ಕಳ ನಡವಳಿಕೆಯಿಂದ ನಿಮ್ಮ ಗೌರವಕ್ಕೆ ಧಕ್ಕೆ ಉಂಟಾಗಬಹುದು.

ಮಿಥುನ: ಈ ದಿನದ ಕೆಲ ಅಂಶಗಳ ಬಗ್ಗೆ ಗಂಭೀರವಾದ ನಿಲುವು ತಾಳಬೇಕಾಗುವುದು. ವಿದ್ವಾಂಸರೊಡನೆ ಕೆಲ ಹೊತ್ತು ಕಳೆಯುವ ಅವಕಾಶ ಸಿಗಲಿದೆ. ಕೆಲಸವು ಮೊದಲ ಪ್ರಯತ್ನ ಸಫಲವಾಗಿದ್ದರಿಂದ ಉತ್ಸಾಹ ಗರಿಗೆದರಲಿದೆ.

ಕರ್ಕಾಟಕ: ಗೊಂದಲದ ಸಮಯದಲ್ಲಿ ಆಯ್ಕೆಯ ಬಗ್ಗೆ ಖಚಿತವಿಲ್ಲದಿದ್ದರೂ ಮತ್ತೊಂದು ಅವಕಾಶವನ್ನು ಪರ್ಯಾಯವಾಗಿಟ್ಟುಕೊಳ್ಳುವ ಜಾಣ್ಮೆ ಪ್ರದರ್ಶಿಸಿ. ಯಂತ್ರೋಪಕರಣ ಮಾರಾಟದಿಂದ ಲಾಭ.

ಸಿಂಹ: ಛಾಯಾಗ್ರಾಹಕರಿಗೆ ಪ್ರಶಸ್ತಿ ಪಡೆಯುವಂತಹ ಹೆಚ್ಚಿನ ಅವಕಾಶಗಳು ಸಿಗಲಿವೆ. ಈ ದಿನದ ನಿಮ್ಮ ಪರಿಸ್ಥಿತಿಯು ಬೆಕ್ಕಿನ ಬಾಯಿಗೆ ಸಿಕ್ಕಿದಂತಹ ಇಲಿಯಂತಿರುವುದು. ವೈದ್ಯಕೀಯ ಖರ್ಚುಗಳು ಇನ್ನು ಹೆಚ್ಚಲಿದೆ.

ಕನ್ಯಾ: ನಿಮಗೆ ಎದುರಾಗುವ ಎಲ್ಲಾ ಸವಾಲುಗಳನ್ನು ಬುದ್ಧಿವಂತಿಕೆಯಿಂದ ಎದುರಿಸಿ, ಮನೋಬಲವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ಪ್ರಯತ್ನದಲ್ಲಿರಿ. ಕ್ಯಾಟರಿಂಗ್ ನಡೆಸುವವರಿಗೆ ಬಿಡುವಿಲ್ಲದ ಪರಿಸ್ಥಿತಿ ಎದುರಾಗುವುದು.

ತುಲಾ: ಗಣ್ಯ ವ್ಯಕ್ತಿಗಳ ಪರಿಚಯದಿಂದ ನಿಮ್ಮ ಸ್ವಂತ ಕೆಲಸವೊಂದಕ್ಕೆ ಸಹಾಯವಾಗುವುದು. ನಿಮ್ಮಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲ್ಯಗಳನ್ನು ಪ್ರದರ್ಶಿಸಿ. ನಿಮ್ಮ ಜೀವನದಲ್ಲಿ ಹೊಸದೊಂದು ಅಧ್ಯಾಯ ಶುರುವಾಗಲಿದೆ.

ವೃಶ್ಚಿಕ: ನವ ಉದ್ಯಮಿಗಳಿಗೆ ಹಿರಿಯರಿಂದ ತಿಳುವಳಿಕೆಯ ಮಾತುಗಳು, ಆಶೀರ್ವಾದ ಪ್ರಾಪ್ತಿಯಾಗುವುದು. ಆಹಾರ ಸೇವಿಸಲು ಸಂಕೋಚವನ್ನು ಮಾಡಿಕೊಳ್ಳಬೇಡಿ. ವಿದ್ಯುತ್ ಉಪಕರಣಗಳ ಮಾರಾಟಗಾರರಿಗೆ ಶುಭಕಾಲ.

ಧನು: ಮನದಲ್ಲಿ ಅನಗತ್ಯ ವಿಚಾರಗಳನ್ನು ತುಂಬಿಕೊಳ್ಳದೇ, ಸಂತೋಷವಾಗಿರಲು ಯತ್ನಿಸಿ. ಕೆಲಸದ ನಿಮಿತ್ತ ವಿದೇಶ ಪ್ರಯಾಣ ಮಾಡಬೇಕಾಗಬಹುದು. ಚರ್ಮಕ್ಕೆ ಸಂಬಂಧಿಸಿ ಅನಾರೋಗ್ಯ ಎದುರಾಗಬಹುದು.

ಮಕರ: ಪ್ರಯಾಣ ಮತ್ತು ಹೊಸಬರ ಪರಿಚಯ ಮುಂದಿನ ಯೋಜನೆಗಳಿಗೆ ಅನುಕೂಲಕರವಾಗಲಿದೆ. ಯುವ ಕಲಾವಿದರಿಗೆ ಹೆಚ್ಚು ಪ್ರೋತ್ಸಾಹ ಮತ್ತು ಅವಕಾಶಗಳು ಲಭಿಸುವುದು. ಮನೆಯಲ್ಲಿ ಮೃದು ಭಾಷಿ ಎನಿಸಿಕೊಳ್ಳುವಿರಿ.

ಕುಂಭ: ಮನೆಯಲ್ಲಿ ನಡೆಯಬೇಕಿರುವ ಮಂಗಳ ಕಾರ್ಯಗಳ ಬಗ್ಗೆ ಕೆಲವು ತೀರ್ಮಾನ ತೆಗೆದುಕೊಳ್ಳಲು ಸುದಿನ. ಮನೆಯಲ್ಲಿ ನಿಮಗೆ ಅಗತ್ಯವಾದ ಹೊಂದಾಣಿಕೆಯನ್ನು ಮಾಡಿಕೊಳ್ಳುವುದು ಅನಿವಾರ್ಯವಾಗಲಿದೆ.

ಮೀನ: ಹೋರಾಟದ ಬದುಕಿನಲ್ಲಿ ಹೊಸ ಜವಾಬ್ದಾರಿಯೊಂದನ್ನು ವಹಿಸಿಕೊಳ್ಳಬೇಕಾಗುವುದು. ಜೀವನೋಪಾಯಕ್ಕೆ ಪರ್ಯಾಯ ಮಾರ್ಗವೊಂದನ್ನು ಹುಡುಕಲು ಪ್ರಯತ್ನಿಸಿ. ಹಣದ ವಿಚಾರದಲ್ಲಿ ಮಿತವ್ಯಯಿಗಳಾಗಿರಿ.

ಪದಬಂಧ 5920

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇಸಾಯವನ್ನು ಹೀಗೂ ಹೇಳುವರು (3)
3.ಕೈ ಅಥವಾ ಕಾಲಿಗೆ ಹಾಕಿಕೊಳ್ಳುವ ಬಳೆ (3
5.ರತ್ನಗಳ ಆಶ್ರಯ ಸ್ಥಾನ ಅಥವಾ ಸಮುದ್ರ (4)
7.ಜಾಗದಲ್ಲಿ ನಿಂತು ನೋಡಿದ ನವಿಲಿನ ಕುಣಿತ (3)
10.ನಿಷೇಧಿಸಿರುವ ಸ್ಥಳಕ್ಕೆ ಪ್ರವೇಶ ಮಾಡುವುದು (7)
13.ಈತ ತೃಪ್ತಿ ಹೊಂದಿದವನು (3)
16.ತಾನೇ ಸಂಪಾದಿಸಿದ್ದು (4)
18.ಟಾರ್ ರಸ್ತೆಯಲ್ಲಿರುವ ಚರಂಡಿ (3)
19.ಗಟಾರದ ಹತ್ತಿರವಿರುವ ಗಂಡು ಕುರಿ (3)

ಮೇಲಿಂದ ಕೆಳಕ್ಕೆ
1.ಕಷ್ಟಕಾಲಕ್ಕೆ ಒದಗುವ ಸಹಾಯಕ(4)
2.ಬಡಿವಾರ ತೋರಿಸಿದಾಗ ಆವರಿಸಿದ ಕ್ಷಾಮ(2)
3.ಕಠೋರವಾದ ಕೈ! (2)
4.ಕವಿ ಕುಮಾರವ್ಯಾಸನು ಹುಟ್ಟಿದ ಜಿಲ್ಲೆ (3)
6.ಸಾಮಂತರಿಂದ ಅಧಿರಾಜನಿಗೆ ಸಲ್ಲುವ ಹಣ (2)
7.ವೇದ ಕೊನೆಗಿದ್ದಾಗ ಕಾಣಿಸಿದ ಅಗ್ನಿ (4)
8.ಉಜ್ಜುವಾಗ ಹಿಡಿದಿರುವ ಹಗ್ಗ (2)
9.ಹುಟ್ಟಿದ ಕುಲದಿಂದ ದೂರವಾದವನು (4)
11.ತಿರುವು ಮುರುವಾದ ಸೇತುವೆ (2)
12.ಕೊನೆಗೆ ವಿಕ್ರಯಿಸು ಎಂದಾಗ ಕಾಣಿಸಿದ ಪೀಳಿಗೆ(4)
14.ಆತುರದಿಂದ ಓಡುತ್ತಿರುವ ಕುದುರೆ (3)
15.ಹೆಸರು ಮೊದಲಾದುವನ್ನು ಬರೆದಿರುವ ಪಟ್ಟಿ ಉಲ್ಟಾ ಆಗಿದೆ (2)
16.ವರ್ಣ ಮಾಲೆಯಲ್ಲಿ ಇತರ ಅಕ್ಷರಗಳ ಸಹಾಯವಿಲ್ಲದೆ ಉಚ್ಚರಿಸಬಹುದಾದ ಅಕ್ಷರ (2)
17.ತಟಕ್ಕನೆ ತಲುಪಿದ ದಡ! (2)



5919ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಅಪರಿಚಿತ 6.ಪರಂಪರೆ
7.ಪರಸತಿ 9.ಮಣಿ
10.ಪ್ರಭೆ 11.ಮತಿಹೀನ
14.ಪಾರಂಗತ 15.ನವದಂಪತಿ

ಮೇಲಿಂದ ಕೆಳಕ್ಕೆ:
1.ಶಾಪಗ್ರಸ್ತ 2.ಅಪರೂಪ
4.ಪದಚ್ಯುತಿ 5.ತವದೊಣೆ
8.ಸದ್ಗತಿ 10.ಪ್ರಭಂಜನ
11.ಮನಸ್ತಾಪ 12.ನವರಂಗ
13.ಪಾಠಾಂತರ

ಸುಡೊಕು 6305

		7		6			1	2
	8		5		2	3		
6				4		7		8
	7				9			
5		9		1			3	7
	6		7					4
2		3	8		4			
		6		2				9
8	1		6		7	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6304 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

EXCHANGE BONANZA
UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು. ಎಕ್ಸ್‌ಚೇಂಜ್ ಮೇಲೆ*
MASSIVE DISCOUNTS
UPTO 70% OFF
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
Sakkath SANKRANTHI Sale
CASH BACK BONANZA
UPTO 20%
ಕ್ಯಾಶ್ ಬ್ಯಾಕ್*
AXIS BANK · citi · HDFC BANK · HSBC · ICICI Bank · IndusInd Bank · kotak · RBL BANK · Union Bank · YES BANK · Standard Chartered · Bank of Baroda · FEDERAL BANK · SBI card
FINANCE BONANZA
UPTO ₹12,000
ಕ್ಯಾಶ್ ಬ್ಯಾಕ್*
FINANCE POWERED BY Groww
0% EMI Upto 12,000 Cash Back
MIN PRODUCT VALUE ₹10,000
1 ಇ.ಎಮ್.ಐ ಉಚಿತ*
ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*
INSTANT LOAN APPROVAL
UPTO ₹4,00,000*
ASSURED GIFTS ON ALL LG PRODUCTS*
BT SPEAKER · INDUCTION COOKER · STEAM IRON · KETTLE · DRY IRON
24 HOURS EXPRESS DELIVERY*
LG 65 ಓಎಲ್‌ಇಡಿ EVO 4K SMART TV OLED65C46LA
ಇ.ಎಮ್.ಐ ₹6,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 65 ಓಎಲ್‌ಇಡಿ 4K SMART TV 65S90D
ಇ.ಎಮ್.ಐ ₹6,990
ಉಚಿತ: ₹51400 ಮೌಲ್ಯದ SAMSUNG 43 4K ULTRA HD SMART TV
SONY BRAVIA 55 ಓಎಲ್‌ಇಡಿ 4K HDR GOOGLE TV K-55XR70
ಇ.ಎಮ್.ಐ ₹5,500
LG 43 4K UHD SMART ಎಲ್‌ಇಡಿ 43UT80406LA
ಇ.ಎಮ್.ಐ ₹4,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
NVY PRIDE OF INDIA LOWEST PRICE CHALLENGE 4K ಎಲ್‌ಇಡಿ
52% OFF
NVY Official LED partner of RCB
Model | Price | EMI
43 4K SMART | ₹18,990 | ₹1,582
55 4K SMART | ₹29,490 | ₹2,457
mi NOTE 14 5G 6+128 EFFECTIVE PRICE ₹17,999* (PRICE AFTER CASH BACK) ಇ.ಎಮ್.ಐ ₹1,500
ಉಚಿತ: BT NECKBAND WORTH ₹1499*
oppo F27 5G 8+128 ₹2,000* CASH BACK SPECIAL PRICE ₹19,690* ಇ.ಎಮ್.ಐ ₹1,641
ಉಚಿತ: 10,000 MAH POWER BANK WORTH ₹1499*
vivo V40E 5G 8+128 EFFECTIVE PRICE ₹23,900* (PRICE AFTER CASH BACK) ಇ.ಎಮ್.ಐ ₹1,590
ಉಚಿತ: 10,000 MAH POWER BANK WORTH ₹1499*
realme 14X 5G 6 + 128 EFFECTIVE PRICE ₹13,490* (PRICE AFTER CASH BACK) ಇ.ಎಮ್.ಐ ₹1,208
ಉಚಿತ: BT NECKBAND WORTH ₹1499*
iPhone 16 EFFECTIVE PRICE ₹69,690* (PRICE AFTER CASH BACK) EMI STARTS FROM ₹3,070
ಉಚಿತ: MAGSAFE POWERBANK 10000 MAH WORTH ₹7499
SAMSUNG A35 5G 8+128 SPECIAL PRICE ₹25,999* EMI STARTS FROM ₹2,167
ಉಚಿತ: BT NECKBAND WORTH ₹1499*
hp 15 10% CASH BACK
RYZEN 3-7320U · 8GB, 512GB SSD · 15.6 FHD · WIN 11 MSO 21
OFFER PRICE ₹33,990 EMI ₹2,833 MRP ₹45,995
ಉಚಿತ: 32GB PEN DRIVE + W/L MOUSE + QUICK HEAL AV INTERNET SECURITY WORTH ₹2499*
DELL INS 15 3530 10% CASH BACK
13TH GEN I3 1305U · 16 GB , 512GB · 15.6 FHD · WIN 11 MSO 21
OFFER PRICE ₹43,990 EMI ₹3,666 MRP ₹48,827
ಉಚಿತ: 32GB PEN DRIVE + W/L MOUSE + QUICK HEAL AV INTERNET SECURITY WORTH ₹2499*
Lenovo SLIM 3 10% CASH BACK
RYZEN 5 7520U · 16GB, 512GB SSD · RADEON 610M · 15.6 FHD · WIN 11 MSO, 21
OFFER PRICE ₹44,990 EMI ₹3,749 MRP ₹64,800
ಉಚಿತ: 32GB PEN DRIVE + W/L MOUSE + QUICK HEAL AV INTERNET SECURITY WORTH ₹2499*
hp VICTUS GAMING 10% CASH BACK
RYZEN 5 5600H · 16GB, 512GB SSD · 4GB GFX RX6500M · 15.6 FHD · WIN 11 MSO 21
OFFER PRICE ₹54,990 EMI ₹4,583 MRP ₹67,264
ಉಚಿತ: BT CALLING SMART WATCH + QUICK HEAL AV INTERNET SECURITY WORTH ₹8999*
DELL INS 3530 10% CASH BACK
13TH GEN i5 1334U · 16GB, 512GB SSD · 15.6 FHD · WIN 11 MSO21
OFFER PRICE ₹57,990 EMI ₹4,833 MRP ₹72,598
ಉಚಿತ: BT CALLING SMART WATCH + QUICK HEAL AV INTERNET SECURITY WORTH ₹8999*
Haier 602 ಲೀ ಸೈಡ್ ಬೈ ಸೈಡ್ ಇ.ಎಮ್.ಐ ₹2,994
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 653 L BESPOKE CONVERTIBLE 5IN1 SIDE BY SIDE REFRIGERATOR RS76CB81A333 ಇ.ಎಮ್.ಐ ₹4,990
Whirlpool 411L INTELLIFRESH CONVERTIBLE FROST FREE DOUBLE-DOOR ಇ.ಎಮ್.ಐ ₹3,758
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,191
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Godrej 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,133
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG SOUND BAR SC9S, 3.1.3 CH, 400W, DOLBY ATMOS & IMAX ENHANCED.
OFFER PRICE ₹31,290 ಉಚಿತ ₹2,608 MRP ₹89,990
LLOYD 1.5 TON 3 STAR INVERTER ಇ.ಎಮ್.ಐ ₹3,291
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Panasonic 27ಲೀ ಕನ್‌ವೆಕ್ಷನ್ ಮೈಕ್ರೋವೇವ್ ಇ.ಎಮ್.ಐ ₹1,366
OFFER VALID TILL STOCK LAST | OFFER VALID TILL STOCK LAST
Preethi P/C NEO 5L ALUMINIUM+ MILTON 3PC PEARL CASSEROLE+ VIJAYALAKSHMI ECO DRY IRON
OFFER PRICE: ₹2025 COMBI MRP: ₹5,074
Greenchef GAS STOVES:BLISS 2 BURNER + NON STICK COOKWARE: 2PC DUET PACK
OFFER PRICE: ₹2025 COMBI MRP: ₹4,798
Lifelong INDUCTION COOKER:LLIC102 1800 W+ Preethi P/C NEO 3L ALUMINIUM
OFFER PRICE: ₹2025 COMBI MRP: ₹6,349
NIRLEP NON STICK COOKWARE:ASPA 4 Pc SET Greenchef KETTLE:S S Kettle 1.5litre - Swift Butterfly STARTER KIT (HOSE+LIGHT+TROLLY)
OFFER PRICE: ₹2025 COMBI MRP: ₹5,888
LG SAMSUNG SONY Haier Panasonic NVY IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo oppo ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR BAJAJ Crompton MAHARAJA WHITELINE V-GUARD ZEBRONICS KAFF OZONE
GIRIAS® THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 99009 77747 ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. ರೂ.12000 ವರೆಗೆ ಗ್ರೋವ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / ಬಿಎಫ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಆಯ್ಕೆಮಾಡಿದ ಮೊಬೈಲ್‌ಗಳಲ್ಲಿ 70% ವರೆಗೆ ಖಚಿತವಾದ ಮರುಖರೀದಿಯು ಮಾನ್ಯವಾಗಿರುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ವಿನಿಮಯ ಕೊಡುಗೆ. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ.
167 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

PROPERTY CORNER
ಕ್ಲಾಸಿಫೈಡ್ಸ್

AASTHA INDUSTRIAL CITY
INDUSTRIAL PLOTS FOR SALE
Dabaspete
Bangalore-Mumbai Economic Corridor
Ready For Registration
Clear Title, Bank Loan Available
Call for more details :
7676343099, 9513142299

RENT/SALE
PRIME PROPERTY
200 Meters FROM GLOBAL TECH PARK, RR NAGAR
COMMERCIAL BUILDING 13000+ Sq.ft
RENTAL: 4.8 LAKHS / Per Month
SALE PRICE: 7.8 Crores
Call: 7760038250 | 9900596322

SITES FOR SALE
@ Mysore Road
ಕೈಗೆಟುಕುವ ಬೆಲೆಯಲ್ಲಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಸೈಟ್‌ಗಳು ಲಭ್ಯ
BMRDA APPROVED INDIVIDUAL 'A' KHATA | READY FOR REGISTRATION & CONSTRUCTION
- Gated Community
- Concrete Roads
- Avenue Tree Lines
- Water Supply
- Electricity
- Designer Street Lights
- Underground Sewage
- Security Gate
- Park
- CA Space

BMRDA APPROVED 'A' KHATA
Bank Loan Available upto 80%
FREE Site Visit 96111 66681, 97425 15612, 96063 42643

PRM/KA/RERA/1250/304/PR/251024/007179
DS-MAX SKYFIELDS
SUPER LUXURIOUS 2 & 3-BHK APARTMENTS
WHITEFIELD
SOUKYA ROAD
2-BHK HOMES STARTS @ ₹ 67 L*
BMRDA APPROVED | 2B+G+14 FLOORS
*T & C Apply
8880 003 003
www.dsmaxproperties.com

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Airport Road

"30X40 CORNER Site BIAPPA approved near International airport towards Hennur opp.KIADB Hardware-park 65`Lakhs. 9845286505/ 8884125555"

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BANASHANKARI 6TH Stage 10th Block, 30x40 W/F, Site SALE, Near 100 feet Road, 1.35Cr. 9799099699, 9993959099.

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

HSR Layout

"HSR-LAYOUT 20X30 Building 1 Lakh Rent, 30x40, 40x60, Commercial, Residential Buildings Rental income. 'Krishna'- 9886294610"

Kengeri

PREMIUM VILLA PLOT 30X80.1 West facing The Green Valley Address Gated community BDA approved eKhatha contact 9243113714

Kumaraswamy Layout

SALE 25X40 S/F Site Kumaraswamy Layout 1st Stage, Prime Location, Brokers Excuse. 16200 /sqft. 9886402462

Kempegowda Layout

"30X40 WF RESIDENTIAL SITE 6TH BLOCK KEMPEGOWDA LAYOUT NEAR PROPOSED BDA COMPLEX IMMEDIATE SALE- 9845143579"

NADAPRABHU KEMPEGOWDA LAYOUT 5th Block 30X40 E/F,7th Block 30x40 E/F,50x80 W/F,and 8th Block 40x60 W/F.Contact: 9686469799

KEMPEGOWDA LAYOUT, Commercial BDA Site for Sale 20x30, 30x40, 40x60, 50x80, Contact: Kumar 9945119449

Nagarabhavi

"NAGARABHAVI BDA Complex 30x40 House 40`feet Road, 30x45 North facing BDA Site Immediate Registration. 9448432633"

Peenya

PLOT SALE 160ftx100ft For Outright Sale @ Hegganahalli Cross. East Facing Bangalore-91 9900287834/ 9448377834

Rajarajeshwari Nagar

40X77 (3080.SQFT.) East`Facing, A & E Khata, BBMP`Site Sale`at SrinivasaNagar Near Krishnappa Layout,RR.Nagar Price: 3.10.Cr. Call: 9167979901.

R T Nagar

SALE R.T.NAGAR 30X50 North Facing and Sanjaynagar 30X50 East Facing. Genuine Buyers and Sellers Call:9900001973

RMV

RMV NEW BEL Road Commercial Site's Sale 40x65, 50x80, 60x90 Call: 9845623970/ 9739400838/ Broker's Excuse

Vijayanagar

FOR SALE: 50X90 (4500 Sft) South facing site with old building at 1-A Main Road, Govindarajanagar (M.C.Layout) Near Hotel Swathi Green Land (Jaimunirao Circle) Bengaluru. Broker's excuse. Contact: 9343432456

Vishweswariah Layout

"VISHVESWARAIAH 6TH-BLOCK 50x80 East facing Allotte Site sale 60`feet Road,Near KLE Law College Genuine`buyers only`Contact: 9945662333"

UPKAR LAYOUT 30x40, JAGAJYOTHI LAYOUT 40X60 Good Location, VISHVESHVARAIAH LAYOUT 30X40, 20X30. Call: 9844421127

"VISHVESWARIAH LAYOUT 3rd Block 40x60 East Facing, 6th Block 40x60 South Facing. Contact: 9686469799

"30X40 RESIDENTIAL 1ST BLOCK BDA SITES, 30X40 NEW HOUSE SALE 4TH BLOCK VISHWESHWARAIH LAYOUT- 9845143579"

Tumkur

11.75 GUNTA DC Converted East Facing Plot Sale at Gubbi Town Near Police Station, Clear Titles: 9880419865

Jakkur

JUDICIAL LAYOUT JAKKUR 50x80 BDA Site East Facing 40 Feet Road For Sale Contact: 9341260828

Magadi Road

SALE SITE, west, Tavarekere Commercial Property 30x40 BMRDA 'E' Katha, Rs. 5200 psqft. 9972733746/ 9986977913

House

Banashankari

SALE BSK 2nd Stage 90x110 and 40x75 Both or old House Excellent Location ct 9844134068 8073859758

Jayanagar

SALE 40X60 Jayanagar 1st Block With old House on 40feet Road Excellent Location ct 9844134068 8073859758

Koramangala

HOUSE: 40×60 (2400 Sqft) Price 32000/- Persft Kormangala 5th block BDA Property, West Facing. Contact 9060125551.

Yelahanka

YELAHANKA KOGILU Agrahara 30x40 east facing 3BHK new Triplex bungalow with home theatre, gym, two carpark for sale 2,60,00000/- Contact 9845846345/ 9742625403

Padmanabha Nagar

PADHMANABHA NAGAR 30x40 West facing Two BHK Two Houses (Ground and First) 2,90,00,000/-, J.P.Nagar 30x40, 3,20,00,000/- Murali 9845232711

Flat

Hennur

3 BHK Luxury Flats BBMP & RERA Approved Ready To Move/Stay promaxdreamvillehome 8073977742/ 9731374392

SALARPURIA GOLD Summit 3 BHK 2350 sqft semi furnished flat with servant quarters 2 car parking. Rs. 2.50 crores negotiable. Citilines: 9741417120

Uttarahalli

2/3/4 BHK New FLATS SALE, A Khatha, Ready-move. 40L/ 75L/ 1Cr. Carparking, Cauvery, Vaasthu. 9945224058, 6360501159.

Commerical

Basavanagudi

PRIME COMMERCIAL Lease 65 years Suits trauma hospital, luxury mall etc. Due diligence done. Yearly rent potential Rs 3 cr+ No brokers / idle enquiries. Builders or Investors with funds ready only may message on whatsapp: 99029-15651

Industrial & Factory

Peenya

BUYING, SELLING, RENTING. Industrial Land, Building, shed. Peenya, Yeshwanthpur, Dobespet, Nelamangala, Doddaballapur. 9590909945, 9844083019

Residential/ Commercial

Mysore

FOR BUYING & Selling any Mysore Properties Contact: Mysore Estates, Vishwanath Gowda 9590911111. *Refer genuine Buyers & Sellers, get attractive gifts. 0% Brokerage

MYSORE PROPERTIES 0% Brokerage10 Guntas each developed farm plots for Sale at HD Kote Road, Mysore.Contact: Mysore Estates Vishwanath Gowda 9590911111

Doddanekundi

CORNER PLOT, 3,640 sq.ft for sale in Dodda Nekkundi, Bangalore. Rs.5.1Cr Contact: 9948879948

Commercial Land

Mysore

COMMERCIAL LAND FOR SALE
50,000 sqft, Rs.1350/- per sqft
Suitable for Hotels, Lodge, Apartment, School, Petrol Bunk, Villa Houses, Choultry, Farm House. 10km from Palace Surrounded by Layouts General Property HD Kote Main Road Mysore.
Contact: GANISHKA PROPERTIES 97397 03467 Buy and sell

Out-Station

66500 sqft (61 gunta 04 ana) RESIDENTIAL CUM COMMERCIAL CLEAR TITLE LAND FOR SALE
in the heart of Belgaum city interested parties may Contact :
9845717377
Between 10am to 6 pm Agents please excuse.

Jayanagar

JAYANAGAR BDA Commercial site 40x60 East facing, price 35,000/sft. Also 2 acre Kanakapura Road. 9380586105

Multiple Locations

LAND FOR Sale/JV: Land for Sale @ Nagasandra, JP Nagar, Gandhinagar, Whitefield Under BBMP Limits Bangalore contact: 8123494832, 9353088574

REAL ESTATE BUYING

Joint Development

General

CONTACT US for Sale/ Joint Venture of Land with clear titles only in Bangalore. Direct sellers/ Developers contact: Vivek, Vignesh Jewel Empire- 9845950996

Sites

Banashankari

WANTED SITE 50x80 Banashankari 6th Stage, Visweshawaraiah Layout, Any Facing, Broker Excuse, Owners Contant: 8105688602.

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30x40 40x60 Anjanapura BDA, Banashankari 6th Stage, Narayan`Nagar BCCHS Layout, Gubblala, Agent Excuse. Call: 9008259222.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

"VISHVESHWARAIAH LAYOUT WANTED 20x30, 30x40,40x60, 50x80 BDA Sites for Immediate Settlement. Contact "Krishna' 9886294610"

RENTAL PROPERTIES

Accommodation Available

Commercial

8000 SQFT land available for rent in prime location in J.P.Nagar 7th phase opp Narayana college. Ph: 98459509996

13900 SQ.FT basement plus 3 commercial building suitable for office diagnostic center or tutorials available for rent 7th block Jayanagar contact 9845010485

RENT 2200SFT (2nd Floor) Office/ Commercial Space above Dr.Aravind Diabeties Centre,Near Pavitra Paradise. 9845048051/ 23506320

OFFICE SPACE For Rent16,000 sqft HBR layout 4th Block Facing Ring Road Contact: 8861817913/ 9008025761

Flats

2BHK FOR senior living in Devanahalli. 24K. Ph: 9482562481

Industrial And Factory

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

MATRIMONIAL

Brides Wanted

Hindu

SENIOR CITIZEN Looking for Meaningful Companionship. Younger Educated Talented Healthy Wealthy Beautiful Female Prefered: 9341273990

Muslim

MUSLIM BOY 1996 Born /Masters/ Working in France/Father returned from Saudi Arabia Bangalore resident is looking for a suitable match (080-69072090)

MUSLIM BOY 1996 Born MS in Engineering Working as a Engineer / USA Newyork Bangalore Resident is looking for a suitable match (080-69103101)

MUSLIM BOY 1990 / 5'11' MBBS (MD) Bangalore Resident Affluent family is looking for good family (080-69103101)

MUSLIM 1981/ Citizen of USA/ Businessman/ High Class family is looking for match (Widow Divorce acceptable) 9743700029

Bride Required Others

ENGINEER, 52, 6 feet, own company, Bangalore, unmarried seeks graduate below 47. Mob 8698966952.

EDUCATION SUCCESS

ಉಷಾರಾಣಿ. ಎಂ.ಆರ್ ಅವರಿಗೆ ಪಿ.ಎಚ್.ಡಿ ಪದವಿ ಪ್ರದಾನ

ತುಮಕೂರು: ಉಷಾರಾಣಿ. ಎಂ.ಆರ್ ಅವರು ತುಮಕೂರು ವಿಶ್ವವಿದ್ಯಾನಿಲಯದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರು ಹಾಗೂ ಹಿರಿಯ ಪ್ರಾಧ್ಯಾಪಕರಾದ **ಪ್ರೊ. ಎಂ. ಕೊಟ್ರೇಶ್** ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದ **"ರಾಜನೀತಿ ಧುರಂಧರ ಜಯದೇವಪ್ಪ ಹಾಲಪ್ಪ. ಪಟೇಲ್– ಸಮಗ್ರ ಅಧ್ಯಯನ"** ಎಂಬ ಮಹಾ ಪ್ರಬಂಧಕ್ಕೆ ತುಮಕೂರು ವಿಶ್ವವಿದ್ಯಾನಿಲಯವು ಪಿ.ಎಚ್.ಡಿ ಪದವಿ ಪ್ರದಾನ ಮಾಡಿದೆ. **ಉಷಾರಾಣಿ.ಎಂ.ಆರ್** ಅವರು ಪ್ರಸ್ತುತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದೇವನಹಳ್ಳಿ ಬೆಂಗಳೂರು ಗ್ರಾಮಂತರ ಜಿಲ್ಲೆ. ಇಲ್ಲಿ ಸಹ ಪ್ರಾಧ್ಯಾಪಕರಾಗಿ ಹಾಗೂ ಮುಖ್ಯಸ್ಥರಾಗಿ ಇತಿಹಾಸ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

Grooms Wanted

Muslim

MUSLIM VERY fair Beautiful girl 2003 born High Class Family of Bangalore is looking for a Match 9743700029

PUBLIC NOTICE

PUBLIC NOTICE

I, SATHIYANATHAN JOSEPH, son of Shri JOSEPH MASILAMANI, residing at House No. 76, Room No. 18, Baba Gangnath Chowk, Munirka Village, New Delhi - 110067, hereby declare the following:
SOLOMON S JOSEPH is my son, and his correct date of birth is 02.12.1998
My late wife, CHANDRALEELA, passed away on 14.06.2000 at Safdarjung Hospital, New Delhi (Death Certificate No. 2946).
SAGAYAMARY is my second wife and is not the biological mother of SOLOMON S JOSEPH.
Due to an error, my son's stepmother's name, SAGAYAMARY, has been recorded in his 10th and 12th class certificates/school records instead of his biological mother's name, CHANDRALEELA.
I request the concerned authorities to kindly update the school records to reflect the correct name of his biological mother, CHANDRALEELA, for official purposes.

AUTOMOTIVE

Four Wheelers Selling

Tata

FOR SALE- Tata Magic, School Diesel Van, 7 Seater, 2017 Model, GPS, run only 21200 kms. Fancy Number, top luggage stand, excellent condition. Clear documents, 6.5 Lakhs. Contact: 9035491269 (Syeda)/ 7090405313 (Khaleel)

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8310028157

EDUCATIONAL

Admission

ADMISSION OPEN D.Pharma LLB BNYS Ph.D BBA MBA AMIIE/ B.Tech TMIIE/ Diploma 10th 12th: 9341273990

BUSINESS

Business to Business

Business

WANTED EXPERIENCED in Dry Cleaners as Business Partner for HSR Layout Contact: 90001 82908

Business Offers

Finance

LOAN MELA (CIBIL NOT REQUIRED) Quick Process, MSME, Project, Machinery, Personal, Home, Secured and Unsecured Loan Call:7975708647

PERSONAL

Change of Name

I, LUDIYA SHADRAK SHIMAKUTTI, residing at Uttara Kannada have Changed my name as LUDIYA SHADRAK CHIMAKUTTI, vide affidavit dated 11/1/2025 before Notary K.S. Bammappanavar, Bangalore

I, PARTHAV Mahesh Gundurao S/o Mahesh Gundurao, R/o #65 Railway Parallel Road Kumara Park West, Bengaluru - 560020, have changed my name to Rana Gundurao.

MORE Classifieds Ads on Subsequent Pages

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS

www.dhclassifieds.com BOOK NOW
*Conditions apply
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

Sapthagiri Promoters & Developers

ವತಿಯಿಂದ ನೂತನ ಪ್ರಾಜೆಕ್ಟ್

Sapthagiri PROMOTERS & DEVELOPERS

GRAND LAUNCH ON JAN. 18 & 19TH

A KHATA

BMRDA APPROVED

Fully Developed and Ready for Registration & Construction

Launching OFFER! ₹300 per sq. ft. DISCOUNT on Spot Booking

ವೆಂಕಟಾದ್ರಿ ಎನ್‌ಕ್ಲೆವ್

@ ಬೈರೇಗೌಡನಹಳ್ಳಿ,
ಸೊಂಡೇಕೊಪ್ಪ ರಸ್ತೆ ಹತ್ತಿರ, ನೆಲಮಂಗಲ

BANK LOAN AVAILABLE

9686 49 49 49

ನಂ.4851/19, 2ನೇ ಮಹಡಿ,
ಕಲ್ಯಾಣಿ ಕಾಂಪ್ಲೆಕ್ಸ್, ಭೈರವೇಶ್ವರ ನಗರ
ಸೊಂಡೇಕೊಪ್ಪ ವೃತ್ತದ ಬಳಿ,
ನೆಲಮಂಗಲ, ಬೆಂ.ಗ್ರಾಮಾಂತರ ಜಿಲ್ಲೆ-562123

ಸಂಪರ್ಕಿಸಿ:
7026 11 88 99 / 7026 00 44 99

BRITISH COUNCIL

EAST WEST INSTITUTIONS

EAST WEST INSTITUTIONS 1968

BENGALURU - MYSURU

Founder Chairman & Former Mayor, B.B.M.P. SRI C.M. NAGARAJ

CELEBRATING 57 YEARS OF EXCELLENCE EAST WEST 1968 - 2025

EAST WEST INSTITUTIONS COMMEMORATING 57 YEARS OF PIONEERING EXCELLENCE, CULTIVATING VISIONARIES AND SHAPING THE ARCHITECTS OF TOMORROW !

"Shaping Bright Futures Through Excellence and Values! Join East West – Where Every Child Thrives, Learns and Excels."

ADMISSIONS OPEN 2025-26

EAST WEST ACADEMY
Affiliated to CBSE Aff No. 831063
V BLOCK, RAJAJINAGAR
www.ewaschool.in
73495 77565

THE GREAT EASTERN INTERNATIONAL PUBLIC SCHOOL
Affiliated to CBSE Aff No. 830539
OFF. MAGADI MAIN ROAD
www.tgeips.in
73386 48664

EAST WEST INTERNATIONAL SCHOOL
Affiliated to CBSE Aff No. 830824
MYSURU
www.ewismysuru.in
94839 35394

EAST WEST ACADEMY
Recognized By Govt. of Karnataka
MALLESHWARAM
eastwestacademy1968@gmail.com
84310 85088

Scan Me — For More Info!

ರಾಜ್ಯಕ್ಕೆ 3 ರೈಲ್ವೆ ಮೇಲ್ಸೇತುವೆ ಮಂಜೂರು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕಕ್ಕೆ ಮೂರು ರೈಲ್ವೆ ಮೇಲ್ಸೇತುವೆಗಳನ್ನು ರೈಲ್ವೆ ಸಚಿವಾಲಯ ಶುಕ್ರವಾರ ಮಂಜೂರು ಮಾಡಿದೆ. ಮೇಲ್ಸೇತುವೆಗಳ ನಿರ್ಮಾಣಕ್ಕೆ ₹101.47 ಕೋಟಿ ಅನುದಾನ ನೀಡಲಾಗುತ್ತದೆ.

ಹೊಳೆನರಸೀಪುರದ ಅಕ್ಕಿಹೆಬ್ಬಾಳು–ಮಂಡಗೆರೆ (₹15.69 ಕೋಟಿ), ಮಂಡಗೆರೆ–ಹೊಳೆನರಸೀಪುರ (₹15.93 ಕೋಟಿ, ಕಡೂರು ಜಂಕ್ಷನ್–ಬಿರೂರು ಜಂಕ್ಷನ್ (₹69.85 ಕೋಟಿ) ನಡುವೆ ಈ ರೈಲ್ವೆ ಮೇಲ್ಸೇತುವೆಗಳನ್ನು ನಿರ್ಮಾಣ ಮಾಡಲಾಗುತ್ತದೆ. ಈ ಯೋಜನೆಗಳನ್ನು ವಿಶೇಷ ರೈಲ್ವೆ ಯೋಜನೆಗಳೆಂದು ಪರಿಗಣಿಸಿ ಅಧಿಸೂಚನೆ ಹೊರಡಿಸಲಾಗಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನುದಾನದ ಸಮಸ್ಯೆ; 70 ವರ್ಷ ಮೀರಿದವರಿಗೆ ರಾಜ್ಯದಲ್ಲಿ ಅನುಷ್ಠಾನವಾಗದ ಯೋಜನೆ

ವೃದ್ಧರಿಗೆ ‘ಆಯುಷ್ಮಾನ್’ ಮರೀಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಅನ್ವಯವಾಗುವಂತೆ ಕಳೆದ ವರ್ಷ ಜಾರಿ ಮಾಡಿದ್ದ ‘ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ’ಯು (ಎಬಿ–ಪಿಎಂಜೆಎವೈ) ಅನುದಾನದ ಗೊಂದಲದಿಂದ ರಾಜ್ಯದಲ್ಲಿ ಜಾರಿಯಾಗಿಲ್ಲ.

ರಾಜ್ಯದಲ್ಲಿ ಸದ್ಯ ಎಬಿ–ಪಿಎಂಜೆಎವೈ–ಆರೋಗ್ಯ ಕರ್ನಾಟಕ ಯೋಜನೆ ಜಾರಿಯಲ್ಲಿದೆ. ಈ ಯೋಜನೆಯಡಿ ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬದ, 70 ವರ್ಷ ಮೇಲ್ಪಟ್ಟವರು ಸೇರಿ ಎಲ್ಲ ವಯೋಮಾನದವರಿಗೆ ₹ 5 ಲಕ್ಷದವರೆಗೆ ಉಚಿತ ಚಿಕಿತ್ಸೆ ಒದಗಿಸಲಾಗುತ್ತಿದೆ. ಎಪಿಎಲ್ ಕಾರ್ಡ್ ಹೊಂದಿರುವ ಕುಟುಂಬದ ಸದಸ್ಯರಿಗೆ ಯೋಜನೆಯಡಿ ಚಿಕಿತ್ಸಾ ವೆಚ್ಚದ ಶೇ 30 ರಷ್ಟು ಪಾವತಿಸಲಾಗುತ್ತಿದೆ. ಈ ಯೋಜನೆಯನ್ನು ರಾಜ್ಯದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ನಿರ್ವಹಿಸುತ್ತಿದೆ.

70 ವರ್ಷ ಮೇಲ್ಪಟ್ಟ ಎಲ್ಲರಿಗೂ ಆರೋಗ್ಯ ವಿಮೆ ಒದಗಿಸುವ ಯೋಜನೆ ಜಾರಿಗೆ ಉತ್ಸುಕರಾಗಿದ್ದೇವೆ. ಆದರೆ, ಯಾವ ಪ್ರಕಾರ ಮತ್ತು ಎಷ್ಟು ಹಣ ಬರುತ್ತದೆ ಎಂಬ ಬಗ್ಗೆ ಸ್ಪಷ್ಟ ಚಿತ್ರಣ ಸಿಗಬೇಕಿದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಕೇಂದ್ರ ಸರ್ಕಾರವು ಕಳೆದ ಅಕ್ಟೋಬರ್‌ನಿಂದ ಎಬಿ–ಪಿಎಂಜೆಎವೈ ಅಡಿ 70 ವರ್ಷ ಮೇಲ್ಪಟ್ಟ ಎಲ್ಲರಿಗೂ ₹ 5 ಲಕ್ಷದವರೆಗೆ ಆರೋಗ್ಯ ವಿಮೆ ಸೌಲಭ್ಯ ಕಲ್ಪಿಸುವುದಾಗಿ ಘೋಷಿಸಿದೆ. ಆದರೆ, ಯೋಜನೆಯಡಿ ನಿಗದಿತ ಅನುದಾನದ ಖಚಿತತೆ ಇಲ್ಲದ ಕಾರಣ ರಾಜ್ಯ ಸರ್ಕಾರ ಇನ್ನೂ ಅನುಷ್ಠಾನ ಮಾಡಿಲ್ಲ.

ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿಗೆ ಕಳೆದ ನ.27ರಂದು ಪತ್ರ ಬರೆದಿದ್ದರು. ಅದಕ್ಕೆ ಉತ್ತರ ಬಾರದೇ ಇದ್ದುದರಿಂದ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಗೊಂದಲಕ್ಕೆ ಒಳಗಾಗಿದೆ. ಇದರಿಂದ ಯೋಜನೆಯಡಿ 70 ವರ್ಷ ಮೇಲ್ಪಟ್ಟ ಎಲ್ಲರಿಗೂ ರಾಜ್ಯದಲ್ಲಿ ₹ 5 ಲಕ್ಷದವರೆಗೆ ಆರೋಗ್ಯ ವಿಮೆ ಸೌಲಭ್ಯ ದೊರೆಯದಂತಾಗಿದೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ‘ಎಬಿ–ಪಿಎಂಜೆಎವೈಗೆ ಸಂಬಂಧಿಸಿ ಗೊಂದಲಗಳಿವೆ. ದಕ್ಷಿಣ ಭಾರತದ ಯಾವುದೇ ರಾಜ್ಯದಲ್ಲಿ ಯೋಜನೆ ಅನುಷ್ಠಾನವಾಗಿಲ್ಲ. ಈ ಹಿಂದೆ ಜಾರಿಮಾಡಿದ್ದ ಈ ಯೋಜನೆಯಡಿ ಶೇ 60ರಷ್ಟು ಅನುದಾನವನ್ನು ಕೇಂದ್ರ ಸರ್ಕಾರ ಹಾಗೂ ಶೇ 40 ರಷ್ಟು ಅನುದಾನವನ್ನು ರಾಜ್ಯ ಸರ್ಕಾರ ಭರಿಸಬೇಕಿದೆ. ಆದರೆ, ನಮ್ಮ ರಾಜ್ಯದಲ್ಲಿ ಅನುಷ್ಠಾನವಾಗಿರುವ ಯೋಜನೆಯಲ್ಲಿ ಕೇಂದ್ರ ಸರ್ಕಾರವು ಶೇ 25 ರಷ್ಟು ಹಾಗೂ ರಾಜ್ಯ ಸರ್ಕಾರವು ಶೇ 75 ರಷ್ಟು ಅನುದಾನ ಭರಿಸುತ್ತಿದೆ. ಇದರಿಂದಾಗಿ ಹೊಸ ಯೋಜನೆಯ ಅನುದಾನದ ಬಗ್ಗೆ ಅನುಮಾನವಿದೆ’ ಎಂದರು.

ಚಿಕಿತ್ಸೆಗೆ ₹ 169 ಕೋಟಿ ವೆಚ್ಚ

‘ಈಗಾಗಲೆ ಜಾರಿಯಲ್ಲಿರುವ ಎಬಿ–ಪಿಎಂಜೆಎವೈ ಅಡಿ ರಾಜ್ಯದಲ್ಲಿ ಪಡಿತರ ಚೀಟಿ ಹೊಂದಿರುವ ಕುಟುಂಬದ 70 ವರ್ಷ ಮೇಲ್ಪಟ್ಟ ಸದಸ್ಯರಿಗೆ, 2023–24ನೇ ಸಾಲಿನಲ್ಲಿ ಒಟ್ಟು ₹ 169 ಕೋಟಿ ಚಿಕಿತ್ಸಾ ವೆಚ್ಚವನ್ನು ಭರಿಸಲಾಗಿದೆ’ ಎಂದು ದಿನೇಶ್ ಗುಂಡೂರಾವ್ ಮಾಹಿತಿ ನೀಡಿದರು.

‘ಯೋಜನೆಗೆ ಸಂಬಂಧಿಸಿದಂತೆ ಹೆಸರು ಕೇಂದ್ರ ಸರ್ಕಾರದ್ದು, ಹಣ ರಾಜ್ಯ ಸರ್ಕಾರದ್ದು ಆಗಬಾರದು. ಯೋಜನೆಯಡಿ ಚಿಕಿತ್ಸೆಗೆ ಸಂಬಂಧಿಸಿದಂತೆ 70 ವರ್ಷ ಮೇಲ್ಪಟ್ಟವರು ಯಾವುದೇ ಕಾರ್ಡ್‌ಗಳನ್ನು ಹೊಸದಾಗಿ ಪಡೆಯಬೇಕಿರುವುದಿಲ್ಲ. ಆಧಾರ್ ಕಾರ್ಡ್ ಅಥವಾ ಪಡಿತರ ಚೀಟಿ ಇದ್ದರೆ ಸಾಕಾಗುತ್ತದೆ’ ಎಂದು ಹೇಳಿದರು.

ಸುದ್ದಿ 2 ನಿಮಿಷ

ವೀಣಾ ಶಾಂತೇಶ್ವರಗೆ ‘ಶ್ರೀ ಸಾಹಿತ್ಯ ಪ್ರಶಸ್ತಿ’

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನ ನೀಡುವ 2025ನೇ ಸಾಲಿನ ‘ಶ್ರೀ ಸಾಹಿತ್ಯ ಪ್ರಶಸ್ತಿ’ಗೆ ಲೇಖಕಿ ವೀಣಾ ಶಾಂತೇಶ್ವರ ಆಯ್ಕೆಯಾಗಿದ್ದಾರೆ.

ಕಮಲಿನಿ ಶಾ. ಬಾಲುರಾವ್ ಅವರು ಪ್ರತಿಷ್ಠಾನದಲ್ಲಿ ಈ ದತ್ತಿ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ದತ್ತಿ ಪ್ರಶಸ್ತಿಯು ₹ 1 ಲಕ್ಷ ನಗದು ಒಳಗೊಂಡಿದೆ.

ಹಂ.ಪ. ನಾಗರಾಜಯ್ಯ, ರೂಪ ಹಾಸನ ಹಾಗೂ ಸೋಮಣ್ಣ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ.

ನಿವೃತ್ತ ಪ್ರಾಧ್ಯಾಪಕರಾಗಿರುವ ವೀಣಾ ಶಾಂತೇಶ್ವರ ಅವರು, ಸ್ತ್ರೀ ಸಂವೇದನೆಯ ಕಥೆ, ಕಾದಂಬರಿಗಳನ್ನು ರಚಿಸಿದ್ದಾರೆ. ಅನ್ಯ ಭಾಷೆಯ ಕೃತಿಗಳನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ತಿಳಿಸಿದ್ದಾರೆ.

ಇದೇ 25ರಂದು ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮರು ಪರೀಕ್ಷೆ: ಸಿ.ಎಂ.ಗೆ ಸಾಹಿತಿ ಗೊರುಚ ಪತ್ರ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಲ್ಲಿ ಲೋಪದೋಷ ಕಂಡು ಬಂದ ಕಾರಣ ಮತ್ತೆ ಪರೀಕ್ಷೆ ನಡೆಸಲು ಆಯೋಗಕ್ಕೆ ಆದೇಶ ನೀಡಬೇಕು ಎಂದು ಸಾಹಿತಿ ಗೊ.ರು.ಚನ್ನಬಸಪ್ಪ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅವರು ಪತ್ರ ಬರೆದಿದ್ದಾರೆ. ಕಳೆದ ವರ್ಷ ಆಗಸ್ಟ್ 27ರಂದು ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯ ಕನ್ನಡ ಪ್ರಶ್ನೆ ಪತ್ರಿಕೆಯಲ್ಲಿ ಅನೇಕ ಲೋಪದೋಷಗಳ ಬಗೆಗೆ ವ್ಯಕ್ತವಾದ ವಿರೋಧ ಹಾಗೂ ಪರೀಕ್ಷಾರ್ಥಿಗಳ ಒತ್ತಾಯಕ್ಕೆ ಮಣಿದು ಆಯೋಗವು ಡಿಸೆಂಬರ್ 29ರಂದು ಮರುಪರೀಕ್ಷೆ ನಡೆಸಿತ್ತು. ಮರುಪರೀಕ್ಷೆಯ ಪಶ್ನೆ ಪತ್ರಿಕೆಗಳಲ್ಲೂ ಅದೇ ಲೋಪ–ದೋಷಗಳು ಮರುಕಳಿಸಿರುವುದು ದಿಗ್ಭ್ರಮೆ ಉಂಟು ಮಾಡಿದೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಪ್ರಸ್ತಾಪಿತ ಪ್ರಶ್ನೆ ಪತ್ರಿಕೆಗಳನ್ನು ಮೂಲ ಕನ್ನಡದಲ್ಲೇ ಸಿದ್ದಪಡಿಸುವಂತಾದರೆ ಇಂತಹ ಗೊಂದಲಗಳಿಗೆ ಅವಕಾಶವಿರುವುದಿಲ್ಲ. ಈ ಗೊಂದಲದಿಂದ ಕನ್ನಡ ಮಾಧ್ಯಮದ ಅದರಲ್ಲೂ ಗ್ರಾಮಾಂತರದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ.

‘ಪ್ರಶ್ನೆ ಪತ್ರಿಕೆಗಳಲ್ಲಿ ಆಗಿರುವ ಪ್ರಮಾದಗಳ ಕುರಿತು ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಸಂಘವು ನಡೆಸಿದ ಪ್ರತಿಭಟನೆ ತಮ್ಮ ಗಮನಕ್ಕೆ ಬಂದಿದೆ ಎಂದು ತಿಳಿದಿದ್ದೇನೆ. ಹಾಗಾಗಿ ಈ ಅವ್ಯವಸ್ಥೆಗೆ ಕಾರಣವಾದವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು. ದೋಷ ರಹಿತ ಪ್ರಶ್ನೆಪತ್ರಿಕೆಗಳೊಂದಿಗೆ ಮತ್ತೆ ಪರೀಕ್ಷೆ ನಡೆಸಲು ಆಯೋಗಕ್ಕೆ ಕಟ್ಟುನಿಟ್ಟಿನ ಆದೇಶ ನೀಡಬೇಕು’ ಎಂದು ಕೋರಿದ್ದಾರೆ.

‘ಸ್ವಜನಪಕ್ಷಪಾತದಿಂದ ಪಿಎಸ್‌ಸಿ ವಿಶ್ವಾಸಕ್ಕೆ ಧಕ್ಕೆ’

ಲೋಕಸೇವಾ ಆಯೋಗಗಳ ಅಧ್ಯಕ್ಷರ ಸಮ್ಮೇಳನದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕಾರಣಿಗಳು ಮತ್ತು ಅಧಿಕಾರಿಗಳ ಸ್ವಜನ ಪಕ್ಷಪಾತ ಪ್ರವೃತ್ತಿಯು ನೇಮಕಾತಿ ಪ್ರಕ್ರಿಯೆ ಮತ್ತು ಲೋಕಸೇವಾ ಆಯೋಗಗಳ (ಪಿಎಸ್‌ಸಿ) ಮೇಲಿನ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತಿದೆ’ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಕಳವಳ ವ್ಯಕ್ತಪಡಿಸಿದರು.

ನಗರದ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಶನಿವಾರ ನಡೆದ ರಾಜ್ಯ ಲೋಕಸೇವಾ ಆಯೋಗಗಳ ಅಧ್ಯಕ್ಷರ 25ನೇ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ‘ಇಂಥ ಪ್ರವೃತ್ತಿಯನ್ನು ನಿಯಂತ್ರಿಸುವ ಮತ್ತು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಲೋಕಸೇವಾ ಆಯೋಗಗಳ ಸದಸ್ಯರ ಮರು ನೇಮಕವನ್ನು ಸಂವಿಧಾನವೇ ನಿರ್ಬಂಧಿಸಿದೆ’ ಎಂದರು.

‘ಲೋಕಸೇವಾ ಆಯೋಗಗಳಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸಂವಿಧಾನದಡಿ ಅವಕಾಶವಿದೆ. ಆದರೆ, ಅಂತಿಮ ಅಧಿಕಾರವು ರಾಜ್ಯ ಸರ್ಕಾರದ ಬಳಿಯೇ ಇರುತ್ತದೆ. ಆಯೋಗ ನೀಡುವ ಸಲಹೆ, ಶಿಫಾರಸುಗಳನ್ನು ಸರ್ಕಾರ ಅಂಗೀಕರಿಸಲು ಒಪ್ಪದೇ ಇದ್ದರೆ ಶಾಸಕಾಂಗದ ಮುಂದೆ ಮಂಡಿಸಬೇಕಾಗುತ್ತದೆ. ಆ ಮೂಲಕ, ಲೋಕಸೇವಾ ಆಯೋಗಗಳು ನಾಗರಿಕ ಸೇವೆಗಳಿಗೆ ಅರ್ಹರ, ಪಾರದರ್ಶಕ ಮತ್ತು ನ್ಯಾಯಸಮ್ಮತ ನೇಮಕಾತಿಗೆ ಅವಕಾಶ ಕಲ್ಪಿಸುತ್ತವೆ’ ಎಂದರು.

‘ಪರೀಕ್ಷಾ ಸಂಸ್ಥೆಗಳು ತಮ್ಮ ಕರ್ತವ್ಯಗಳನ್ನು ಅತ್ಯಂತ ಪರಿಣಾಮಕಾರಿ ಮತ್ತು ಸಮರ್ಥ ರೀತಿಯಲ್ಲಿ ನಿರ್ವಹಿಸಬೇಕು. ಅಲ್ಲದೆ, ಅಪನಂಬಿಕೆ ಮತ್ತು ಹತಾಶೆಗೆ ಒಳಗಾಗದಂತೆ ಉತ್ತರದಾಯಿತ್ವದಿಂದ ಕೆಲಸ ಮಾಡಬೇಕು. ನೇಮಕಾತಿಗಳಲ್ಲಿ ಭ್ರಷ್ಟಾಚಾರವನ್ನು ತಡೆಯುವ ಉದ್ದೇಶದಿಂದ ‘ಸಾರ್ವಜನಿಕ ಪರೀಕ್ಷೆಗಳ (ಭ್ರಷ್ಟಾಚಾರ ತಡೆ) ಮಸೂದೆಗೆ ಈಗಾಗಲೇ ಅಂಗೀಕಾರ ನೀಡಲಾಗಿದೆ. ಆದರೂ ಕಟ್ಟುನಿಟ್ಟಿನಿಂದ ನಿಯಮಗಳನ್ನು ಜಾರಿಗೊಳಿಸುವ ಹೊಣೆಯು ಲೋಕ ಆಯೋಗಗಳು ಮತ್ತು ಪರೀಕ್ಷಾ ಏಜೆನ್ಸಿಗಳದ್ದಾಗಿದೆ’ ಎಂದೂ ಅವರು ಅಭಿಪ್ರಾಯಪಟ್ಟರು.

ಸಮ್ಮೇಳನದಲ್ಲಿ ಆಪ್ತ ಚರ್ಚೆಯಲ್ಲಿ ತೊಡಗಿದ ರಾಜ್ಯಪಾಲ ಥಾವರಚಂದ್ ಗೆಹಲೋತ್; ಉಪರಾಷ್ಟ್ರಪತಿ ಜಗದೀಪ್ ಧನಕರ್ –ಪ್ರಜಾವಾಣಿ ಚಿತ್ರ

‘ಸಂಪನ್ಮೂಲ ಒದಗಿಸಲು ಬದ್ಧ’

ಸಮ್ಮೇಳನದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಕರ್ನಾಟಕ ಲೋಕಸೇವಾ ಆಯೋಗವನ್ನು (ಕೆಪಿಎಸ್‌ಸಿ) ಸದೃಢಗೊಳಿಸಲು ಹೆಚ್ಚಿನ ಸಿಬ್ಬಂದಿ, ಸಂಪನ್ಮೂಲ ಹಾಗೂ ಮೂಲಸೌಲಭ್ಯ ಒದಗಿಸಲು ರಾಜ್ಯ ಸರ್ಕಾರದ ಬದ್ಧವಾಗಿದೆ. ಅಲ್ಲದೆ, ಕೃತಕ ಬುದ್ಧಿಮತ್ತೆಯಂತಹ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ನೇಮಕಾತಿ ಪ್ರಕ್ರಿಯೆಯನ್ನು ಹೆಚ್ಚು ಪಾರದರ್ಶಕಗೊಳಿಸಲು ಉದ್ದೇಶಿಸಲಾಗಿದೆ’ ಎಂದರು.

‘ಪಿ.ಸಿ. ಹೋಟಾ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ರಾಜ್ಯ ಸರ್ಕಾರವು ಕೆಪಿಎಸ್‌ಸಿಯಲ್ಲಿ ಕೆಲವು ಪ್ರಮುಖ ಸುಧಾರಣೆಗಳನ್ನು ಜಾರಿಗೆ ತಂದಿದೆ. ಗ್ರೂಪ್ ‘ಸಿ’ ಹುದ್ದೆಗಳಿಗೆ ಸಂದರ್ಶನ ರದ್ದು, ಗ್ರೂಪ್ ‘ಬಿ’ ಹುದ್ದೆಗಳಿಗೆ ಹಾಗೂ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಗಳಲ್ಲಿ ಸಂದರ್ಶನದ ಅಂಕ ಕಡಿತಗೊಳಿಸಲಾಗಿದೆ. ಅಲ್ಲದೆ, ನ್ಯಾಯಯುತ ಹಾಗೂ ಪಾರದರ್ಶಕ ಪ್ರಕ್ರಿಯೆಗೆ ಒತ್ತು ನೀಡಲು ನೇಮಕಾತಿ ಪ್ರಕ್ರಿಯೆಯನ್ನು ಸರಳೀಕೃತಗೊಳಿಸಲಾಗಿದೆ’ ಎಂದು ವಿವರಿಸಿದರು.

‘ಜನಕೇಂದ್ರಿತವಾಗುವ ಜೊತೆಗೆ, ಭವಿಷ್ಯದ ಸವಾಲುಗಳನ್ನು ಎದುರಿಸುವಂತಹ ಆಡಳಿತ ವೈಖರಿಯನ್ನು ಲೋಕಸೇವಾ ಆಯೋಗಗಳು ಅಳವಡಿಸಿಕೊಳ್ಳಬೇಕು. ಉತ್ತಮ ಆಡಳಿತಕ್ಕಾಗಿ ಸರ್ಕಾರಿ ನೌಕರರಿಗೆ ಗುಣಮಟ್ಟದ ಸೇವೆಗೆ ತರಬೇತಿ ನೀಡುವ ಅಗತ್ಯವೂ ಇದೆ’ ಎಂದೂ ಅವರು ಪ್ರತಿಪಾದಿಸಿದರು.

‘ತೆರಿಗೆ ಪಾಲಿನಲ್ಲಿ ಅನ್ಯಾಯ: ಕೇಂದ್ರದ ವಿರುದ್ಧ ಹೋರಾಟ’

ಬೆಂಗಳೂರು: ‘ನಮ್ಮ ತೆರಿಗೆ ನಮ್ಮ ಹಕ್ಕಿಗಾಗಿ ನಾವು ಕೇಂದ್ರ ಸರ್ಕಾರದ ಮುಂದೆ ಹೋರಾಟ ಮಾಡಲೇಬೇಕು. ನಮ್ಮ ರಾಜ್ಯದ ಹಿತ ಕಾಪಾಡಲೇಬೇಕು’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ರಾಜ್ಯ ಸರ್ಕಾರವು ನಮ್ಮ ತೆರಿಗೆ ನಮ್ಮ ಹಕ್ಕು ಹೋರಾಟ ಮುಂದುವರಿಸಲಿದೆಯೇ’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಬಿಜೆಪಿಯ ಇಷ್ಟೊಂದು ಜನ ಸಂಸದರು ಏಕೆ ಮೌನವಾಗಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ’ ಎಂದರು.

‘ನೀರಾವರಿ ಮತ್ತು ನಗರಾಭಿವೃದ್ಧಿಗೆ ನೀಡುವ ಅನುದಾನದ ವಿಚಾರದಲ್ಲಿ ಕೇಂದ್ರ ಸರ್ಕಾರ ಕೊಟ್ಟ ಮಾತು ಉಳಿಸಿಕೊಂಡಿಲ್ಲ. ರಾಜ್ಯಕ್ಕಾಗುತ್ತಿರುವ ತೆರಿಗೆ ಅನ್ಯಾಯವನ್ನು ಕಾನೂನಾತ್ಮಕವಾಗಿ ಹೇಗೆ ಎದುರಿಸಬೇಕು ಎಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧ್ಯಯನ ಮಾಡುತ್ತಿದ್ದಾರೆ. ತೆರಿಗೆ ಪಾಲು ಹಂಚಿಕೆಯಲ್ಲಿ ಅಸಮಾನತೆಗೆ ಸಂಬಂಧಿಸಿದಂತೆ ರಾಜ್ಯ ಬಜೆಟ್ ಮಂಡನೆ ವೇಳೆಗೆ ನಾವು ಉತ್ತರ ಕೊಡುತ್ತೇವೆ’ ಎಂದೂ ಹೇಳಿದರು.

‘ಹಾಲು ಖರೀದಿ ದರ ಜೂನ್‌ಗೆ ಏರಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾಲಿನ ಖರೀದಿ ದರ ಏರಿಸಬೇಕೆಂದು ರೈತರು ಸರ್ಕಾರದ ಎದುರು ಬೇಡಿಕೆ ಇಟ್ಟಿದ್ದಾರೆ. ದರ ಏರಿಕೆ ಕುರಿತು ಚರ್ಚೆ ನಡೆಯುತ್ತಿದೆ. ಎಷ್ಟು ಏರಿಸಬೇಕೆಂದು ತೀರ್ಮಾನವಾಗಿಲ್ಲ. ಜೂನ್ ತಿಂಗಳಲ್ಲಿ ದರ ಏರಿಕೆ ಮಾಡಲಾಗುವುದು’ ಎಂದು ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಭಾರತೀಯ ಡೇರಿ ಸಂಘದ ದಕ್ಷಿಣ ವಲಯ ಶನಿವಾರ ಆಯೋಜಿಸಿದ್ದ ಅತ್ಯುತ್ತಮ ಮಹಿಳಾ ಹೈನುಗಾರಿಕಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಹಾಲಿನ ಖರೀದಿ ದರ ಹೆಚ್ಚಿಸುವ ಕುರಿತು ಒಕ್ಕೂಟಗಳ ಮುಖಂಡರೊಂದಿಗೆ ಚರ್ಚಿಸಲಾಗುತ್ತದೆ. ನಂತರ ಮುಖ್ಯಮಂತ್ರಿಯವರೊಂದಿಗೂ ಮಾತನಾಡಿ, ನಿರ್ಧಾರ ಕೈಗೊಳ್ಳಲಾಗುತ್ತದೆ’ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮದಲ್ಲಿ ‘ಅತ್ಯುತ್ತಮ ಹೈನುಗಾರ್ತಿ ಪ್ರಶಸ್ತಿ’ ಪ್ರದಾನ ಮಾಡಿ ಮಾತನಾಡಿದ ಸಚಿವರು, ‘ಹಾಲು ಮತ್ತು ಹಾಲಿನ ಉತ್ಪನ್ನಗಳ ಮೇಲೆ ಹೆಚ್ಚಿನ ರೈತರು ಅವಲಂಬಿತರಾಗಿದ್ದಾರೆ. ರೈತರಿಗೆ ಕೃಷಿಯಷ್ಟೇ, ಹೈನುಗಾರಿಕೆ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಹೈನುಗಾರಿಕೆ ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮ ಮೇಲಿದೆ’ ಎಂದು ಹೇಳಿದರು.

ಮಂಡ್ಯ ಜಿಲ್ಲೆ ಡಿಂಕ ಗ್ರಾಮದ ಮಂಗಳಮ್ಮ, ಕೇರಳದ ಕೊಟ್ಟಾಯಂ ಜಿಲ್ಲೆಯ ಮುಟ್ಟುಚಿರಾ ಗ್ರಾಮದ ವಿಧು ರಾಜೀವ್, ತೆಲಂಗಾಣದ ಜಗಿತ್ಯಾಲ್ ಗ್ರಾಮಾಂತರ ಜಿಲ್ಲೆಯ ಸಂಗಟಪಲ್ಲಿ ಗ್ರಾಮದ ಪುಥಾರಿ ಗಂಗವ್ವ, ಚಿತ್ತೂರು ಜಿಲ್ಲೆಯ ಮದ್ದಿರಾಳ ಗ್ರಾಮದ ನವೀನ ಕುಮಾರಿ, ತಮಿಳುನಾಡಿನ ತಿರುಪುರ್ ಜಿಲ್ಲೆಯ ಕೊಡಗಿಪಾಳ್ಯಂ ಗ್ರಾಮದ ಸೆಲ್ವನಾಯಕಿ ಅವರಿಗೆ ‘ಅತ್ಯುತ್ತಮ ಹೈನುಗಾರ್ತಿ ಪ್ರಶಸ್ತಿ’ಯನ್ನು ಸಚಿವರು ಪ್ರದಾನ ಮಾಡಿದರು.

ಭಾರತೀಯ ಡೇರಿ ಸಂಘದ ದಕ್ಷಿಣ ವಲಯದ ಅಧ್ಯಕ್ಷ ಸತೀಶ್ ಕುಲಕರ್ಣಿ, ಕೆಎಂಎಫ್ ನಿರ್ದೇಶಕ ಬಿ.ಶಿವಸ್ವಾಮಿ ಉಪಸ್ಥಿತರಿದ್ದರು.

ಪಕ್ಷದ ಸಾಂಸ್ಥಿಕ ಚುನಾವಣೆ ಜೆಡಿಎಸ್ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಜಿಲ್ಲಾ ಮಟ್ಟದ ಪದಾಧಿಕಾರಿಗಳ ಚುನಾವಣೆ ಮತ್ತು ಎರಡನೇ ಹಂತದ ಸದಸ್ಯರ ನೋಂದಣಿ ಕಾರ್ಯ ಕುರಿತ ಚರ್ಚೆಗಾಗಿ ಪಕ್ಷದ ಕೇಂದ್ರ ಕಚೇರಿಯಲ್ಲಿ ಭಾನುವಾರ ಸಭೆ ಕರೆಯಲಾಗಿದೆ.

ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆಗೂ ಮುನ್ನ ಜಿಲ್ಲಾ ಅಧ್ಯಕ್ಷರ ಚುನಾವಣೆ ನಡೆಯಬೇಕಿದೆ. ಸಭೆಯಲ್ಲಿ ಆ ಸಂಬಂಧ ಚರ್ಚೆ ನಡೆಯಲಿದೆ. ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆ ಕುರಿತೂ ವಿಷಯ ಪ್ರಸ್ತಾಪವಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಜೆಡಿಎಸ್‌ನ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಆಂತರಿಕ ಚುನಾವಣೆಯ ಮೂಲಕ ನಡೆಯಲಿದೆ ಎಂದು ಪಕ್ಷದ ವರಿಷ್ಠರು ಈಗಾಗಲೇ ಹಲವು ಬಾರಿ ಸ್ಪಷ್ಟಪಡಿಸಿದ್ದಾರೆ. ಆದರೆ, ನಿಖಿಲ್ ಕುಮಾರಸ್ವಾಮಿ ಅವರಿಗೇ ಆ ಹೊಣೆಗಾರಿಕೆ ನೀಡಲಾಗುತ್ತದೆ ಎಂಬ ಮಾತು ಪಕ್ಷದೊಳಗೆ ಚಾಲ್ತಿಯಲ್ಲಿದೆ.

‘ಈ ಬಗ್ಗೆ ಚರ್ಚೆಯೇ ಆಗಿಲ್ಲ’ ಎಂದು ನಿಖಿಲ್ ಕುಮಾರಸ್ವಾಮಿ ಅವರು ಹಲವು ಬಾರಿ ಹೇಳಿದ್ದಾರೆ. ಆದರೆ, ‘ಅವರ ಆಯ್ಕೆಯ ಸಾಧ್ಯತೆಯೇ ಹೆಚ್ಚು. ಭಾನುವಾರದ ಸಭೆಯಲ್ಲಿ ಆಂತರಿಕ ಚುನಾವಣೆಯ ರೂಪುರೇಷೆಗಳನ್ನು ಚರ್ಚಿಸಲಾಗುತ್ತದೆ. ಸಂಕ್ರಾಂತಿ ನಂತರ ಚುನಾವಣಾ ಪ್ರಕ್ರಿಯೆ ಆರಂಭವಾಗಬಹುದು’ ಎಂಬುದು ಮೂಲಗಳ ಅಭಿಪ್ರಾಯ.

ಇನ್ನೊಂದೆಡೆ ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ, ‘ಭಾನುವಾರದ ಸಭೆಗೆ ಹಾಜರಾಗುವುದಿಲ್ಲ’ ಎಂದು ಶನಿವಾರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ್ದಾರೆ. ಈಚೆಗೆ ಮೈಸೂರಿನಲ್ಲಿ ನಡೆದ ‘ದಿಶಾ’ ಸಭೆಗೂ ಅವರು ಗೈರು ಹಾಜರಾಗಿದ್ದರು. ಇದು ಜಿ.ಟಿ. ದೇವೇಗೌಡ ಮತ್ತು ಎಚ್‌.ಡಿ.ಕುಮಾರಸ್ವಾಮಿ ಅವರ ನಡುವಣ ಬಿರುಕು ಹೆಚ್ಚಾದ ಸೂಚನೆ ಎಂದು ಪಕ್ಷದೊಳಗೆ ಚರ್ಚೆಯಾಗುತ್ತಿದೆ ಎಂದು ಮೂಲಗಳು ಹೇಳಿವೆ.

ರಾಜ್ಯ ಘಟಕದ ಅಧ್ಯಕ್ಷರಾಗಿ ನಿಖಿಲ್ ಅವರ ಆಯ್ಕೆ ಸಂಬಂಧ ಕೇಳಿದ ಪ್ರಶ್ನೆಗೆ ಜಿ.ಟಿ.ದೇವೇಗೌಡ, ‘ಮಾಜಿ ಪ್ರಧಾನಿ ದೇವೇಗೌಡ, ಎರಡು ಬಾರಿ ಮುಖ್ಯಮಂತ್ರಿ ಆಗಿರುವ ಎಚ್‌.ಡಿ.ಕುಮಾರಸ್ವಾಮಿ ಅವರು ಅದನ್ನು ನಿರ್ಧರಿಸುತ್ತಾರೆ. ನನ್ನ ಮಗ ಹರೀಶ್ ಗೌಡ ಮತ್ತು ನಿಖಿಲ್ ಇಬ್ಬರೂ ಸ್ನೇಹಿತರು. ಹೀಗಾಗಿ ಅಧ್ಯಕ್ಷ ಆಗಲಿ ಎಂದು ಹೇಳಿದ್ದಾನೆ’ ಎಂದಿದ್ದಾರೆ.

‘ಕೇಂದ್ರ ಸರ್ಕಾರದಿಂದ ಜಾತಿ ಗಣತಿ’

ದೊಡ್ಡಬಳ್ಳಾಪುರ: ಕೇಂದ್ರ ಸರ್ಕಾರವೂ ಜಾತಿ ಗಣತಿ ಮಾಡಲು ತೀರ್ಮಾನ ತೆಗೆದುಕೊಳ್ಳುತ್ತಿದೆ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ತಾಲ್ಲೂಕಿನ ಹಾಡೋನಹಳ್ಳಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಜಾತಿ ಗಣತಿ ಮಾಡಿ ಈಗಾಗಲೇ ಸುಮಾರು 12–13 ವರ್ಷ ಕಳೆದಿವೆ. ಈಗ ಸಾಕಷ್ಟು ಬದಲಾವಣೆ ಆಗಿರುವುದಿಂದ ಆ ವರದಿ ಅಪ್ರಸ್ತುತ ಮತ್ತು ಅವೈಜ್ಞಾನಿಕ ಎಂದರು.

ಹತ್ತು ವರ್ಷಕ್ಕೊಮ್ಮೆ ಜಾತಿ ಗಣತಿ ಮಾಡಬೇಕು. ಅದನ್ನು ಈಗಿನ ಕಾಂಗ್ರೆಸ್ ಸರ್ಕಾರ ಮಾಡಿಲ್ಲ. ಹೊಸದಾಗಿ ರಾಜ್ಯ ಸರ್ಕಾರ ಜಾತಿ ಗಣತಿ ಮಾಡುವುದಾದರೆ ಮಾಡಲಿ. ಇಲ್ಲದಿದ್ದರೆ ಕೇಂದ್ರ ಸರ್ಕಾರ ಜಾತಿ ಗಣತಿ ಮಾಡುವವರೆಗೂ ಕಾಯಬೇಕು ಎಂದರು.

ಕಂಬಳ ಸಂಭ್ರಮ...

ದಕ್ಷಿಣ ಕನ್ನಡ ಜಿಲ್ಲೆಯ ನರಿಂಗಾನದಲ್ಲಿ ಶನಿವಾರ ರಾತ್ರಿ ಆಯೋಜಿಸಿದ್ದ ಲವ-ಕುಶ ಜೋಡುಕರೆ ಕಂಬಳವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೋಣಗಳನ್ನು ಹಿಡಿದು ಸಂಭ್ರಮಿಸಿದರು. ಸಚಿವ ದಿನೇಶ್ ಗುಂಡೂರಾವ್, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಜೊತೆಯಾದರು ಪ್ರಜಾವಾಣಿ ಚಿತ್ರ- ಫಕ್ರುದ್ದೀನ್ ಎಚ್

ಅತ್ಯಾಚಾರದ ಬೆದರಿಕೆ ವಿದ್ಯಾರ್ಥಿನಿ ಆತ್ಮಹತ್ಯೆ

ಜೇವರ್ಗಿ (ಕಲಬುರಗಿ ಜಿಲ್ಲೆ): ಪಟ್ಟಣದ ಮಹಿಬೂಬ ಎಂಬಾತ ನೀಡಿದ ಕಿರುಕುಳದಿಂದ ಬೇಸತ್ತು 8ನೇ ತರಗತಿ ವಿದ್ಯಾರ್ಥಿನಿ ಮಹಾಲಕ್ಷ್ಮಿ ಶನಿವಾರ ಮಧ್ಯಾಹ್ನ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

‘ಮಹಾಲಕ್ಷ್ಮಿ ಶಾಲೆಗೆ ಹಾಗೂ ಮನೆಗೆ ಹೋಗುವಾಗ ರಸ್ತೆಯಲ್ಲಿ ಹಿಂಬಾಲಿಸುತ್ತಿದ್ದ ಮಹಿಬೂಬ, ‘ಫೋನ್ ಸಂಪರ್ಕಕ್ಕೆ ಬಾರದೇ ಇದ್ದರೆ ಹಾಗೂ ನನ್ನ ಜೊತೆ ಮಾತನಾಡದಿದ್ದರೆ ನಿನ್ನನ್ನು ಅತ್ಯಾಚಾರ ಮಾಡುತ್ತೇನೆ. ಆಗ ನಿನ್ನ ಯಾರು ಮದುವೆ ಮಾಡುಕೊಳ್ಳುತ್ತಾರೆ ನೋಡುತ್ತೇನೆ’ ಎಂದು ಹೆದರಿಸುತ್ತಿದ್ದ. ಹೀಗಾಗಿ ಮನನೊಂದು ಮಗಳು ಆತ್ಮಹತ್ಯೆಗೆ ಶರಣಾಗಿದ್ದಾಳೆ’ ಎಂದು ವಿದ್ಯಾರ್ಥಿನಿಯ ತಂದೆ ಯಶವಂತರಾಯಗೌಡ ಬಿರಾದಾರ ನೀಡಿದ ದೂರಿನ ಮೇರೆಗೆ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಟನೆ: ಆರೋಪಿ ಮಹಿಬೂಬನನ್ನು ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿ ಅಖಿಲ ಭಾರತ ವೀರಶೈವ ಮಹಾಸಭಾ ಹಾಗೂ ನಾಗರಿಕರು ಪಟ್ಟಣದ ಅಖಂಡೇಶ್ವರ ವೃತ್ತದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಎಸ್‌ಪಿ ಅಡ್ಡೂರು ಶ್ರೀನಿವಾಸಲು, ಡಿವೈಎಸ್‌ಪಿ ಶಂಕರಗೌಡ ಭೇಟಿ ನೀಡಿ ತನಿಖೆ ಕೈಗೊಂಡಿದ್ದಾರೆ.

ದಲಿತ ವ್ಯಕ್ತಿಯ ದೇಗುಲ ಪ್ರವೇಶಕ್ಕೆ ನಿರಾಕರಣೆ

ಒಂದನೇ ಪುಟದಿಂದ...

ಪ್ರಕರಣ ದಾಖಲಾಗುತ್ತಲೇ ಗ್ರಾಮದ ತಿಮ್ಮಾರೆಡ್ಡಿ, ಭಾಸ್ಕರ್‌ರೆಡ್ಡಿ, ಬಿ.ವಿ. ವೆಂಕಟೇಶರೆಡ್ಡಿ ಮತ್ತು ಪಿಂಜಾರ್ಲಹಳ್ಳಿ ಶ್ರೀನಿವಾಸರೆಡ್ಡಿ ಎಂಬುವರು ತಲೆ ಮರೆಸಿಕೊಂಡಿದ್ದಾರೆ.

ತಹಶೀಲ್ದಾರ್ ಮಹೇಶ್ ಪತ್ರಿ, ಡಿವೈಎಸ್‌ಪಿ ಶಿವಕುಮಾರ್, ಸರ್ಕಲ್ ಇನ್‌ಸ್ಪೆಕ್ಟರ್ ಕೆ.ಪಿ. ಸತ್ಯನಾರಾಯಣ್ ಶನಿವಾರ ಗ್ರಾಮಕ್ಕೆ ಭೇಟಿ ದಲಿತ ಮುಖಂಡರ ಸಮ್ಮುಖದಲ್ಲಿ ಶಾಂತಿ ಸಭೆ ನಡೆಸಿದರು. ಶಾಂತಿಸಭೆಯ ಬಳಿಕ ಗ್ರಾಮಸ್ಥರ ಸಮ್ಮುಖದಲ್ಲಿ ಅಧಿಕಾರಿಗಳು ಗೋಪಾಲಪ್ಪ ಅವರನ್ನು ದೇವಸ್ಥಾನದ ಒಳಗೆ ಕರೆದೊಯ್ದರು.

ಆಮೆಗತಿಯಲ್ಲಿ ಪೌತಿ ಖಾತೆ ಆಂದೋಲನ: ಸೌಲಭ್ಯ ಸಿಗದೆ ರೈತರ ಪರದಾಟ

ಮೃತರ ಹೆಸರಿನಲ್ಲಿವೆ 37 ಲಕ್ಷ ಪಹಣಿಗಳು

• ಸಿದ್ದು ಆರ್‌.ಜಿ.ಹಳ್ಳಿ

ಮಂಡ್ಯ: ‘ಪೌತಿ ಖಾತೆ ಆಂದೋಲನ’ ಆಮೆಗತಿಯಲ್ಲಿ ಸಾಗುತ್ತಿರುವುದರಿಂದ ರಾಜ್ಯದಲ್ಲಿ ಬರೋಬ್ಬರಿ 37.56 ಲಕ್ಷ ಪಹಣಿಗಳು (ಆರ್‌.ಟಿ.ಸಿ) ಇನ್ನೂ ಮೃತರ ಹೆಸರಿನಲ್ಲೇ ಇವೆ!

ರಾಜ್ಯದಲ್ಲಿ 3,22,11,512 ಖಾತೆ ಜಮೀನುಗಳಿದ್ದು, ಇದರಲ್ಲಿ 1,36,84,137 ಖಾತೆಗಳು ಮಾತ್ರ ‘ಫ್ರೂಟ್ ಐಡಿ’ ಹೊಂದಿವೆ. 2024ರ ಜನವರಿಯಿಂದ ಕಂದಾಯ ಇಲಾಖೆಯು ರಾಜ್ಯದಾದ್ಯಂತ ಆಂದೋಲನ ಕೈಗೊಂಡಿದ್ದರೂ ಪ್ರಗತಿ ಸಾಧಿಸಿಲ್ಲ. ಹೀಗಾಗಿ ರೈತರು ಕಚೇರಿಗಳಿಗೆ ಅಲೆದಾಡುವುದು ತಪ್ಪಿಲ್ಲ.

ತುಮಕೂರು (5.58 ಲಕ್ಷ), ಬೆಳಗಾವಿ (4.17 ಲಕ್ಷ) ಮತ್ತು ಮಂಡ್ಯ (3.23 ಲಕ್ಷ)–ಈ ಜಿಲ್ಲೆಗಳು ಮೃತರ ಹೆಸರಿನಲ್ಲಿ ಅತಿ ಹೆಚ್ಚು ಪಹಣಿ ಹೊಂದಿವೆ. ಧಾರವಾಡ (6,570) ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ (5,917) ಅತಿ ಕಡಿಮೆ ಪಹಣಿಗಳಿವೆ.

‘ಆಧಾರ್ ಸೀಡಿಂಗ್’ ಪ್ರಕ್ರಿಯೆ ಕೈಗೊಂಡ ನಂತರ ಇಷ್ಟೊಂದು ಜಮೀನಿನ ಪಹಣಿಗಳು ಮೃತರ ಹೆಸರಿನಲ್ಲಿವೆ ಎಂಬುದು ಗೊತ್ತಾಗಿವೆ. ಇದಕ್ಕೂ ಮುನ್ನ ಗ್ರಾಮ ಆಡಳಿತಾಧಿಕಾರಿ (ವಿ.ಎ.ಒ) ಮತ್ತು ಕಂದಾಯ ನಿರೀಕ್ಷಕರು (ಆರ್‌.ಐ) ಮೇಲಧಿಕಾರಿಗಳಿಗೆ ತಪ್ಪು ಮಾಹಿತಿ ಕೊಡುತ್ತಿದ್ದರಿಂದ, ಪಹಣಿಗಳ ಬಗ್ಗೆ ನಿಖರ ಅಂಕಿಅಂಶಗಳು ಗಮನಕ್ಕೆ ಬಂದಿರಲಿಲ್ಲ’ ಎನ್ನುತ್ತಾರೆ ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳು.

ಅಲೆದಾಟ: ‘ಪೌತಿ ಖಾತೆ ಮಾಡಿಸಲು ತಾಲ್ಲೂಕು ಕಚೇರಿಗೆ ಹೋದರೆ ಗ್ರಾಮ ಆಡಳಿತಾಧಿಕಾರಿ ಇಲ್ಲಸಲ್ಲದ ದಾಖಲೆಗಳನ್ನು ಕೇಳಿ ರೈತರನ್ನು ತಿಂಗಳುಗಟ್ಟಲೆ ಅಲೆದಾಡಿಸುತ್ತಾರೆ. ಜಮೀನಿನ ಖಾತೆ ಮಾಡಿಕೊಡಲು ನಿಯಮಗಳು ಅಡ್ಡಿಬರುತ್ತವೆ ಎನ್ನುತ್ತಾರೆ. ಹಣ ಕೊಟ್ಟರೆ, ದಾಖಲೆಗಳ ಕೊರತೆ ಇದ್ದರೂ ಅವರೇ ಸರಿದೂಗಿಸಿ ಖಾತೆ ಮಾಡಿಕೊಡುತ್ತಾರೆ. ಅಧಿಕಾರಿಗಳ ಹಣದ ದಾಹದಿಂದಲೇ ಪೌತಿ ಖಾತೆ ಪ್ರಕ್ರಿಯೆ ಸರಿಯಾಗಿ ನಡೆಯುತ್ತಿಲ್ಲ’ ಎನ್ನುತ್ತಾರೆ ಶ್ರೀರಂಗಪಟ್ಟಣದ ರೈತ ಮುಖಂಡ ಕಿರಂಗೂರು ಪಾಪು.

ಸೌಲಭ್ಯಗಳಿಗೂ ಕತ್ತರಿ: ‘ಜಮೀನು ಮೃತರ ಹೆಸರಿನಲ್ಲಿದ್ದರೆ, ಕೃಷಿ ಸಾಲ ಸಿಗುವುದಿಲ್ಲ. ಬಿತ್ತನೆಬೀಜ, ರಸಗೊಬ್ಬರ, ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ದೊರೆಯುವುದಿಲ್ಲ. ಬೆಳೆ ನಷ್ಟವಾದರೆ ಪರಿಹಾರ ಕೂಡ ಬರುವುದಿಲ್ಲ. ಇಲಾಖೆಯ ಸೌಲಭ್ಯಗಳೂ ಸಿಗುವುದಿಲ್ಲ. ಬೆಳೆ ವಿಮೆ ಮಾಡಿಸಬೇಕೆಂದರೂ ಜಮೀನಿನ ಖಾತೆ ಬದುಕಿರುವವರ ಹೆಸರಿನಲ್ಲಿರಬೇಕು’ ಎನ್ನುತ್ತಾರೆ ಕೃಷಿ ಇಲಾಖೆ ಅಧಿಕಾರಿಗಳು.

ಜಿಲ್ಲೆಯಲ್ಲಿ 2023ರ ಜುಲೈನಿಂದಲೇ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪೌತಿ ಖಾತೆ ಆಂದೋಲನ ನಡೆಸುತ್ತಿದ್ದು, ಸುಮಾರು 62 ಸಾವಿರ ಖಾತೆಗಳನ್ನು ಮಾಡಿದ್ದೇವೆ

ಕುಮಾರ, ಜಿಲ್ಲಾಧಿಕಾರಿ, ಮಂಡ್ಯ

ಮರಣ ಪ್ರಮಾಣ ಪತ್ರ, ವಂಶವೃಕ್ಷ, ಪ್ರಸ್ತುತ ಆರ್‌ಟಿಸಿ ದಾಖಲೆಗಳನ್ನು ನಮೂನೆ 19ರ ಅರ್ಜಿಯೊಂದಿಗೆ ನಾಡ ಕಚೇರಿಗೆ ಸಲ್ಲಿಸಿದರೆ, 15 ದಿನಗಳಲ್ಲಿ ನೂತನ ಪಹಣಿ ಸಿಗುತ್ತದೆ

ಶಿವಮೂರ್ತಿ, ಉಪವಿಭಾಗಾಧಿಕಾರಿ ಮಂಡ್ಯ

ವಕ್ಫ್ ಹೆಸರು: ಪಹಣಿ ಸುಟ್ಟು ಆಕ್ರೋಶ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ವಕ್ಫ್ ಎಂದು ನಮೂದಾಗಿರುವ 20ಕ್ಕೂ ಹೆಚ್ಚು ಪಹಣಿಗಳನ್ನು ಮಂಡ್ಯ ರಕ್ಷಣಾ ವೇದಿಕೆ ಕಾರ್ಯಕರ್ತರು ಪಟ್ಟಣದಲ್ಲಿ ಶನಿವಾರ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿನ ಕುವೆಂಪು ವೃತ್ತದಲ್ಲಿ, ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಪ್ರತಿಭಟಿಸಿ, ವಕ್ಫ್ ಮಂಡಳಿ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು.

‘ಇನ್ನೊಂದು ತಿಂಗಳಲ್ಲಿ ಪಹಣಿಗಳಲ್ಲಿ ಬರುತ್ತಿರುವ ವಕ್ಫ್ ಹೆಸರು ತೆಗೆಯದಿದ್ದರೆ ರೈತರ ಜತೆಗೂಡಿ ಆಮರಣಾಂತ ಉಪವಾಸ ಕೂರುತ್ತೇವೆ’ ಎಂದು ವೇದಿಕೆಯ ಅಧ್ಯಕ್ಷ ಬಿ. ಶಂಕರಬಾಬು ಎಚ್ಚರಿಸಿದರು.

20ರಂದು ಶ್ರೀರಂಗಪಟ್ಟಣ ಬಂದ್: ಸಮಸ್ಯೆ ಪರಿಹಾರಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮೇಲೆ ಒತ್ತಡ ಹೇರುವ ಸಲುವಾಗಿ ಜ.20ರಂದು ಶ್ರೀರಂಗಟ್ಟಣ ಬಂದ್ ಮಾಡಲು ವಿವಿಧ ಸಂಘಟನೆಗಳ ಸಭೆಯಲ್ಲಿ ತೀರ್ಮಾನಿಸಲಾಯಿತು.

ಶ್ರೀರಂಗಪಟ್ಟಣದ ಕುವೆಂಪು ವೃತ್ತದಲ್ಲಿ ಮಂಡ್ಯ ರಕ್ಷಣಾ ವೇದಿಕೆ ಕಾರ್ಯಕರ್ತರು, ವಕ್ಫ್ ಎಂದು ನಮೂದಾಗಿರುವ ಕೃಷಿ ಜಮೀನುಗಳ ಪಹಣಿಗಳನ್ನು ಸುಟ್ಟು ಶನಿವಾರ ಪ್ರತಿಭಟನೆ ನಡೆಸಿದರು

ನನಗೆ ಯಾರ ಬೆಂಬಲವೂ ಬೇಡ: ಡಿಕೆಶಿ

ಒಂದನೇ ಪುಟದಿಂದ...

ಬೆಳಗಾವಿ ಅಧಿವೇಶನದಲ್ಲಿ ಮಾತನಾಡಿದ್ದ ಶಿವಕುಮಾರ್, ಅಧಿಕಾರವನ್ನು ಒದ್ದು ಕಿತ್ತುಕೊಳ್ಳಬೇಕು ಎಂದಿದ್ದು, ಚರ್ಚೆಗೆ ಬೇರೆಯದೇ ಆಯಾಮ ನೀಡಿತ್ತು. ಶಿವಕುಮಾರ್ ಅವರು ವಿದೇಶ ಪ್ರವಾಸದಲ್ಲಿದ್ದ ವೇಳೆ, ಪರಿಶಿಷ್ಟ ಹಾಗೂ ಹಿಂದುಳಿದ ವರ್ಗಗಳ ಸಚಿವರು ಸತೀಶ ಜಾರಕಿಹೊಳಿ ಮನೆಯಲ್ಲಿ ಭೋಜನಕೂಟ ನಡೆಸಿದ್ದರು. ಅದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಿದ್ದರು. ಗೃಹ ಸಚಿವ ಜಿ. ಪರಮೇಶ್ವರ ಅವರು ನಡೆಸಲು ಉದ್ದೇಶಿಸಿದ್ದ ಭೋಜನಕೂಟ ನಡೆಸದಂತೆ ಪಕ್ಷದ ರಾಜ್ಯ ಘಟಕದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸೂಚಿಸಿದ್ದರು. ಇದಕ್ಕೆ ಶಿವಕುಮಾರ್ ಒತ್ತಡ ಹೇರಿದ್ದೇ ಕಾರಣ ಎಂದು ಸಂಪುಟದ ಸಚಿವರೇ ಕಿಡಿಕಾರಿದ್ದರು.

ಈ ಬೆಳವಣಿಗೆಯ ಬೆನ್ನಲ್ಲೇ, ದೇವಸ್ಥಾನಗಳ ಭೇಟಿಗೆ ಶಿವಕುಮಾರ್ ಮುಂದಾಗಿದ್ದರು. ಇದೂ ನಾನಾ ರೀತಿಯ ಚರ್ಚೆಗೆ ಗ್ರಾಸ ಒದಗಿಸಿತ್ತು. ಇದಕ್ಕೆಲ್ಲ, ಪ್ರತಿಕ್ರಿಯೆ ನೀಡಿರುವ ಶಿವಕುಮಾರ್, ‘ಅಧಿಕಾರದ ಬಗ್ಗೆ ವ್ಯಾಮೋಹವೇ ಇಲ್ಲ’ ಎಂಬ ವೈರಾಗ್ಯ ಭಾವದಲ್ಲಿ ಮಾತನಾಡಿದರು.

‘ನಾನು ಧರ್ಮದ ಮೇಲೆ ನಂಬಿಕೆ ಇಟ್ಟುಕೊಂಡಿದ್ದೇನೆ. ನಿತ್ಯ ಪೂಜೆ ಮಾಡುವವನು. ನನ್ನ ಒಳಿತು, ರಾಜ್ಯದ ಒಳಿತು, ನನ್ನ ನಂಬಿದವರು ಹಾಗೂ ಸಮಾಜದ ಒಳಿತಿಗಾಗಿ ಪ್ರಾರ್ಥಿಸುತ್ತೇನೆ. ಟೆಂಪಲ್ ರನ್ ಎಂದು ವ್ಯಾಖ್ಯಾನ ಮಾಡುವುದಾದರೆ ನೀವೆಲ್ಲ ಸೇರಿ ದೇವಾಲಯಗಳನ್ನು ಮುಚ್ಚಿಬಿಡಿ. ಸರ್ಕಾರದಲ್ಲಿ ಮುಜರಾಯಿ ಇಲಾಖೆ, ವಕ್ಫ್ ಮಂಡಳಿ ಇರುವುದು ಏಕೆ’ ಎಂದು ಪ್ರಶ್ನಿಸಿದರು.

‘ಯಾರೂ ತಲೆಕೆಡಿಸಿಕೊಳ್ಳುವುದು ಬೇಡ. ನನಗೆ ಯಾವುದೇ ತಿರುವಿನ ಅಗತ್ಯವಿಲ್ಲ. ಜನ ಆಶೀರ್ವಾದ ಮಾಡಿ ನಮಗೊಂದು ಅವಕಾಶ ಕೊಟ್ಟಿದ್ದಾರೆ. ಐದು ವರ್ಷ ಸರ್ಕಾರ ಮಾಡುತ್ತೇವೆ. ಪಕ್ಷ ಹೇಳಿದಂತೆ ನಾನು ಹಾಗೂ ಮುಖ್ಯಮಂತ್ರಿ ಕೆಲಸ ಮಾಡುತ್ತೇವೆ. ಬೇರೆಯವರ ಮಾತುಗಳು ಗೌಣ’ ಎಂದು ಹೇಳಿದರು.

‘ಯಾವ ಪವರ್ ಇಲ್ಲ, ಶೇರು ಇಲ್ಲ’: ಪವರ್ ಶೇರಿಂಗ್ ಬಗ್ಗೆ ಚರ್ಚೆ ನಡೆಯುತ್ತಿರುವ ಬಗ್ಗೆ ಕೇಳಿದಾಗ ಪ್ರತಿಕ್ರಿಯಿಸಿದ ಶಿವಕುಮಾರ್, ‘ಯಾವ ಪವರ್ ಇಲ್ಲ, ಶೇರು ಇಲ್ಲ. ಐದು ವರ್ಷ ಕಾಂಗ್ರೆಸ್ ಸರ್ಕಾರ ಇರುತ್ತದೆ’ ಎಂದರು.

‘ಇದೇ ಅವಧಿಯಲ್ಲಿ ನೀವು ಮುಖ್ಯಮಂತ್ರಿ ಆಗುತ್ತೀರಿ’ ಎಂಬ ವಿನಯ್ ಗುರೂಜಿ ಹೇಳಿಕೆ ಬಗ್ಗೆ ಕೇಳಿದಾಗ, ‘ನಮ್ಮ ಸರ್ಕಾರ ಸುಭದ್ರವಾಗಿದ್ದು, ಯಾವುದೇ ಸ್ವಾಮೀಜಿಗಳು ನಮ್ಮ ಸರ್ಕಾರದ ಬಗ್ಗೆ ಭವಿಷ್ಯ ನುಡಿಯುವುದು ಬೇಡ ಎಂದು ಮನವಿ ಮಾಡುತ್ತೇನೆ. ಸಿದ್ದರಾಮಯ್ಯ ಅವರು ರಾಜ್ಯದ ಮುಖ್ಯಮಂತ್ರಿ. ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ’ ಎಂದು ತಿಳಿಸಿದರು.

ಶೃಂಗೇರಿ ಶಾರದಾ ಪೀಠದಲ್ಲಿ ನಡೆದ ‘ಸ್ತೋತ್ರ ತ್ರಿವೇಣಿ ಮಹಾ ಸಮರ್ಪಣೆ ಕಾರ್ಯಕ್ರಮ’ಕ್ಕೆ ಮಠದ ಗುರುಗಳಾದ ಭಾರತೀತೀರ್ಥ ಶ್ರೀಗಳು ಚಾಲನೆ ನೀಡಿದರು (ಎಡಚಿತ್ರ) ಶೃಂಗೇರಿ ಶಾರದಾ ಪೀಠದ ಭಾರತೀ ತೀರ್ಥ ಸ್ವಾಮೀಜಿ ಅವರ ಸನ್ಯಾಸ ಸ್ವೀಕಾರದ 50ನೇ ವರ್ಷಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು

ಶೃಂಗೇರಿ ಶಾರದಾ ಪೀಠದಲ್ಲಿ ಏಕ ಕಂಠದಲ್ಲಿ ಮೊಳಗಿದ ಸ್ತೋತ್ರ ಪಠಣ, ಎಲ್ಲೆಡೆ ಭಾರತೀತೀರ್ಥ ಸ್ವಾಮೀಜಿ ಅವರ ಗುಣಗಾನ...

‘ಸುವರ್ಣಭಾರತೀ’ಯಲ್ಲಿ ಸ್ತೋತ್ರ ತ್ರಿವೇಣಿ

ಪ್ರಜಾವಾಣಿ ವಾರ್ತೆ

ಶೃಂಗೇರಿ (ಚಿಕ್ಕಮಗಳೂರು): 36ನೇ ಗುರುಗಳಾದ ಭಾರತೀತೀರ್ಥ ಸ್ವಾಮೀಜಿ ಅವರ ಸನ್ಯಾಸ ಸ್ವೀಕಾರದ 50ನೇ ವರ್ಷಾಚರಣೆ ಕಾರ್ಯಕ್ರಮಕ್ಕೆ ಜನ ಸಾಗರವೇ ಹರಿದು ಬಂದಿತ್ತು. ಶೃಂಗೇರಿಯ ಇತಿಹಾಸದಲ್ಲೇ ಮೊದಲ ಬಾರಿಗೆ ಸುಮಾರು 50 ಸಾವಿರ ಜನ ಸೇರಿದ್ದರು. ‘ಸುವರ್ಣ ಭಾರತೀ’ ಹೆಸರಿನ ಕಾರ್ಯಕ್ರಮಕ್ಕೂ ನಿರೀಕ್ಷೆಗೂ ಮೀರಿ ಜನ ಸೇರಿದ್ದರು. ಎಲ್ಲರೂ ಸೇರಿ ಒಂದೇ ಬಾರಿಗೆ ಮೂರು ಸ್ತೋತ್ರಗಳನ್ನು ಪಠಣ ಮಾಡಿದರು.

ಬೃಹತ್ ವೇದಿಕೆ ನಿರ್ಮಾಣವಾಗಿತ್ತು. ಪಟ್ಟಣ ಮತ್ತು ಗುರು ಭವನಕ್ಕೆ ತೆರಳುವ ರಸ್ತೆಗಳಲ್ಲಿ ತಳಿರು ತೋರಣಗಳಿಂದ ಸಿಂಗಾರಗೊಂಡಿದ್ದವು.

ಭಾರತೀ ತೀರ್ಥ ಸ್ವಾಮೀಜಿ ಹಾಗೂ ವಿಧುಶೇಖರ ಭಾರತೀ ಸ್ವಾಮೀಜಿಗಳು ಹಾಗೂ ವಿವಿಧ ಪೀಠಾಧಿಪತಿಗಳನ್ನು ವಾದ್ಯಗೋಷ್ಠಿ, ಛತ್ರಿ, ಚಾಮರ, ಆನೆ, ಅಶ್ವದ ಮೆರವಣಿಗೆಯೊಂದಿಗೆ ವೇದಿಕೆಗೆ ಕರೆತರಲಾಯಿತು.

ಭಾರತೀತೀರ್ಥ ಸ್ವಾಮೀಜಿ ಅವರು ಶಂಕರಚಾರ್ಯ ವಿರಚಿತ ಶಿವ ಪಂಚಾಕ್ಷರಿ ಸ್ತೋತ್ರವನ್ನು ಭಕ್ತರಿಗೆ ಹೇಳುವ ಮೂಲಕ ಚಾಲನೆ ನೀಡಿದರು. ವಿಧುಶೇಖರ ಭಾರತೀ ಸ್ವಾಮೀಜಿ ಕಲ್ಯಾಣವೃಷ್ಟಿಸ್ತವ ಮತ್ತು ಲಕ್ಷ್ಮೀನರಸಿಂಹ ಕರಾವಲಂಭ ಸ್ತೋತ್ರ ಹೇಳಿಕೊಡುವ ಮೂಲಕ ಸ್ತೋತ್ರ ಪಾರಾಯಣಕ್ಕೆ ಚಾಲನೆ ನೀಡಿದರು.

ಕೋಟಿ ಹರಿಹರ ನಾಮಮೃತ ಲೇಖನ ಯಜ್ಞವನ್ನು ಆಗಮಿಸಿದ್ದ ಸ್ವಾಮೀಜಿಗಳು ಹಾಗೂ ಭಕ್ತಾದಿಗಳು, ವಿದ್ಯಾರ್ಥಿಗಳು 108 ಬಾರಿ ಬರೆಯುವ ಮೂಲಕ ಯಜ್ಞದಲ್ಲಿ ಪಾಲ್ಗೊಂಡರು.

ಶಾರದಾ ಪೀಠದ ಗುರು ವಿಧುಶೇಖರ ಭಾರತೀ ಸ್ವಾಮೀಜಿ, ‘ಸ್ತೋತ್ರ ಎಂದರೆ ಭಗವಂತನ ಜೊತೆ ಮಾತನಾಡುವ ಮಾತು. ಸ್ತೋತ್ರವನ್ನು ಪಠಿಸುವುದರಿಂದ 3 ನದಿಗಳಲ್ಲಿ ಸ್ನಾನ ಮಾಡಿ, ಪುಣ್ಯ ಮಾಡಿದ ಹಾಗೆ. ಭಗವಂತನನ್ನು ಆಶ್ರಯಿಸಿದವರಿಗೆ ಅನುಗ್ರಹ ಮಾಡುತ್ತಾರೆ’ ಎಂದು ಹೇಳಿದರು.

ಆದಿ ಶಂಕರಾಚಾರ್ಯರು ದ್ವೈತವಲ್ಲದ ಅಸ್ತಿತ್ವದ ಏಕತೆಯ ಕಾಲಾತೀತ ಸತ್ಯವನ್ನು ಬೋಧಿಸಿದರು. ಅವರ ಪ್ರಕಾರ ಅಂತಿಮ ವಾಸ್ತವವೆಂದರೆ ಬ್ರಹ್ಮ, ಶಾಶ್ವತ, ಅನಂತ ಮತ್ತು ನಿರಾಕಾರ ಪ್ರಜ್ಞೆ ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಮಾತನಾಡಿ, ‘ನಾವು ನಮ್ಮ ಮನೆಗಳನ್ನು ಕಾಪಾಡಿಕೊಳ್ಳುವಂತೆ, ನಮ್ಮ ಮಠಗಳನ್ನು ಕಾಪಡಿಕೊಳ್ಳಬೇಕು. ಧರ್ಮ ಕಾಪಾಡುವ ಮಠಕ್ಕೆ ನಮ್ಮ ಕೈಲಾದ ನೆರವು ನೀಡಬೇಕು. ಇದು ನಮ್ಮೆಲ್ಲರ ಕರ್ತವ್ಯ’ ಎಂದರು.

ಕಾರ್ಯಕ್ರಮದಲ್ಲಿ ಪುರುಷೋತ್ತಮ ಭಾರತೀ ಸ್ವಾಮೀಜಿ, ಬ್ರಹ್ಮಾನಂದ ಭಾರತೀ ಸ್ವಾಮೀಜಿ, ಪರಮಾನಂದ ಮಹಾರಾಜ ಸ್ವಾಮೀಜಿ, ವೀರೇಶಾನಂದ ಸರಸ್ವತಿ ಸ್ವಾಮೀಜಿ, ಮಾಧವಾನಂದ ಭಾರತೀ ಸ್ವಾಮೀಜಿ, ಸಚ್ಚಿದಾನಂದ ಭಾರತೀ ಸ್ವಾಮೀಜಿ, ವೀರೇಶಾನಂದ ಸರಸ್ವತಿ ಸ್ವಾಮೀಜಿ, ವಾಮನಾಶ್ರಮ ಸ್ವಾಮೀಜಿ, ಕಾಳಹಸ್ತೇಂದ್ರ ಸರಸ್ವತಿ ಸ್ವಾಮೀಜಿ, ಶಾಸಕರಾದ ಟಿ.ಡಿ.ರಾಜೇಗೌಡ, ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ, ಭದ್ರಾ ಕಾಡಾ ಅಧ್ಯಕ್ಷ ಡಾ.ಕೆ.ಪಿ ಅಂಶುಮಂತ್ ಭಾಗವಹಿಸಿದ್ದರು.

ಸಿ.ಟಿ.ರವಿಗೆ ಬೆದರಿಕೆ ಪತ್ರ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರಿಗೆ ಬೆದರಿಕೆ ಹಾಕಿರುವ ಅನಾಮಿಕ ಪತ್ರವೊಂದು ಅವರ ಕಚೇರಿಗೆ ಬಂದಿದೆ.

‘ರವಿ, ಬೆಳಗಾವಿಯಿಂದ ಚಿಕ್ಕಮಗ ಳೂರಿಗೆ ನಿನ್ನನ್ನು ಹುಡುಕಿಕೊಂಡು ಬಂದೀವಿ. ಚುನೇತಿ (ಸವಾಲು) ಏನೆಂದರೆ 15 ದಿವಸದ ಒಳಗೆ ನಮ್ಮ ಬೆಳಗಾವಿ ಅಭಿನೇತಿ ಅವರ ಕಾಲನ್ನು ಹಿಡಿದು ಕ್ಷಮೆ ಕೇಳಬೇಕು. ಇಲ್ಲದಿದ್ದಲ್ಲಿ ನಿನ್ನ ಗತಿ ಏನಾಗುತ್ತೆ ಎಂದರೆ ನಿನ್ನ ಮನೆಗೆ ನುಗ್ಗಿ ನಿನ್ನ ಕೈ ಮತ್ತು ಪಾದ ಮುರಿಯುವುದು ಖಂಡಿತ, ಹುಷಾರ್. ನೀನು ಯಾವ ಪಾತಾಳದಲ್ಲಿ ಇದ್ದರೂ ಬಿಡುವುದಿಲ್ಲ. ಹುಷಾರ್, ಹುಷಾರ್, ಹುಷಾರ್. ನಿನ್ನ ಮಗನ ಜೀವಕ್ಕೂ ಅಪಾಯವಿದೆ’ ಎಂದು ಪತ್ರದಲ್ಲಿ ಬರೆದಿದ್ದಾರೆ. ‘ನನ್ನ ಕಚೇರಿಗೆ ಪತ್ರ ಬಂದಿದೆ. ನಾನು ಊರಿನಲ್ಲಿ ಇರಲಿಲ್ಲ. ಆದ್ದರಿಂದ ಕಚೇರಿ ಸಿಬ್ಬಂದಿ ಪೊಲೀಸರಿಗೆ ದೂರು ನೀಡಿದ್ದಾರೆ’ ಎಂದು ಸಿ.ಟಿ.ರವಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜತೆ ದೂರವಾಣಿಯಲ್ಲಿ ಮಾತನಾಡಿದ್ದೇನೆ. ಪತ್ರ ಎಲ್ಲಿಂದ ಬಂದಿದೆ ಎಂಬುದರ ಕುರಿತು ಸೈಬರ್ ವಿಭಾಗದ ಮೂಲಕ ತನಿಖೆ ನಡೆಸುವುದಾಗಿ ಅವರು ತಿಳಿಸಿದ್ದಾರೆ’ ಎಂದು ಹೇಳಿದರು.

ಜನಪ್ರತಿನಿಧಿಗಳಿಗೆ ರಕ್ಷಣೆ ಇಲ್ಲ (ಬೆಂಗಳೂರು ವರದಿ): ವಿಧಾನಪರಿಷತ್ ಬಿಜೆಪಿ ಸದಸ್ಯ ಸಿ.ಟಿ. ರವಿ ಅವರಿಗೆ ಬೆದರಿಕೆ ಪತ್ರ ಬಂದಿದ್ದು, ಕಾಂಗ್ರೆಸ್ ಸರ್ಕಾರದಲ್ಲಿ ಜನಪ್ರತಿನಿಧಿಗಳಿಗೆ ರಕ್ಷಣೆ ಇಲ್ಲವಾಗಿದೆ ಎಂದು ಬಿಜೆಪಿ ರಾಜ್ಯಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.



ಅನಾಮಿಕ ಬೆದರಿಕೆ ಪತ್ರ

ಈ ಕುರಿತು ‘ಎಕ್ಸ್’ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಬೆಳಗಾವಿಯ ಸುವರ್ಣ ಸೌಧದಲ್ಲಿ ರವಿ ಅವರ ಮೇಲೆ ಪ್ರಜಾಪ್ರಭುತ್ವ-ವನ್ನು ನಾಚಿಸುವ ರೀತಿ ದೌರ್ಜನ್ಯ ನಡೆಯಿತು. ನಂತರವೂ ಅವರ ವಿರುದ್ಧ ನಿರಂತರ ಬೆದರಿಕೆ ಒಡ್ಡಲಾಗುತ್ತಿದೆ. ದುಷ್ಕರ್ಮಿಗಳು ಅವರ ವಿರುದ್ಧ ವ್ಯೂಹ ರಚಿಸಿರುವ ಸಾಧ್ಯತೆ ಇದೆ. ಅವರಿಗೆ ಬೆದರಿಕೆ ಒಡ್ಡುತ್ತಿರುವವರು ಯಾರು ಎನ್ನುವುದು ಪೊಲೀಸರಿಗೆ ತಿಳಿದಿದೆ.

ಆದರೂ, ಕ್ರಮ ಕೈಗೊಳ್ಳುತ್ತಿಲ್ಲ. ಕಾರಣ ದುಷ್ಟಶಕ್ತಿ-ಗಳು ಕಾಂಗ್ರೆಸ್‌ನ ಭಾಗವಾಗಿದ್ದಾರೆ. ಸರ್ಕಾರದಿಂದ ಅವರಿಗೆ ರಕ್ಷಣೆ ಸಿಗುವುದು ಅನುಮಾನವಾಗಿದೆ. ರವಿ ಅವರಿಗೆ ವಿಶೇಷ ಭದ್ರತೆ ಒದಗಿಸಬೇಕು. ಶಾಸಕರು, ಬಿಜೆಪಿ ಕಾರ್ಯಕರ್ತರ ಮೇಲೆ ಇಂತಹ ಬೆದರಿಕೆ, ದೌರ್ಜನ್ಯಗಳು ಮುಂದುವರಿದರೆ ಬಿಜೆಪಿ ಹೋರಾಟ ನಡೆಸಲಿದೆ ಎಂದು ಹೇಳಿದ್ದಾರೆ.

ಡ್ರಾಮಾ ಮಾಸ್ಟರ್: ಡಿ.ಕೆ ಶಿವಕುಮಾರ್



ಸಿ.ಟಿ ರವಿ ಅವರ ಆರೋಪಕ್ಕೆ ಸಂಬಂಧಿಸಿದಂತೆ ಶೃಂಗೇರಿಯಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ‘ಸಿ.ಟಿ.ರವಿ ಅವರನ್ನು ನಾನು ರಾಷ್ಟ್ರೀಯ ನಾಯಕ ಎಂದು ತಿಳಿದುಕೊಂಡಿದ್ದೆ. ಆದರೆ, ಅವರು ದೊಡ್ಡ ಡ್ರಾಮಾ ಮಾಸ್ಟರ್ ಆಗಿದ್ದಾರೆ’ ಎಂದು ಲೇವಡಿ ಮಾಡಿದರು.

‘ಅವರ ಮಾತು– ವಿಚಾರ ನೋಡಿದರೆ ಈ ಮಟ್ಟಕ್ಕೆ ಇಳಿಯುತ್ತಾರೆ ಎಂದು ಭಾವಿಸಿರಲಿಲ್ಲ. ಬೇರೆ ಯಾರು ಒಪ್ಪುವುದು ಬೇಡ, ಆತ್ಮಸಾಕ್ಷಿ ಹೇಳಿದರೆ ಸಾಕು. ರವಿ ಹೀಗೆ ಮಾತನಾಡಬಾರದಿತ್ತು ಎಂದು ಬಿಜೆಪಿಯ ನೂರು ನಾಯಕರೇ ನನಗೆ ಹೇಳಿದ್ದಾರೆ’ ಎಂದು ತಿಳಿಸಿದರು. ‘ಕ್ಷಮೆ ಕೇಳುತ್ತೇನೆ ಎಂದು ಹೇಳಿದ್ದರೆ ಮುಗಿದು ಹೋಗುತ್ತಿತ್ತು. ಸುಳ್ಳಿಗೆ ಸುಳ್ಳು ಹೇಳಿಕೊಂಡು ಹೋಗುತ್ತಿದ್ದರೆ ಕೊನೆ ಇಲ್ಲ. ಅವರ ಬಳಿ ತನಿಖೆ ತಂಡ ಇದೆಯಲ್ಲ, ತನಿಖೆ ಮಾಡಿಸಿಕೊಳ್ಳಲಿ’ ಎಂದರು.

ಶರಣಾಗತಿ ಅನುಮಾನಾಸ್ಪದ: ಪ್ರಲ್ಹಾದ ಜೋಶಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ನಕ್ಸಲರ ಶರಣಾಗತಿಗೆ ನನ್ನ ವಿರೋಧವಿಲ್ಲ. ಆದರೆ, ರಾಜ್ಯದಲ್ಲಿ ನಕ್ಸಲರ ಶರಣಾಗತಿ ತರಾತುರಿಯಿಂದ ನಡೆಯಿತು ಎಂಬ ಭಾವನೆ ಹಲವ-ರಲ್ಲಿದ್ದು, ಪ್ರಶ್ನೆಗಳಿಗೆ ಹುಟ್ಟುಹಾಕಿದೆ. ಶರಣಾದ ನಕ್ಸಲರು ಎಷ್ಟು ಶಸ್ತ್ರಾಸ್ತ್ರ ಒಪ್ಪಿಸಿದ್ದಾರೆ ಎಂಬ ಮಾಹಿತಿಯನ್ನು ಜನರಿಗೆ ಮುಖ್ಯಮಂತ್ರಿ ನೀಡಲಿ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

‘ಶರಣಾದ ನಕ್ಸಲರಿಗೆ ನೀಡಲಾಗುವ ಪುನರ್‌ವಸತಿ ಪ್ಯಾಕೇಜ್ ಬಗ್ಗೆ ನನಗೆ ಯಾವುದೇ ತಕರಾರು ಇಲ್ಲ

ಪ್ರಲ್ಹಾದ ಜೋಶಿ

ಬೇರೆ ಬೇರೆ ರಾಜ್ಯಗಳಲ್ಲಿ ನಕ್ಸಲರು ಶರಣಾಗಲು ಸಾಕಷ್ಟು ಕಾಲಾವಕಾಶ ಪಡೆಯುತ್ತಾರೆ. ಹಲವು ಸುತ್ತಿನ ಮಾತುಕತೆ ನಡೆಯುತ್ತವೆ. ಆದರೆ, ಇಲ್ಲಿ ಮುಖ್ಯಮಂತ್ರಿ ಅವರು ಶರಣಾಗುವಂತೆ ಪ್ರಕಟಿಸಿದ ಒಂದು ವಾರದಲ್ಲಿ ನಕ್ಸಲರು ಬಂದು ಶರಣಾಗಿ, ಎಲ್ಲವೂ ಮುಗಿಯುತ್ತದೆ ಎಂದರೆ ಸಂಶಯ ಮೂಡುತ್ತದೆ’ ಎಂದರು.

ನಕ್ಸಲರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಮುಖ್ಯವಾಹಿನಿಗೆ ಬಂದರೆ ಅವರನ್ನು ಸ್ವೀಕರಿಸುವುದು ತಪ್ಪಲ್ಲ. ಸರ್ಕಾರವೇ ನಕ್ಸಲರಿಗೆ ಶರಣಾದಂತಹ ನೀತಿಯಿಂದ ಇನ್ನುಮುಂದೆ ನಕ್ಸಲರು ಹೆಚ್ಚಾಗುವ ಆತಂಕವೂ ಕಾಡುತ್ತಿದೆ.

ಕೋಟ ಶ್ರೀನಿವಾಸ ಪೂಜಾರಿ, ಸಂಸದ

ಶರಣಾಗತಿ ಪ್ರಕ್ರಿಯೆ ಸಂಶಯಾಸ್ಪದ: ಅಣ್ಣಾಮಲೈ

ಮಂಗಳೂರು/ಉಡುಪಿ: ‘ರಾಜ್ಯದಲ್ಲಿ ಆರು ಮಂದಿ ನಕ್ಸಲರ ಶರಣಾಗತಿ ಪ್ರಕ್ರಿಯೆ ಹಾಗೂ ನಕ್ಸಲ್ ವಿಕ್ರಂ ಗೌಡ ಎನ್‌ಕೌಂಟರ್ ಸಂಶಯಾಸ್ಪದ ವಾಗಿದೆ. ಶರಣಾಗತಿ ಬಗ್ಗೆ ರಾಜ್ಯದ ಗೃಹ ಸಚಿವರಿಗೇ ಮಾಹಿತಿ ಕೊರತೆ ಇದ್ದಂತಿದೆ. ಅವರೇ ಈ ಬಗ್ಗೆ ಉಲ್ಟಾ ಪಲ್ಟಾ ಹೇಳಿಕೆ ನೀಡಿದ್ದಾರೆ’ ಎಂದು ಬಿಜೆಪಿಯ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ಅಣ್ಣಾಮಲೈ ಟೀಕಿಸಿದರು.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ‘ರಾಜ್ಯದಲ್ಲಿ ಈ ಹಿಂದೆ ನಾನು ಚಿಕ್ಕಮಗಳೂರು ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಯಾಗಿದ್ದಾಗ ನಕ್ಸಲರ ಶರಣಾಗತಿ ಪ್ರಕ್ರಿಯೆಯ ಭಾಗವಾಗಿದ್ದೆ. ನಿಯಮ ಪ್ರಕಾರ ಜಿಲ್ಲಾಧಿಕಾರಿ ಮತ್ತು ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಸಮ್ಮುಖದಲ್ಲಿ ನಕ್ಸಲರು ಶರಣಾಗಬೇಕು. ನಂತರ ಅವರು ಗೃಹ ಸಚಿವರು ಮತ್ತು ಮುಖ್ಯಮಂತ್ರಿ ಎದುರು ಹಾಜರಾಗುತ್ತಾರೆ. ಇಲ್ಲಿ ರಾಜಕೀಯ ಲಾಭಕ್ಕಾಗಿ ನಕ್ಸಲರ ಶರಣಾಗತಿ ಪ್ರಕ್ರಿಯೆ ನಡೆಸಿದಂತಿದೆ. ಇಡೀ ಶರಣಾಗತಿ ಪ್ರಕ್ರಿಯೆ ಸರಿಯಾಗಿ ನಡೆದಿಲ್ಲ’ ಎಂದರು.

‘ಈ ಪ್ರಕ್ರಿಯೆಯಲ್ಲಿ ನಕ್ಸಲ್ ಬೆಂಬಲಿಗರು ಸರ್ಕಾರದ ಮೇಲೆ ಪ್ರಭಾವ ಬೀರಿದ್ದಾರೆ. ಶರಣಾದ ನಕ್ಸಲರು ನಾಗರಿಕ ಸಮಾಜದ ಮೇಲೆ ಪ್ರಭಾವ ಬೀರುವ ಅಪಾಯವಿದೆ’ ಎಂದರು.

‘ಮುಖ್ಯವಾಹಿನಿಗೆ ಬಂದವರಿಗೆ ಜಾಮೀನು ಸಿಗುವಂತೆ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕ್ಸಲರನ್ನು ಮುಖ್ಯ ವಾಹಿನಿಗೆ ಬರಮಾಡಿಕೊಂಡಿರುವುದು ಮೊದಲ ಹೆಜ್ಜೆ. ಅವರನ್ನು ಕಾಡಿನಿಂದ ತಂದು ಜೈಲಲ್ಲಿ ಕೊಳೆಯುವಂತೆ ಮಾಡುವ ಪಾಪವನ್ನು ಸರ್ಕಾರ ಮಾಡಬಾರದು. ಜಾಮೀನು ಸಿಗುವಂತೆ ಮಾಡಿ, ವಿಚಾರಣೆ ಮುಂದುವರಿಸಬೇಕು ಎಂದು ಶಾಂತಿಗಾಗಿ ನಾಗರಿಕ ವೇದಿಕೆ ಆಗ್ರಹಿಸಿದೆ.

ವೇದಿಕೆಯ ತಾರಾ ರಾವ್, ನಗರಗೆರೆ ರಮೇಶ್, ನೂರ್ ಶ್ರೀಧರ್, ಬಿ.ಟಿ. ಲಲಿತಾ ನಾಯಕ್, ಎನ್. ವೆಂಕಟೇಶ್ ಅವರು ಶನಿವಾರ ನಡೆಸಿದ ಸುದ್ದಿಗೋಷ್ಠಿ ಯಲ್ಲಿ ಈ ಬಗ್ಗೆ ಒತ್ತಾಯಿಸಿದರು.

ಲತಾ ವಿರುದ್ಧವೇ 84 ಪ್ರಕರಣಗಳಿವೆ. ಕರ್ನಾಟಕ ಮಾತ್ರವಲ್ಲ, ಕೇರಳ, ತಮಿಳುನಾಡಿನಲ್ಲೂ ದಾಖಲಾಗಿರುವ ಪ್ರಕರಣ ಗಳನ್ನು ಆ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಚರ್ಚಿಸಿ ಇತ್ಯರ್ಥ ಗೊಳಿಸಬೇಕು ಎಂದರು. ಪ್ರಜಾತಾಂತ್ರಿಕ ಮುಖ್ಯವಾಹಿನಿಗೆ ಬಂದ ಆರು ನಕ್ಸಲರಿಗೆ ಜಾಮೀನು ಸಿಕ್ಕಿದರೆ ಅರ್ಧ ಸಮಸ್ಯೆ ಇತ್ಯರ್ಥವಾದಂತೆ. ಅವರಿಗೆ ಕಾನೂನಿನ ನೆರವು ನೀಡಬೇಕು. ಅವರು ಮುಂದಿಟ್ಟಿರುವ 18 ಹಕ್ಕೊತ್ತಾಯಗಳ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. 7–8 ವರ್ಷಗಳಿಂದ ಜೈಲಿನಲ್ಲೇ ನರಳುತ್ತಿರುವ ಕನ್ಯಾಕುಮಾರಿ ಮತ್ತು ಇತರರ ಮೇಲಿನ ಮೊಕದ್ದಮೆಗಳನ್ನು ಶೀಘ್ರ ಇತ್ಯರ್ಥಗೊಳಿಸಬೇಕು. ವಿಕ್ರಂ ಗೌಡ ಹತ್ಯೆ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ ಸಮಾಜಕ್ಕೆ ಸತ್ಯ ತಿಳಿಸಬೇಕು ಎಂದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿಯೇ ಇರಲಿ: ಮುಖ್ಯಮಂತ್ರಿ, ಆಡಳಿತ ಬದಲಾದರೆ, ನಕ್ಸಲ್‌ಗೆ ಸಂಬಂಧಿಸಿ ಈಗ ನಡೆಯುತ್ತಿರುವ ಪ್ರಕ್ರಿಯೆ ನನೆಗುದಿಗೆ ಬೀಳುತ್ತವೆ. ಇಂಥ ಪ್ರಕರಣ ಇತ್ಯರ್ಥ ವಾಗುವವರೆಗೆ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯಬೇಕು ಎಂದು ವೇದಿಕೆಯ ಸದಸ್ಯರು ಅಭಿಪ್ರಾಯಪಟ್ಟರು.

‘ಏಕೈಕ ನಕ್ಸಲ್ ಶೀಘ್ರ ಮುಖ್ಯವಾಹಿನಿಗೆ’

ಕರ್ನಾಟಕ, ಕೇರಳ, ತಮಿಳು ನಾಡು ರಾಜ್ಯಗಳಲ್ಲಿ ಶಸ್ತ್ರಾಸ್ತ್ರ ಹಿಡಿದು ಮಾಡುವ ಹೋರಾಟ ಕೊನೆಗೊಂಡಿದೆ. ಈ ಭಾಗದಲ್ಲಿ ನಕ್ಸಲ್ ಚಳವಳಿಯಲ್ಲಿ ಉಳಿದಿರುವ ಒಬ್ಬರು ಶೀಘ್ರದಲ್ಲಿ ಮುಖ್ಯ ವಾಹಿನಿಗೆ ಬರಲಿದ್ದಾರೆ ಎಂದು ರವೀಂದ್ರ ಬಗ್ಗೆ ನೂರ್ ಶ್ರೀಧರ್ ವಿಶ್ವಾಸ ವ್ಯಕ್ತಪಡಿಸಿದರು.

ಮುಖ್ಯವಾಹಿನಿಗೆ ಕರೆತರುವ ಪ್ರಯತ್ನದ ಭಾಗವಾಗಿ ನಕ್ಸಲರನ್ನು ಸಂಪರ್ಕಿಸುವ ಪ್ರಯತ್ನದಲ್ಲಿ-ದ್ದಾಗ ಆರು ಮಂದಿಗೆ ಆದಿವಾಸಿ ಮಹಿಳೆಯೊಬ್ಬರ ಮೂಲಕ ಈ ವಿಚಾರ ಮುಟ್ಟಿತ್ತು. ಒಬ್ಬರು ಸಂಪರ್ಕ ತಪ್ಪಿ ಹೋಗಿದ್ದರು. ಒಮ್ಮೆ ಸಂಪರ್ಕ ತಪ್ಪಿದರೆ ಮತ್ತೆ ಅವರು ಸಿಗಲು ಒಂದು ವಾರ ಬೇಕಾಗುತ್ತದೆ. ಜೊತೆಗೆ ಆರು ಮಂದಿಯನ್ನು ಕರೆತರುವ ಪ್ರಕ್ರಿಯೆ ವೇಗವಾಗಿ ನಡೆಯುತ್ತಿದ್ದ ಕಾರಣ ಅವರೊಬ್ಬರು ಹಿಂದೆ ಉಳಿದರು ಎಂದು ವಿವರಿಸಿದರು.

ಶರಣಾಗತಿಗೆ ನಿರಾಕರಿಸಿದ್ದನೇ ವಿಕ್ರಂ ಗೌಡ?

ಉಡುಪಿ: ಎನ್‌ಕೌಂಟರ್‌ನಲ್ಲಿ ಹತ್ಯೆಯಾಗಿರುವ ನಕ್ಸಲ್ ನಾಯಕ ವಿಕ್ರಂ ಗೌಡನದ್ದೆಂದು ಹೇಳಲಾದ ಆಡಿಯೊವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಕಳೆದ ನವೆಂಬರ್ 19ರಂದು ಹೆಬ್ರಿಯ ಪೀತುಬೈಲ್‌ನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ವಿಕ್ರಂ ಗೌಡನ ಹತ್ಯೆಯಾಗಿದ್ದು, ಈ ಆಡಿಯೊ ಅದಕ್ಕೂ ಕೆಲ ತಿಂಗಳ ಹಿಂದಿನದ್ದು ಎನ್ನಲಾಗುತ್ತಿದೆ. ‘ನಾವು ಯಾವುದೇ ರಾಜಿಗೆ ಹೋಗಲ್ಲ. ಹೋಗ್ತೀವಿ ಅಂದ್ರೆ ದ್ರೋಹ ಮಾಡ್ತೀವಿ ಅಂತ ಅರ್ಥ. ನಮ್ಮನ್ನು ಮಾತುಕತೆಗೆ ಬನ್ನಿ ಅಂತಾ ಯಾಕೆ ಕರೀತಿದ್ದಾರೆ. ಲಕ್ಷಗಟ್ಟಲೆ, ಕೋಟಿಗಟ್ಟಲೆ ಕೊಡ್ತೀವಿ ಅಂತ ಹೇಳ್ತಿದ್ದಾರೆ. ಆದ್ರೆ ನಾವು ಒಪ್ಪುವುದಿಲ್ಲ’ ಎಂಬ ಮಾತು ಆಡಿಯೊದಲ್ಲಿದೆ. ‘ಆಡಿಯೊದ ಅಧಿಕೃತತೆಯ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ’ ಎಂದು ನಕ್ಸಲ್ ನಿಗ್ರಹ ಪಡೆಯ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ದಯಾಮ್ ತಿಳಿಸಿದರು.

ನಕ್ಸಲರು ಹೊರಬಂದಿದ್ದ ಕಾಡಿನಲ್ಲಿ ಶಸ್ತ್ರಾಸ್ತ್ರ ವಶ

ಒಂದನೇ ಪುಟದಿಂದ...

ಬುಧವಾರ ಮುಖ್ಯವಾಹಿನಿಗೆ ಬಂದನಕ್ಸಲರು, ಅದೇ ಕಾಡಿನಿಂದ ಹೊರ ಬಂದಿದ್ದರು. ವಶಪಡಿಸಿಕೊಂಡಿರುವಕೆಲವು ಬಂದೂಕುಗಳಲ್ಲಿ ಮಾವೋವಾದಿ ಪಕ್ಷದ ಚಿಹ್ನೆ ಕೆತ್ತಲಾಗಿದೆ. ಕೆಲವು ಬಂದೂಕುಗಳು ತುಕ್ಕು ಹಿಡಿದ ಸ್ಥಿತಿಯಲ್ಲಿವೆ. ‘ಕೆಲವು ಹಳೆಯ ಬಂದೂಕುಗಳು, ಕೆಲವು ಬಳಕೆಯಲ್ಲಿವೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಆದರೆ, ಇವು ಶರಣಾದ ನಕ್ಸಲರಿಗೆ ಸೇರಿದವುಗಳೇ ಎಂಬ ಬಗ್ಗೆ ಪೊಲೀಸರು ಯಾವುದೇ ಮಾಹಿತಿ ನೀಡಿಲ್ಲ.

ನಕ್ಸಲರ ಶರಣಾಗತಿ ಕುರಿತು ಪ್ರತಿಕ್ರಿಯಿಸಿದ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ‘ನಕ್ಸಲರು ಎಲ್ಲಿ ಕಾರ್ಯಾ ಚರಣೆ ಮಾಡುತ್ತಿದ್ದರು, ಹಣ ಮತ್ತು ಬಂದೂಕುಗಳು ಎಲ್ಲಿಂದ ಬಂದವು, ಯಾವ ವ್ಯಕ್ತಿ ಹಾಗೂ ಸಂಘಟನೆಯಿಂದ ಸಹಾಯ ಸಿಗುತ್ತಿತ್ತು ಎಂಬ ಮಾಹಿತಿ ಹಂಚಿಕೊಂಡರೆ ಶರಣಾಗತಿಗೆ ಅರ್ಥ ಬರುತ್ತದೆ’ ಎಂದರು.

‘ವಿಜಯಪುರದಲ್ಲಿ ಸಾಬೂನು ಘಟಕ ಶೀಘ್ರ’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ (ಕೆಎಸ್‌ಡಿಎಲ್) ಸಂಸ್ಥೆಯು ವಿಜಯಪುರದ ಇಟ್ಟಂಗಿಹಾಳ ರಸ್ತೆ ಬದಿಯ 10 ಎಕರೆ ಪ್ರದೇಶದಲ್ಲಿ ಶೀಘ್ರವೇ ಮೈಸೂರು ಸ್ಯಾಂಡಲ್ ಸೋಪು ಉತ್ಪಾದನಾ ಘಟಕ ಸ್ಥಾಪಿಸಲಿದೆ’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ. ಬಿ.ಪಾಟೀಲ ಹೇಳಿದರು.

ನಗರದ ಸಿದ್ದೇಶ್ವರ ದೇವಾಲಯದ ಆವರಣದಲ್ಲಿ ಶನಿವಾರ ‘ಮೈಸೂರು ಸ್ಯಾಂಡಲ್ ಸಾಬೂನು ಮೇಳ’ ಉದ್ಘಾಟಿಸಿ ಮಾತನಾಡಿದ ಅವರು, ‘ಘಟಕ ಆರಂಭದಿಂದ 400ಕ್ಕೂ ಹೆಚ್ಚಿನ ಜನರಿಗೆ ಉದ್ಯೋಗ ಸಿಗಲಿದೆ. ಉತ್ತರ ಕರ್ನಾಟಕದ ಜನರಿಗೆ ಅಲ್ಲದೇ ಮಹಾರಾಷ್ಟ್ರದವರಿಗೂ ಗುಣಮಟ್ಟದ ಸಾಬೂನು, ಇತರೆ ಉತ್ಪನ್ನ ಲಭ್ಯವಾಗಲಿದೆ’ ಎಂದರು.

ಎಂ. ಬಿ.ಪಾಟೀಲ

‘ಕೆಲ ತಿಂಗಳ ಹಿಂದೆ ನಷ್ಟದಲ್ಲಿದ್ದ ಕೆಸ್‌ಡಿಎಲ್ ಸಂಸ್ಥೆಯಲ್ಲಿ ಅಕ್ರಮ ವ್ಯಾಪಕ-ವಾಗಿತ್ತು. ನಮ್ಮ ಸರ್ಕಾರದ ದಿಟ್ಟ ಕ್ರಮದಿಂದ ಸಂಸ್ಥೆ ಈಗ ದಾಖಲೆಯ ಲಾಭಗಳಿಸಿದೆ. ಉತ್ಪಾದನೆ, ಮಾರಾಟ, ಲಾಭಗಳಿಕೆ ಎಲ್ಲವೂ ಹೆಚ್ಚಿದೆ. ಹೊಸ ಬಗೆಯ ಉತ್ಪನ್ನಗಳನ್ನು ಪರಿಚಯಿಸಲಾಗಿದೆ’ ಎಂದರು.



ಮಲ್ಲಕಂಬ

ಹೊಸಪೇಟೆಯಲ್ಲಿ ಶನಿವಾರ ಸೇವಿಯರ್ ಅಂಗವಿಕಲ ಸೇವಾ ಸಮಿತಿಯಿಂದ ನಡೆದ ವಾಕಥಾನ್ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಜ್ಞಾನಸಿಂಧು ವಸತಿ ಶಾಲೆಯ ಅಂಧ ವಿದ್ಯಾರ್ಥಿಗಳು ಮಲ್ಲಕಂಬ ಪ್ರದರ್ಶಿಸಿದರು
– ಪ್ರಜಾವಾಣಿ ಚಿತ್ರ/ ಲವ ಕೆ.

ಮಗಳಿಗೆ ಮಿದುಳು ರಕ್ತಸ್ರಾವ; ದಯಾಮರಣ ಕೋರಿದ ತಂದೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ವೈದ್ಯರು ಗರ್ಭಿಣಿ ಪತ್ನಿಯನ್ನು ವೈದ್ಯಕೀಯ ಸಂಶೋಧನೆಗೆ ಬಳಸಿಕೊಂಡ ಕಾರಣ ಮಗುವಿಗೆ ಮಿದುಳು ರಕ್ತಸ್ರಾವ (ಬ್ರೇನ್ ಹೆಮರೇಜ್) ಸಮಸ್ಯೆ ಕಾಣಿಸಿಕೊಂಡಿದೆ. ಈ ಕುರಿತು ದೂರು ನೀಡಿದರೂ ಯಾವುದೇ ಕ್ರಮ ಜರುಗಿಸಿಲ್ಲ. ಹೀಗಾಗಿ ಮಗು ಹಾಗೂ ತನಗೆ ದಯಾಮರಣ ನೀಡಬೇಕು’ ಎಂದು ಒತ್ತಾಯಿಸಿ ಇಲ್ಲಿನ ನೆಹರೂ ನಗರದ ನಿವಾಸಿ ಎ.ಗೋಪಾಲ್ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಈ ಕುರಿತು ಅವರು ವಿಡಿಯೊ ಕೂಡ ಮಾಡಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ಗರ್ಭಿಣಿಯರ ಕ್ಲಿನಿಕಲ್ ಟ್ರಯಲ್, ಕೇಸ್ ಸ್ಟಡಿ ವೇಳೆ ತೊಂದರೆ ಆಗುವ ಸಾಧ್ಯತೆ ಕಡಿಮೆ. ಸಮಸ್ಯೆಯಾಗಿದ್ದರೆ ಸಮಗ್ರ ಪರಿಶೀಲನೆಯಾಗಬೇಕು’ ಎಂದು ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಅಭಿನವ್ ತಿಳಿಸಿದರು. ‘ಈ ವಿಷಯ ನನ್ನ ಗಮನಕ್ಕೆ ಬಂದಿಲ್ಲ, ಈ ಕುರಿತು ವೈದ್ಯರ ಜೊತೆ ಮಾತನಾಡುತ್ತೇನೆ’ ಎಂದು ದಾವಣಗೆರೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು.

ಮೀಸಲಾತಿ: 14ರಿಂದ 8ನೇ ಹಂತದ ಹೋರಾಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ ‘2ಎ’ ಮತ್ತು ಲಿಂಗಾಯತ ಉಪ ಪಂಗಡಗಳಿಗೆ ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ಕಲ್ಪಿಸುವಂತೆ ಆಗ್ರಹಿಸಿ ಜನವರಿ 14ರಂದು ಬೆಳಿಗ್ಗೆ 11ಕ್ಕೆ ಬಾಗಲಕೋಟೆ ಜಿಲ್ಲೆ ಕೂಡಲಸಂಗಮದ ಪಂಚಮಸಾಲಿ ಪೀಠದಿಂದ ಎಂಟನೇ ಹಂತದ ಹೋರಾಟಕ್ಕೆ ಚಾಲನೆ ಕೊಡಲಾಗುವುದು’ ಎಂದು ಪೀಠಾಧ್ಯಕ್ಷ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

‘ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ವಿಧಾನಮಂಡಲ ಚಳಿಗಾಲದ ಅಧಿವೇಶನದ ವೇಳೆ ಸರ್ಕಾರದ ಕುಮ್ಮಕ್ಕಿನಿಂದ ಪೊಲೀಸರು ನಮ್ಮ ಮೇಲೆ ಲಾಠಿಚಾರ್ಜ್ ಮಾಡಿದರು. ಅದರಲ್ಲಿ ಗಾಯಗೊಂಡ ಹೋರಾಟಗಾರರಿಗೆ ‘ಲಿಂಗಾಯತ ಪಂಚಮಸಾಲಿ ಮೀಸಲಾತಿ ವೀರ’ ಎಂಬ ಬಸವರಕ್ಷೆ ಕೊಡುತ್ತೇವೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.



ಬಸವಜಯ ಮೃತ್ಯುಂಜಯ ಸ್ವಾಮೀಜಿ

‘ಈ ಸಲ ರಾಜ್ಯದಾದ್ಯಂತ ಗ್ರಾಮಗಳಲ್ಲಿ ‘ಪಂಚಮಸಾಲಿ ಪ್ರತಿಜ್ಞಾ ಕ್ರಾಂತಿ ಅಭಿಯಾನ’ ಮಾಡುತ್ತೇವೆ. ಜನರ ಬಳಿ ತೆರಳಿ ಅಭಿಪ್ರಾಯ ಸಂಗ್ರಹಿಸಿ, ನಮ್ಮ ಗುರಿ ಸಾಧಿಸುತ್ತೇವೆ. ಪಂಚಮಸಾಲಿ ಸಮುದಾಯದವರು ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು’ ಎಂದು ಕೋರಿದರು. ‘ನಿಮ್ಮ ಸಮಾಜದ ಕೆಲ ನಾಯಕರಿಂದ ಬೆಂಬಲ ಸಿಗದಿರುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಹೋರಾಟಕ್ಕೆ ಮೋಸ ಮಾಡಿದವರಿಗೆ ನಾವೇನೂ ಹೇಳುವುದಿಲ್ಲ. ಸಮಾಜದ ಜನರೇ ತಕ್ಕ ಪಾಠ ಕಲಿಸುವರು’ ಎಂದರು.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ
ಸಂಖ್ಯೆ:ಕಂದಾಯ/ಸಿಬ್ಬಂದಿ/03/2025/ಇ–269064 ದಿನಾಂಕ: 09.01.2025
ಟೆಂಡರ್ ಪ್ರಕಟಣೆ
(ಕೆಪಿಪಿಪಿ–ಪೋರ್ಟಲ್ ಮೂಲಕ)
ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಅಧೀನ ಕಚೇರಿಗಳಿಗೆ ಅವಶ್ಯವಿರುವ 06 ಡಾಟಾ ಎಂಟ್ರಿ ಆಪರೇಟರ್ ಹಾಗೂ 32 ಗ್ರೂಪ್–ಡಿ ಸಿಬ್ಬಂದಿಗಳನ್ನು ದಿ:01.02.2025 ರಿಂದ ದಿ:31.01.2026 ರವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಟೆಂಡರ್ ಆಹ್ವಾನಿಸಲಾಗಿದ್ದು, ಕೆಪಿಪಿಪಿ–ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: ದಿ: 27/01/2025 ರ ಅಪರಾಹ್ನ 04.00 ಗಂಟೆವರೆಗೆ ಇರುತ್ತದೆ. ಷರತ್ತು, ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ–ಪೋರ್ಟಲ್ ಪರಿಶೀಲಿಸಲು ತಿಳಿಸಲಾಗಿದೆ.
ಸಹಿ/– ಜಿಲ್ಲಾಧಿಕಾರಿಗಳು ಹಾಗೂ ಟೆಂಡರ್ ಕರೆಯುವ ಪ್ರಾಧಿಕಾರ, ಜಿಲ್ಲಾಧಿಕಾರಿಗಳ ಕಛೇರಿ, ಕೊಪ್ಪಳ.
ವಾ.ಸಾ.ಇ/ಕೊಪ್ಪಳ/667/ದೇಶಪಾಂಡೆಪಬ್ಲಿಸಿಟಿ/2024–25

ಐಸಿಎಆರ್ – ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು – 560030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ
ಎನ್‌ಐಎಎನ್‌ಪಿ/ಎಡಿವಿ–03–ಸಿಡಿಎನ್/2024–25
ಹಿಂದಿ ಕೋಶ ಅಡಿಯಲ್ಲಿ ತಾತ್ಕಾಲಿಕ ಆಧಾರದಲ್ಲಿ ಒಂದು ಯಂಗ್ ಪ್ರೊಫೆಷನಲ್ 1 ಹುದ್ದೆಗೆ ನಿಯೋಜಿಸಿಕೊಳ್ಳಲು ದಿನಾಂಕ 28.01.2025 ರಂದು ಅಪರಾಹ್ನ 02.30 ಗಂಟೆಗೆ ನೇರ ಸಂದರ್ಶನ ಆಯೋಜಿಸಲಾಗಿದೆ. ಸದರಿ ಹುದ್ದೆಗೆ ಮಾಸಿಕ ಕ್ರೋಢೀಕೃತ ರೂ. 30,000/– ಸಂಭಾವನೆ ನಿಗದಿಯಾಗಿರುತ್ತದೆ. ವಿವರವಾದ ಜಾಹೀರಾತಿಗಾಗಿ ದಯವಿಟ್ಟು ಸಂಸ್ಥೆಯ ವೆಬ್‌ಸೈಟ್‌ಗೆ ಭೇಟಿ ಕೊಡಿ. www.nianp.res.in.
ಸಹಿ/– ಹಿರಿಯ ಆಡಳಿತಾಧಿಕಾರಿ

ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯುರಿಟೀಸ್)
ವಿಧಾನ ಸೌಧ, ಬೆಂಗಳೂರು.
No: FD 01 BMB 2024 Dated: 09.01.2025
ಪ್ರಕಟಣೆ
1. ಒಟ್ಟು ಮೊತ್ತ: ರೂ 2000 ಕೋಟಿ (ರೂ 2000 ಕೋಟಿ – 11 ವರ್ಷದ ಅವಧಿ)
2. ಹಂಚಿಕೆ ವಿಧಾನ: ಹರಾಜು ಮೂಲಕ, ಪಿಡಿಒ, ಆರ್‌ಬಿಐ, ಮುಂಬೈ (ಫೋರ್ಟ್) ಮುಖಾಂತರ.
3. ಹರಾಜಿನ ದಿನಾಂಕ : ಜನವರಿ 14, 2025.
ಕರ್ನಾಟಕ ಸರ್ಕಾರವು ಮೇಲಿನ ಸೆಕ್ಯೂರಿಟಿಗಳಿಗೆ ಚಂದಾದಾರಿಕೆಯನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಒ, ಆರ್‌ಬಿಐ, ಬೆಂಗಳೂರು ಇವರಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು RBI ನಿಂದ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟದ ಅಧಿಸೂಚಿತ ಮೊತ್ತದ ಶೇ 10ರ ವರೆಗಿನ ಸರ್ಕಾರಿ ಸ್ಟಾಕ್ ಅನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆ ವೆಬ್‌ಸೈಟ್ www.rbi.org.in ನಲ್ಲಿ ಲಭ್ಯವಿದೆ.
ಸಹಿ/– (ಡಾ.ಪಿ.ಸಿ. ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ
DIPR/CP/4227/Zen/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.
ಸಂ:ಕಾ.ಇಂ/ಲೋ.ಇ.ವಿ/ಹಾಸನ/ಸ.ಇಂ–1/2024–25/ದಿನಾಂಕ:09.01.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ:20/2024–25:ದಿನಾಂಕ:09.01.2025 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3ರ ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಸನ ವಿಭಾಗದಡಿ ಒಟ್ಟು 01 ಸಂಖ್ಯೆ ಕಾಮಗಾರಿಗಳಿಗಾಗಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಕಾಮಗಾರಿ ಮೊತ್ತ ರೂ.79.99 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ:18.01.2025ರ 4.00ಗಂಟೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172–268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಇ ಹಾಸನ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/828/ಕೆಎಸ್‌ಎಂಸಿಎ/2024–25

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India
सी.जी.-डी.एल.-अ.- 10012025-260115
CG - DL - E -10012025-260115
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY
सं. - 169] नई दिल्ली, बृहस्पतिवार, जनवरी 9, 2025 / पौष 19, 1946
No. 169] NEW DELHI, THURSDAY, JANUARY 9, 2025/PAUSHA 19, 1946

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 9ನೇ ಜನವರಿ, 2025

ಎಸ್.ಓ. ನಂ. 171(ಇ).–ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.13 ರಲ್ಲಿ in the stretch of land from Km 422.00 to 523.00 (ಚಿತ್ರದುರ್ಗ–ಶಿವಮೊಗ್ಗ ಸೆಕ್ಷನ್) ರಸ್ತೆ ನಿರ್ಮಾಣ (ಅಗಲೀಕರಣ, ನಾಲ್ಕು ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳವುದು ಅವಶ್ಯವಾಗಿರುತ್ತದೆಂದು ಇಚ್ಛಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು–13, ಪಿ.ಡಬ್ಲ್ಯುಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು–01, ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.13 ರಲ್ಲಿ in the stretch of land from Km 422.00 to Km 523.600(ಚಿತ್ರದುರ್ಗ–ಶಿವಮೊಗ್ಗ ಸೆಕ್ಷನ್) ರಸ್ತೆ ನಿರ್ಮಾಣ, ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ಚಿತ್ರದುರ್ಗ

ಕ್ರ ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀ.ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
ತಾಲ್ಲೂಕು : ಹೊಳಲ್ಕೆರೆ					
ಗ್ರಾಮ : ಹೊಳಲ್ಕೆರೆ					
1	1544/20	ಖಾಸಗಿ	ಎನ್‌ಎಕೆ	150	0.015
2	1544/20ಎ	ಖಾಸಗಿ	ಎನ್‌ಎಕೆ	150	0.015
				ಒಟ್ಟು	0.03

[F.No.RW/NH-37014/1/2010-NHDP-4A/3A]
ಅಭಯ್ ಜೈನ್, ನಿರ್ದೇಶಕರು

‘ಸಂತ ಸೇವಾಲಾಲ್ ಪ್ರಶಸ್ತಿ’ ಸ್ಥಾಪನೆ– ಸರ್ಕಾರ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು ‘ಸಂತ ಸೇವಾಲಾಲ್ ಪ್ರಶಸ್ತಿ’ ಸ್ಥಾಪಿಸಿ ಆದೇಶ ಹೊರಡಿಸಿದೆ.

ಪ್ರಶಸ್ತಿ ₹ 1 ಲಕ್ಷ ನಗದು ಒಳಗೊಂಡಿದೆ. ಬಂಜಾರಾ ಸಮುದಾಯದಲ್ಲಿ ವಿಶೇಷ ಸಾಧನೆ ಮಾಡಿದ ಹಿರಿಯರಿಗೆ ಪ್ರಶಸ್ತಿ ನೀಡಿ, ಗೌರವಿಸಲಾಗುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಹಿಂದೆ ಪ್ರಶಸ್ತಿ ಸ್ಥಾಪಿಸುವಂತೆ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ಅವರು ಸರ್ಕಾರಕ್ಕೆ ಮನವಿ ಮಾಡಿದ್ದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯಕಾರಿಣಿ ನಿರ್ಧಾರ • ವಿವಿಧ ನಿರ್ಣಯಗಳಿಗೆ ಬೆಂಬಲ

ಒಪಿಎಸ್ ಮರುಜಾರಿಗೆ ಹೋರಾಟ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಒಪಿಎಸ್ ಮರುಜಾರಿಗಾಗಿ ಸರ್ಕಾರದ ಮೇಲೆ ಒತ್ತಡ ಹೇರಲು ವಿವಿಧ ಹಂತಗಳಲ್ಲಿ ಹೋರಾಟ ಸೇರಿದಂತೆ ಇನ್ನಿತರೆ ನಿರ್ಣಯಗಳಿಗೆ ಬೆಂಬಲ ಸೂಚಿಸಲು ಶನಿವಾರ ಇಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯಕಾರಿ ಸಮಿತಿ ಸಭೆ ನಿರ್ಧರಿಸಿತು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ನೇತೃತ್ವದಲ್ಲಿ 2024-29ನೇ ಅವಧಿಯ ರಾಜ್ಯ ಕಾರ್ಯಕಾರಿಣಿಯ ಮೊದಲ ಸಭೆ ನಡೆಯಿತು.

ನಗದು ರಹಿತ ಚಿಕಿತ್ಸೆ ಯೋಜನೆಯ ತ್ವರಿತ ಜಾರಿಗೆ ಒತ್ತಾಯಿಸುವುದು, 2026ಕ್ಕೆ ಕೇಂದ್ರ ಸರ್ಕಾರದ ಮಾದರಿ ವೇತನಕ್ಕಾಗಿ ಹೋರಾಟ ರೂಪಿಸುವುದು, ಪ್ರಾಥಮಿಕ ಶಾಲಾ ಶಿಕ್ಷಕರ ಸಿ ಆ್ಯಂಡ್ ಆರ್ ನಿಯಮಕ್ಕೆ ತಿದ್ದುಪಡಿ ತರುವಂತೆ ಆಗ್ರಹಿಸಿ ನಡೆಸಲಾಗುವ ಹೋರಾಟವನ್ನು ಬೆಂಬಲಿಸುವುದು, ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್‌ಗಳಿಗೆ ಶೀಘ್ರವೇ ಹಣ ಬಿಡುಗಡೆ ಮಾಡಿಸಲು ಕ್ರಮ ವಹಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಹಬ್ಬದ ಮುಂಗಡ ಮೊತ್ತವನ್ನು ₹25,000 ದಿಂದ ₹50,000ಕ್ಕೆ ಹೆಚ್ಚಿಸಲು ಹಾಗೂ ನಿವೃತ್ತಿ ಸಮಯದ ಗಳಿಕೆ ರಜೆಗಳನ್ನು 300 ರಿಂದ 340ಕ್ಕೆ ಏರಿಸಲು ಕ್ರಮ ವಹಿಸುವುದು, ಕೇಂದ್ರ ಮತ್ತು ಜಿಲ್ಲಾ ಸಂಘಕ್ಕೆ ವಂತಿಗೆ ರೂಪದಲ್ಲಿ ಸಲ್ಲಿಸುವ ಹಣವನ್ನು ಕಡಿತಗೊಳಿಸಿ ತಾಲ್ಲೂಕು ಮಟ್ಟದಲ್ಲಿ ಉಳಿಸಿಕೊಳ್ಳುವ ಬಗ್ಗೆ ಚರ್ಚಿಸಲಾಯಿತು.

2024-25ನೇ ಸಾಲಿನ ಸರ್ಕಾರಿ ನೌಕರರ ಕ್ರೀಡಾ, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ₹ 3 ಕೋಟಿ ಅನುದಾನ ನೀಡಲು ಒಪ್ಪಿದ್ದಾರೆ. ಶೀಘ್ರವೇ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಕಾರ್ಯಕ್ರಮ ಆಯೋಜಿಸಲು ಹಾಗೂ 2024-25ನೇ ಸಾಲಿಗೆ ಆಯ್ಕೆಯಾದ ರಾಜ್ಯದ ಎಲ್ಲಾ ನಿರ್ದೇಶಕರು, ಪದಾಧಿಕಾರಿಗಳಿಗೆ ಸಮ್ಮಿಲನ ಸಮಾವೇಶ ನಡೆಸಲು ಸಭೆ ಅನುಮೋದನೆ ನೀಡಿತು.

ಸಭೆಯಲ್ಲಿ ಎಲ್ಲಾ ಜಿಲ್ಲೆಗಳ ಯೋಜನಾ ಶಾಖೆಗಳ ಅಧ್ಯಕ್ಷರು, ಖಜಾಂಚಿ, ರಾಜ್ಯ ಪರಿಷತ್ ಸದಸ್ಯರು, ಕಾರ್ಯದರ್ಶಿಗಳು ಸೇರಿ ಹಲವರು ಭಾಗವಹಿಸಿದ್ದರು.

ದಾವಣಗೆರೆಯಲ್ಲಿ ಶನಿವಾರ ನಡೆದ ಸಮಾರಂಭವನ್ನು ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಉದ್ಘಾಟಿಸಿದರು

ಮುಖ್ಯಾಂಶಗಳು

- ನಗದು ರಹಿತ ಚಿಕಿತ್ಸೆ ಯೋಜನೆಯ ತ್ವರಿತ ಜಾರಿಗೆ ಒತ್ತಾಯ
- ಕೇಂದ್ರ ಸರ್ಕಾರದ ಮಾದರಿ ವೇತನಕ್ಕಾಗಿ ಹೋರಾಟ
- ಪದಾಧಿಕಾರಿಗಳಿಗೆ ಸಮ್ಮಿಲನ ಸಮಾವೇಶ ನಡೆಸಲು ಸಭೆ ಒಪ್ಪಿಗೆ

ಸುದ್ದಿ 2 ನಿಮಿಷ

ಸಿದ್ಧರಾಮೇಶ್ವರ ಜಯಂತಿ 14ರಿಂದ

ಬೆಂಗಳೂರು: ನೊಳಂಬ ಲಿಂಗಾಯತ ಸಂಘದಿಂದ ಜನವರಿ 14 ಮತ್ತು 15ರಂದು ಬೆಂಗಳೂರಿನ ತ್ರಿಪುರ ವಾಸಿನಿ ಅರಮನೆ ಮೈದಾನದಲ್ಲಿ ಶ್ರೀಗುರು ಸಿದ್ಧರಾಮೇಶ್ವರ ಜಯಂತಿ ಆಯೋಜಿಸಲಾಗಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಜಯಂತ್ಯುತ್ಸವದ ಸ್ವಾಗತ ಸಮಿತಿ ಅಧ್ಯಕ್ಷ ಎಸ್.ಎನ್. ಸಿದ್ಧರಾಮಪ್ಪ ಅವರು, ‘ಕೆರಗೋಡಿ ರಂಗಾಪುರದ ಪೀಠಾಧ್ಯಕ್ಷ ಗುರು ಪರದೇಶಿ ಕೇಂದ್ರ ಸ್ವಾಮೀಜಿ ಅವರು ಜ. 14ರಂದು ನಡೆಯುವ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಲಿದ್ದಾರೆ. ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಾಜಿ ಸಂಸದ ಜಿ.ಎಸ್. ಬಸವರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ನೊಳಂಬ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಲಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ನೊಳಂಬ ಇತಿಹಾಸ ಸಾಕ್ಷ್ಯಚಿತ್ರ ಬಿಡುಗಡೆ ಮಾಡಲಿದ್ದಾರೆ’ ಎಂದರು.

‘15ರಂದು ಸಮಾರೋಪ ಸಮಾರಂಭದ ಸಾನ್ನಿಧ್ಯವನ್ನು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಎಂ.ಬಿ.ಪಾಟೀಲ್, ಬೈರತಿ ಸುರೇಶ್, ಶಾಸಕ ಶಾಮನೂರು ಶಿವಶಂಕರಪ್ಪ ಭಾಗವಹಿಸಲಿದ್ದಾರೆ’ ಎಂದು ಹೇಳಿದರು.

ವಿದ್ಯಾನಗರ: ವೈಟ್ ಟಾಪಿಂಗ್ ರಸ್ತೆ ಬಳಕೆಗೆ ಮುಕ್ತ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ವಿದ್ಯಾನಗರ ಕ್ರಾಸ್-ಉತ್ತನಹಳ್ಳಿ ಮುಖ್ಯರಸ್ತೆಯಲ್ಲಿ ನಿರ್ಮಿಸಿರುವ ವೈಟ್ ಟಾಪಿಂಗ್ ರಸ್ತೆಯನ್ನು ಕಂದಾಯ ಸಚಿವ ಕೃಷ್ಣಬೈರೇಗೌಡ ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಿದರು.

ನಂತರ, ಈ ರಸ್ತೆಯು ಏರ್‌ಪೋರ್ಟ್ ಮುಖ್ಯರಸ್ತೆಯ ಮೂಲಕ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಿದೆ’ ಎಂದು ಹೇಳಿದರು.

‘ಈ ರಸ್ತೆಯಲ್ಲಿ ಭಾರೀ ವಾಹನಗಳ ಸಂಚಾರ ಹೆಚ್ಚಾಗಿತ್ತು. ಇದರಿಂದ ವಿದ್ಯಾನಗರ ಕ್ರಾಸ್ ಬಳಿ ವಾಹನಗಳು ತಿರುವು ಪಡೆಯುವ ಸ್ಥಳದಲ್ಲಿ ಎಷ್ಟು ಸಾರಿ ಗುಣಮಟ್ಟದ ರಸ್ತೆ ಮಾಡಿದ್ದರೂ, ಗುಂಡಿಗಳು ಬೀಳುತ್ತಿದ್ದವರು. ಈಗ ವೈಟ್ ಟಾಪಿಂಗ್ ರಸ್ತೆಯಾಗಿಸಲಾಗಿದೆ. ಈಗ ಇಲ್ಲಿ ಸಾರ್ವಜನಿಕರು ಎದುರಿಸುತ್ತಿದ್ದ ಸಮಸ್ಯೆ ನಿವಾರಣೆಯಾಗಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಕೆ.ಮಹೇಶ್‌ಕುಮಾರ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಉದಯಶಂಕರ್, ಕೆಡಿಪಿ ಸದಸ್ಯ ಬಿ.ಕೆ.ನಾರಾಯಣಸ್ವಾಮಿ, ಗ್ರಾಮಪಂಚಾಯಿತಿ ಅಧ್ಯಕ್ಷ ಅನಂತ್ ಮತ್ತಿತರರು ಉಪಸ್ಥಿತರಿದ್ದರು.

‘12ನೇ ಶತಮಾನದ ಶಿಕ್ಷಣದ ಸಂಶೋಧನೆ ಅಗತ್ಯ’

ನಗರದ ಚಿತ್ರಕಲಾ ಪರಿಷತ್ತಿನಲ್ಲಿ ‘ಸುಭಾಷ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್’ ಆಯೋಜಿಸಿದ್ದ ಕಾರ್ಯಕ್ರಮದಲ್ಲಿಕವಿ ಜಿ.ಎಸ್ ಸಿದ್ಧಲಿಂಗಯ್ಯ ಅವರಿಗೆ ಬಸವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶರಣಗೌಡ ಪಾಟೀಲ ಪಾಳಾ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೆ.ವಿ. ನಾಗರಾಜಮೂರ್ತಿ ಮತ್ತು ಬಿ.ಆರ್ ಪಾಟೀಲ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 12ನೇ ಶತಮಾನದ ಶಿಕ್ಷಣ ಪದ್ಧತಿ ಬಗ್ಗೆ ಸಂಶೋಧನೆ ನಡೆಸುವ ಅಗತ್ಯವಿದೆ ಎಂದು ಕವಿ ಪ್ರೊ. ಜಿ.ಎಸ್. ಸಿದ್ದಲಿಂಗಯ್ಯ ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ಕಲಬುರಗಿಯ ಶ್ರೀ ಸುಭಾಷ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಬಸವ ಪ್ರಶಸ್ತಿ’ ಸ್ವೀಕರಿಸಿ ಅವರು ಮಾತನಾಡಿದರು. ಪ್ರಶಸ್ತಿಯು ₹50 ಸಾವಿರ ನಗದು, ಫಲಕ ಮತ್ತು ಪ್ರಮಾಣಪತ್ರ ಒಳಗೊಂಡಿದೆ.

‘20ನೇ ಶತಮಾನದಲ್ಲಿ ವಯಸ್ಕರ ಶಿಕ್ಷಣ ಜಾರಿಗೆ ತರಲಾಯಿತು. ಶಾಲೆಯಿಂದ ಹೊರಗುಳಿವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. 12ನೇ ಶತಮಾನದಲ್ಲಿದ್ದ ವಚನಕಾರರಿಗೆ ಎಂತಹ ಶಿಕ್ಷಣ ದೊರಕಿತ್ತು ಎಂದು ಅಧ್ಯಯನ ನಡೆಸಿದರೆ ಅಚ್ಚರಿ ಅಂಶಗಳು ಸಿಗುತ್ತವೆ’ ಎಂದು ಹೇಳಿದರು.

ಕೆಲವರು ಬಸವಣ್ಣನ ಅಸ್ತಿತ್ವದ ಬಗ್ಗೆಯೇ ಪ್ರಶ್ನಿಸಿದ್ದರು. 27 ಶಾಸನಗಳಲ್ಲಿ ಬಸವಣ್ಣನ ಉಲ್ಲೇಖವಿದೆ, ಎಂಟು ಶಾಸನಗಳಲ್ಲಿ ಬಸವಣ್ಣನಿಗೆ ಸಂಬಂಧಿಸಿದ ಖಚಿತವಾದ ಮಾಹಿತಿ ಇದೆ. ಅನುಭವ ಮಂಟಪವನ್ನು ಈಗಿನ ಜನತಾ ಪಾರ್ಲಿಮೆಂಟ್ ಎನ್ನಬಹುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಬಸವರಾಜ ಸಾದರ, ‘ಗುರುಶ್ರೇಷ್ಠ ಸಿದ್ದಲಿಂಗಯ್ಯ ಅವರಿಗೆ ಬಸವ ಪ್ರಶಸ್ತಿ ಬಂದಿರುವುದು ಒಳ್ಳೆಯದು. ಅನುವಾದ, ವಚನ ಸಾಹಿತ್ಯ, ಕವನ ಸಂಕಲನ ಪ್ರಕಟಿಸಿರುವ ಸಿದ್ದಲಿಂಗಯ್ಯ ಅವರಿಗೆ ಪಂಪ ಹಾಗೂ ರಾಷ್ಟ್ರೀಯ ಬಸವ ಪ್ರಶಸ್ತಿ ಪುರಸ್ಕಾರಕ್ಕೆ ಅರ್ಹರು’ ಎಂದು ತಿಳಿಸಿದರು.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಬಿ.ಆರ್.ಪಾಟೀಲ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಮರ್ಶಕಿ ಎಂ.ಎಸ್. ಆಶಾದೇವಿ ಮಾತನಾಡಿದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಸುಭಾಷ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಶರಣಗೌಡ ಪಾಟೀಲ ಪಾಳಾ, ಪತ್ರಾಗಾರ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ವೀರಶೆಟ್ಟಿ, ಲೇಖಕ ರುದ್ರೇಶ ಅದರಂಗಿ ಉಪಸ್ಥಿತರಿದ್ದರು. ಮೃತ್ಯುಂಜಯ ದೊಡ್ಡವಾಡ, ಸವಿತಾ ಪ್ರಸಾದ್ ಅವರು ವಚನ ಗಾಯನ ನಡೆಸಿಕೊಟ್ಟರು.

‘ಕಲೆ–ಸಾಹಿತ್ಯ ಕಡೆಗಣಿಸಿದ ಸರ್ಕಾರ’

‘ಮರೆಯಲಾಗದ ಮಹನೀಯರು’ ಕಾರ್ಯಕ್ರಮದಲ್ಲಿ ನ್ಯಾ.ವಿ. ಗೋಪಾಲಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುವ ಕಲೆ–ಸಾಹಿತ್ಯಕ್ಕೆ ಸರ್ಕಾರ ಪ್ರಾಮುಖ್ಯತೆ ನೀಡಬೇಕು’ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲ ಗೌಡ ಶನಿವಾರ ಅಭಿಪ್ರಾಯಪಟ್ಟರು.

ಕರ್ನಾಟಕ ಸುಗಮ ಸಂಗೀತ ಪರಿಷತ್ತು ನಗರದಲ್ಲಿ ಹಮ್ಮಿಕೊಂಡಿದ್ದ ‘ಮರೆಯಲಾಗದ ಮಹನೀಯರು: ದ.ರಾ. ಬೇಂದ್ರೆ, ಚಂದ್ರಶೇಖರ ಕಂಬಾರ, ಎಂ.ಎನ್. ವ್ಯಾಸರಾವ್, ಕೆ.ಎಸ್. ನರಸಿಂಹಸ್ವಾಮಿ ಅವರಿಗೆ ಗೀತ ಗೌರವ’ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಸರ್ಕಾರಗಳು ಯಾವುದಕ್ಕೆ ಪ್ರಾಮುಖ್ಯ ನೀಡಬೇಕೋ ಅವುಗಳಿಗೆ ನೀಡುತ್ತಿಲ್ಲ. ಸಾಹಿತ್ಯಕ್ಕಿರುವ ಶಕ್ತಿ ಅಷ್ಟಿಷ್ಟಲ್ಲ. ಸಾಹಿತ್ಯವಿಲ್ಲದೆ ಸಮಾಜದ ಬೆಳವಣಿಗೆ ಅಸಾಧ್ಯ. ಕಾನೂನು ಕ್ಷೇತ್ರದಲ್ಲಿಯೂ ಸಾಹಿತ್ಯದ ಬಳಕೆ ಇದೆ’ ಎಂದು ಹೇಳಿದರು.

‘ಚಲನಚಿತ್ರಗಳ ಆಕರ್ಷಣೆ ಹೆಚ್ಚಿಸುವುದು ಸಂಭಾಷಣೆ. ಹಿಂದೆ ಅರ್ಥಪೂರ್ಣ ಸಂಭಾಷಣೆಗಳು ಇರುತ್ತಿದ್ದವು. ಸಮಾಜ ಮತ್ತು ಜನರ ಪರಿವರ್ತನೆಗೆ ಕಾರಣವಾಗುತ್ತಿದ್ದವು. ಆದರೆ, ಇತ್ತೀಚೆಗೆ ಬರುತ್ತಿರುವ ಚಲನಚಿತ್ರಗಳ ಹೆಸರೇ ಕೇಳಲು ಅಸಹ್ಯವಾಗುತ್ತದೆ. ಚಿತ್ರಗೀತೆಗಳು ಇನ್ನೂ ಅಸಹ್ಯವಾಗಿರುತ್ತವೆ. ಕಳ್ಳತನ ಮಾಡುವ ಪಾತ್ರಧಾರಿಯೂ ಸಿನಿಮಾದಲ್ಲಿ ನಾಯಕ ಆಗುತ್ತಿದ್ದಾನೆ. ಇದಕ್ಕೆ ‘ಪುಷ್ಪ’ ಚಲನಚಿತ್ರ ಉದಾಹರಣೆ’ ಎಂದು ಅವರು ತಿಳಿಸಿದರು.

ಸಾಹಿತಿ ಚಂದ್ರಶೇಖರ ಕಂಬಾರ ಅವರು ಕವಿತೆ ವಾಚಿಸಿದರು. ಕವಿ ಎಚ್.ಎಸ್.ವೆಂಕಟೇಶಮೂರ್ತಿಅಧ್ಯಕ್ಷತೆವಹಿಸಿದ್ದರು. ಕವಿ ಬಿ.ಆರ್. ಲಕ್ಷ್ಮಣ ರಾವ್, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಉಪಸ್ಥಿತರಿದ್ದರು.

ದ.ರಾ. ಬೇಂದ್ರೆ, ಚಂದ್ರಶೇಖರ ಕಂಬಾರ, ಎಂ.ಎನ್. ವ್ಯಾಸರಾವ್, ಕೆ.ಎಸ್. ನರಸಿಂಹ ಸ್ವಾಮಿ ಅವರು ರಚಿಸಿದ ಗೀತೆಗಳ ಗಾಯನದ ಮೂಲಕ ಅವರಿಗೆ ಗೌರವ ಸಲ್ಲಿಸಲಾಯಿತು.



ಕಾರ್ಯಕ್ರಮದಲ್ಲಿ ವೈ.ಕೆ. ಮುದ್ದುಕೃಷ್ಣ ಮತ್ತು ನ್ಯಾ.ವಿ. ಗೋಪಾಲಗೌಡ ಸಮಾಲೋಚನೆ ನಡೆಸಿದರು. ಚಂದ್ರಶೇಖರ ಕಂಬಾರ, ಎಚ್.ಎಸ್. ವೆಂಕಟೇಶ ಮೂರ್ತಿ ಹಾಗೂ ಬಿ.ಆರ್.ಲಕ್ಷ್ಮಣ ರಾವ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಇನ್ಫೊಸಿಸ್ ಪ್ರಶಸ್ತಿ: ಇನ್ಫೊಸಿಸ್ ವಿಜ್ಞಾನ ಪ್ರತಿಷ್ಠಾನವು ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಪ್ರೊ.ವೇದಿಕಾ ಖೆಮಾನಿ (ಭೌತ ವಿಜ್ಞಾನ), ಪುಣೆಯ ಐಐಎಸ್ಇಆರ್‌ನ ಪ್ರೊ. ಸಿದ್ದೇಶ್ ಕಾಮತ್ (ಜೀವವಿಜ್ಞಾನ), ಈಡನ್ ಬರ್ಗ್ ವಿಶ್ವವಿದ್ಯಾಲಯದ ಪ್ರೊ.ಮೊಹಮದ್ ಕೂರಿ (ಸಾಮಾಜಿಕ ವಿಜ್ಞಾನ), ವಾಷಿಂಗ್ಟನ್ ವಿಶ್ವವಿದ್ಯಾಲಯದ ಪ್ರೊ.ಶ್ಯಾಮ್ ಗೊಲ್ಲಕೋಟ (ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ಸೈನ್ಸ್) ಮತ್ತು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಪ್ರೊ.ಅರುಣ್ ಜಿ. ಚಂದ್ರಶೇಖರ್ (ಅರ್ಥಶಾಸ್ತ್ರ) ಅವರಿಗೆ 16ನೇ ಸಾಲಿನ ‘ಇನ್ಫೊಸಿಸ್ ಪ್ರಶಸ್ತಿ’ಯನ್ನು ಪ್ರಧಾನ ಮಾಡಲಾಯಿತು. ಪ್ರಶಸ್ತಿಯು ಚಿನ್ನದ ಪದಕ, ಪ್ರಮಾಣಪತ್ರ ಮತ್ತು ತಲಾ ಒಂದು ಲಕ್ಷ ಅಮೆರಿಕನ್ ಡಾಲರ್ (ಅಂದಾಜು ₹86 ಲಕ್ಷ) ನಗದು ಒಳಗೊಂಡಿದೆ – ಪ್ರಜಾವಾಣಿ ಚಿತ್ರ

ಡಿವೈಇಎಸ್ ‘ಬಿ’ ತಂಡಕ್ಕೆ ಜಯ

ಬೆಂಗಳೂರು: ಡಿವೈಇಎಸ್ ‘ಬಿ’ ತಂಡ, ಹಾಕಿ ಕರ್ನಾಟಕ ಆಶ್ರಯದಲ್ಲಿ ಎಫ್‌ಎಂಕೆಎಂಸಿ ಹಾಕಿ ಮೈದಾನದಲ್ಲಿ ನಡೆಯುತ್ತಿರುವ ‘ಚೈರೋಸ್ ಭೀಮಯ್ಯ ಹಾಕಿ ಫೈವ್ಸ್ ಟೂರ್ನಿ’ಯಲ್ಲಿ ಹಾಕಿ ಬಳ್ಳಾರಿ ತಂಡವನ್ನು 3–2 ಗೋಲುಗಳಿಂದ ಮಣಿಸಿತು.

ಇತರ ಪಂದ್ಯಗಳಲ್ಲಿ ಡಿವೈಇಎಸ್ ‘ಎ’ ತಂಡ 8–0 ಗೋಲುಗಳಿಂದ ರಿಂಕ್ ರೆಬೆಲ್ಸ್ ವಿರುದ್ಧ; ಬೆಂಗಳೂರು ಬ್ಲೂಸ್ 12–0 ಯಿಂದ ಡಿವೈಇಎಸ್ ಬಳ್ಳಾರಿ ವಿರುದ್ಧ; ಎಜಿಒಆರ್‌ಸಿ 4–3ರಿಂದ ಹೈ ಫ್ಲೈಯರ್ಸ್ ವಿರುದ್ಧ; ಬಿಎಸ್‌ಸಿ ಎಂಇಜಿ 8–1ರಿಂದ ಸಾಸಾ ಅಕಾಡೆಮಿ ವಿರುದ್ಧ; ಡಿವೈಇಎಸ್ ‘ಬಿ’ 3–2ರಿಂದ ಎಸ್‌ಡಬ್ಲ್ಯುಆರ್ ಹುಬ್ಬಳ್ಳಿ ವಿರುದ್ಧ;ಬಾಸ್ಕೊರಾ ಬಾಯ್ಸ್, ಗೋವಾ 6–3ರಿಂದ ಹಾಕಿ ಬಳ್ಳಾರಿ ವಿರುದ್ಧ; ಭೀಮಾಸ್ 5–3ರಿಂದ ಬೆಂಗಳೂರು ಬ್ಲೂಸ್ ವಿರುದ್ಧ; ಎಜಿಒಆರ್‌ಸಿ 4–3 ರಿಂದ ಸಾಯ್ ಎಸ್‌ಟಿಸಿ ವಿರುದ್ಧ; ಸಾಸಾ ಅಕಾಡೆಮಿ 5–4ರಿಂದ ಡಿವೈಇಎಸ್ ಬಳ್ಳಾರಿ ವಿರುದ್ಧ; ಎಸ್‌ಡಬ್ಲ್ಯುಆರ್ ಹುಬ್ಬಳ್ಳಿ 7–1 ರಿಂದ ಕ್ವಿಂಟ್ ಸ್ಪೋರ್ಟ್ಸ್ ಲೈಫ್ ವಿರುದ್ಧ; ಹೈ ಫ್ಲೈಯರ್ಸ್ 12–5 ರಿಂದ ಆರ್.ವಿ. ಯುನಿವರ್ಸಿಟಿ ವಿರುದ್ಧ; ಬಿಎಸ್‌ಸಿ ಎಂಇಜಿ 5–2ರಿಂದ ಭೀಮಾಸ್ ವಿರುದ್ಧ; ರಿಂಕ್ ರೆಬೆಲ್ಸ್ 4–3 ರಿಂದ ಹಾಕಿ ಗದಗ್ ವಿರುದ್ಧ ಗೆಲುವು ಪಡೆದವು.

ಗೋವಾದ ಬಾಸ್ಕೊರಾ ಬಾಯ್ಸ್ 4–4 ರಲ್ಲಿ ಹೋಲ್ಡ್ ಕ್ವಿನಿಟ್ ಸ್ಪೋರ್ಟ್ಸ್ ಲೈಫ್ ಜೊತೆ, ಕೂರ್ಗ್ ಹಾಕ್ಸ್ 1–1ರಿಂದ ಡಿವೈಇಎಸ್ ಜೊತೆ ಡ್ರಾ ಮಾಡಿಕೊಂಡವು.

ಫುಟ್‌ಬಾಲ್: ಬಿಎಫ್‌ಸಿ ರನ್ನರ್ಸ್ ಅಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಫ್‌ಸಿ ಬಾಲಕಿಯರ ತಂಡವು ಅನಂತಪುರ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಡೆದ ಇನ್‌ಸ್ಪೈರ್ ಕಪ್‌ನ ನಾಲ್ಕನೇ ಆವೃತ್ತಿಯ ಫುಟ್‌ಬಾಲ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಸ್ಥಾನ ಪಡೆಯಿತು.

ಫೈನಲ್ ಹಣಾಹಣಿಯಲ್ಲಿ ಮಧ್ಯಪ್ರದೇಶದ ನರ್ಮದಾ ವ್ಯಾಲಿ ಎಫ್‌ಸಿ ತಂಡವು 3–0 ಗೋಲುಗಳಿಂದ ಬೆಂಗಳೂರು ಎಫ್‌ಸಿ ತಂಡವನ್ನು ಮಣಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಟೂರ್ನಿಯಲ್ಲಿ ಒಟ್ಟು 12 ತಂಡಗಳು ಭಾಗವಹಿಸಿದ್ದವು. ನರ್ಮದಾ ತಂಡ ₹20 ಸಾವಿರ ಮತ್ತು ಬಿಎಫ್‌ಸಿ ತಂಡ ₹ 15 ಸಾವಿರ ನಗದು ಬಹುಮಾನ ಪಡೆದವು. ಅಭಾ ನಾಯಕತ್ವದ ಬಿಎಫ್‌ಸಿ ಬಾಲಕಿಯರ ತಂಡಕ್ಕೆ ಜಯಂತ್ ಮಾರ್ಗದರ್ಶನ ನೀಡುತ್ತಿದ್ದಾರೆ.

ರನ್ನರ್ಸ್ ಅಪ್ ಟ್ರೋಫಿಯೊಂದಿಗೆ ಬೆಂಗಳೂರು ಎಫ್‌ಸಿ ಬಾಲಕಿಯರ ತಂಡ. (ಕುಳಿತವರು) ಎಡದಿಂದ; ನಿಯತಾ, ಜನನಿ ತೋಪುರ್, ಕೃಷ್ಣಾ, ಚಿನ್ಮಯಿ ಜಿ.ಟಿ, ಪ್ರಣೀತಾ, ಸುಮನಾ ನಿರಂಜನ್, ಧನುಶ್ರೀ, ನಿದಾ (ನಿಂತವರು) ಮ್ಯಾನೇಜರ್ ಪ್ರಾರ್ಥನಾ, ಫಿಜಿಯೊ ವಾಹಿನಿ, ಸಿಲಾ ಆದರ್ಶ್, ಆಭಾ, ಕೋಚ್ ಜಯಂತ್, ಋತು ಶ್ರೀನಂದನ್, ಮಿಶಾ ಅಗರವಾಲ್, ಕಾಶಿಶ್, ಶನಯಾ, ಸೈಶಾ ಚಿತ್ರದಲ್ಲಿದ್ದಾರೆ

ಭಾರತೀಯ ಡೇರಿ ಸಂಘದ ದಕ್ಷಿಣ ವಲಯ ನಗರದಲ್ಲಿ ಆಯೋಜಿಸಿರುವ ‘ದಕ್ಷಿಣ ಡೇರಿ ಶೃಂಗ’ದಲ್ಲಿ ‘ಉತ್ತಮ ಹೈನುಗಾರ್ತಿ’ ಪ್ರಶಸ್ತಿ ಸ್ವೀಕರಿಸಿದ ಮಂಗಳಮ್ಮ (ಮಂಡ್ಯ), ಪಿ.ನವೀನ ಕುಮಾರಿ (ಆಂಧ್ರಪ್ರದೇಶ), ವಿ.ಸೆಲ್ವನಾಯಕಿ (ತಮಿಳುನಾಡು), ವಿಧು ರಾಜೀವ್ (ಕೇರಳ) ಮತ್ತು ಪುಥಾರಿ ಗಂಗವ್ವ (ತೆಲಂಗಾಣ) ಸಂಭ್ರಮವನ್ನು ಹಂಚಿಕೊಂಡ ಕ್ಷಣ ಪ್ರಜಾವಾಣಿ ಚಿತ್ರ

ಗ್ರಾಮ ಆಡಳಿತ ಅಧಿಕಾರಿಗಳ (ವಿಎಒ) ನೇಮಕಾತಿ

‘ಏಕ ನಿಯಮ ಪಾಲಿಸದ ಜಿಲ್ಲೆಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಆಡಳಿತ ಅಧಿಕಾರಿಗಳ (ವಿಎಒ) ನೇಮಕಾತಿಯಲ್ಲಿ ಜಿಲ್ಲೆಗಳ ನಡುವೆ ಏಕರೀತಿಯ ಮೀಸಲಾತಿ ನಿಯಮ ಅನುಸರಿಸಿಲ್ಲ. ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ ಎಂದು ಪರೀಕ್ಷೆ ಬರೆದಿದ್ದ ಹಲವು ಆಕಾಂಕ್ಷಿಗಳು ದೂರಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಒಂದು ಸಾವಿರ ವಿಎಒ ಹುದ್ದೆಗಳ ನೇಮಕಾತಿಗೆ ಅ.27 ರಂದು ಲಿಖಿತ ಪರೀಕ್ಷೆ ನಡೆಸಿತ್ತು. 4 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಅಂತಿಮ ಫಲಿತಾಂಶದ ಅರ್ಹತಾ ಪಟ್ಟಿಯನ್ನು ಪ್ರಾಧಿಕಾರ ಕಂದಾಯ ಇಲಾಖೆಗೆ ಸಲ್ಲಿಸಿತ್ತು.

ಅಂತಿಮ ಪಟ್ಟಿ ಸಲ್ಲಿಕೆಯಾದ ನಂತರ ಜಿಲ್ಲಾವಾರು ನೇಮಕಾತಿ ಮಾಡುತ್ತಿದ್ದು, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು 1:3 ಆಧಾರದಲ್ಲಿ ಅರ್ಹತಾ ಪಟ್ಟಿ ಬಿಡುಗಡೆ ಮಾಡಿದ್ದಾರೆ. ಎಲ್ಲ ಜಿಲ್ಲೆಗಳೂ ಜಾತಿವಾರು ಮೀಸಲಾತಿಯನ್ನು ಸರಿಯಾಗಿ ಅನ್ವಯಿಸಿವೆ. ಆದರೆ, ಮಹಿಳಾ ಮೀಸಲು, ಕನ್ನಡ ಮಾಧ್ಯಮ, ಗ್ರಾಮೀಣ ಅಭ್ಯರ್ಥಿ, ನಿರಾಶ್ರಿತರು, ಮಾಜಿ ಸೈನಿಕ ಮೊದಲಾದ ಮೀಸಲು ನಿಯಮವನ್ನು ಕೆಲ ಜಿಲ್ಲೆಗಳು ಕ್ರಮಬದ್ಧವಾಗಿ ಪಾಲಿಸಿಲ್ಲ ಎನ್ನುವುದು ಅಭ್ಯರ್ಥಿಗಳ ಆರೋಪ.

ನಿಯಮದ ಪ್ರಕಾರ ಅರ್ಹತಾ ಪಟ್ಟಿ ಸಿದ್ಧಪಡಿಸುವಾಗ ಮೊದಲು ಮಹಿಳಾ ಮೀಸಲಾತಿ, ನಂತರ ಕನ್ನಡ ಮಾಧ್ಯಮ ಹಾಗೂ ಕೊನೆಯಲ್ಲಿ ಇತರೆ.. ಕಾಲಂಗಳನ್ನು ಭರ್ತಿ ಮಾಡಿರುವ ಅಭ್ಯರ್ಥಿಗಳನ್ನು ಪರಿಗಣಿಸಬೇಕು. ಶಿವಮೊಗ್ಗ, ಚಿತ್ರದುರ್ಗ, ದಕ್ಷಿಣ ಕನ್ನಡ, ಬಾಗಲಕೋಟೆ ಸೇರಿದಂತೆ ಕೆಲ ಜಿಲ್ಲೆಗಳು ಮಾತ್ರ ಈ ನಿಯಮ ಪಾಲಿಸಿವೆ. ಉಳಿದ ಜಿಲ್ಲೆಗಳು ಪಾಲಿಸಿಲ್ಲ ಎಂದು ಅಭ್ಯರ್ಥಿಗಳಾದ ಸುರೇಶ್, ಲತಾ, ಅರ್ಜುನ್ ದೂರಿದ್ದಾರೆ. ಈ ಕುರಿತು ಸರ್ಕಾರಕ್ಕೆ ಮನವಿ ಮಾಡಿದರೂ ಸ್ಪಂದನೆ ದೊರೆತಿಲ್ಲ. ಇದರಿಂದ ಅರ್ಹ ಹಲವು ಅಭ್ಯರ್ಥಿಗಳು ನೇಮಕಾತಿ ಪಟ್ಟಿಯಿಂದ ಹೊರಗೆ ಉಳಿದಿದ್ದಾರೆ. ತಕ್ಷಣ ಪಟ್ಟಿ ಸರಿಪಡಿಸಲು ಎಲ್ಲ ಜಿಲ್ಲಾಧಿಕಾರಿಗಳಿಗೂ ಸೂಚಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ, ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಒತ್ತಾಯಿಸಿದ್ದಾರೆ.

‘ಕನ್ನಡಿಗರಿಗೆ ನೌಕರಿ ಗ್ಯಾರಂಟಿ ನೀಡಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡಿಗರ ಬಗ್ಗೆ ರಾಜ್ಯ ಸರ್ಕಾರಕ್ಕೆ ಪ್ರಾಮಾಣಿಕ ಕಾಳಜಿಯಿದ್ದಲ್ಲಿ ಉದ್ಯೋಗದ ಬಗ್ಗೆ ಗ್ಯಾರಂಟಿ ನೀಡಲಿ’ ಎಂದು ಕನ್ನಡ ಪರ ಹೋರಾಟಗಾರ ರಾ.ನಂ. ಚಂದ್ರಶೇಖರ ಆಗ್ರಹಿಸಿದರು.

ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ವಿಕಾಸ ರಂಗ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ 22, ಎಂ. ಚಿದಾನಂದಮೂರ್ತಿ 5ನೇ ಸಂಸ್ಮರಣೆ’ ಕಾರ್ಯಕ್ರಮದಲ್ಲಿ ‘ಕನ್ನಡಿಗರಿಗೆ ಉದ್ಯೋಗ’ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

‘ಹಲವು ಗ್ಯಾರಂಟಿಗಳನ್ನು ನೀಡಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ಪರಿಷ್ಕೃತ ಸರೋಜಿನಿ ಮಹಿಷಿ ವರದಿಯನ್ನು ಸದನದಲ್ಲಿ ಮಂಡಿಸಿ, ಕಾನೂನು ಬಲ ನೀಡಬೇಕು. ಕನ್ನಡಿಗರಿಗೆ ಉದ್ಯೋಗದ ಗ್ಯಾರಂಟಿ ನೀಡಬೇಕು’ ಎಂದು ಒತ್ತಾಯಿಸಿದರು.

ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ, ‘ಚಿದಾನಂದಮೂರ್ತಿ ಅವರು ಕನ್ನಡ ಚಳವಳಿಗೆ ಪ್ರವೇಶ ಮಾಡುವ ಮೂಲಕ ಚಳವಳಿಗೆ ಘನತೆ ತಂದುಕೊಟ್ಟರು. ಅವರು ಹೋರಾಟಗಳು ಯಶಸ್ವಿಯಾಗುವವರೆಗೆ ವಿಶ್ರಮಿಸುತ್ತಿರಲಿಲ್ಲ’ ಎಂದರು.

ಗಮಕಿ ಎಂ.ಆರ್. ಸತ್ಯನಾರಾಯಣ ಅವರಿಗೆ ‘ಚಿದಾನಂದಮೂರ್ತಿ ನೆನಪಿನ ಗೌರವ’ ಸಮರ್ಪಿಸಲಾಯಿತು. ವಿದ್ವಾಂಸ ಆರ್. ಶೇಷಶಾಸ್ತ್ರಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ಲೇಖಕ ಆನಂದ ರಾಮರಾವ್, ರಮೇಶ್‌ಬಾಬು, ಬಿ.ಎಂ. ಗಂಗಣ್ಣ, ಕೆ. ಕೃಷ್ಣಪ್ಪ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಎಂ.ಆರ್ ಸತ್ಯನಾರಾಯಣ ಅವರಿಗೆ ‘ಚಿದಾನಂದಮೂರ್ತಿ ನೆನಪಿನ ಗೌರವ’ ಸಮರ್ಪಿಸಲಾಯಿತು. ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ, ಆರ್. ಶೇಷಶಾಸ್ತ್ರಿ, ಮನು ಬಳಿಗಾರ್, ಆನಂದ ರಾಮರಾವ್, ರಮೇಶ್‌ಬಾಬು, ಬಿ.ಎಂ. ಗಂಗಣ್ಣ, ಕೆ. ಕೃಷ್ಣಪ್ಪ ಉಪಸ್ಥಿತರಿದ್ದರು

ಕ್ಯಾಥ್ ಲ್ಯಾಬ್ ಕಾರ್ಯಾರಂಭ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇರುವ ಅಪಘಾತ ಮತ್ತು ತುರ್ತು ಆರೈಕೆ ಕೇಂದ್ರದಲ್ಲಿ ಸ್ಥಾಪಿಸಲಾಗಿರುವ ಅತ್ಯಾಧುನಿಕ ಕ್ಯಾಥ್ ಲ್ಯಾಬ್ ಕಾರ್ಯಾರಂಭಿಸಿದೆ.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಅವರು ಕ್ಯಾಥ್ ಲ್ಯಾಬ್ ಉದ್ಘಾಟಿಸಿದರು.

ಪ್ರಿ-ಕ್ಯಾಥ್ ಮತ್ತು ಪೋಸ್ಟ್- ಕ್ಯಾಥ್ ವಾರ್ಡ್‌ಗಳ ಜತೆಗೆ ಎಂಟು ಹಾಸಿಗೆಗಳ ವಾರ್ಡ್ ಅನ್ನು ಈ ಕ್ಯಾಥ್ ಲ್ಯಾಬ್ ಒಳಗೊಂಡಿದೆ.

ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ 250 ಆಸನಗಳ ಹಾಗೂ ಅಪಘಾತ ಮತ್ತು ತುರ್ತು ಆರೈಕೆ ಕೇಂದ್ರದಲ್ಲಿ 150 ಆಸನಗಳ ಸಭಾಂಗಣ ನಿರ್ಮಿಸಲಾಗಿದೆ. ಇದರ ಉದ್ಘಾಟನೆ ಜೊತೆಗೆ ಸಚಿವರು, ವಿಕ್ಟೋರಿಯಾ ಆಸ್ಪತ್ರೆಗೆ 125 ವರ್ಷವಾದ ಸ್ಮರಣಾರ್ಥ ನೂತನ ಲಾಂಛನ ಅನಾವರಣಗೊಳಿಸಿದರು.

ಶಾಸಕ ಉದಯ್ ಗರುಡಾಚಾರ್, ರೇರಾ ಅಧ್ಯಕ್ಷ ರಾಕೇಶ್ ಸಿಂಗ್, ಆರೋಗ್ಯ ವಿ.ವಿ ಕುಲಪತಿ ಎಂ.ಕೆ. ರಮೇಶ್, ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಿಸಿನ್ ಉಪಸ್ಥಿತರಿದ್ದರು.

ಸಚಿವ ಎಚ್‌.ಕೆ.ಪಾಟೀಲ ಅವರಿಂದ ‘ಸದನ ಶೂರ’ ಬಿ.ಜೆ. ಪುಟ್ಟಸ್ವಾಮಿ ಗ್ರಂಥ ಲೋಕಾರ್ಪಣೆ

‘ಸಣ್ಣ ಸಮುದಾಯ ಸಂಘಟಿತವಾಗಲಿ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಸಮ ಸಮಾಜದ ಸೃಷ್ಟಿಗೆ ಸಣ್ಣ ಜನಾಂಗದವರು ಸಂಘಟಿತರಾಗಿ ಶಿಕ್ಷಣ ಪಡೆದು, ಸ್ವಯಂ ಉದ್ಯೋಗಿಗಳಾಗಿ ಸ್ವಾವಲಂಬನೆಯಿಂದ ಬದುಕಬೇಕು. ಇದು ಗಾಣಿಗ ಪೀಠದ ಪೂರ್ಣಾನಂದ ಸ್ವಾಮೀಜಿಯವರ ಸಂಕಲ್ಪ’ ಎಂದು ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ನಗರೂರಿನಲ್ಲಿರುವ ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದಲ್ಲಿ ಪೂರ್ಣಾನಂದ ಪುರಿ ಮಹಾಸ್ವಾಮಿಯವರ ದ್ವಿತೀಯ ಪೀಠಾರೋಹಣ ಸಮಾರಂಭ ಹಾಗೂ ನೂತನ ಶಾಲಾ ಕಟ್ಟಡ, ಪ್ರಸಾದ ಮನೆ ಕಟ್ಟಡಗಳ ಉದ್ಘಾಟನಾ ಸಮಾರಂಭದಲ್ಲಿ ಎಂ.ವಿ. ನೆಗಳೂರ ರಚಿಸಿದ ವಿಧಾನಪರಿಷತ್ತಿನಲ್ಲಿ ‘ಸದನ ಶೂರ’ ಬಿ.ಜೆ. ಪುಟ್ಟಸ್ವಾಮಿ’ ಗ್ರಂಥವನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ಬೈರಪ್ಪ ಅವರ ‘ಗಾಣಿಗ ಸೂರ್ಯ’ ಗ್ರಂಥ ಬಿಡುಗಡೆ ಮಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ‘ಗಾಣಿಗರು ಪೂರ್ಣಾನಂದ ಶ್ರೀಗಳ ಮುಖಂಡತ್ವದಲ್ಲಿ ಸಂಘಟಿತರಾಗಿ ಅವರಿಗೆ ಬೆಂಬಲವಾಗಿ ನಿಲ್ಲಬೇಕು’ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ವಿ.ಆರ್. ಸುದರ್ಶನ್ ಮಾತನಾಡಿ, ‘ಸಂವಿಧಾನ, ಪ್ರಜಾಪ್ರಭುತ್ವದ ಆಶಯಗಳು ಈಡೇರಬೇಕಿದ್ದರೆ ಜನಗಣತಿ ಆಗಬೇಕು’ ಎಂದು ಆಗ್ರಹಿಸಿದರು.

ಪೂರ್ಣಾನಂದಪುರಿ ಸ್ವಾಮೀಜಿ (ಬಿ.ಜೆ. ಪುಟ್ಟಸ್ವಾಮಿ) ಅವರು, ‘ಕಟ್ಟಡಗಳ ನಿರ್ಮಾಣಕ್ಕೆ ಮಂಜೂರಾಗಿದ್ದ ಅನುದಾನದಲ್ಲಿ ಬಾಕಿ ಇರುವ ₹ 1.5 ಕೋಟಿಯನ್ನು ಶೀಘ್ರ ಬಿಡುಗಡೆ ಮಾಡಬೇಕು. ಗಾಣಿಗರ ಅಭಿವೃದ್ಧಿ ನಿಗಮ ಸ್ಥಾಪಿಸಿ ನಮ್ಮ ಮೂಲ ಕಸುಬು ಎಣ್ಣೆ ತೆಗೆಯುವ ಕಾಯಕಕ್ಕೆ ಶಕ್ತಿ ತುಂಬಬೇಕು’ ಎಂದು ಕೇಳಿಕೊಂಡರು.

‘ಕನಸು ನನಸು’ ಸ್ಮರಣ ಸಂಚಿಕೆ, ಶ್ರೀಮಠದ ಸಾಮಾಜಿಕ ಜಾಲತಾಣ ಬಿಡುಗಡೆ ಮಾಡಲಾಯಿತು. ಗ್ರಂಥಾಲಯ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಲಾಯಿತು.

ಕೈಲಾಸಾಶ್ರಮದ ಜಯೇಂದ್ರಪುರಿ ಸ್ವಾಮೀಜಿ, ಕಟ್ಟಡ ದಾನಿಗಳಾದ ಓಬಳೇಶ್, ಕೆಂಪಣ್ಣ ಶೆಟ್ಟಿ, ಎಂ.ಆರ್. ನಾರಾಯಣ್, ಡಾ. ವಾಸಂತಿ ಅಮರ್, ಜಿ.ಎನ್. ವೇಣುಗೋಪಾಲ್, ಜಿ.ಎಸ್. ಅಮರನಾಥ್, ಟ್ರಸ್ಟಿಗಳಾದ ರಂಗರಾಜು, ಎಂ.ಆರ್. ರಾಜಶೇಖರ್, ಕೆ.ವಿ.ರಮೇಶ್ ಭಾಗವಹಿಸಿದ್ದರು.

ವಿಧಾನ ಪರಿಷತ್ತಿನಲ್ಲಿ ‘ಸದನ ಶೂರ’ ಬಿ.ಜೆ.ಪುಟ್ಟಸ್ವಾಮಿ ಗ್ರಂಥವನ್ನು ಸಚಿವ ಎಚ್.ಕೆ. ಪಾಟೀಲ ಬಿಡುಗಡೆ ಮಾಡಿದರು. ಮುಖಂಡರಾದ ಪಿ.ಜಿ. ವಿಜಯಕುಮಾರ್, ಅಮರ್‌ನಾಥ್, ವೇಣುಗೋಪಾಲ್, ವಿಧಾನ ಪರಿಷತ್ ಮಾಜಿ ಸದಸ್ಯ ವಿ.ಆರ್. ಸುದರ್ಶನ್, ಪೂರ್ಣಾನಂದ ಪುರಿ ಸ್ವಾಮೀಜಿ, ಜಿಲ್ಲಾಧಿಕಾರಿ ವಾಸಂತಿ ಅಮರ್ ಭಾಗವಹಿಸಿದ್ದರು



ರಾಜ್ಯ ಕಂಡ–ಅಪ್ರತಿಮ ಧೀಮಂತ ನಾಯಕ, ಐ.ಟಿ., ಕೈಗಾರಿಕಾ ಕ್ರಾಂತಿ,
ಆಲಮಟ್ಟಿ ಡ್ಯಾಂ, ಸಿ.ಇ.ಟಿ., ರಾಷ್ಟ್ರದ ಆಡಳಿತ ಸುಧಾರಣೆ ಮತ್ತು
ಚಿನ್ನಪ್ಪರೆಡ್ಡಿ ಆಯೋಗದ ವರದಿಯ ಅನುಷ್ಠಾನದ ಮೂಲಕ
ಸಾಮಾಜಿಕ ನ್ಯಾಯವನ್ನು ನೀಡಿ, ಪಂಚಾಯತ್‌ರಾಜ್ ವ್ಯವಸ್ಥೆಯ
ಕ್ರಾಂತಿಕಾರಿ ಸಂವಿಧಾನದ ತಿದ್ದುಪಡಿಯನ್ನು
ರಾಷ್ಟ್ರದಲ್ಲಿ ಪ್ರಪ್ರಥಮವಾಗಿ ಜಾರಿಮಾಡಿದ ಮಾಜಿ ಕೇಂದ್ರ ಸಚಿವರು
ಹಾಗೂ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳು,
ಮೂರು ಮಹಾಕಾವ್ಯಗಳನ್ನು ನೀಡಿದ ಮಹಾಕವಿ
'ಮೂರ್ತಿದೇವಿ', 'ಸರಸ್ವತಿಸಮ್ಮಾನ್', 'ಕೇಂದ್ರ ಸಾಹಿತ್ಯ ಅಕಾಡೆಮಿ'
ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ

ಡಾ. ಎಂ. ವೀರಪ್ಪ ಮೊಯಿಲಿ ರವರಿಗೆ

ಜನುಮದಿನದ ಶುಭಾಶಯಗಳು

12ನೇ ಜನವರಿ, 2025



ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.)

ಮೂಡಬಿದಿರೆ

ಮತ್ತು

ಸಪ್ನ ಬುಕ್ ಹೌಸ್

(ಭಾರತದ ಅತಿದೊಡ್ಡ ಪುಸ್ತಕ ಭಂಡಾರ)

ಡಾ. ಎಂ. ವೀರಪ್ಪ ಮೊಯಿಲಿ ಅವರ

'ವಿಶ್ವ ಸಂಸ್ಕೃತಿಯ ಮಹಾಯಾನ'

ಸಂಪುಟ – 2
ಗದ್ಯ ಮಹಾಕಾವ್ಯ ಬಿಡುಗಡೆ ಸಮಾರಂಭ

ದಿನಾಂಕ: 12ನೇ ಜನವರಿ, 2025, ಭಾನುವಾರ
ಸಮಯ: ಬೆಳಗ್ಗೆ 11.00 ರಿಂದ ಮಧ್ಯಾಹ್ನ 2.00 ಗಂಟೆ
ಸ್ಥಳ: ಡಾ. ವಿ.ಎಸ್. ಆಚಾರ್ಯ ಸಭಾಭವನ
ಆಳ್ವಾಸ್ ಶಿಕ್ಷಣ ಸಂಸ್ಥೆ ಆವರಣ, ವಿದ್ಯಾಗಿರಿ, ಮೂಡಬಿದಿರೆ.
ತಮಗೆ ಆತ್ಮೀಯ ಸ್ವಾಗತ

ಶ್ರೀಯುತರು ಇನ್ನೂ ನೂರ್ಕಾಲ ಬಾಳಲಿ, ದೇವರು ಅವರಿಗೆ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ತಾಯಿ ಭುವನೇಶ್ವರಿ ದೇವಿಯಲ್ಲಿ ಪ್ರಾರ್ಥಿಸುತ್ತೇವೆ.

: ಶುಭಾಶಯ ಕೋರುವವರು :

ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಶ್ರೀ ಹೆಚ್.ಎಂ. ರೇವಣ್ಣ
ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ

ಶ್ರೀ ಕೆ.ಎಂ. ನಾಗರಾಜ್
ಹಿರಿಯ ಕಾಂಗ್ರೆಸ್ ಮುಖಂಡರು

ಕುಸಿದ ಭತ್ತದ ಧಾರಣೆ

ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ದರ: ರೈತರು ಕಂಗಾಲು

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯಲ್ಲಿ ಈ ಬಾರಿ ಭತ್ತದ ಉತ್ಪಾದನೆ ಉತ್ತಮವಾಗಿದ್ದು, ಪೂರೈಕೆ ಹೆಚ್ಚಿರುವುದರಿಂದ ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಕುಸಿದಿದೆ.

ಕೇಂದ್ರ ಸರ್ಕಾರವು 2024–25ನೇ ಸಾಲಿಗೆ ಸಾಮಾನ್ಯ ಭತ್ತಕ್ಕೆ ಕ್ವಿಂಟಲ್‌ಗೆ ₹2,300 ಹಾಗೂ 'ಎ' ಗ್ರೇಡ್ ಭತ್ತಕ್ಕೆ ₹2,320 ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಪಡಿಸಿದೆ.

ಕಳೆದ ವರ್ಷ ಬರಗಾಲವಿತ್ತು. ಭತ್ತಕ್ಕೆ ನೀರು ದೊರೆಯದೆ ಫಸಲು ಕಡಿಮೆಯಾಗಿತ್ತು. ಇದರಿಂದ ಬೆಲೆ ಏರಿಕೆಯಾಗಿತ್ತು. ಪ್ರತಿ ಕ್ವಿಂಟಲ್‌ಗೆ ₹3,200–₹3,400ರವರೆಗೂ ಮಾರಾಟವಾಗಿತ್ತು.

ಈ ವರ್ಷ ಕ್ವಿಂಟಲ್‌ಗೆ ಸರಾಸರಿ ₹2,000–₹2,200 ದರದಲ್ಲಿ ದಲ್ಲಾಳಿಗಳು ರೈತರಿಂದ ಭತ್ತ ಖರೀದಿಸುತ್ತಿದ್ದಾರೆ. ಮುಕ್ತ ಮಾರುಕಟ್ಟೆಯಲ್ಲಿ ಎಂಎಸ್‌ಪಿಗಿಂತಲೂ ಕಡಿಮೆ ದರ ಇರುವುದರಿಂದ ರೈತರು ಕಂಗಾಲಾಗಿದ್ದಾರೆ.

ಕಳೆದ ವರ್ಷ 'ಜ್ಯೋತಿ' ತಳಿಯ ಭತ್ತಕ್ಕೆ ಕ್ವಿಂಟಲ್‌ಗೆ ₹3,500ರವರೆಗೆ ದರವಿತ್ತು. ಪ್ರಸ್ತುತ ₹2,500 ದರವಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಕ್ವಿಂಟಲ್‌ಗೆ ಸರಾಸರಿ ₹1 ಸಾವಿರ ದರ ಕಡಿಮೆಯಾಗಿದೆ.

ಖರೀದಿ ಕೇಂದ್ರಗಳಲ್ಲಿ ರೈತರ ನೋಂದಣಿ ಪ್ರಕ್ರಿಯೆ ನಡೆದಿದೆ. ಮಾರುಕಟ್ಟೆಯಲ್ಲಿ ದಲ್ಲಾಳಿಗಳು ಬೆಲೆ ನಿಯಂತ್ರಿಸುತ್ತಿದ್ದಾರೆ ಎಂಬುದು ರೈತರ ಆರೋಪ.

ಜಿಲ್ಲೆಯಲ್ಲಿ 16 ಖರೀದಿ ಕೇಂದ್ರ ತೆರೆಯಲಾಗಿದೆ. ಈವರೆಗೆ 735 ರೈತರಿಂದ ಒಟ್ಟು 25 ಸಾವಿರ ಕ್ವಿಂಟಲ್ ಮಾರಾಟಕ್ಕೆ ಹೆಸರು ನೋಂದಾಯಿಸಿದ್ದಾರೆ. ತಂತ್ರಾಂಶ ಸಿದ್ಧಗೊಳ್ಳದ ಕಾರಣ ಖರೀದಿ ಪ್ರಕ್ರಿಯೆ ಆರಂಭಗೊಂಡಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೀಲಗಳ ಕೊರತೆ

ಚಾಮರಾಜನಗರ: ಜಿಲ್ಲೆಯಲ್ಲಿ ಭತ್ತದ ಕಟಾವು ಬಹುತೇಕ ಮುಗಿಯುತ್ತಾ ಬಂದಿದೆ. ಈ ಬಾರಿಯೂ ತಡವಾಗಿ ಖರೀದಿ ಕೇಂದ್ರ ತೆರೆಯಲಾಗಿದೆ.

ಪರಿಸ್ಥಿತಿಯ ಲಾಭ ಪಡೆದಿರುವ ತಮಿಳುನಾಡು ಮತ್ತು ಕೇರಳದ ವ್ಯಾಪಾರಿಗಳು ಕಡಿಮೆ ದರಕ್ಕೆ ಭತ್ತ ಖರೀದಿ ಮಾಡುತ್ತಿದ್ದಾರೆ ಎಂದು ರೈತರು ದೂರುತ್ತಾರೆ.

'ಚೀಲಗಳ ಕೊರತೆ, ಗ್ರೇಡಿಂಗ್ ಕಿರಿಕಿರಿ, ಹೆಚ್ಚುವರಿ ಸಾಗಣೆ ವೆಚ್ಚದ ಹೊರೆ, ತಡವಾಗಿ ಹಣ ಜಮೆ ಸೇರಿ ಹಲವು ಕಾರಣಗಳಿಂದ ಜಿಲ್ಲೆಯ ರೈತರು ಖರೀದಿ ಕೇಂದ್ರಗಳತ್ತ ಆಸಕ್ತಿ ತೋರುತ್ತಿಲ್ಲ. ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಸರ್ಕಾರವು ಖರೀದಿ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಬೇಕು. ಖರೀದಿಸಿದ ಕೂಡಲೇ ಶೇ 25ರಷ್ಟು ಹಣವನ್ನು ರೈತರ ಖಾತೆಗೆ ಜಮೆ ಮಾಡಬೇಕು' ಎಂದು ಒತ್ತಾಯಿಸುತ್ತಾರೆ ರೈತ ಮುಖಂಡ ಹೊನ್ನೂರು ಪ್ರಕಾಶ್.

ದಲ್ಲಾಳಿಗಳ ಮಾಫಿಯಾ

ಬೆಳಗಾವಿ: ಈ ಬಾರಿ ಜಿಲ್ಲೆಯ 60,100 ಹೆಕ್ಟೇರ್‌ನಲ್ಲಿ ಭತ್ತ ಬೆಳೆಯಲಾಗಿದೆ.

ಆದರೆ, ಈಗಾಗಲೇ ಶೇ 90ರಷ್ಟು ರೈತರು ಭತ್ತ ಕಟಾವು ಮಾಡಿ ಕೈಗೆ ಸಿಕ್ಕಷ್ಟು ದರಕ್ಕೆ ಮಾರಾಟ ಮಾಡಿದ್ದಾರೆ. ಸರ್ಕಾರ ಈಗ ಖರೀದಿ ಕೇಂದ್ರ ತೆರೆದರೆ ಪ್ರಯೋಜನವಿಲ್ಲ ಎಂದು ಭಾರತೀಯ ಕೃಷಿಕ ಸಮಾಜ (ಸಂಯುಕ್ತ) ಸಂಘಟನೆಯ ಅಧ್ಯಕ್ಷ ಸಿದಗೌಡ ಮೋದಗಿ ದೂರುತ್ತಾರೆ.

ಅಕ್ಟೋಬರ್‌ನಲ್ಲಿ ಬೆಂಬಲ ಬೆಲೆ ಘೋಷಿಸಬೇಕಿತ್ತು. ನವೆಂಬರ್ ಮೊದಲ ವಾರದಲ್ಲಿ ಖರೀದಿ ಕೇಂದ್ರ ತೆರೆಯಬೇಕಿತ್ತು. ಉದ್ದೇಶಪೂರ್ವಕವಾಗಿಯೇ ವಿಳಂಬ ಮಾಡಿದ್ದಾರೆ ಎಂಬುದು ಅವರ ಆರೋಪ.

ಯಾವುದೇ ಫಸಲು ರೈತರ ಕೈಗೆ ಬಂದಾಗ ದಲ್ಲಾಳಿಗಳು ಬೆಲೆ ಕುಸಿಯುವಂತೆ ಮಾಡುತ್ತಾರೆ. ಇದೊಂದು ಮಾಫಿಯಾ. ಕಡಿಮೆ ದರಕ್ಕೆ ಖರೀದಿಸಲು ಈ ರೀತಿ ಮಾಡುತ್ತಾರೆ ಎಂದು ದೂರಿದ್ದಾರೆ.

ಸರ್ಕಾರದ ಷರತ್ತುಗಳೇ ಬೆಳೆಗಾರರಿಗೆ ಬರೆ

ಬಳ್ಳಾರಿ: ಜಿಲ್ಲೆಯ 1 ಲಕ್ಷ ಹೆಕ್ಟೇರ್‌ನಲ್ಲಿ ಭತ್ತ ಬಿತ್ತನೆಯಾಗಿತ್ತು. ಎಕರೆಗೆ 40 ಕ್ವಿಂಟಲ್ ಫಸಲು ಬರುವ ನಿರೀಕ್ಷೆ ಇತ್ತಾದರೂ, ಚಂಡಮಾರುತದಿಂದಾಗಿ ಕನಿಷ್ಠ 35ರಿಂದ ಗರಿಷ್ಠ 38 ಕ್ವಿಂಟಲ್ ಫಸಲಷ್ಟೇ ರೈತರಿಗೆ ಸಿಕ್ಕಿದೆ.

ಎರಡನೇ ಬೆಳೆಗೂ ನೀರಿನ ಲಭ್ಯತೆ ಇರುವ ಕಾರಣ ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಕುಸಿದಿದೆ. ಇದಕ್ಕೆ ಹೋಲಿಸಿದರೆ ಖರೀದಿ ಕೇಂದ್ರದಲ್ಲಿನ ಬೆಂಬಲ ಬೆಲೆ ಹೆಚ್ಚಿದೆ. ಆದರೆ, ಖರೀದಿಗೆ ನಿಗದಿಪಡಿಸಿರುವ ಮಾನದಂಡಗಳಿಂದ ಬೇಸತ್ತಿರುವ ರೈತರು ಖಾಸಗಿಯವರಿಗೆ ಮಾರಾಟ ಮಾಡುತ್ತಿದ್ದಾರೆ.

'ಖರೀದಿಗೆ ಹಲವು ಷರತ್ತುಗಳನ್ನು ವಿಧಿಸಿರುವುದರಿಂದ ರೈತರು ಸರ್ಕಾರಕ್ಕೆ ಮಾರಲು ಮುಂದಾಗುತ್ತಿಲ್ಲ' ಎನ್ನುತ್ತಾರೆ ರಾಜ್ಯ ರೈತ ಸಂಘದ ಅಧ್ಯಕ್ಷ ಕರೂರು ಮಾಧವ ರೆಡ್ಡಿ.

ಬೇಡಿಕೆ ಕಡಿಮೆ

(ವಿಜಯನಗರ ವರದಿ): ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆ ಆಗಿದ್ದರಿಂದ ಭತ್ತದ ಇಳುವರಿ ಚೆನ್ನಾಗಿದೆ. 12,032 ಹೆಕ್ಟೇರ್‌ನಲ್ಲಿ 75,801 ಟನ್ ಭತ್ತ ಉತ್ಪಾದನೆಯಾಗಿದೆ. ಆದರೆ, ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆ ಇದೆ. ಇದೇ ಕಾರಣಕ್ಕೆ ಬೆಲೆ ಕುಸಿದಿದೆ ಎಂದು ರೈತರು ಹೇಳುತ್ತಾರೆ.

'ಹೊಸಪೇಟೆ ಭಾಗದಲ್ಲಿ ದಪ್ಪ ಭತ್ತ ಬೆಳೆಯಲಾಗುತ್ತಿದ್ದು, ಇದು ದಾವಣಗೆರೆಯ ಮಂಡಕ್ಕಿ ಬಟ್ಟಿಗಳಿಗೆ ಪೂರೈಕೆಯಾಗುತ್ತದೆ. ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ ಭಾಗದಲ್ಲಿ ಬೆಳೆಯುವ ಉತ್ತಮ ಗುಣಮಟ್ಟದ ಭತ್ತ ಗಂಗಾವತಿ ಅಕ್ಕಿ ಗಿರಣಿಗಳಿಗೆ ಹೋಗುತ್ತದೆ. ಅಲ್ಲಿಂದ ರಾಜ್ಯದ ಇತರೆ ಕಡೆಗಳಿಗೆ ಹಾಗೂ ಆಂಧ್ರಪ್ರದೇಶ, ತಮಿಳುನಾಡಿಗೆ ರವಾನೆಯಾಗುತ್ತದೆ' ಎಂದು ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಮುದ್ಗಲ್ ಹೇಳಿದರು.

ದಾವಣಗೆರೆ: ಶೇ 90ರಷ್ಟು ಮಾರಾಟ ಪೂರ್ಣ

(ದಾವಣಗೆರೆ ವರದಿ): ಜಿಲ್ಲೆಯಲ್ಲಿ ಮುಂಗಾರು ಅವಧಿಯಲ್ಲಿ ನಾಟಿ ಮಾಡಿದ್ದ ಭತ್ತದ ಪೈಕಿ ಶೇ 90ರಷ್ಟು ಭತ್ತವನ್ನು ರೈತರು ಈಗಾಗಲೇ ಮಾರಾಟ ಮಾಡಿದ್ದಾರೆ. ಭದ್ರಾ ಜಲಾಶಯದಿಂದ ಕಾಲುವೆಗಳಿಗೆ ನೀರು ಬಿಟ್ಟಿದ್ದು, ಹಿಂಗಾರು ಬಿತ್ತನೆಗೆ ಅಣಿಯಾಗಿದ್ದಾರೆ.

'ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡಿದ ಭತ್ತಕ್ಕೆ ಹಣ ಪಾವತಿಸುವುದು ಸ್ವಲ್ಪ ವಿಳಂಬವಾಗುತ್ತದೆ. ಹೀಗಾಗಿ, ರೈತರು ಅಕ್ಕಿ ಗಿರಣಿ ಮಾಲೀಕರು, ಮಧ್ಯವರ್ತಿಗಳು ಹಾಗೂ ಎಪಿಎಂಸಿಯಲ್ಲಿ ಮಾರಾಟ ಮಾಡಿದ್ದಾರೆ. ಸದ್ಯ ರೈತರ ಬಳಿ ಭತ್ತವಿಲ್ಲ. ಇಲ್ಲಿನ ಎಪಿಎಂಸಿಯಲ್ಲಿ ಇ–ಟೆಂಡರ್ ಕರೆದಿದ್ದಾಗ ಕ್ವಿಂಟಲ್‌ಗೆ ₹2,700 ದರ ದೊರೆತಿದೆ' ಎಂದು ರೈತ ಮುಖಂಡ ಕೋಳೇನಹಳ್ಳಿ ಬಿ.ಎಂ. ಸತೀಶ್ ತಿಳಿಸಿದರು.

ಖರೀದಿ ಕೇಂದ್ರಕ್ಕೆ ಬಾರದ ರೈತರು

ರಾಯಚೂರು: ಜಿಲ್ಲೆಯ ಮುಕ್ತ ಮಾರುಕಟ್ಟೆಯಲ್ಲಿ ಭತ್ತದ ಗುಣಮಟ್ಟಕ್ಕೆ ಅನುಗುಣವಾಗಿ ಕ್ವಿಂಟಲ್‌ಗೆ ₹2,700ರಿಂದ ₹2,800ರ ವರೆಗೆ ಧಾರಣೆಯಿದೆ.

'ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿ ಖರೀದಿ ಕೇಂದ್ರ ತೆರೆಯಲಾಗಿದೆ. ಭತ್ತಕ್ಕೆ ಎಂಎಸ್‌ಪಿಗಿಂತಲೂ ಹೆಚ್ಚಿನ ಬೆಲೆ ದೊರೆಯುತ್ತಿರುವ ಕಾರಣ ರೈತರು ಈ ಕೇಂದ್ರಗಳಿಗೆ ಬರುತ್ತಿಲ್ಲ' ಎಂದು ಕೃಷಿ ಮಾರಾಟ ಇಲಾಖೆಯ ಉಪ ನಿರ್ದೇಶಕ ಕೃಷ್ಣ ಹೇಳಿದರು.

'ಜಿಲ್ಲೆಯಲ್ಲಿ 9,26,890 ಕ್ವಿಂಟಲ್ ಭತ್ತ ಉತ್ಪಾದನೆಯ ನಿರೀಕ್ಷೆಯಿದೆ. ಕಳೆದ ವರ್ಷ ರಾಯಚೂರು ಎಪಿಎಂಸಿಯೊಂದಕ್ಕೆ 2 ಲಕ್ಷ ಕ್ವಿಂಟಲ್ ಭತ್ತ ಆವಕವಾಗಿತ್ತು. ಪ್ರಸಕ್ತ ವರ್ಷ ಇಲ್ಲಿಯವರೆಗೆ 60 ಸಾವಿರ ಕ್ವಿಂಟಲ್ ಬಂದಿದೆ. ಇಲ್ಲಿ ಬೆಳೆದ ಭತ್ತವು ಆಂಧ್ರಪ್ರದೇಶ ಹಾಗೂ ತೆಲಂಗಾಣಕ್ಕೆ ಪೂರೈಕೆಯಾಗುತ್ತದೆ' ಎಂದು ಮಾಹಿತಿ ನೀಡಿದರು.

'ಜಿಲ್ಲೆಯಲ್ಲಿ ಹೆಚ್ಚಿನವರು ಗದ್ದೆಗಳನ್ನು ಗುತ್ತಿಗೆ ಪಡೆದು ಭತ್ತ ಬೆಳೆದಿದ್ದಾರೆ. ಬೆಂಬಲ ಬೆಲೆಯ ಲಾಭ ಪಡೆದುಕೊಳ್ಳಬೇಕಾದರೆ ಪಹಣಿ, ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ಆಧಾರ್ ಕಾರ್ಡ್ ನೀಡಬೇಕು. ಗುತ್ತಿಗೆ ಪಡೆದು ಭತ್ತ ಬೆಳೆದವರಿಗೆ ಅಂಥ ಅವಕಾಶ ಇಲ್ಲ. ಇಂಥವರು ನೇರವಾಗಿ ಅಕ್ಕಿ ಗಿರಣಿಗಳಿಗೆ ಮಾರಾಟ ಮಾಡುತ್ತಿದ್ದಾರೆ' ಎಂದು ದೇವದುರ್ಗ ತಾಲ್ಲೂಕಿನ ಇಂಗಳದಾಳದ ರೈತ ಪ್ರಭಾಕರ ಪಾಟೀಲ ಹೇಳುತ್ತಾರೆ.

ಕೊಪ್ಪಳ: ಇಳುವರಿ ಕುಸಿತ

ಕೊಪ್ಪಳ: ಜಿಲ್ಲೆಯ ಗಂಗಾವತಿ ಹಾಗೂ ಕನಕಗಿರಿ ಭಾಗದಲ್ಲಿ ಹೆಚ್ಚಾಗಿ ಭತ್ತ ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು 68 ಸಾವಿರ ಹೆಕ್ಟೇರ್ ಭತ್ತ ಬಿತ್ತನೆ ಪ್ರದೇಶವಿದೆ. ಪ್ರತಿ ಹೆಕ್ಟೇರ್‌ಗೆ ಸರಾಸರಿ ಇಳುವರಿ 70 ಕ್ವಿಂಟಲ್ ಇದೆ. ಆದರೆ, ಈ ಬಾರಿ ಹವಾಮಾನ ವೈಪರೀತ್ಯದಿಂದ ಭತ್ತದ ಇಳುವರಿ ವಾಡಿಕೆಗಿಂತ ಕಡಿಮೆಯಾಗಿದೆ. ಕೆಲವೆಡೆ ಭತ್ತ ಕಪ್ಪಾಗಿದ್ದು, ಅಲ್ಲಿ ಮಾತ್ರ ದರ ಕಡಿಮೆಯಿದೆ. ಗಂಗಾವತಿಯಿಂದ ಭತ್ತವು ಕೋಲ್ಕತ್ತ, ಅಸ್ಸಾಂಗೆ ಪೂರೈಕೆಯಾಗುತ್ತದೆ.

ರಾಯಚೂರಿನ ರಾಜೇಂದ್ರ ಗಂಜ್‌ನಲ್ಲಿ ರೈತರು ಭತ್ತ ಸಂಗ್ರಹಿಸಿದ್ದಾರೆ ಚಿತ್ರ: ಶ್ರೀನಿವಾಸ ಇನಾಮದಾರ್

ನಿಧನ



ಶ್ರೀಮತಿ ಪ್ರಮೀಳಾ ಕೃಷ್ಣ
w/o ಲೇಟ್ ಕ್ಯಾಪ್ಟನ್ ಕೆ.ಆರ್.ಕೃಷ್ಣ
(27-06-1924 to 10-01-2025)

ದಿನಾಂಕ:2025 ರ ಜನವರಿ 10 ರಂದು ಶ್ರೀಮತಿ ಪ್ರಮೀಳಾ ಕೃಷ್ಣ ಅವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ದುಃಖತಪ್ತರು
ಕೆ.ಚಂದ್ರಪ್ರಕಾಶ್,
ಲೇಖ & ಶ್ರೀನಿವಾಸಮೂರ್ತಿ, ವಿನಯ್ ಕಾರ್ತೀಕ್ & ತೇಜಸ್ವಿನಿ,
ಶ್ರುತಿಕಾ & ರಘುನಂದನ್ ರಾಮಣ್ಣ
ಸೈರಾ, ಸಿತಾರ, ಪ್ರವಲಿಕ ಮತ್ತು ಪ್ರಗ್ಯಾನ್.
PH:+91 9632521924

ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ ಹೇಳಿಕೆ

ಶೇ 20ರಷ್ಟು ಜೈವಿಕ ಇಂಧನ ಬಳಕೆ ಗುರಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ದೇಶದ ಒಟ್ಟು ಇಂಧನ ಬಳಕೆಯಲ್ಲಿ ಜೈವಿಕ ಇಂಧನದ ಬಳಕೆ ಪ್ರಮಾಣವನ್ನು ಈ ವರ್ಷದ ಅಕ್ಟೋಬರ್ ವೇಳೆಗೆ ಶೇ 20ರಷ್ಟಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಇದನ್ನು ಈ ಗಡುವಿಗಿಂತ ಮುನ್ನವೇ ಸಾಧಿಸಲಿದ್ದೇವೆ' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್ ಸಿಂಗ್ ಪುರಿ ತಿಳಿಸಿದರು.

ಮಂಗಳೂರು ಸಾಹಿತ್ಯ ಉತ್ಸವದಲ್ಲಿ ಶನಿವಾರ ಏರ್ಪಡಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

'ಇಂಗಾಲ ಹೊರಸೂಸುವಿಕೆ ಪ್ರಮಾಣವನ್ನು 2070ರೊಳಗೆ ಶೂನ್ಯಕ್ಕೆ ಇಳಿಸುವ ಗುರಿ ನಿಗದಿಪಡಿಸಲಾಗಿದೆ. ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಕಂಪನಿಗಳು 2040ರೊಳಗೆ ಈ ಗುರಿ ತಲುಪಲು ತಯಾರಿ ಮಾಡಿಕೊಂಡಿವೆ' ಎಂದರು.

'ಇಂಧನ ಭದ್ರತೆಯ ನಿಟ್ಟಿನಲ್ಲಿ ನಮ್ಮ ಪೂರ್ವ ತಯಾರಿ ಉತ್ತಮವಾಗಿದೆ. ಇನ್ನೂ 20 ವರ್ಷಗಳಷ್ಟು ಬಳಸುವಷ್ಟು ಪಳೆಯುಳಿಕೆ ಇಂಧನ ಲಭ್ಯ ಇದೆ. ಭವಿಷ್ಯದ ದೃಷ್ಟಿಯಿಂದ ಸಾಂದ್ರೀಕೃತ ಜೈವಿಕ ಅನಿಲ (ಸಿಬಿಜಿ) ಮತ್ತು ಸಾಂದ್ರೀಕೃತ ನೈಸರ್ಗಿಕ ಅನಿಲ (ಸಿಎನ್‌ಜಿ), ಸೌರಶಕ್ತಿ ಉತ್ಪಾದನೆಗೆ ಉತ್ತೇಜನ ನೀಡಲಾಗುತ್ತಿದೆ' ಎಂದು ತಿಳಿಸಿದರು.

'147 ಕೋಟಿ ಜನಸಂಖ್ಯೆ ಹೊಂದಿರುವ ಭಾರತದಲ್ಲಿ ನಿತ್ಯ ಸರಾಸರಿ 6.7 ಕೋಟಿ ಜನರು ತಮ್ಮ ವಾಹನಗಳಿಗೆ ಪೆಟ್ರೋಲ್ ಬಂಕ್‌ಗಳಲ್ಲಿ ಇಂಧನ ತಂಬಿಸುತ್ತಾರೆ. ಜಗತ್ತಿನ ಎಷ್ಟೋ ರಾಷ್ಟ್ರಗಳ ಒಟ್ಟು ಜನಸಂಖ್ಯೆಯೇ ಇಷ್ಟೊಂದು ಪ್ರಮಾಣದಲ್ಲಿಲ್ಲ. ನಮ್ಮ ದೈನಂದಿನ ಕಚ್ಚಾತೈಲದ ಬಳಕೆ 50 ಲಕ್ಷ ಬ್ಯಾರೆಲ್‌ಗಳಿಂದ 57 ಲಕ್ಷ ಬ್ಯಾರೆಲ್‌ಗೆ ಹೆಚ್ಚಿದೆ. ಇದರ ಬೆಳವಣಿಗೆ ದರ ನೋಡಿದರೆ ಶೀಘ್ರವೇ ನಮಗೆ 60 ಲಕ್ಷ ಬ್ಯಾರೆಲ್‌ಗಳಿಂದ 70 ಲಕ್ಷ ಬ್ಯಾರೆಲ್‌ಗಳಷ್ಟು ಕಚ್ಚಾತೈಲವು ದೈನಂದಿನ ಬಳಕೆಗೆ ಬೇಕಾಗುತ್ತದೆ' ಎಂದರು.

ಗ್ರೀನ್ ಹೈಡ್ರೋಜನ್ ಸಾಧನೆ ಚೇತೋಹಾರಿ: 'ಗ್ರೀನ್ ಹೈಡ್ರೋಜನ್ ಕ್ಷೇತ್ರದಲ್ಲಿ ಭಾರತದ ಸಾಧನೆ ಚೇತೋಹಾರಿಯಾಗಿದೆ. ಸೌರಶಕ್ತಿ ಬಳಸಿ ಗ್ರೀನ್ ಹೈಡ್ರೋಜನ್ ಅನ್ನು ಮಿತ ದರದಲ್ಲಿ ಉತ್ಪಾದಿಸಬಹುದು ಎಂಬುದನ್ನು ನಾವು ನಿರೂಪಿಸಿದ್ದೇವೆ' ಎಂದು ಸಚಿವರು ಹೇಳಿದರು.

ಕೇಂದ್ರ ಸರ್ಕಾರವು ಉತ್ಪಾದನೆ ಆಧರಿತ ಉತ್ತೇಜನ (ಪಿಎಲ್‌ಐ) ಕಾರ್ಯಕ್ರಮದಡಿ ಎಲೆಕ್ಟ್ರೊಲೈಸರ್ ಉತ್ಪಾದನೆಗೆ ₹19,700 ಕೋಟಿ ನೆರವು ನೀಡಿದೆ. ಎಲೆಕ್ಟ್ರೊಲೈಸರ್ ಉತ್ಪಾದನೆ ಯಲ್ಲಿ ತೊಡಗಿರುವ ಜಗತ್ತಿನ ಕಂಪನಿಗಳೆಲ್ಲವೂ ಭಾರತದಲ್ಲೂ ಇದರ ಉತ್ಪಾದನೆಯಲ್ಲಿ ತೊಡಗಿವೆ' ಎಂದರು.

ಹಟ್ಟಿ ಚಿನ್ನದ ಕಂಪನಿಗೆ ₹239 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದ ಗಣಿ (ರಾಯಚೂರು ಜಿಲ್ಲೆ): '2024–25ನೇ ಆರ್ಥಿಕ ವರ್ಷದ ಡಿಸೆಂಬರ್ ಅಂತ್ಯಕ್ಕೆ ಕಂಪನಿಯು ₹239 ಕೋಟಿ ಲಾಭ ಗಳಿಸಿದೆ. ಇದರಲ್ಲಿ ಶೇ 30ರಷ್ಟನ್ನು ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ನೀಡಿದ್ದೇವೆ' ಎಂದು ಹಟ್ಟಿ ಚಿನ್ನದ ಗಣಿ ಕಂಪನಿ ಅಧ್ಯಕ್ಷ ಜಿ.ಟಿ. ಪಾಟೀಲ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಪ್ರಸಕ್ತ ಆರ್ಥಿಕ ಸಾಲಿನಲ್ಲಿ 1,800 ಕೆ.ಜಿ ಚಿನ್ನ ಉತ್ಪಾದನೆಯ ಗುರಿ ಹೊಂದಲಾಗಿದೆ. ಡಿಸೆಂಬರ್‌ವರೆಗೂ 1,700 ಕೆ.ಜಿ. ಉತ್ಪಾದನೆ ಮಾಡಲಾಗಿದೆ. ಜನವರಿ ಕೊನೆಯಲ್ಲಿ ಗುರಿ ತಲುಪಲಿದ್ದೇವೆ' ಎಂದರು. 'ಕಂಪನಿಯ ಪ್ರತಿ ಕಾರ್ಮಿಕನಿಗೆ ವಿಮಾ ಸೌಲಭ್ಯ ಒದಗಿಸಲಾಗಿದೆ. ಮೃತಪಟ್ಟರೆ ₹1 ಕೋಟಿ ಮತ್ತು ಅಂಗವಿಕಲತೆಗೆ ತುತ್ತಾದರೆ ₹80 ಲಕ್ಷ ಸಿಗಲಿದೆ. ಕಾರ್ಮಿಕರು ಎಸ್‌ಬಿಐನಲ್ಲಿ ಖಾತೆ ತೆರೆಯಬೇಕು' ಎಂದರು.

ಮ್ಯೂಚುವಲ್ ಫಂಡ್, ಡಿಮ್ಯಾಟ್ ಖಾತೆ: 10 ನಾಮಿನಿಗೆ ಅವಕಾಶ

ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್ ಮತ್ತು ಡಿಮ್ಯಾಟ್ ಖಾತೆಗಳಿಗೆ ನಾಮನಿರ್ದೇಶನ ಮಾಡುವುದಕ್ಕೆ ಸಂಬಂಧಿಸಿದಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಹೊಸ ಮಾರ್ಗಸೂಚಿ ಪ್ರಕಟಿಸಿದೆ.

ಇದರನ್ವಯ ಹೂಡಿಕೆದಾರರು ತಮ್ಮ ಖಾತೆಗೆ 10 ಮಂದಿಯನ್ನು ನಾಮನಿರ್ದೇಶನ ಮಾಡಬಹುದಾಗಿದೆ. ಪ್ರತಿ ನಾಮಿನಿಗೆ ನಿರ್ದಿಷ್ಟ ಪ್ರಮಾಣದ ಶೇಕಡಾವಾರು ಮೊತ್ತ ಹಂಚಿಕೆ ಮಾಡುವ ಆಯ್ಕೆ ನೀಡಿದೆ.

ಮಾ. 1ರಿಂದ ಈ ಹೊಸ ನಿಯಮಗಳು ಜಾರಿಗೆ ಬರಲಿವೆ. ಆಸ್ತಿ ನಿರ್ವಹಣಾ ಕಂಪನಿಗಳು (ಎಎಂಸಿ) ಸೇರಿ ಹೂಡಿಕೆದಾರರು, ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳಿಗೆ ಇವು ಅನ್ವಯವಾಗಲಿವೆ.

ಈಕ್ವಿಟಿ ಮಾರುಕಟ್ಟೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವಿಕೆ ಹಾಗೂ ವಾರಸುದಾರರಿಲ್ಲದ ಸ್ವತ್ತುಗಳ ಸಂಖ್ಯೆಯನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸೆಬಿ ತಿಳಿಸಿದೆ.

ಎಎಂಸಿಗಳು, ಠೇವಣಿದಾರರು, ಷೇರುಪೇಟೆ ವಹಿವಾಟಿನಲ್ಲಿ ಭಾಗವಹಿಸುವವರು ಈ ಮಾರ್ಗಸೂಚಿ ಪಾಲಿಸಬೇಕಿದೆ. ಹೂಡಿಕೆದಾರರು ನಾಮನಿರ್ದೇಶನ ಮಾಡುವುದು ಕಡ್ಡಾಯ ಎಂದಿದೆ.

ಆಸ್ತಿಗೆ ಸಂಬಂಧಿಸಿದಂತೆ ಜಂಟಿ ಖಾತೆ ಹೊಂದಿರುವವರ ಪೈಕಿ ಒಬ್ಬರು ವಾರಸುದಾರ ಮೃತಪಟ್ಟರೆ ಜೀವಂತವಿರುವ ವ್ಯಕ್ತಿಗೆ ಸ್ವತ್ತು ವರ್ಗಾವಣೆಯಾಗುತ್ತದೆ. ಹೂಡಿಕೆದಾರರ ನಾಮನಿರ್ದೇಶನವು ನ್ಯಾಯಸಮ್ಮತವಾಗಿದೆಯೇ ಎಂದು ಸೆಬಿ ಪರಾಮರ್ಶೆ ನಡೆಸಲಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

CENTURY CLUB
1, Seshadri Road, Bangalore-560 001.
Ph: 22214121 / 22215122 / 9740556482 / 9740556092.
Email: club@centuryclub.in / Website: www.centuryclub.in
TENDER NOTIFICATION
A) Sealed tenders are invited from reputed Caterers/Restaurants to run and manage the following services for the benefit of 7500+ members. Approx. turnover Rs.7.50 crores per annum. The turnover includes 10 major events upto 1500 members gathering in a year and 4 events monthly, upto 500 members gathering and Party Halls having nine Party Halls with occupancy of 20, 30, 40, 80, 100 and 300 persons' capacity with three sessions i.e., Breakfast, Lunch and Dinner (depending upon occupancy).
1) Multi Cuisine Veg. and Non-Veg. Catering and Party Catering of the Club.
▸ Application fee Rs.40,000/- + GST
2) 'Century's Bites & Brews' – Continental, Seafood, Pizza, Burger, Sandwich, Rolls, Chaats, Milk Shakes, Ice Creams, Kulfi, Cut fruits, Lassi etc.
▸ Application fee Rs.15,000/- + GST
B) Sealed tenders are invited from reputed Department Stores with multiple store presence to operate and manage the Department store facilities of 2,163 sq. ft. at Century Club for the benefit of 7500+ members.
▸ Application fee Rs.5,000/- + GST
The Tender documents may be collected by paying an application fee by Cash/DD/IMPS between 10 am & 6 pm from the Century Club Office/Reception on all days from 13.01.2025 to 22.01.2025 The last date for submission of Sealed Tender is on or before 5 pm on 01.02.2025 The Tenders may be put in the Drop Box at Century Club Office. The date of opening Sealed Tenders will be 6 pm on 03.02.2025 at the Office of Century Club.
Sd/-
S. Balasubramaniam
Hon. Secretary

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ದರ್ಶಿನಿಯಲ್ಲಿ ಕೆಲಸ ಮಾಡಲು ಪುರುಷ ಹಾಗೂ ಮಹಿಳೆಯರು ಬೇಕಾಗಿದ್ದಾರೆ 1) ಕೌಂಟರ್ ಸರ್ವಿಸಿಗೆ (ರೂ. 12000/- ರಿಂದ 15000/ ವರೆಗೆ ಸಂಬಳ) 2) ಇಡ್ಲಿ ಹಾಗೂ ಉದ್ದಿನ ವಡೆ ಮಾಡಲು (ರೂ. 15000/ ರಿಂದ 20000/- ವರೆಗೆ ಸಂಬಳ) ಸಂಪರ್ಕಿಸಿರಿ: ಬೆಂಗಳೂರು ಟಿಫಿನ್ ಸೆಂಟರ್ ಶ್ರೀರಾಮ ಮಂದಿರ ಎದುರುಗಡೆ ರಾಜಾಜಿನಗರ್, 4ನೇ ಬ್ಲಾಕ್, ಬೆಂಗಳೂರು. 8073725562

ವೈಯಕ್ತಿಕ

Change of Name

I, PARTHAV Mahesh Gundurao S/o Mahesh Gundurao, R/o #65 Railway Parallel Road Kumara Park West, Bengaluru - 560020, have changed my name to Rana Gundurao.

ಉದ್ಯೋಗಾವಕಾಶ

Cook

ಅನುಭವವುಳ್ಳ ದಕ್ಷಿಣ ಭಾರತ ಶೈಲಿಯ ಅಡುಗೆ ಭಟ್ಟರು ಸಸ್ಯಹಾರಿ ಹಾಗೂ ಮಾಂಸಹಾರಿ ಹೋಟೆಲಿಗೆ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ. ನೆಲಮಂಗಲ: 9845684631

Domestic Helpers / Housekeeping

ಬೆಂಗಳೂರಿನ ಕಲ್ಯಾಣ ನಗರದಲ್ಲಿರುವ ಆಸ್ಪತ್ರೆಗೆ ಅರ್ಜೆಂಟಾಗಿ ಹೌಸ್ ಕೀಪಿಂಗ್ ಬಾಯ್ಸ್ ಬೇಕಾಗಿದ್ದಾರೆ. ಸಂಬಳ: 19300/-. ಸಂಪರ್ಕಿಸಿ: ಹೇಮಾವತಿ: 9945779607, ಸಂದೀಪ: 9108946691, ಮಿಥುನ್: 9112959375.

Marketing & Sales

WANTED: MALE Marketing Executives. Area:Hubli-Dharwad. Time: 9:30am-7:00pm Salary based field work. Contact: Shevoot international-8073107004/93807 26785

ವಾಹನ

Automobile Services

For Hire

2022 CNG ಟ್ರಕ್ 10 ಟನ್ ಪೇಲೋಡ್ ಗ್ಯಾಸ್ ಕಂಪನಿಗೆ 5 ವರ್ಷಗಳವರೆಗೆ ಮಾಸಿಕ ಬಾಡಿಗೆಗೆ ಅಗತ್ಯವಿದೆ. ವಾಟ್ಸ್ಆಪ್ 9414186808/ 9414309990

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯ ಆಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

CENTURY CLUB
1, Seshadri Road, Bangalore-560 001.
Ph: 22214121 / 22215122 / 9740556482 / 9740556092.
Email: club@centuryclub.in / Website: www.centuryclub.in
TENDER NOTIFICATION
Sealed tenders are invited from reputed Civil and Interior Contractors/Firms for the following Renovation works:
1) Renovation of Guest Rooms, estimated cost Rs.4.35 crores + GST
▸ Application fee Rs.25,000/- + GST
2) Renovation of Baritone Party Hall, estimated cost Rs.1.25 crores + GST
▸ Application fee Rs.10,000/- + GST
The Tender documents may be collected by paying an application fee by Cash/DD/IMPS between 10 a.m. & 6 p.m. from the Century Club Office/Reception on all days from 13.01.2025 to 22.01.2025. The last date for submission of Sealed Tender is on or before 5 pm on 01.02.2025. The Tenders may be put in the Drop Box at Century Club Office. The date of opening Sealed Tenders will be 6 pm on 03.02.2025 at the Office of Century Club.
Sd/-
S. Balasubramaniam
Hon. Secretary

ಭವಿಷ್ಯ

Astrology

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

★ಭಾರತದ ಪ್ರಖ್ಯಾತ★ ಬುಡಬುಡಿಕೆ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನ ರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ ಪರಿಹಾರ,ಮಹಮ್ಮಾಯಿ, ಮನ್ಮೋಹಿನಿಮೋಡಿ ವಶೀಕರಣಗಳಿಗೆ #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 25.01.2025, 05.02.2025 10ದಿನಗಳು ಅಖಂಡ ಕೇರಳ ರಾಜ್ಯ ಪ್ರವಾಸ.28.01.2025 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ.03.02.2025 5ದಿನಗಳು ದೆಹಲಿ,ಆಗ್ರಾ ಮಥುರಾ,ಬೃಂದಾವನ ಹರಿದ್ವಾರ,ಋಷಿಕೇಶ. 08.02.2025 8ದಿನಗಳು ನೈಮಿಷಾರಣ್ಯ,ಅಯೋಧ್ಯಾ ಚಿತ್ರಕೂಟ,ಪ್ರಯಾಗ.ಕಾಶಿ ಗಯಾ.ದೇವಘರ್. 15.02.2025 8ದಿನಗಳು ಅಷ್ಟವಿನಾಯಕ,ಶಿರಡಿ ತ್ರಯಂಬಕೇಶ್ವರ,ಭೀಮಾಶಂಖರ ಘೃಷ್ಣೇಶ್ವರ,ಪಂಡರಾಪುರ ಕೊಲ್ಲಾಪುರ,ಪೂನಾ. 8073824856, 9206979202

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-*
FOR 15 WORDS
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164

ವ್ಯಾಪಿಸುತ್ತಿರುವ ಕಾಳ್ಗಿಚ್ಚು

ಎಪಿ/ರಾಯಿಟರ್ಸ್/ಎಎಫ್‌ಪಿ

ಲಾಸ್ ಏಂಜಲೀಸ್/ಮೆಲ್ಬರ್ನ್: ಲಾಸ್ ಏಂಜಲೀಸ್‌ನ ಕಾಳ್ಗಿಚ್ಚು ದುರಂತದಲ್ಲಿ ಒಟ್ಟು 11 ಮಂದಿ ಮೃತಪಟ್ಟಿದ್ದು ಹಲವರು ಕಾಣೆಯಾಗಿದ್ದಾರೆ. ಕಾಣೆಯಾದವರ ಬಗ್ಗೆ ದೂರು ನೀಡಲು ನಗರದಲ್ಲಿ ಕೇಂದ್ರವೊಂದನ್ನು ಸ್ಥಾಪಿಸಲಾಗಿದೆ. ಲಾಸ್ ಏಂಜಲೀಸ್‌ನಲ್ಲಿ ಕಳೆದು ಎಂಟು ತಿಂಗಳಿಂದ ಒಮ್ಮೆಯೂ ಮಳೆ ಸುರಿದಿಲ್ಲ.

'ಶುಕ್ರವಾರವೂ ನಗರದಾದ್ಯಂತ ಅಲ್ಲಲ್ಲಿ ಸಣ್ಣ ಸಣ್ಣ ಕಾಳ್ಗಿಚ್ಚು ಹಬ್ಬಿದ ಪ್ರಕರಣಗಳು ನಡೆದಿವೆ. ಅವುಗಳನ್ನು ನಂದಿಸಲಾಗಿದೆ' ಎಂದು ಲಾಸ್ ಏಂಜಲೀಸ್‌ನ ಮೇಯರ್ ಕ್ಯಾರೆನ್ ಬಾಸ್ ಮಾಹಿತಿ ನೀಡಿದರು. ಐದು ಪ್ರದೇಶಗಳಲ್ಲಿ ಹಬ್ಬಿದ ಕಾಳ್ಗಿಚ್ಚು ವ್ಯಾಪಿಸುತ್ತಲೇ ಇದೆ. ಇನ್ನೂ ಸಾವಿರಾರು ಜನರನ್ನು ಸರ್ಕಾರ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುತ್ತಿದೆ.

'ಸಂತಾ ಆನಾ' ಗಾಳಿಯ ವೇಗವು ತಗ್ಗುತ್ತಿಲ್ಲ. ಬೆಂಕಿಯು ವ್ಯಾಪಿಸದಂತೆ ತಡೆಯಲು ಹೆಲಿಕಾಪ್ಟರ್ ಮೂಲಕ ರಾಸಾಯನಿಕವನ್ನು ಹಿಂಪಡಿಸಲಾಗುತ್ತಿದೆ. ಈಟನ್ ಕೆಯಾನ್‌ನಲ್ಲಿ ಹಬ್ಬಿದ ಕಾಳ್ಗಿಚ್ಚು ನಿಯಂತ್ರಣಕ್ಕೆ ಬರುತ್ತಿಲ್ಲ. ಮಂಗಳವಾರ ಹತ್ತಿದ ಬೆಂಕಿಯನ್ನು ನಂದಿಸಲು ಸಾಧ್ಯವಾಗುತ್ತಿಲ್ಲ. ಇಲ್ಲಿನ ಶೇ 3ರಷ್ಟು ಪ್ರದೇಶದಲ್ಲಿನ ಬೆಂಕಿಯನ್ನು ಮಾತ್ರ ಶುಕ್ರವಾರ ನಂದಿಸಲಾಗಿದೆ.

2024: ಅತೀ ಬಿಸಿಯ ವರ್ಷ

'2024ನೇ ಇಸವಿಯು ಅತ್ಯಂತ ಬಿಸಿಯ ವರ್ಷವಾಗಿತ್ತು' ಎಂದು ಐರೋಪ್ಯ ಒಕ್ಕೂಟದ 'ಕೊಪರ್ನಿಕಸ್ ಕ್ಲೈಮೇಟ್ ಚೇಂಜ್ ಸರ್ವೀಸ್' ಸಂಸ್ಥೆಯು ಶುಕ್ರವಾರ ಘೋಷಿಸಿದೆ. 1850ರಲ್ಲಿ ಜಾಗತಿಕ ತಾಪಮಾನ ದಾಖಲಾತಿ ಆರಂಭಿಸಿದ ನಂತರ ಕೈಗಾರಿಕಾಪೂರ್ವ ಕಾಲದ ಜಾಗತಿಕ ತಾಪಮಾನಕ್ಕಿಂತ ಸರಾಸರಿ 1.5 ಡಿಗ್ರಿ ಸೆಲ್ಸಿಯಸ್ ಹೆಚ್ಚಿನ ತಾಪಮಾನವು 2024ರಲ್ಲಿ ದಾಖಲಾಗಿದೆ ಎಂದು ಸಂಸ್ಥೆ ಹೇಳಿದೆ.

1.6 ಡಿಗ್ರಿ ಸೆಲ್ಸಿಯಸ್‌ನಷ್ಟು ಜಾಗತಿಕ ತಾಪಮಾನವನ್ನು 2024ನೇ ಇಸವಿ ದಾಖಲಿಸಿತ್ತು ಎಂದು ಸಂಸ್ಥೆ ಹೇಳಿದೆ. ಒಂದೆಡೆ, ಲಾಸ್ ಏಂಜಲೀಸ್‌ನಲ್ಲಿ ಹಬ್ಬುತ್ತಿರುವ ಕಾಳ್ಗಿಚ್ಚಿಗೆ ಹವಾಮಾನ ವೈಪರೀತ್ಯವೇ ಮುಖ್ಯ ಕಾರಣ ಎಂದು ವಿಜ್ಞಾನಿಗಳು ಹೇಳುತ್ತಿದ್ದರೆ, ಇನ್ನೊಂದೆಡೆ ಜಾಗತಿಕ ತಾಪಮಾನವು ಏರಿಕೆಯಾಗುತ್ತಿದೆ.

ಪ್ಯಾರಿಸ್ ಒಪ್ಪಂದಕ್ಕೆ ಸೋಲಾಯಿತೇ?

ಜಾಗತಿಕ ತಾಪಮಾನ ಸರಾಸರಿಯು 1.5 ಡಿಗ್ರಿ ಸೆಲ್ಸಿಯಸ್‌ಗಿಂತ ಅಧಿಕವಾಗುವುದನ್ನು ತಡೆಯಬೇಕು ಎಂಬುದು ಪ್ಯಾರಿಸ್ ಒಪ್ಪಂದದ ಮೂಲ ಉದ್ದೇಶವಾಗಿತ್ತು. ಈಗ ಜಗತ್ತು ಈ ಮಿತಿಯನ್ನು ದಾಟಿದೆ. ಹಾಗಾದರೆ, ಒಪ್ಪಂದವನ್ನು ಪಾಲಿಸುವಲ್ಲಿ ಎಲ್ಲ ದೇಶಗಳು ಸೋತಿವೆಯೇ ಎನ್ನುವ ಪ್ರಶ್ನೆ ಮೂಡುತ್ತಿದೆ. ಒಂದರ್ಥದಲ್ಲಿ ದೇಶಗಳು ಸೋತಿರುವುದು ನಿಜವೇ ಆಗಿದೆ.

'ಆದರೆ, ಈಗಲೇ ಎಲ್ಲವೂ ಅಂತ್ಯವಾಗಿಲ್ಲ. ಒಂದು ವರ್ಷದ ಜಾಗತಿಕ ತಾಪಮಾನದ ಸರಾಸರಿಯನ್ನು ಮಾತ್ರವೇ ಪರಿಗಣಿಸಬಾರದು. ಪ್ಯಾರಿಸ್ ಒಪ್ಪಂದವು ಒಂದು ವರ್ಷದ ಸರಾಸರಿಯನ್ನು ಮಾತ್ರವೇ ಪರಿಗಣಿಸುವುದಿಲ್ಲ. ಆದರೆ, ಜಾಗತಿಕ ತಾಪಮಾನವನ್ನು ಕಡಿಮೆ ಮಾಡಲು ನಾವು ಇನ್ನೂ ಹೆಚ್ಚಿನ ಶ್ರಮ ಹಾಕಬೇಕು ಎಂಬುದನ್ನು 2024ನೇ ಇಸವಿಯು ಸಾಬೀತು ಮಾಡಿದೆ' ಎನ್ನುತ್ತಾರೆ ವಿಜ್ಞಾನಿಗಳು.

ಹೊಗೆಯಾಡುವ ಮನೆಗಳು...

ಎರಡು ಜೊತೆ ಬಟ್ಟೆ, ಮಗು, ಗಂಡನೊಂದಿಗೆ ಮಂಗಳವಾರ ಮನೆ ತೊರೆದಿದ್ದ ಬ್ರಿಗೆಟ್ ಬರ್ಗ್, ಶುಕ್ರವಾರ ತನ್ನ ಹೊಗೆಯಾಡುತ್ತಿರುವ ಮನೆಯ ಮುಂದೆ ನಿಂತಾಗ ಕಣ್ಣೀರಾದರು. ಮನೆ ಸುಟ್ಟ ಬೆಂಕಿ ಇನ್ನೂ ನಂದಿರಲಿಲ್ಲ, ಆಕೆಯ ಒಡಲ ಬೆಂಕಿ ಕೂಡ. ಇದು ಬ್ರಿಗೆಟ್‌ನ ಕಥೆ ಮಾತ್ರವಲ್ಲ ಲಾಸ್ ಏಂಜಲೀಸ್‌ನ ನೂರಾರು ಕುಟುಂಬಗಳ ಕಥೆ.

ಟಿ.ವಿ.ಗಳಲ್ಲಿ ತಮ್ಮ ಮನೆ ಭಸ್ಮವಾಗುವುದನ್ನು ಕಂಡಿದ್ದ ಕುಟುಂಬಗಳು ಈಗ ಮನೆಗಳ ಬಳಿಗೆ ಬರುತ್ತಿದ್ದಾರೆ. ಮನೆಯೊಂದಿಗಿನ ನೆನಪುಗಳು ಸುರುಳಿಯಾಗಿ ತಲೆಯಲ್ಲಿ ಸುತ್ತುತ್ತಿದ್ದರೆ, ಭಸ್ಮವಾದ ಮನೆಯ ಅಳಿದುಳಿದ ವಸ್ತುಗಳನ್ನು ತೆಗೆದು ಕೊಳ್ಳುವತ್ತ ಕೈ ಮುಂದಾಗುತ್ತಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹150-660
ದ್ವಿತಳಿ (ಬಿ.ವಿ) ₹385-770

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹186
ಆರ್‌ಎಸ್‌ಎಸ್-5 ₹181
ಗುಡ್ ಲಾಟ್ ₹175
(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹525
12 ಕ್ಕೆ	₹70
ಮೈಸೂರು	
100ಕ್ಕೆ	₹575

ಬಾಲ ರಾಮನ ಪ್ರಾಣ ಪ್ರತಿಷ್ಠಾಪನೆ ಮೊದಲ ವಾರ್ಷಿಕೋತ್ಸವ • ದೇಶದ ಹಲವೆಡೆಯಿಂದ ಹರಿದು ಬಂದ ಜನಸಾಗರ

ಭಕ್ತಿ, ಸಂಭ್ರಮದಲ್ಲಿ ಮಿಂದೆದ್ದ ಅಯೋಧ್ಯೆ

ಅಯೋಧ್ಯೆ(ಪಿಟಿಐ): ಬಾಲ ರಾಮನ ಮೂರ್ತಿ ಪ್ರಾಣ ಪ್ರತಿಷ್ಠಾಪನೆಗೆ ವರ್ಷ ತುಂಬಿದ್ದರಿಂದ ಅಯೋಧ್ಯೆ ನಗರ ಶನಿವಾರ ಭಕ್ತಿಯಲ್ಲಿ ಮಿಂದೆದ್ದಿತು.

ಪ್ರಾಣ ಪ್ರತಿಷ್ಠಾಪನೆಯ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದಕ್ಕಾಗಿ ದೇಶದ ವಿವಿಧ ಭಾಗಗಳಿಂದ ಭಕ್ತರು ಭಾರಿ ಸಂಖ್ಯೆಯಲ್ಲಿ ಅಯೋಧ್ಯೆಗೆ ಬಂದಿದ್ದಾರೆ.

ಯಜುರ್ವೇದ ಪಠಣದೊಂದಿಗೆ ವಾರ್ಷಿಕೋತ್ಸವ ಕಾರ್ಯಕ್ರಮಗಳಿಗೆ ವಿಧ್ಯುಕ್ತ ಚಾಲನೆ ನೀಡಲಾಯಿತು. ಗರ್ಭಗೃಹವನ್ನು ವಿವಿಧ ಹೂವುಗಳಿಂದ ಅಲಂಕರಿಸಲಾಗಿತ್ತು.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಬಾಲ ರಾಮನ ಮೂರ್ತಿಗೆ ಅಭಿಷೇಕ ನೆರವೇರಿಸಿದರು. ನಂತರ ಬಾಲರಾಮನ ಮೂರ್ತಿಗೆ ಮಹಾ ಆರತಿ ಮಾಡಿ, 56 ಭಕ್ಷ್ಯಗಳ ನೈವೇದ್ಯ ಸಮರ್ಪಿಸಲಾಯಿತು.

ಶುಭಾಶಯ ಕೋರಿದ ಮೋದಿ: ಪ್ರಧಾನಿ ನರೇಂದ್ರ ಮೋದಿ ಅವರು, ದೇಶದ ಜನತೆಗೆ ಬಾಲ ರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ವಾರ್ಷಿಕೋತ್ಸವದ ಶುಭಾಶಯಗಳನ್ನು ಕೋರಿದ್ದಾರೆ.

‘ಹಲವು ಶತಮಾನಗಳ ತ್ಯಾಗ, ತಪಸ್ಸು ಹಾಗೂ ಹೋರಾಟದ ಫಲವಾಗಿ ಭವ್ಯ ರಾಮ ಮಂದಿರ ನಿರ್ಮಾಣವಾಗಿದೆ. ಈ ಮಂದಿರ ನಮ್ಮ ಸಂಸ್ಕೃತಿ ಮತ್ತು ಅಧ್ಯಾತ್ಮ ಪರಂಪರೆಯ ದ್ಯೋತಕವಾಗಿದೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ವಿಕಸಿತ ಭಾರತ ನಿರ್ಮಾಣ ಮಾಡುವ ನಮ್ಮ ಸಂಕಲ್ಪ ಸಾಕಾರಗೊಳ್ಳುವುದಕ್ಕೆ ರಾಮ ಮಂದಿರವು ಸ್ಫೂರ್ತಿ ನೀಡಲಿದೆ ಎಂಬ ವಿಶ್ವಾಸ ಹೊಂದಿದ್ದೇನೆ’ ಎಂದಿದ್ದಾರೆ.

ಅಯೋಧ್ಯೆಯಲ್ಲಿ ಬಾಲ ರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯ ಮೊದಲ ವಾರ್ಷಿಕೋತ್ಸವ ಅಂಗವಾಗಿ ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಭಕ್ತರು ಮೆರವಣಿಗೆ ನಡೆಸಿದರು —ಪಿಟಿಐ ಚಿತ್ರಗಳು

ಕಳೆದ ವರ್ಷ ನಡೆದ ಬಾಲ ರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದ ಜನರಿಗೆ ಈ ಮೂರು ದಿನಗಳ ಉತ್ಸವಕ್ಕೆ ಆಹ್ವಾನಿಸಲು ನಿರ್ಧರಿಸಲಾಗಿದೆ. ‘ಅಂಗದ ಟೀಲಾ’ದಲ್ಲಿ ಮೂರು ದಿನ ನಡೆಯುವ ಕಾರ್ಯಕ್ರಮಗಳಲ್ಲಿ ಎಲ್ಲರೂ ಪಾಲ್ಗೊಳ್ಳಬಹುದು

ಚಂಪತ್ ರಾಯ್, ಪ್ರಧಾನ ಕಾರ್ಯದರ್ಶಿ, ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್

ವೈಶಿಷ್ಟ್ಯಗಳು

- ಪ್ರಾಣ ಪ್ರತಿಷ್ಠಾಪನೆಯ ವಾರ್ಷಿಕೋತ್ಸವ ಅಂಗವಾಗಿ ಜ.13ರವರೆಗೆ ಉತ್ಸವಗಳು ನಡೆಯಲಿವೆ
- ಅಯೋಧ್ಯೆಯ ‘ಅಂಗದ ಟೀಲಾ’ ಪ್ರದೇಶದಲ್ಲಿ ಜರ್ಮನ್ ಟೆಂಟ್‌ಗಳನ್ನು ನಿರ್ಮಿಸಲಾಗಿದೆ. ಇಲ್ಲಿ 5 ಸಾವಿರ ಯಾತ್ರಿಗಳಿಗೆ ವಸತಿ ಕಲ್ಪಿಸಬಹುದಾಗಿದೆ
- 110 ಜನ ಅತಿಥಿಗಳಿಗೆ ಆಮಂತ್ರಣ ಪತ್ರಿಕೆ ಹಂಚಿಕೆ
- ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ‘ಯಜ್ಞಶಾಲೆ’ಯಲ್ಲಿ ನಡೆಯಲಿವೆ

ದರ್ಶನಕ್ಕಾಗಿ ಸಾವಿರ ಕಿ.ಮೀ ಓಡಿದ 6 ವರ್ಷದ ಬಾಲಕ

ಮೊಹಬ್ಬತ್

ಪಂಜಾಬ್‌ನ ಫಾಜಿಲ್ಕಾ ಜಿಲ್ಲೆಯ ಅಬೋಹರ ಪಟ್ಟಣದ 6 ವರ್ಷದ ಬಾಲಕನೊಬ್ಬ ಬಾಲ ರಾಮನ ದರ್ಶನಕ್ಕಾಗಿ ಸಾವಿರ ಕಿ.ಮೀ. ಓಡಿ ಅಯೋಧ್ಯೆ ತಲುಪಿ ಗಮನ ಸೆಳೆದಿದ್ದಾನೆ.

ಮೂರ್ತಿ ಪ್ರತಿಷ್ಠಾಪನೆಯ ಮೊದಲ ವಾರ್ಷಿಕೋತ್ಸವದ ಅಂಗವಾಗಿ ಬಾಲ ರಾಮನ ದರ್ಶನ ಪಡೆಯುವ ಉದ್ದೇಶದಿಂದ ಅಬೋಹರ ನಿವಾಸಿ ಮೊಹಬ್ಬತ್, ಸಾವಿರ ಕಿ.ಮೀ. ಕ್ರಮಿಸಿ ಅಯೋಧ್ಯೆಯನ್ನು ಶನಿವಾರ ತಲುಪಿದ್ದಾನೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಅಂಗವಸ್ತ್ರ ಹಾಗೂ ಚಾಕೊಲೇಟ್ ನೀಡಿ ಮೊಹಬ್ಬತ್‌ನನ್ನು ಸನ್ಮಾನಿಸಿದ್ದಾರೆ. ‘ಕಳೆದ ವರ್ಷ ನವೆಂಬರ್ 14ರಂದು ಮೊಹಬ್ಬತ್ ಓಡಲು ಪ್ರಾರಂಭಿಸಿದ್ದ. ದಿನಕ್ಕೆ 19–20 ಕಿ.ಮೀ. ಕ್ರಮಿಸುತ್ತಿದ್ದ’ ಎಂದು ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಕಾರ್ಯದರ್ಶಿ ಚಂಪತ್ ರಾಯ್ ಹೇಳಿದ್ದಾರೆ.

ಅಯೋಧ್ಯೆಯಲ್ಲಿ ಬಾಲ ರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯ ಮೊದಲ ವಾರ್ಷಿಕೋತ್ಸವ ಅಂಗವಾಗಿ ಶನಿವಾರ ‘ಪ್ರತಿಷ್ಠಾ ದ್ವಾದಶಿ’ ಕಾರ್ಯಕ್ರಮ ಹಾಗೂ ವಿಶೇಷ ಪೂಜೆ ನೆರವೇರಿಸಲಾಯಿತು

ಅಂಗಿ ತೆಗೆಯಲು ಬಾಲಕಿಯರಿಗೆ ಸೂಚಿಸಿದ ಆರೋಪ: ತನಿಖೆ

ಧನಬಾದ್(ಜಾರ್ಖಂಡ್) (ಪಿಟಿಐ): ಧನಬಾದ್ ಜಿಲ್ಲೆಯ ಖಾಸಗಿ ಶಾಲೆಯೊಂದರ 10ನೇ ತರಗತಿ ವಿದ್ಯಾರ್ಥಿನಿಯರು ಪರಸ್ಪರರ ಅಂಗಿಗಳ ಮೇಲೆ ಸಂದೇಶಗಳನ್ನು ಬರೆದಿದ್ದಕ್ಕಾಗಿ, ಅಂಗಿ ತೆಗೆಯುವಂತೆ ಪ್ರಾಂಶುಪಾಲ ಸೂಚಿಸಿದ್ದರು ಎಂಬ ಆರೋಪ ಕೇಳಿ ಬಂದಿದೆ.

ಈ ಕುರಿತು ವಿದ್ಯಾರ್ಥಿನಿಯರ ಪಾಲಕರು ದೂರು ನೀಡಿದ್ದು, ಆರೋಪಗಳ ಬಗ್ಗೆ ತನಿಖೆ ನಡೆಸುವಂತೆ ಜಿಲ್ಲಾಧಿಕಾರಿ ಮಾಧವಿ ಮಿಶ್ರಾ ಆದೇಶಿಸಿದ್ದಾರೆ.

ಜಿಲ್ಲೆಯ ಜೋರಾಪೋಖರ್ ಪೊಲೀಸ್ ಠಾಣೆ ವ್ಯಾಪ್ತಿಯ ಡಿಗ್ವಾಡಿಹ ದಲ್ಲಿರುವ ಪ್ರತಿಷ್ಠಿತ ಶಾಲೆಯಲ್ಲಿ ಈ ಘಟನೆ ನಡೆದಿದೆ ಎಂಬ ಆರೋಪ ಕೇಳಿ ಬಂದಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

‘ಶುಕ್ರವಾರ ಪರೀಕ್ಷೆ ಮುಗಿದ ನಂತರ ವಿದ್ಯಾರ್ಥಿನಿಯರು ‘ಪೆನ್ ಡೇ’ ಹಮ್ಮಿಕೊಂಡಿದ್ದರು. ಇದರ ಭಾಗವಾಗಿ ಪರಸ್ಪರರ ಅಂಗಿಗಳ ಮೇಲೆ ಸಂದೇಶಗಳನ್ನು ಬರೆದಿದ್ದರು’ ಎಂದು ಪಾಲಕರು ದೂರಿನಲ್ಲಿ ತಿಳಿಸಿದ್ದಾರೆ.

‘ವಿದ್ಯಾರ್ಥಿನಿಯರ ಈ ನಡೆಗೆ ಪ್ರಾಂಶುಪಾಲರು ಆಕ್ಷೇಪ ವ್ಯಕ್ತಪಡಿಸಿದ್ದರಲ್ಲದೇ, ಅಂಗಿಗಳನ್ನು ತೆಗೆಯುವಂತೆ ಸೂಚಿಸಿದ್ದರು. ವಿದ್ಯಾರ್ಥಿನಿಯರು ಕ್ಷಮೆ ಯಾಚಿಸಿದರೂ, ಅವರು ಸ್ಪಂದಿಸಲಿಲ್ಲ. ನಂತರ, ವಿದ್ಯಾರ್ಥಿನಿಯರು ಅಂಗಿ ತೆಗೆದು, ಬ್ಲೇಜರ್‌ಗಳನ್ನು ಮಾತ್ರ ಧರಿಸಿ ಮನೆಗೆ ಮರಳಿದ್ದಾರೆ’ ಎಂದು ಪಾಲಕರು ಜಿಲ್ಲಾಧಿಕಾರಿಗೆ ವಿವರಿಸಿದ್ದಾರೆ.

‘ಕೆಲ ಪಾಲಕರು ಪ್ರಾಂಶುಪಾಲ ವಿರುದ್ಧ ದೂರು ದಾಖಲಿಸಿದ್ದಾರೆ. ನಾನು ಕೂಡ ಕೆಲವು ವಿದ್ಯಾರ್ಥಿನಿಯರೊಂದಿಗೆ ಮಾತನಾಡಿರುವೆ. ಜಿಲ್ಲಾಡಳಿತ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ತನಿಖೆಗಾಗಿ ಸಮಿತಿಯೊಂದನ್ನು ರಚಿಸಲಾಗಿದೆ’ ಎಂದು ಮಿಶ್ರಾ ತಿಳಿಸಿದ್ದಾರೆ.

9 ತಿಂಗಳ ಮಗುವಿಗೆ ಎಚ್‌ಎಂಪಿವಿ ದೃಢ

ಅಹಮದಾಬಾದ್(ಪಿಟಿಐ): ಒಂಬತ್ತು ತಿಂಗಳ ಮಗುವಿಗೆ ಎಚ್‌ಎಂಪಿವಿ ಸೋಂಕು ತಗುಲಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಗುಜರಾತ್‌ನಲ್ಲಿ ಎಚ್‌ಎಂಪಿವಿ ಪ್ರಕರಣಗಳ ಸಂಖ್ಯೆ ನಾಲ್ಕಕ್ಕೆ ಏರಿದೆ. ಇಷ್ಟೂ ಪ್ರಕರಣಗಳು ಒಂದೇ ವಾರದಲ್ಲಿ ವರದಿಯಾಗಿವೆ. ಜ. 6ರಂದು ರಾಜ್ಯದಲ್ಲಿ ಮೊದಲ ಪ್ರಕರಣ ವರದಿಯಾಗಿತ್ತು.

ನೆಗಡಿ, ಕೆಮ್ಮು ಹಾಗೂ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಗಂಡು ಮಗುವನ್ನು ನಗರದ ಖಾಸಗಿ ಆಸ್ಪತ್ರೆಗೆ ಜನವರಿ 6ರಂದು ದಾಖಲಿಸಲಾಗಿತ್ತು. ಈ ಮಗು ವಿದೇಶ ಅಥವಾ ಇತರೆಡೆ ಪ್ರಯಾಣಿಸಿಲ್ಲ ಎಂದು ಅಹಮದಾಬಾದ್ ಮುನ್ಸಿಪಲ್ ಕಾರ್ಪೊರೇಷನ್ ತಿಳಿಸಿದೆ.

ನಕಲಿ ಮತದಾರರಿಗೆ ಬಿಜೆಪಿ ನಾಯಕರ ಮನೆಯೇ ವಿಳಾಸ: ಎಎಪಿ ಆರೋಪ

ನವದೆಹಲಿ(ಪಿಟಿಐ): ಬಿಜೆಪಿಯು ಬೇರೆ ರಾಜ್ಯಗಳ ಮತದಾರರ ಹೆಸರನ್ನು ದೆಹಲಿಯ ಮತದಾರರ ಪಟ್ಟಿಯಲ್ಲಿ ಸೇರಿಸುವ ಮೂಲಕ ನಕಲಿ ಮತದಾರರನ್ನು ಸೃಷ್ಟಿಸುತ್ತಿದೆ. ಇದಕ್ಕಾಗಿ ಬಿಜೆಪಿ ನಾಯಕರ ಮನೆಯನ್ನೇ ಆ ಮತದಾರರ ವಸತಿ ಸ್ಥಳವೆಂದು ನಮೂದಿಸಲಾಗುತ್ತಿದೆ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಆರೋಪಿಸಿದ್ದಾರೆ.

ಚುನಾವಣಾ ಆಯೋಗಕ್ಕೆ ಪತ್ರ ಬರೆದಿರುವ ಕೇಜ್ರಿವಾಲ್, ‘ವಸತಿ ಪ್ರದೇಶದ ಬದಲಾವಣೆಯ ನೆಪದಲ್ಲಿ ಬಿಜೆಪಿ ನಾಯಕರಿಗೆ ಸೇರಿದ ಸ್ಥಳಗಳನ್ನೇ ನೂತನ ಮತದಾರರ ವಸತಿ ಪ್ರದೇಶವೆಂದು ದಾಖಲಿಸಿ ದೆಹಲಿಯ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು ಅರ್ಜಿ ಸಲ್ಲಿಸಲಾಗುತ್ತಿದೆ. ಈ ಪೈಕಿ ಕರ್ನಾಟಕದ ಮಾಜಿ ಸಂಸದ ಜಿ. ಸಿದ್ದೇಶ್ವರ ಅವರ ನಿವಾಸದ ಹೆಸರಿನಲ್ಲಿ 13 ಹಾಗೂ ಬಿಜೆಪಿ ನಾಯಕ ಪರ್ವೇಶ್ ವರ್ಮಾ ಅವರ ಸರ್ಕಾರಿ ನಿವಾಸದಿಂದ 32 ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿದೆ’ ಎಂದು ಉಲ್ಲೇಖಿಸಿದ್ದಾರೆ.

‘ಬಿಜೆಪಿ ಅಭ್ಯರ್ಥಿಗಳ ಪರವಾಗಿ ಮತದಾರರ ಪಟ್ಟಿಯನ್ನು ಬದಲಾಯಿಸುವ ಉದ್ದೇಶಪೂರ್ವಕ ಪ್ರಯತ್ನ ಇದಾಗಿದೆ. ಈ ರೀತಿಯ ವಸತಿ ಸ್ಥಳದ ಬದಲಾವಣೆಯನ್ನು ತಕ್ಷಣವೇ ಸ್ಥಗಿತಗೊಳಿಸಿ, ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಚುನಾವಣೆ ವಂಚನೆ ಎಸಗುತ್ತಿರುವ ಪರ್ವೇಶ್ ವರ್ಮಾ ಅವರಂತಹ ಅಭ್ಯರ್ಥಿಗಳನ್ನು ಸ್ಪರ್ಧಿಸದಂತೆ ಅನರ್ಹಗೊಳಿಸಬೇಕು’ ಎಂದು ಅವರು ಹೇಳಿದ್ದಾರೆ.

‘₹2,026 ಕೋಟಿ ಜೇಬಿಗೆ ತುಂಬಿಕೊಂಡಿದ್ದು ಯಾರು?’

ಎಎಪಿ ಸರ್ಕಾರದ ಅಬಕಾರಿ ಹಗರಣದಿಂದಾಗಿ ₹2,026 ಕೋಟಿ ನಷ್ಟವುಂಟಾಗಿದೆ ಎಂದು ಅಂದಾಜಿಸಿ ಸಿಎಜಿ ವರದಿ ಹೇಳಿದೆ. ಇದಕ್ಕೆ ಅರವಿಂದ ಕೇಜ್ರಿವಾಲ್ ಅವರು ಉತ್ತರಿಸಬೇಕು ಎಂದು ಬಿಜೆಪಿ ಹೇಳಿದೆ.

‘ಕೇಜ್ರಿವಾಲ್ ಅವರು ಅಬಕಾರಿ ಹಗರಣದ ಕಿಂಗ್‌ಪಿನ್. ಭ್ರಷ್ಟಾಚಾರದ ಹಣವನ್ನು ಯಾರು ಜೇಬಿಗೆ ತುಂಬಿಕೊಂಡಿದ್ದಾರೆ ಎಂದು ಅವರು ಹೇಳಬೇಕು. ಶಾಲೆ ತೆರೆಯುವುದಾಗಿ ಆಶ್ವಾಸನೆ ನೀಡಿದ್ದ ಎಎಪಿ ಮಧುಶಾಲೆಯನ್ನು (ಬಾರ್‌ಗಳು) ನಿರ್ಮಿಸಿತು. ‘ಸ್ವರಾಜ್’ ನಿರ್ಮಾಣ ಕೇವಲ ‘ಶರಾಬ್’ಗೆ (ಮದ್ಯ) ಸೀಮಿತವಾಯಿತು’ ಎಂದು ಬಿಜೆಪಿ ಹಿರಿಯ ನಾಯಕ ಅನುರಾಗ್ ಠಾಕೂರ್ ಹೇಳಿದರು.

ಪ್ರಜಾ ಮತ
ಜನತಂತ್ರದ ಹಬ್ಬ

ಎಂವಿಎ ಮೈತ್ರಿಕೂಟದಲ್ಲಿ ಬಿರುಕು?

ಸ್ಥಳೀಯ ಸಂಸ್ಥೆ ಚುನಾವಣೆ: ಏಕಾಂಗಿ ಸ್ಪರ್ಧೆಗೆ ಉದ್ಧವ್ ಠಾಕ್ರೆ ಬಣ ನಿರ್ಧಾರ

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ‘ಮಹಾ ವಿಕಾಸ ಆಘಾಡಿ’ (ಎಂವಿಎ) ಮೈತ್ರಿಕೂಟದ ಪ್ರಮುಖ ಪಾಲುದಾರ ಪಕ್ಷವಾದ ಶಿವಸೇನಾ (ಯುಬಿಟಿ), ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಶನಿವಾರ ಹೇಳಿದೆ. ಪಕ್ಷದ ಈ ನಡೆಯು ಎಂವಿಎ ಒಗ್ಗಟ್ಟಿನ ಬಗ್ಗೆ ಪ್ರಶ್ನೆಗಳು ಮೂಡುವಂತೆ ಮಾಡಿದೆ.

ಪಕ್ಷದ ಸಂಘಟನೆಯನ್ನು ಗಟ್ಟಿಗೊಳಿಸುವ ಹಕ್ಕು ತಮಗೆ ಇರುತ್ತದೆ ಹಾಗೂ ಮೈತ್ರಿಕೂಟದ ಭಾಗವಾಗಿ ಸ್ಪರ್ಧಿಸಿದರೆ ಪಕ್ಷದ ಕಾರ್ಯಕರ್ತರಿಗೆ ಅವಕಾಶಗಳ ಕೊರತೆ ಎದುರಾಗುತ್ತದೆ ಎಂಬ ಕಾರಣಕ್ಕೆ ಏಕಾಂಗಿಯಾಗಿ ಸ್ಪರ್ಧಿಸುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಅವರು ಹೇಳಿದ್ದಾರೆ.

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಎಎಪಿಗೆ ಬೆಂಬಲ ನೀಡುವುದಾಗಿ ಶಿವಸೇನಾ (ಯುಬಿಟಿ) ಘೋಷಿಸಿದೆ. ಈ ನಡೆಯು ಕಾಂಗ್ರೆಸ್ಸನ್ನು ಉಪೇಕ್ಷಿಸಿದಂತಿದೆ ಎಂದು ವಿಶ್ಲೇಷಿಸಲಾಗಿತ್ತು.

ರಾವುತ್ ಅವರ ಮಾತಿಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಮುಖಂಡರೊಬ್ಬರು, ಮಹಾರಾಷ್ಟ್ರದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ತಮ್ಮ ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸಬೇಕೇ ಎಂಬ ಬಗ್ಗೆ ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ಹೇಳಿದ್ದಾರೆ.

ಶಿವಸೇನಾ (ಯುಬಿಟಿ) ತೀರ್ಮಾನವು ಎಂವಿಎ ಮೈತ್ರಿಕೂಟದ ಎಲ್ಲ ಪಕ್ಷಗಳ ಮೇಲೆಯೂ ಪರಿಣಾಮ ಉಂಟುಮಾಡುತ್ತದೆ ಎಂದು ಎನ್‌ಸಿಪಿ (ಎಸ್‌ಪಿ) ಹೇಳಿದೆ. ‘ಇಂಡಿಯಾ’ ಹಾಗೂ ಎಂವಿಎ ಮೈತ್ರಿಕೂಟಗಳು ರಚನೆಯಾಗಿದ್ದುದು ಕ್ರಮವಾಗಿ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳನ್ನು ಗಮನದಲ್ಲಿ ಇರಿಸಿಕೊಂಡು ಎಂದು ರಾವುತ್ ಹೇಳಿದ್ದಾರೆ.

ಸ್ಥಳೀಯ ಸಂಸ್ಥೆಗಳ ಚುನಾವಣೆ ಪಕ್ಷದ ಕಾರ್ಯಕರ್ತರಿಗೆ ಸೇರಿದ್ದು. ನಮ್ಮ ಅನುಕೂಲಕ್ಕೆ ಅನುಗುಣವಾಗಿ ನಾವು ಸ್ಪರ್ಧಿಸಿದರೆ ಕಾರ್ಯಕರ್ತರು ಏನು ಮಾಡಬೇಕು?

ಸುಪ್ರಿಯಾ ಸುಳೆ, ಎನ್‌ಸಿಪಿ (ಎಸ್‌ಪಿ) ಕಾರ್ಯಕಾರಿ ಅಧ್ಯಕ್ಷೆ

‘ಕಾಂಗ್ರೆಸ್ ಹೊಣೆ ನಿಭಾಯಿಸಲಿ’

‘ಲೋಕಸಭಾ ಚುನಾವಣೆಯ ಫಲಿತಾಂಶ ಘೋಷಣೆಯಾದ ನಂತರ ಇಂಡಿಯಾ ಮೈತ್ರಿಕೂಟವು ಒಂದು ಸಭೆಯನ್ನೂ ನಡೆಸಿಲ್ಲ. ಇಂಡಿಯಾ ಮೈತ್ರಿಕೂಟಕ್ಕೆ ಸಂಚಾಲಕರನ್ನು ನೇಮಿಸಿಲ್ಲ. ಇದು ಒಳ್ಳೆಯದಲ್ಲ. ಮೈತ್ರಿಕೂಟದ ಅತಿದೊಡ್ಡ ಪಕ್ಷವಾಗಿ ಸಭೆಯನ್ನು ಕರೆಯುವುದು ಕಾಂಗ್ರೆಸ್ಸಿನ ಹೊಣೆ’ ಎಂದು ಸಂಜಯ್ ರಾವುತ್ ಹೇಳಿದ್ದಾರೆ.

ರಕ್ಷಣೆ– ಕಾರ್ಯಾಚರಣೆ ಉತ್ತರ ಪ್ರದೇಶದ ಕನೌಜ್ ರೈಲು ನಿಲ್ದಾಣದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡವೊಂದು ಕುಸಿದು, ಅವಶೇಷಗಳಡಿ ಸಿಲುಕಿರುವ 10ಕ್ಕೂ ಹೆಚ್ಚು ಕಾರ್ಮಿಕರನ್ನು ರಕ್ಷಿಸುವ ಕಾರ್ಯಾಚರಣೆ ಶನಿವಾರ ನಡೆಯಿತು – ಪಿಟಿಐ ಚಿತ್ರ

ಪತ್ನಿಗೆ ಜೀವನಾಂಶ: ಕಾನೂನಿನ ಪ್ರಶ್ನೆ ಇತ್ಯರ್ಥಪಡಿಸಿದ ನ್ಯಾಯಾಲಯ

ನವದೆಹಲಿ (ಪಿಟಿಐ): ಪತ್ನಿಯು ಪತಿಯ ಜೊತೆ ಬಾಳಬೇಕು ಎಂದು ಕೋರ್ಟ್ ನೀಡಿದ ಆದೇಶವನ್ನು ಪಾಲಿಸದೆ ಇದ್ದಾಗ, ಆತನ ಜೊತೆ ಬಾಳ್ವೆ ನಡೆಸುವುದಕ್ಕೆ ಒಲ್ಲೆ ಎನ್ನಲು ಆಕೆಗೆ ಸಕಾರಣಗಳು ಇದ್ದಾಗ, ಆಕೆಗೆ ಪತಿಯಿಂದ ಜೀವನಾಂಶ ಪಡೆಯುವ ಹಕ್ಕನ್ನು ನೀಡಬಹುದು ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಮದುವೆಯ ಸಂಬಂಧವನ್ನು ಪುನರ್ ಸ್ಥಾಪಿಸುವ ಆದೇಶವನ್ನು ಪತಿಯು ಕೋರ್ಟ್‌ನಿಂದ ಪಡೆದುಕೊಂಡ ನಂತರದಲ್ಲಿಯೂ, ಪತಿಯು ಆತನ ಜೊತೆ ವಾಸ ಮಾಡಲು ನಿರಾಕರಿಸಿದರೆ, ಆಕೆಗೆ ಜೀವನಾಂಶ ಕೊಡಬೇಕಾಗುತ್ತದೆಯೇ ಎಂಬ ಕಾನೂನಿನ ಪ್ರಶ್ನೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇರುವ ವಿಭಾಗೀಯ ಪೀಠವು ಇತ್ಯರ್ಥಪಡಿಸಿದೆ. ಈ ವಿಚಾರವಾಗಿ ಇಂಥದ್ದೇ ನಿಯಮ ಎಂಬುದು ಇಲ್ಲ, ಇದು ಪ್ರಕರಣವನ್ನು ಆಧರಿಸಿರುತ್ತದೆ ಎಂದು ಪೀಠವು ಹೇಳಿದೆ.

ಮದುವೆಯ ಸಂಬಂಧವನ್ನು ಪುನರ್ ಸ್ಥಾಪಿಸುವ ಕೋರ್ಟ್ ಆದೇಶವನ್ನು ಪತ್ನಿಯು ಪಾಲಿಸಿಲ್ಲ ಎಂದಾದರೆ, ಅದೊಂದೇ ಕಾರಣಕ್ಕೆ ಆಕೆಗೆ ಜೀವನಾಂಶ ನಿರಾಕರಿಸಲು ಆಗುತ್ತದೆಯೇ ಎಂಬ ಪ್ರಶ್ನೆಗೆ ಹಲವು ಹೈಕೋರ್ಟ್‌ಗಳು ಉತ್ತರ ಒದಗಿಸಿವೆ. ಆದರೆ ಈ ವಿಚಾರದಲ್ಲಿ ನಿರ್ದಿಷ್ಟವಾದ ಅಭಿಪ್ರಾಯ ಇಲ್ಲ ಎಂದು ಸುಪ್ರೀಂ ಕೋರ್ಟ್‌ನ ಪೀಠವು ಹೇಳಿದೆ.

ಪ್ರಕರಣದ ಸತ್ಯಾಸತ್ಯತೆಯನ್ನು ಇದು ಆಧರಿಸಿರುತ್ತದೆ. ಕೋರ್ಟ್ ಆದೇಶದ ಹೊರತಾಗಿಯೂ, ಪತಿಯ ಜೊತೆ ಬಾಳ್ವೆ ನಡೆಸುವುದನ್ನು ನಿರಾಕರಿಸುವುದಕ್ಕೆ ಪತ್ನಿಗೆ ಸಾಕಷ್ಟು ಕಾರಣಗಳು ಇದ್ದವೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ ಎಂದು ಪೀಠ ವಿವರಿಸಿದೆ.

ಪರಸ್ಪರ ಬೇರೆಯಾಗಿರುವ, ಜಾರ್ಖಂಡ್‌ನ ಪತಿ–ಪತ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಈ ತೀರ್ಮಾನ ನೀಡಿದೆ. ಇವರು 2014ರ ಮೇ 1ರಂದು ಮದುವೆಯಾಗಿದ್ದರು. ಆದರೆ 2015ರ ಆಗಸ್ಟ್‌ನಲ್ಲಿ ಬೇರೆಯಾದರು. ದಂಪತಿ ಒಟ್ಟಾಗಿ ಬಾಳಬೇಕು ಎಂಬ ಆದೇಶ ನೀಡಬೇಕು ಎಂಬ ಕೋರಿಕೆಯೊಂದಿಗೆ ಪತಿಯು ರಾಂಚಿಯ ಕೌಟುಂಬಿಕ ನ್ಯಾಯಾಲಯದ ಮೊರೆ ಹೋದರು.

ಪತಿಯು ತನಗೆ ಕಿರುಕುಳ ನೀಡುತ್ತಿದ್ದಾನೆ, ₹5 ಲಕ್ಷ ವರದಕ್ಷಿಣೆಗೆ ಪೀಡಿಸುತ್ತಿದ್ದಾನೆ ಎಂದು ಪತ್ನಿಯು ನ್ಯಾಯಾಲಯಕ್ಕೆ ತಿಳಿಸಿದ್ದಳು. ಪತಿಯು ಪತ್ನಿಯ ಜೊತೆ ವಾಸಿಸಲು ಬಯಸುತ್ತಿದ್ದಾನೆ ಎಂದು ಹೇಳಿದ್ದ ಕೌಟುಂಬಿಕ ನ್ಯಾಯಾಲಯವು, ಪರಸ್ಪರರು ಒಟ್ಟಿಗೆ ಬಾಳ್ವೆ ನಡೆಸಬೇಕು ಎಂದು 2022ರಲ್ಲಿ ಆದೇಶಿಸಿತ್ತು. ಆದರೆ ಈ ಆದೇಶವನ್ನು ಪತ್ನಿ ಪಾಲಿಸಲಿಲ್ಲ.

ಬದಲಿಗೆ ಆಕೆಯು, ತನಗೆ ಜೀವನಾಂಶ ಬೇಕು ಎಂದು ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದಳು. ಪತ್ನಿಗೆ ತಿಂಗಳಿಗೆ ₹10 ಸಾವಿರ ಜೀವನಾಂಶ ನೀಡಬೇಕು ಎಂದು ನ್ಯಾಯಾಲಯವು ಪತಿಗೆ ಆದೇಶಿಸಿತು.

ನಂತರದಲ್ಲಿ ಪತಿಯು ಈ ಆದೇಶವನ್ನು ಜಾರ್ಖಂಡ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ. ಕೌಟುಂಬಿಕ ನ್ಯಾಯಾಲಯದ ಆದೇಶವಿದ್ದರೂ ಪತಿಯು ತನ್ನ ಗಂಡನ ಮನೆಗೆ ಹೋಗಿಲ್ಲ ಎಂದು ಹೈಕೋರ್ಟ್ ಹೇಳಿತು. ಪತ್ನಿಗೆ ಜೀವನಾಂಶವನ್ನು ಕೊಡಬೇಕಿಲ್ಲ ಎಂದು ಅದು ಆದೇಶ ನೀಡಿತು. ಈ ಆದೇಶವನ್ನು ಪ್ರಶ್ನಿಸಿ ಪತ್ನಿಯು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದಳು.

ಸಿಂಧುತ್ವ ಪರಿಶೀಲನೆ: ‘ಸುಪ್ರೀಂ’ನತ್ತ ಎಲ್ಲರ ಚಿತ್ತ

ಕೇಂದ್ರವು 2023ರ ಡಿಸೆಂಬರ್‌ನಲ್ಲಿ ಜಾರಿಗೊಳಿಸಿರುವ ನೂತನ ಕಾಯ್ದೆ ಪ್ರಕಾರವೇ ನೂತನ ಮುಖ್ಯ ಚುನಾವಣಾ ಆಯುಕ್ತ ಸೇರಿದಂತೆ ಆಯೋಗದ ಇತರ ಆಯುಕ್ತರ ನೇಮಕವಾಗಲಿದೆ.

ಹಾಲಿ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರಿಗೆ ಫೆಬ್ರುವರಿ 18ರಂದು 65 ವರ್ಷ ತುಂಬಲಿರುವ ಕಾರಣ, ಅಂದು ಅವರು ನಿವೃತ್ತಿ ಹೊಂದುವರು. ಈ ಕಾರಣಕ್ಕೆ, ನೂತನ ಸಿಇಸಿ ನೇಮಕವು ಹೊಸ ಕಾಯ್ದೆ ಪ್ರಕಾರವೇ ನಡೆಯಲಿದೆ.

ಆಯೋಗದ ಆಯುಕ್ತರನ್ನು ನೇಮಕಕ್ಕೆ ಸಂಬಂಧಿಸಿದ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಫೆ.4ರಂದು ನಡೆಸಲಿದೆ. ಹೀಗಾಗಿ, ಸುಪ್ರೀಂ ಕೋರ್ಟ್ ಪ್ರಕಟಿಸುವ ನಿರ್ಧಾರದತ್ತ ಈಗ ಎಲ್ಲರ ದೃಷ್ಟಿ ನೆಟ್ಟಿದೆ. ಸಿಇಸಿ ಹಾಗೂ ಚುನಾವಣಾ ಆಯುಕ್ತರ ನೇಮಕಕ್ಕೆ ಸಂಬಂಧಿಸಿ ಈ ಮೊದಲು ಜಾರಿಯಲ್ಲಿದ್ದ ಸಮಿತಿಯ ಸದಸ್ಯರ ಪೈಕಿ ಸಿಜೆಐ ಕೂಡ ಒಬ್ಬರಾಗಿರುತ್ತಿದ್ದರು. ನೂತನ ಕಾಯ್ದೆ ಪ್ರಕಾರ, ಸಿಜೆಐ ಅವರು ಸಮಿತಿ ಸದಸ್ಯರಲ್ಲ. ಈ ಕಾರಣಕ್ಕೆ, ನೂತನ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿದೆ.

‘ಅತಿಥಿ’ಗಳು ಮನೆಗೆ

ಒಂದನೇ ಪುಟದಿಂದ...

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ನಾತಕೋತ್ತರ ಪದವಿಯ ಜತೆಗೆ ಎನ್‌ಇಟಿ ಇಲ್ಲವೇ ಕೆ-ಸೆಟ್ ತೇರ್ಗಡೆಯಾಗಿರಬೇಕು, ಪಿಎಚ್‌.ಡಿ ಪಡೆದಿರಬೇಕು ಎಂದು ಕೆಲ ವರ್ಷಗಳ ಹಿಂದೆಯೇ ಯುಜಿಸಿ ನಿಯಮ ರೂಪಿಸಿತ್ತು. ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲೂ ಇಂತಹ ಅರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರನ್ನೇ ನೇಮಕ ಮಾಡಿಕೊಳ್ಳಬೇಕು ಎಂದು ಸೂಚಿಸಿತ್ತು.

ಉನ್ನತ ಶಿಕ್ಷಣ ಇಲಾಖೆ ಕೆಲವು ವರ್ಷಗಳ ಹಿಂದೆಯೇ ರಾಜ್ಯದಲ್ಲೂ ಇದೇ ಮಾನದಂಡ ನಿಗದಿ ಮಾಡಿತ್ತು. ಆದರೆ, ಸರ್ಕಾರಕ್ಕೆ ಮನವಿ ಮಾಡಿದ್ದ ಅತಿಥಿ ಉಪನ್ಯಾಸಕರ ಸಂಘಟನೆಗಳು, ‘ದಶಕಗಳಿಂದ ಕೆಲಸ ಮಾಡುತ್ತಿರುವ ಶೇ 50ರಷ್ಟು ಅತಿಥಿ ಉಪನ್ಯಾಸಕರು ಸ್ನಾತಕೋತ್ತರ ಪದವಿಯನ್ನಷ್ಟೇ ಪಡೆದಿದ್ದಾರೆ. ಕಡಿಮೆ ಗೌರವಧನ ಪಡೆದು ಬೋಧನಾ ಅವಧಿ ನಿರ್ವಹಿಸುತ್ತಿರುವುದರಿಂದ, ಯುಜಿಸಿ ನಿಯಮಗಳನ್ನು ಅನ್ವಯಿಸಬಾರದು’ ಎಂದು ಕೋರಿದ್ದವು.

ಮಾನವೀಯ ದೃಷ್ಟಿಯಿಂದ ಸರ್ಕಾರ ಅಂಥವರಿಗೆ ಮೂರು ವರ್ಷಗಳ ಒಳಗೆ ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದುವಂತೆ ಅವಕಾಶ ನೀಡಿ, ಅವರನ್ನು ಸೇವೆಯಲ್ಲಿ ಮುಂದುವರಿಸಿತ್ತು. ಈ ಅವಧಿ ಇದೇ ಜನವರಿ 13ಕ್ಕೆ ಮುಕ್ತಾಯವಾಗುತ್ತಿದೆ. ಹಾಗಾಗಿ, ಕೋರ್ಟ್ ತೀರ್ಪಿನಂತೆ 2, 4 ಹಾಗೂ 6ನೇ ಸೆಮಿಸ್ಟರ್ ಅವಧಿಯ ಬೋಧನೆಗೆ ಅವರನ್ನು ಕೈಬಿಟ್ಟು ಯುಜಿಸಿ ವಿದ್ಯಾರ್ಹತೆ ಹೊಂದಿದವರನ್ನು ಮಾತ್ರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

‘ನಾವು ಕೆಲಸಕ್ಕೆ ಸೇರಿದ್ದು 2004–05ರಲ್ಲಿ. ಆಗ ಈ ಯಾವ ನಿಯಮಗಳೂ ಇರಲಿಲ್ಲ. ತಿಂಗಳಿಗೆ ₹1,200 ಪಡೆಯುತ್ತಿದ್ದ ನಾವು ಕಳೆದ ಎರಡು ವರ್ಷಗಳಿಂದ ವಿದ್ಯಾರ್ಹತೆ, ಅನುಭವದ ಆಧಾರದಲ್ಲಿ ₹31 ಸಾವಿರದಿಂದ ₹40 ಸಾವಿರದವರೆಗೂ ಗೌರವಯುತವಾದ ಗೌರವ ಸಂಭಾವನೆ ಪಡೆಯುತ್ತಿದ್ದೇವೆ. ಸಂಭಾವನೆ ಹೆಚ್ಚಳದ ನೆಪದಲ್ಲಿ ಕೆಲಸದ ಅವಧಿ ಹೆಚ್ಚಿಸಿದ ಪರಿಣಾಮ ಐದು ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು 2022–23ನೇ ಸಾಲಿನಲ್ಲಿ ಕೆಲಸ ಕಳೆದುಕೊಂಡಿದ್ದರು. ಈಗ ಯುಜಿಸಿ ವಿದ್ಯಾರ್ಹತೆಯ ತೂಗುಗತ್ತಿಗೆ ಸಿಲುಕಿ, ಮತ್ತೆ ಐದು ಸಾವಿರ ಜನರು ಮನೆ ಸೇರುವಂತಾಗಿದೆ’ ಎನ್ನುತ್ತಾರೆ ಅತಿಥಿ ಉಪನ್ಯಾಸಕಿ ಶುಭ ಬಣಕಾರ್.

ಸಂಸ್ಕೃತದಲ್ಲಿ ಮೋದಿ ಬದುಕಿನ ‘ಮಹಾಕಾವ್ಯ’

ಬರ್ಹಾಂಪುರ (ಒಡಿಶಾ) (ಪಿಟಿಐ): ಒಡಿಶಾದ ಗಂಜಾಂ ಜಿಲ್ಲೆಯ ಸಂಸ್ಕೃತ ವಿದ್ವಾಂಸರೊಬ್ಬರು ಪ್ರಧಾನಿ ನರೇಂದ್ರ ಮೋದಿಯವರ ಬದುಕು ಮತ್ತು ಅವರ ಕೆಲಸಕಾರ್ಯಗಳ ಕುರಿತ ‘ಮಹಾಕಾವ್ಯ’ವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾರೆ.

ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಸಹಪ್ರಾಧ್ಯಾಪಕ ಸೋಮನಾಥ್ ದಾಸ್ ಅವರು ಬರೆದಿರುವ 700 ಪುಟಗಳ ‘ನರೇಂದ್ರ ಆರೋಹಣಂ’ ಕೃತಿಯನ್ನು ಕಳೆದ ವಾರ ವೆರಾವಲ್‌ನಲ್ಲಿನ ಯುವಜನೋತ್ಸವದಲ್ಲಿ ಬಿಡುಗಡೆ ಮಾಡಲಾಯಿತು.

ಪುಸ್ತಕವು 12 ಅಧ್ಯಾಯ, 1,200 ಶ್ಲೋಕಗಳನ್ನು ಒಳಗೊಂಡಿದೆ. ಇಂಗ್ಲಿಷ್, ಹಿಂದಿಯಲ್ಲಿ ವಿವರಣೆ ನೀಡಲಾಗಿದೆ.

‘ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಅವರು ತಮ್ಮ ಜೀವನದಲ್ಲಿ ಹಲವು ಏಳುಬೀಳುಗಳನ್ನು ಕಂಡಿದ್ದಾರೆ. ವಿಶ್ವದ ಎಲ್ಲ ಯುವಕರಿಗೆ ಆದರ್ಶಪ್ರಾಯರಾಗಿದ್ದಾರೆ. ಅವರ ತಪಸ್ವಿ ರಾಜಕೀಯ ಪ್ರಯಾಣ ಮತ್ತು ಜೀವನದ ಹೋರಾಟವು ಇತಿಹಾಸದಲ್ಲಿ ಅಚ್ಚಳಿಯದೆ ದಾಖಲಾಗಲಿದೆ. ಅಂತಹ ವ್ಯಕ್ತಿತ್ವದ ಜೀವನ ಮತ್ತು ಕಾರ್ಯಗಳ ಕುರಿತು ಮಹಾಕಾವ್ಯ ಬರೆಯಲು ನಿರ್ಧರಿಸಿದೆ. ಈ ಮಹಾಕಾವ್ಯ ಪೂರ್ಣಗೊಳಿಸಲು ನಾಲ್ಕು ವರ್ಷ ಹಿಡಿಯಿತು’ ಎಂದು ದಾಸ್ ಹೇಳಿದ್ದಾರೆ.

ಯುವ ಜನತೆ ಜೊತೆ ಇಂದು ಸಂವಾದ

ಪ್ರಧಾನಿ ಮೋದಿ ಅವರು ಭಾನುವಾರ ನಡೆಯಲಿರುವ ‘ವಿಕಸಿತ ಭಾರತ ಯಂಗ್ ಲೀಡರ್ಸ್ ಡೈಲಾಗ್’ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ರಾಜಕೀಯ ನಂಟು ಇಲ್ಲದ ಒಂದು ಲಕ್ಷ ಯುವ ಜನತೆಯನ್ನು ರಾಜಕೀಯಕ್ಕೆ ಕರೆತರುವ ಅವರ ಪ್ರಯತ್ನದ ಭಾಗವಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ವಾಮಿ ವಿವೇಕಾನಂದ ಅವರ ಜನ್ಮ ದಿನೋತ್ಸವವನ್ನು ‘ರಾಷ್ಟ್ರೀಯ ಯುವ ದಿನ’ ಎಂದು ಆಚರಿಸಲಾಗುತ್ತಿದ್ದು, ಅಂದೇ ಈ ಕಾರ್ಯಕ್ರಮ ನಡೆಯಲಿದೆ. ದೇಶದ ವಿವಿಧ ಭಾಗಗಳಿಂದ 3 ಸಾವಿರ ಯವಕರು ಭಾಗವಹಿಸಲಿದ್ದಾರೆ.

ಕಂಬಳಿ, ಬ್ಲಾಂಕೆಟ್‌ಗಳ ಉತ್ಪಾದನೆಗೆ ಹಿನ್ನಡೆ

ಕುರಿ ಉಣ್ಣೆ ಕೊರತೆ: ಸಿಗದ ಸೌಲಭ್ಯ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಈ ಚಳಿಗಾಲದಲ್ಲಿ ಕುರಿ ಉಣ್ಣೆಯಿಂದ ತಯಾರಿಸಿದ ಕಂಬಳಿ, ಬ್ಲಾಂಕೆಟ್‌ಗಳಿಗೆ ಬೇಡಿಕೆ ಹೆಚ್ಚಿದೆ. ವಿವಿಧ ಸಹಕಾರಿ ಸಂಘಗಳಲ್ಲಿ ಉತ್ಪಾದನೆಗೆ ಕಾರ್ಮಿಕರು, ಸಲಕರಣೆಗಳೂ ಲಭ್ಯವಿವೆ. ಆದರೆ, ಬೇಡಿಕೆಯಷ್ಟು ಕುರಿ ಉಣ್ಣೆಯೇ ಸಿಗುತ್ತಿಲ್ಲ. ಇದರಿಂದ ಉತ್ಪಾದನೆಗೆ ಹಿನ್ನಡೆ ಆಗಿದೆ.

‘ನಮ್ಮಲ್ಲಿ ₹3 ಕೋಟಿ ಮೊತ್ತದ ಕಂಬಳಿ, ಬ್ಲಾಂಕೆಟ್ ಉತ್ಪಾದಿಸಲು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (ಕೆವಿಐಸಿ), ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಗುರಿ ನೀಡಿದೆ. 2024ರ ಏಪ್ರಿಲ್ 1ರಿಂದ ಡಿಸೆಂಬರ್ ಅಂತ್ಯದವರೆಗೆ ₹2.75 ಕೋಟಿಯ ಉತ್ಪನ್ನ ಸಿದ್ಧಪಡಿಸಿದ್ದೇವೆ’ ಎಂದು ತಾಲ್ಲೂಕಿನ ಶಿಂಧೊಳ್ಳಿಯ ಕನಕದಾಸ ಕುರಿ ಸಂಗೋಪನಾ ಮತ್ತು ಉಣ್ಣೆ ಉತ್ಪಾದನೆ ಸಹಕಾರಿ ಸಂಘದ ಅಧ್ಯಕ್ಷ ಯಲ್ಲಪ್ಪ ಶಹಾಪುರಕರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಅವಕಾಶ ಸಿಕ್ಕರೆ ವಾರ್ಷಿಕ ₹4 ಕೋಟಿಯವರೆಗೆ ಉತ್ಪನ್ನ ಸಿದ್ಧಪಡಿಸಬಹುದು. ಆದರೆ, ಹೆಚ್ಚಿನ ಉತ್ಪಾದನೆಗೆ ಕುರಿ ಉಣ್ಣೆ ಸಿಗುತ್ತಿಲ್ಲ. ಇದರಿಂದ ನಿಗದಿತ ಕಾಲಾವಧಿಯಲ್ಲಿ ಬೇಡಿಕೆ ಈಡೇರಿಸಲು ಸಾಧ್ಯವಾಗುತ್ತಿಲ್ಲ’ ಎಂದರು.

ಬೆಳಗಾವಿ ತಾಲ್ಲೂಕಿನ ಶಿಂಧೊಳ್ಳಿಯ ಕನಕದಾಸ ಕುರಿ ಸಂಗೋಪನಾ ಮತ್ತು ಉಣ್ಣೆ ಉತ್ಪಾದನೆ ಸಂಘದಲ್ಲಿ ಕಂಬಳಿ ಸಿದ್ಧಪಡಿಸುತ್ತಿರುವುದು –ಚಿತ್ರ: ಏಕನಾಥ ಅಗಸಿಮನಿ

‘ನಮ್ಮ ಸಂಘದಲ್ಲಿರುವ 400ಕ್ಕೂ ಹೆಚ್ಚು ಸದಸ್ಯರು ತಾವು ಸಾಕಿದ ಕುರಿಗಳಿಂದ ವರ್ಷಕ್ಕೆ ಎರಡು ಬಾರಿ ಉಣ್ಣೆ ಕತ್ತರಿಸಿ ನೀಡುತ್ತಾರೆ. ಹಾವೇರಿ, ಹುಬ್ಬಳ್ಳಿ, ಗದಗ, ಹೂವಿನಹಡಗಲಿ ಮತ್ತಿತರ ಕಡೆಯಿಂದ ಉಣ್ಣೆಯನ್ನು ಪ್ರತಿ ಕೆ.ಜಿಗೆ ₹ 50 ರಿಂದ ₹60ರ ದರದಲ್ಲಿ ಖರೀದಿಸುತ್ತೇವೆ. ಹೊರ ರಾಜ್ಯದವರು ಕೆ.ಜಿಗೆ ₹70 ರಿಂದ ₹80ರ ದರದಲ್ಲಿ ಕರ್ನಾಟಕದ ಕುರಿ ಉಣ್ಣೆ ಖರೀದಿಸುತ್ತಾರೆ. ಇದರಿಂದ ಅಭಾವವಾಗಿದೆ’ ಎಂದು ಸಂಘದ ಕಾರ್ಯದರ್ಶಿ ಮಲ್ಲೇಶಪ್ಪ ಅನಿಗೋಳಕರ ಹೇಳಿದರು.

₹1.20 ಕೋಟಿ ಮೊತ್ತದ ಕಂಬಳಿ: ‘ಕಳೆದ 9 ತಿಂಗಳಲ್ಲಿ ಸಂಘದಲ್ಲಿ ಸಿದ್ಧಪಡಿಸಿದ ₹2.75 ಕೋಟಿಯ ಉತ್ಪನ್ನದಲ್ಲಿ ₹1.20 ಕೋಟಿ ಮೊತ್ತದ ಕಂಬಳಿಗಳೇ ಇವೆ. ಪ್ರತಿ ಕಂಬಳಿ ದರ ₹1,700 ರಿಂದ ₹6 ಸಾವಿರದವರೆಗೆ, ಬ್ಲಾಂಕೆಟ್ ದರ ₹730 ಇದೆ. ಸಂಘದ ಮಳಿಗೆಗಳು, ವಿವಿಧ ಪ್ರದರ್ಶನಗಳಲ್ಲಿ ಶೇ 35 ರಿಯಾಯಿತಿ ದರದಲ್ಲಿ ಮಾರುತ್ತೇವೆ. ಗ್ರಾಹಕರಿಗೆ ನೀಡಿದ ರಿಯಾಯಿತಿ ಹಣವನ್ನು ಆಯೋಗ ಮತ್ತು ಮಂಡಳಿ ಭರಿಸುತ್ತದೆ. ಕುರಿ ಉಣ್ಣೆ ಕೊರತೆ, ಸರ್ಕಾರಗಳಿಂದ ಸಕಾಲಕ್ಕೆ ಸೌಲಭ್ಯ ಸಿಗದ ಕಾರಣ ಬೇಡಿಕೆ ಪೂರೈಸಲು ಆಗುತ್ತಿಲ್ಲ’ ಎಂದು ಸಂಘದ ಮಾಜಿ ಕಾರ್ಯದರ್ಶಿ ಸಿದ್ದಪ್ಪ ಸಾಯನ್ನವರ ತಿಳಿಸಿದರು.

‘ಬೇಡಿಕೆ ಹೆಚ್ಚಿದೆ’

‘ನಮ್ಮ ಸಂಘದಲ್ಲಿ 200 ಸದಸ್ಯರಿದ್ದು, 2024–25ನೇ ಸಾಲಿನಲ್ಲಿ ₹90 ಲಕ್ಷ ಮೊತ್ತದ ಕಂಬಳಿ, ಬ್ಲಾಂಕೆಟ್, ಶಾಲೂ ಉತ್ಪಾದಿಸುವಂತೆ ಗುರಿ ಕೊಡಲಾಗಿದೆ. ಆದರೆ, ಕುರಿ ಉಣ್ಣೆ ಸಿಗದಿರುವುದರಿಂದ ₹50 ಲಕ್ಷ ಮೊತ್ತದ ಉತ್ಪನ್ನ ಮಾತ್ರ ತಯಾರಿಸಲು ಸಾಧ್ಯವಾಗುತ್ತಿದೆ. ಬೇಡಿಕೆಯಷ್ಟು ಉಣ್ಣೆ ಸಿಕ್ಕರೆ ಗುರಿ ಮುಟ್ಟಬಹುದು’ ಎಂದು ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರದ ಸಿದ್ಧೇಶ್ವರ ಖಾದಿ ಗ್ರಾಮೋದ್ಯೋಗ ಸಂಘದ ಅಧ್ಯಕ್ಷ ಶಂಕರ ಕೆರಿಮನಿ ಮತ್ತು ಕಾರ್ಯದರ್ಶಿ ಶಬ್ಬೀರ್ ಮುಲ್ಲಾ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಪಂಜಾಬ್: ಗುಂಡೇಟಿನಿಂದ ಶಾಸಕ ಗೋಗಿ ಸಾವು

ಲುಧಿಯಾನ (ಪಿಟಿಐ): ಎಎಪಿ ನಾಯಕ ಮತ್ತು ಲುಧಿಯಾನ ಪಶ್ಚಿಮ ಕ್ಷೇತ್ರದ ಶಾಸಕ ಗುರ್‌ಪ್ರೀತ್ ಬಸ್ಸಿ ಗೋಗಿ (58) ಅವರು ಗುಂಡೇಟಿನಿಂದ ಮೃತಪಟ್ಟಿದ್ದಾರೆ. ಪರವಾನಗಿ ಹೊಂದಿದ ಅವರ ಸ್ವಂತ ಪಿಸ್ತೂಲ್‌ನಿಂದ ಆಕಸ್ಮಿಕವಾಗಿ ಗುಂಡು ಹಾರಿರಬಹುದು ಎಂದು ಪೊಲೀಸರು ಶನಿವಾರ ಹೇಳಿದ್ದಾರೆ.

‘ಕುಟುಂಬದವರು ಕೂಡಲೇ ಅವರನ್ನು ಸಮೀಪದ ದಯಾನಂದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಸಾಗಿಸಿದರು. ಆದರೆ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು’ ಎಂದು ಜಂಟಿ ಪೊಲೀಸ್ ಕಮಿಷನರ್ ಜಸ್ಕರನ್ ಸಿಂಗ್ ತೇಜಾ ಮಾಹಿತಿ ನೀಡಿದರು.

ಗೋಗಿ ಅವರ ಮನೆಯಲ್ಲಿ ಶುಕ್ರವಾರ ರಾತ್ರಿ 11.30 ಗಂಟೆಗೆ ಈ ಘಟನೆ ನಡೆದಿದ್ದು, ಅವರ ಪಿಸ್ತೂಲ್‌ನಿಂದಲೇ ಗುಂಡು ಹಾರಿದೆ ಎಂದು ತೇಜಾ ವಿವರಿಸಿದರು.

‘ಪಿಸ್ತೂಲಿನಿಂದ ಆಕಸ್ಮಿಕವಾಗಿ ಗುಂಡು ಹಾರಿದೆ ಎಂದು ಗೋಗಿ ಅವರ ಕುಟುಂಬದವರು ಹೇಳಿಕೆ ನೀಡಿದ್ದಾರೆ’ ಎಂದು ಅವರು ತಿಳಿಸಿದರು. ಗೋಗಿ ಅವರಿಗೆ ಪತ್ನಿ, ಮಗ ಮತ್ತು ಮಗಳಿದ್ದಾರೆ.

ಮೃತದೇಹವನ್ನು ಆಸ್ಪತ್ರೆಯ ಶವಾಗಾರದಲ್ಲಿ ಇಡಲಾಗಿದ್ದು, ಮರಣೋತ್ತರ ಪರೀಕ್ಷೆಯ ವರದಿ ಬಳಿಕ ಹೆಚ್ಚಿನ ಮಾಹಿತಿ ದೊರೆಯಲಿದೆ ಎಂದರು. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಸೇರಿದಂತೆ ಹಲವು ರಾಜಕೀಯ ನಾಯಕರು ಗೋಗಿ ಅವರ ಸಾವಿಗೆ ಆಘಾತ ವ್ಯಕ್ತಪಡಿಸಿದ್ದಾರೆ.

ಸಾವಿಗೂ ಕೆಲ ಗಂಟೆ ಮುನ್ನ ಗೋಗಿ ಅವರು ‘ಬುದ್ಧ ನುಲ್ಲಾ’ (ಚರಂಡಿ) ಶುಚಿಗೊಳಿಸುವ ಕುರಿತು ವಿಧಾನಸಭಾ ಸ್ಪೀಕರ್ ಕುಲ್ತಾರ್ ಸಿಂಗ್ ಸಂಧ್ವಾನ್ ಮತ್ತು ಎಎಪಿ ಸಂಸದ ಬಲ್ಬೀರ್ ಸಿಂಗ್ ಸೀಚೆವಾಲ್ ಜತೆ ಸಭೆ ನಡೆಸಿದ್ದರು.

22 ವರ್ಷಗಳಿಂದ ಕಾಂಗ್ರೆಸ್‌ನಲ್ಲಿದ್ದ ಗೋಗಿ ಅವರು 2022ರಲ್ಲಿ ಕಾಂಗ್ರೆಸ್ ತೊರೆದು ಎಎಪಿ ಸೇರಿ, ಲುಧಿಯಾನ ಪಶ್ಚಿಮ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಅವರ ಪತ್ನಿ ಸುಖಚೈನ್ ಕೌರ್ ಗೋಗಿ ಕಳೆದ ತಿಂಗಳು ನಡೆದಿದ್ದ ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಸೋತಿದ್ದರು.

230 ಮೀ. ಅಂತರದಲ್ಲಿ ಸ್ಪೇಡೆಕ್ಸ್ ಉಪಗ್ರಹಗಳು: ಇಸ್ರೊ ಸಾಧನೆ

ಚೆನ್ನೈ: ಅಂತರಿಕ್ಷದಲ್ಲಿ ಜೋಡಣೆ ಪ್ರಯೋಗದ (ಸ್ಪೇಡೆಕ್ಸ್) ಭಾಗವಾಗಿ ಉಡ್ಡಯನ ಮಾಡಲಾಗಿರುವ ಎರಡು ಉಪಗ್ರಹಗಳ ನಡುವಿನ ಅಂತರವನ್ನು 230 ಮೀಟರ್‌ಗೆ ಇಳಿಸುವಲ್ಲಿ ಯಶಸ್ವಿಯಾಗಿದ್ದಾಗಿ ಇಸ್ರೊ ಶನಿವಾರ ತಿಳಿಸಿದೆ.

ಎಲ್ಲವೂ ಅಂದುಕೊಂಡಂತೆ ನಡೆದಲ್ಲಿ, ಮುಂದಿನ ಕೆಲವೇ ದಿನಗಳಲ್ಲಿ ಉಪಗ್ರಹಗಳ ಜೋಡಣೆ (ಡಾಕಿಂಗ್) ಪ್ರಯೋಗವನ್ನು ಕಾರ್ಯಗತಗೊಳಿಸಲಾಗುವುದು ಎಂದೂ ತಿಳಿಸಿದೆ. ‘ಎಲ್ಲ ಸಂವೇದಕಗಳ ಪರಿಶೀಲನೆ ನಡೆಸಲಾಗುತ್ತಿದೆ. ಉಪಗ್ರಹಗಳು ಕೂಡ ಸುಸ್ಥಿತಿಯಲ್ಲಿವೆ’ ಎಂದು ಹೇಳಿದೆ. ಶುಕ್ರವಾರ ರಾತ್ರಿ, ಈ ಎರಡು ಉಪಗ್ರಹಗಳ ನಡುವಿನ ಅಂತರವನ್ನು 1.5 ಕಿ.ಮೀ. ಇರುವಂತೆ ಕ್ರಮ ಕೈಗೊಳ್ಳಲಾಗಿತ್ತು.

ಪ್ರಜಾವಾಣಿ
ಭಾನುವಾರದ
ಪುರವಣಿ
ಭಾನುವಾರ, 12 ಜನವರಿ 2025

ನವಶಿಲಾಯುಗದ ನೆಲೆ ಸಂಗನಕಲ್ಲು 11

ಊರುಕೇರಿಯಲ್ಲಿ ದಾಂಪತ್ಯ ಗೀತ 12

ಮಾಯ್ಕಾರ ಸೃಷ್ಟಿಸಿದ ಡಿಸ್ನಿಲ್ಯಾಂಡ್ 13

ಗವಿಮಠ ಜಾತ್ರೆ ಜಾಗೃತಿ ಯಾತ್ರೆ

ಕೊಪ್ಪಳದ ಗವಿಸಿದ್ಧೇಶ್ವರ ಮಠದ ಜಾತ್ರೆಯ ಮಹಾರಥೋತ್ಸವ ಜನವರಿ 15ರಂದು ನಡೆಯಲಿದೆ. ಜಾತ್ರೆಯ ಸಂಭ್ರಮ, ಜನರ ಸಂಗಮ, ದಾಸೋಹದ ರುಚಿ, ತಜ್ಞರ ಮಾತು ಈ ಎಲ್ಲ ಹೂರಣಗಳು ಇರಲಿವೆ. ಗವಿಮಠದ ಅಜ್ಜನ ಜಾತ್ರೆ ಸಡಗರವಷ್ಟೇ ಅಲ್ಲದೆ ಜಾಗೃತಿ ಜಾಥಾಗಳ ಮೂಲಕ ಜನರ ಬದುಕಿನಲ್ಲಿ ಪರಿವರ್ತನೆ ತಂದ ಯಾತ್ರೆಯೂ ಆಗಿದೆ.

ತ್ಯಾಜ್ಯದ ತಾಣವಾಗಿದ್ದ ಕೊಪ್ಪಳ ತಾಲ್ಲೂಕಿನ ಗಿಣಿಗೇರಿ ಕೆರೆಯಲ್ಲಿ ಬೋಟಿಂಗ್ ಸಂಭ್ರಮ
ಚಿತ್ರಗಳು: ಭರತ್ ಕಂದಕೂರ

ಕೊಪ್ಪಳ ಸಮೀಪದ ಹಿರೇಹಳ್ಳದಲ್ಲಿ ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಹಳ್ಳ ಸ್ವಚ್ಛಗೊಳಿಸಿದ್ದ ಸಂದರ್ಭ

ಗವಿಮಠದ ಆವರಣದಲ್ಲಿ ಬೆಳೆದು ನಿಂತ ಮರಗಳ ಸಾಲು

ಪ್ರಮೋದ ಕುಲಕರ್ಣಿ

ಅದು 2023ರ ಮೇ ಮೊದಲ ವಾರ. ಗಂಗಾವತಿ ತಾಲ್ಲೂಕಿನ ಶ್ರೀರಾಮನಗರದ ನಲ್ಲಾ ದುರ್ಗಾರಾವ್ ಮೊಮ್ಮಗನ ಜನ್ಮದಿನದ ಕಾರ್ಯಕ್ರಮದಲ್ಲಿ ಭಾಗಿಯಾಗಲು ಬೆಂಗಳೂರಿನಲ್ಲಿದ್ದ ಮಗಳ ಮನೆಗೆ ಹೋಗಿದ್ದರು. ಏಕಾಏಕಿ ಪಾರ್ಶ್ವವಾಯುವಿಗೆ ಒಳಗಾಗಿ ಮಿದುಳು ನಿಷ್ಕ್ರಿಯವಾಗಿತ್ತು. ಸಂಭ್ರಮದಲ್ಲಿದ್ದ ಕುಟುಂಬದವರಲ್ಲಿ ದುಃಖ ಮಡುಗಟ್ಟಿತ್ತು. ಇಂಥ ಸಮಯದಲ್ಲಿಯೂ ದಿಟ್ಟ ನಿರ್ಧಾರ ಕೈಗೊಂಡ ಕುಟುಂಬದವರು ದುರ್ಗಾರಾವ್ ಅವರ ಯಕೃತ್ತು, ಮೂತ್ರಪಿಂಡ, ಚರ್ಮ ಮತ್ತು ಕಣ್ಣುಗಳನ್ನು ದಾನ ಮಾಡಿದರು.

ಬೈಕ್ ಡಿಕ್ಕಿಯಾಗಿ ಗಂಭೀರವಾಗಿ ಗಾಯಗೊಂಡಿದ್ದ ಕೊಪ್ಪಳ ತಾಲ್ಲೂಕಿನ ಕಿನ್ನಾಳ ಗ್ರಾಮ ಪಂಚಾಯಿತಿ ಸದಸ್ಯ ಮಲ್ಲಪ್ಪ ಉದ್ದಾರ, ಘಟನೆ ನಡೆದ ನಾಲ್ಕು ದಿನಗಳ ನಂತರ ಮೃತಪಟ್ಟರು. ಒತ್ತರಿಸಿ ಬರುತ್ತಿದ್ದ ದುಃಖದ ನಡುವೆಯೂ ಮಾನವೀಯ ನಿರ್ಧಾರ ಕೈಗೊಂಡ ಕುಟುಂಬದವರು ಅವರ ಹೃದಯ, ಯಕೃತ್ತು, ಮೂತ್ರಪಿಂಡ ದಾನ ಮಾಡಿದರು.

2024ರ ಡಿಸೆಂಬರ್‌ನಲ್ಲಿ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಮಿದುಳು ನಿಷ್ಕ್ರಿಯವಾಗಿದ್ದರಿಂದ ತಮ್ಮ ಪತ್ನಿ ಗೀತಾ ಅವರ ದೇಹದ ಅಂಗಾಂಗಗಳನ್ನು ದಾನ ಮಾಡಲು ಶಿಕ್ಷಕರಾಗಿರುವ ಪತಿ ಸಂಗನಗೌಡರ ಗೌಡರ ಸಮ್ಮತಿಸಿ ಮಾದರಿ ಎನಿಸಿದರು.

ಹೀಗೆ ಅಂಗಾಂಗಗಳನ್ನು ದಾನ ಮಾಡಿ ಸಮಾಜಮುಖಿ ಬದುಕು ಸಾಗಿಸಲು ಮೃತ ವ್ಯಕ್ತಿಗಳ ಕುಟುಂಬದವರಿಗೆ ಪ್ರೇರೇಪಿಸಿದ್ದು ಕೊಪ್ಪಳದ ಗವಿಸಿದ್ಧೇಶ್ವರ ಮಠ. ಇವು ಕೆಲವು ಉದಾಹರಣೆಗಳಷ್ಟೇ. ಇಂಥ ಅನೇಕ ಮಾದರಿಯ ಕೆಲಸಗಳಿಗೆ ಗವಿಮಠದ ಜಾತ್ರೆ ಹಾಗೂ ಜಾತ್ರೆಯ ಅಂಗವಾಗಿ ನಡೆಯುವ ಬೃಹತ್ ಜಾಗೃತಿ ಯಾತ್ರೆಗಳು ಕಾರಣವಾಗಿವೆ.

ಪ್ರತಿ ವರ್ಷ ಲಕ್ಷಾಂತರ ಭಕ್ತರು ಸಾಕ್ಷಿಯಾಗುವ ಗವಿಮಠದ ಜಾತ್ರೆಯ ಮೊದಲ ಕಾರ್ಯಕ್ರಮವೇ ಜಾಗೃತಿ ಜಾಥಾ. ಈ ಜಾಥಾಗಳು ಜನರನ್ನು ಪರಿವರ್ತನೆಯ ಹಾದಿಗೆ ಹೊರಳುವಂತೆ ಮಾಡಿ ಮಾದರಿ ಕೆಲಸಗಳನ್ನು ಮಾಡಿಸುತ್ತಿವೆ. 2023ರಲ್ಲಿ ಅಂಗಾಂಗ ದಾನದ ಮಹತ್ವದ ಬಗ್ಗೆ ಸಾವಿರಾರು ಸಂಖ್ಯೆಯಲ್ಲಿ ಜನರೊಂದಿಗೆ ಜಾಥಾ ಮಾಡಲಾಗಿತ್ತು. ಜಿಲ್ಲಾಡಳಿತವೂ ಕೈಜೋಡಿಸಿತ್ತು. ಅದರಿಂದ ಪ್ರೇರಣೆ ಪಡೆದ ಹಲವಾರು ಜನ ಅಂಗಾಂಗಗಳ ದಾನಕ್ಕೆ ಸಮ್ಮತಿಸಿದ್ದಾರೆ.

ನಲ್ಲಾ ಕುಟುಂಬದವರು ತಮ್ಮ ತಂದೆಯ ನಿಧನದ ಬಳಿಕ, ಅಂಗಾಂಗ ದಾನದ ಮಹತ್ವ ಅರಿತುಕೊಂಡಿದ್ದಾರೆ. ನಲ್ಲಾ ದುರ್ಗಾರಾವ್ ಅವರ ಪುತ್ರಿ ಅನುಷಾ ಹಾಗೂ ಅಳಿಯ ರಾಮಕೃಷ್ಣ ಅಂಗಾಂಗ ದಾನಕ್ಕೆ ಸಹಿ ಹಾಕಿದ್ದಾರೆ. ಜೊತೆಗೆ ಅಂಗಾಂಗಗಳ ದಾನ ಮತ್ತೊಬ್ಬರ ಬದುಕಿಗೆ ಹೇಗೆ ಆಸರೆಯಾಗುತ್ತದೆ ಎನ್ನುವ ಜಾಗೃತಿಯನ್ನೂ ಮೂಡಿಸುತ್ತಿದ್ದಾರೆ.

ಹೀಗಾಗಿ ಗವಿಮಠದ ಜಾತ್ರೆ ಕೇವಲ ಜನರ ಸಂಗಮ, ಸಂಭ್ರಮ, ಭಕ್ತಿ, ಮಹಾದಾಸೋಹಕ್ಕೆ ಸೀಮಿತವಾಗಿಲ್ಲ. 2015ರಲ್ಲಿ ಮೊದಲ ಬಾರಿಗೆ ಆರಂಭವಾದ ಈ ಜಾಗೃತಿ ಜಾಥಾಗಳು ಪ್ರತಿವರ್ಷವೂ ಹೊಸ ಸ್ವರೂಪ ಪಡೆದುಕೊಂಡು ಜನರಲ್ಲಿ ಪರಿವರ್ತನೆಯ ಬೀಜಬಿತ್ತುವಲ್ಲಿ ಯಶಸ್ವಿಯಾಗಿದೆ.

ಸತತ ಬರಗಾಲದಿಂದ ಕೊಪ್ಪಳ ಜಿಲ್ಲೆಯಲ್ಲಿ ನೀರಿನ ಅಭಾವ ವ್ಯಾಪಕವಾಗಿತ್ತು. ಇದಕ್ಕಾಗಿ 2017ರ ಜಾತ್ರೆ ಸಮಯದಲ್ಲಿ ಜಲ ಸಂರಕ್ಷಣೆ ಜಾಗೃತಿ ಅಭಿಯಾನ 'ಜಲದೀಕ್ಷೆ' ಜಾಥಾ ನಡೆಯಿತು. ಇದು ರಾಜ್ಯದಲ್ಲಿ ಸಂಚಲನವನ್ನೂ ಉಂಟು ಮಾಡಿತು. ನೀರು ಮಿತವಾಗಿ ಬಳಸಬೇಕು ಎನ್ನುವ ಸಂದೇಶ ಸಾರಲಾಯಿತು. ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಅವರ ಸಮಾಜಮುಖಿ ಮಾತುಗಳು ಕೃತಿಗೂ ಇಳಿದವು. ಸ್ವಾಮೀಜಿಯೇ ಕೊಪ್ಪಳ ಸಮೀಪದ ಹಿರೇಹಳ್ಳದಲ್ಲಿ ಹಗಲಿರುಳು ಕೆಲಸ ಮಾಡಿ ಸುಮಾರು 26 ಕಿಲೊಮೀಟರ್ ಹಳ್ಳ ಸ್ವಚ್ಛಗೊಳಿಸಿದರು. ಸ್ವಾಮೀಜಿಯ ಈ ಕಾರ್ಯದಿಂದ ಪ್ರೇರಣೆಗೊಂಡು ಜನ ಯಲಬುರ್ಗಾ ತಾಲ್ಲೂಕಿನ ಕಲ್ಲಭಾವಿ ಕೆರೆ, ಕುಷ್ಟಗಿ ತಾಲ್ಲೂಕಿನ ತಾವರಗೇರಾದ ರಾಯನ ಕೆರೆ, ನಿಡಶೇಷಿ ಕೆರೆ, ಗಂಗಾವತಿಯ ದುರ್ಗಮ್ಮನ ಹಳ್ಳ– ಹೀಗೆ ಅನೇಕ ಜಲತಾಣಗಳನ್ನು ಸ್ವಚ್ಛ ಮಾಡಿದರು. ತ್ಯಾಜ್ಯದಿಂದ ತುಂಬಿ ಹೋಗಿದ್ದ ಕೊಪ್ಪಳ ತಾಲ್ಲೂಕಿನ ಗಿಣಿಗೇರಾದ ಕೆರೆಯಲ್ಲಿ ಗವಿಮಠದ ಸ್ವಾಮೀಜಿ ಹಾಗೂ ಜನರ ಪ್ರಯತ್ನದಿಂದಾಗಿ ನೀರು ತುಂಬಿಕೊಂಡಿದೆ. ಬೋಟಿಂಗ್ ವ್ಯವಸ್ಥೆ ಮಾಡಲಾಗಿದ್ದು ಪಾಳು ಬಿದ್ದಿದ್ದ ಕೆರೆ ಈಗ ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ.

11ನೇ ಪುಟಕ್ಕೆ...

ಅಕ್ಷರ ದಾಸೋಹದ ಜ್ಞಾನಭಂಡಾರ

ವಾರಾಣಸಿಯಿಂದ ಬಂದ ರುದ್ರಮುನಿ ಶಿವಯೋಗಿಗಳಿಂದ ಆರಂಭವಾದ ಕೊಪ್ಪಳದ ಗವಿಮಠವು ಅಕ್ಷರ ದಾಸೋಹಕ್ಕೆ ಮೊದಲ ಆದ್ಯತೆ ನೀಡಿದೆ. ವಿದ್ಯೆಯನ್ನು ಮಕ್ಕಳಿಗೆ ಉಚಿತವಾಗಿ ನೀಡಿ ಸ್ವಾವಲಂಬಿ ಬದುಕು ರೂಪಿಸುತ್ತಿದೆ.

ಮಠದ 16ನೇ ಪೀಠಾಧಿಪತಿಯಾಗಿದ್ದ ಲಿಂಗೈಕ್ಯ ಮರಿಶಾಂತವೀರ ಶಿವಯೋಗಿಗಳು ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣವೇ ಪರಿಹಾರ ಎಂದು ಅರಿತು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು. ಆಗ ಅವರು ಆರಂಭಿಸಿದ ಜ್ಞಾನದ ಜ್ಯೋತಿ ಈಗಲೂ ಪ್ರಕಾಶಿಸುತ್ತಿದೆ. ಅವರ ನಂತರ ಬಂದ ಶಿವಶಾಂತವೀರ ಶಿವಯೋಗಿ ಸ್ವಾಮೀಜಿ ಮತ್ತು ಈಗಿನ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಮಕ್ಕಳ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಿದ್ದಾರೆ. ಮಠದ ಮುಂಭಾಗದಲ್ಲಿ ಐದು ಸಾವಿರ ಮಕ್ಕಳಿಗೆ ಉಚಿತ ವಸತಿ ಹಾಗೂ ಪ್ರಸಾದದ ವ್ಯವಸ್ಥೆ ಮಾಡಿದ್ದು ಮಕ್ಕಳ ಓದಿನ ಬಗ್ಗೆ ಖುದ್ದು ಸ್ವಾಮೀಜಿಯೇ ನಿಗಾ ವಹಿಸುತ್ತಾರೆ.

ಕಾಡಿನೂರ ಹಿತ್ತಲ ಬೆಳೆ ಗೆಡ್ಡೆಗೆಣಸಿಗೆ ಸೋತಮನ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಗಣಪತಿ ಹೆಗಡೆ

ಪರಿಸರ ತಜ್ಞ ಬಾಲಚಂದ್ರ ಸಾಯಿಮನೆ ಜೊಯಿಡಾ ತಾಲ್ಲೂಕಿನ ಡಿಗ್ಗಿ ಬಳಿಯ ಪಾಟ್ನೆ ಗ್ರಾಮಕ್ಕೆ ಅಧ್ಯಯನದ ಸಲುವಾಗಿ ಹೋಗಿದ್ದರು. ರಾತ್ರಿ ತಡವಾದ ಕಾರಣಕ್ಕೆ ಸ್ಥಳೀಯ ಪರಿಚಯಸ್ಥರ ಮನೆಯಲ್ಲಿ ವಾಸ್ತವ್ಯ ಹೂಡುವ ಅನಿವಾರ್ಯ ಉಂಟಾಯಿತು. ತಡರಾತ್ರಿಯಾಗಿದ್ದರಿಂದ ಇವರು ಉಳಿದಿದ್ದ ಮನೆಯವರು ಮಾಡಿಟ್ಟ ಅನ್ನ ಖಾಲಿ ಆಗಿತ್ತು. ಊಟಕ್ಕೆ ಬೇಯಿಸಿದ ಗೆಡ್ಡೆ ನೀಡಿದ್ದರು. ಹಸಿದ ಹೊಟ್ಟೆ ತುಂಬಿಸಿದ್ದ, ಬೇಯಿಸಿದ ಗೆಡ್ಡೆಯ ರುಚಿಗೆ ಮನಸೋತರು. ಗೆಡ್ಡೆಗೆಣಸಿನ ಪ್ರಾಮುಖ್ಯತೆ ಹೊರ ಜಗತ್ತಿಗೂ ತಿಳಿಸಿ ಎಂದು ಜೊತೆಗಿದ್ದ ಸ್ಥಳೀಯ ಸ್ನೇಹಿತರಿಗೆ ಹೇಳಿದರು. ಅದು 'ಗೆಡ್ಡೆಗೆಣಸು ಮೇಳ' ಆರಂಭಕ್ಕೆ ನಾಂದಿಯಾಯಿತು.

ಈಚೆಗೆ ಜೊಯಿಡಾದ ಕುಣಬಿ ಭವನದ ಆವರಣದಲ್ಲಿ ನಡೆದ ಮೇಳದಲ್ಲಿ ಬಗೆಬಗೆಯ ಗೆಡ್ಡೆಗೆಣಸುಗಳನ್ನು ಕುತೂಹಲಭರಿತರಾಗಿ ನೋಡುತ್ತ, ಅವುಗಳ ಮಹತ್ವದ ಬಗ್ಗೆ ವಿವರಿಸುತ್ತಲೇ, ಮೇಳ ಆರಂಭದ ಹಿನ್ನೆಲೆಯನ್ನು ಬಿಚ್ಚಿಟ್ಟರು ಸಾಯಿಮನೆ.

'ಜೊಯಿಡಾದ ಕಾಡಿನಂತೆ ಇಲ್ಲಿನ ನೆಲವೂ ಸಂಪದ್ಭರಿತ. ಈ ಕಾರಣಕ್ಕಾಗಿಯೇ ಇಲ್ಲಿ ಬೆಳೆಯುವಷ್ಟು ವೈವಿಧ್ಯಮಯ ಗೆಡ್ಡೆಗೆಣಸುಗಳು ಇತರೆಡೆ ಸಿಗುವುದು ಕಷ್ಟ. ವಿಪರ್ಯಾಸವೆಂದರೆ ಗೆಡ್ಡೆಯ ಮೌಲ್ಯ ಸ್ಥಳೀಯರಿಗೆ ತಿಳಿದಿರಲಿಲ್ಲ. ಇದು ಅವರ ಪಾಲಿಗೆ ಕೇವಲ ಆಹಾರ ಮಾತ್ರ. ಹೊರಜಗತ್ತಿಗೆ ಅದ ಅಚ್ಚರಿಯೂ ಹೌದು. ಇಲ್ಲಿ ಮನುಷ್ಯನಷ್ಟು ಎತ್ತರದ, ಕಾಡುಪ್ರಾಣಿಗಳ ಆಕಾರ ಹೋಲುವ ಗೆಡ್ಡೆಗಳು ಬೆಳೆಯುತ್ತವೆ. ಅವುಗಳಲ್ಲಿ ಪೋಷಕಾಂಶ ಗುಣವೂ ಹೆಚ್ಚು. ಇದನ್ನು ಹೊರಜಗತ್ತಿಗೆ ಪರಿಚಯಿಸುವ ಅಗತ್ಯವಿತ್ತು. ಅದಕ್ಕೆ 'ಗೆಡ್ಡೆಗೆಣಸು ಮೇಳ' ವೇದಿಕೆಯಾಯಿತು' ಎಂದು ಖುಷಿಯಿಂದ ಹೇಳಿದರು.

11ನೇ ಪುಟಕ್ಕೆ...

ಇದು 'ಬೆಳೆ'ಯಲ್ಲ!

'ಜನರಿಂದ ಗೆಡ್ಡೆಗೆಣಸುಗಳಿಗೆ ಬೇಡಿಕೆ ಸಾಕಷ್ಟಿದೆ. ಆದರೆ ಬೇಡಿಕೆಗೆ ತಕ್ಕಷ್ಟು ಪೂರೈಕೆ ಸಾಧ್ಯವಾಗುತ್ತಿಲ್ಲ ಎಂಬುದೇ ಬೇಸರ. ಹಿತ್ತಲಿನಲ್ಲಿ ಮಾತ್ರ ಬೆಳೆಯುವ ಗೆಡ್ಡೆಗೆಣಸನ್ನು ಗದ್ದೆಯಲ್ಲಿ ಬೆಳೆಸಲು ಮನಸ್ಸು ಮಾಡುತ್ತಿಲ್ಲ. ಗದ್ದೆಯಲ್ಲಿ ಬೆಳೆಸಿದರೆ ಕಾಡುಹಂದಿಯ ಕಾಟದಿಂದ ಬೆಳೆ ರಕ್ಷಿಸಿಕೊಳ್ಳಲು ಸಾಧ್ಯವಾಗದು ಎಂಬ ಭಯ ಅವರಲ್ಲಿದೆ. ಹಣ ಖರ್ಚು ಮಾಡಿ ಬೆಳೆದರೂ ಕಾಡುಪ್ರಾಣಿಯ ಹಾವಳಿಯಿಂದ ಹಾನಿಯಾದರೆ ಪರಿಹಾರವೂ ಸಿಗದು. ಏಕೆಂದರೆ ಗೆಡ್ಡೆಗೆಣಸು ಅಧಿಕೃತ 'ಬೆಳೆ' ಎಂಬುದು ಇನ್ನೂ ಘೋಷಣೆಯಾಗಿಲ್ಲ. ರೈತರನ್ನು ಉತ್ತೇಜಿಸಲು ಮೊದಲಿಗೆ ಗೆಡ್ಡೆ ಗೆಣಸಿಗೆ ಬೆಳೆ ಮಾನ್ಯತೆ ಒದಗಿಸಬೇಕಾಗಿದೆ. ಬಳಿಕ ರೈತರ ಮನವೊಲಿಸಿ ಗೆಡ್ಡೆಗೆಣಸು ಬೆಳೆ ವಿಸ್ತರಿಸುವ ಯೋಚನೆ ಇದೆ' ಎನ್ನುತ್ತಾರೆ ಜೊಯಿಡಾ ಗೆಡ್ಡೆ ಗೆಣಸು ಬೆಳೆಗಾರರ ಸಂಘದ ಅಧ್ಯಕ್ಷ ಜಯಾನಂದ ಡೇರೆಕರ.

'ಜೊಯಿಡಾದ ನೆಲದಲ್ಲಿ ಬೆಳೆಯುವ ಗೆಡ್ಡೆಗೆಣಸಿನಲ್ಲಿ ಅಗತ್ಯ ಪೋಷಕಾಂಶಗಳು ಹೇರಳವಾಗಿವೆ ಎಂಬುದಾಗಿ ಆಹಾರ ತಜ್ಞರು ಹೇಳುತ್ತಾರೆ. ಇಲ್ಲಿ ಮಾತ್ರ ಬೆಳೆಯುವ ಮುಡ್ಲಿ ಕೋನ್ ರುಚಿಯ ಜೊತೆಗೆ ಉತ್ತಮ ಆಹಾರವೂ ಹೌದು. ಗೆಡ್ಡೆಗೆಣಸುಗಳನ್ನು ಬಳಸಿ ವಿವಿಧ ಬಗೆಯ ಆಹಾರಗಳನ್ನು ಸಿದ್ಧಪಡಿಸಿ ಮಾರುಕಟ್ಟೆಗೆ ಪರಿಚಯಿಸಲು ಅವುಗಳ ಮೌಲ್ಯವರ್ಧನೆ ಮಾಡುವ ಅಗತ್ಯವಿದೆ' ಎಂಬುದಾಗಿ ಬಾಲಚಂದ್ರ ಸಾಯಿಮನೆ ಹೇಳುತ್ತಾರೆ.

ಕುಣಬಿ ಸಮುದಾಯದ ಸಾಂಪ್ರದಾಯಿಕ ಧಿರಿಸು ಧರಿಸಿದ್ದ ಅನುಸೂಯಾ ಗಾವಡಾ ಕೈಯಲ್ಲಿ ಮುಡ್ಲಿ ಕೋನ್ (ಕೆಸುವಿನ ಗೆಡ್ಡೆ) ಮತ್ತು ಗೆಣಸಿನ ಗೆಡ್ಡೆ

ಒಂದೆರೆಡು ನೆಗೆತಕ್ಕೆ ಅಳೆದುಬಿಡಬಹುದಾದಷ್ಟು ಪುಟ್ಟದು ಈ ಮಾರುಕಟ್ಟೆ. ಆದರೆ, ಇಲ್ಲಿ ಸಿಗುವಷ್ಟು ಬಗೆಬಗೆಯ ಕಾಯಿಪಲ್ಲೆಗಳು ರಾಜ್ಯದ ಬೇರೆ ಯಾವ ಮಾರುಕಟ್ಟೆಯಲ್ಲೂ ಸಿಗುವುದಿಲ್ಲ.

ಎಲ್ಲೂ ಇಲ್ಲ ಇಂಥ ಮಾರುಕಟ್ಟೆ!

ಬೀರಣ್ಣ ನಾಯಕ ಮೊಗಟಾ

ಇದು ಹೇಳಿಕೇಳಿ ಕಾಯಿಪಲ್ಲೆ ಮಾರುಕಟ್ಟೆ. ಮನಸು ಮಾಡಿದರೆ ಒಂದೇ ಉಸಿರಿಗೆ ದಾಟಿ ಸಾಗಬಹುದಾದ ಮಾರುಕಟ್ಟೆ. ಹೆಚ್ಚೆಂದರೆ ಐವತ್ತು ಮೀಟರ್ ಉದ್ದದ ಒಳಗೆ! ಆದರೆ ಈ ಮಾರುಕಟ್ಟೆಯಲ್ಲಿ ಏನೇನು ವಿಶೇಷವಿದೆ ಗೊತ್ತೆ?. ಅದಕ್ಕಂತಲೇ ಪರ ಜಿಲ್ಲೆಗೆ ಯಾವುದೋ ಊರಿಂದ ಹೊರಟವರು ಯಲ್ಲಾಪುರ ತನಕ ಬಸ್ ಟಿಕೆಟ್ ಪಡೆದು, ಒಮ್ಮೆ ಈ ಮಾರುಕಟ್ಟೆ ಹೊಕ್ಕು ಹೊರ ಬೀಳುವುದುಂಟು. ಇದು ಕಾಯಿಪಲ್ಲೆ ಮಾರುಕಟ್ಟೆಯಾದರೂ, ನಾಟಿಕೋಳಿ ಹಾಗೂ ನಾಟಿ ಕೋಳಿಮೊಟ್ಟೆ ಮಾರಾಟಕ್ಕೂ ಅವಕಾಶವಿದೆ. ಇದು ಯಲ್ಲಾಪುರ ಪಟ್ಟಣದ ಹೃದಯ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿಯಿಂದ ಬಸ್‌ನಿಲ್ದಾಣಕ್ಕೆ ಹೋಗುವ ದಾರಿಯಲ್ಲಿರುವ ಪುಟ್ಟ ಕಾಯಿಪಲ್ಲೆ ಮಾರುಕಟ್ಟೆ. ಅಂಗಡಿ ಮುಂಗಟ್ಟುಗಳ ಮುಂಭಾಗ, ಅಂಗಡಿಗಳ ಮೆಟ್ಟಿಲುಗಳೇ ಇವರ ವ್ಯಾಪಾರ ಸ್ಥಳ.

ಇಲ್ಲಿ ಸಿಗುವ ಕಾಯಿಪಲ್ಲೆಗಳು ಮಾಮೂಲಿ ಕಾಯಿಪಲ್ಲೆ ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ವರುಷದ ಹನ್ನೆರಡು ತಿಂಗಳು ಹಸಿರಾಗಿರುವ ಈ ಮಾರುಕಟ್ಟೆಯಲ್ಲಿ ಸಿಗುವ ಎಲ್ಲಾ ಕಾಯಿಪಲ್ಲೆಗಳು ಸಾವಯವ ಗೊಬ್ಬರ ಹಾಕಿ ಬೆಳೆಸಿದ್ದು. ಮರಗೆಸು, ಕಾಡುಗೊಣ್ಣೆ, ಮಹಾಗೆಸು, ಜಾಂಬಲಗೆಡ್ಡೆ, ಅಣಬೆ, ಕಳಲೆ, ಗುರಗಿ ಜೇನು, ಬರಗಾಲಗೆಡ್ಡೆ, ಬಳ್ಳಿಗೆಸು, ನೆಲ್ಲಿ, ಜುಮ್ಮನಕಾಯಿ, ಕಲ್ಲುಬಾಳೆ ಮುಂತಾದ ಕಾಡಿನಿಂದ ನಾಡಿಗೆ ಬಂದ ಕಾಯಿಪಲ್ಲೆಗಳು ಇಲ್ಲಿಯ ವಿಶೇಷ. ಕೆರೆಯ ಕಮಲದ ಹೂವು, ಗೆಡ್ಡೆಗಳು ಕೂಡ ಈ ಮಾರುಕಟ್ಟೆಯಲ್ಲಿ ಲಭ್ಯ. ಮನೆಯ ಕೋಳಿಗೂಡಿಗೋ, ಕೊಟ್ಟಿಗೆಗೋ, ಮನೆಯ ಚಾವಣಿಗೋ ಹಬ್ಬಿಸಿ ಬೆಳೆಸಿದ ಹಾಗೂ ಮನೆಯ ಕೈತೋಟದಲ್ಲಿ ಕೊಟ್ಟಿಗೆ ಗೊಬ್ಬರ ಉಂಡು ಬೆಳೆದ ಚಿಟ್ಟಾಗಲ, ಬಿಳಿ ಸೌತೆ, ಸಿಹಿಗುಂಬಳ, ಹಾಲುಸೊರೆ, ಸುವರ್ಣಗೆಡ್ಡೆ, ಸಿಹಿ ಅಮಟೆ, ಸಿಹಿ ಮೊಗೆಕಾಯಿ, ವಾಟೆ ಹುಳಿ, ಮುರುಗಲ ಹುಳಿ, ಬಿಳಿ ಮುರುಗಲ ಹುಳಿ, ಕುರುಸುಗಾಯಿ, ಉಪ್ಪಿನಕಾಯಿ ಮಿಡಿ, ಬಾಳೆ ಹೂವು, ಕನಕಾಂಬರ ಹೂವು ಒಳಗೊಂಡು ತರತರದ ಹೂವುಗಳು, ಹುಣಸೆಕಾಯಿ, ಆನೆಬಾಳೆಕಾಯಿ, ಗಿಣ್ಣನಗೆಂಡೆ, ಬಗೆಬಗೆಯ ಸಿಹಿ ಮೊಗೆಕಾಯಿ, ಬೇರಲಸು, ನೀರಲಸು, ಬಗೆಬಗೆಯ ಬದನೆ, ನುಗ್ಗೆಸೊಪ್ಪು, ಹಲವಾರು ತರದ ಗೆಡ್ಡೆಗಳು, ಕಬ್ಬು, ಕೆಸುವಿನಗೆಡ್ಡೆ, ಕೆಸುವಿನ ದಂಟು, ಅಂಬೆಕೊಂಬು, ಅಶೋಕ ಪುಷ್ಪ, ಸೊರೆಕುಡಿ, ಅರಿಸಿನ ಎಲೆ, ಬಾಳೆಲೆ, ಬಗೆ ಬಗೆಯ ಸೌತೆ, ಹಿಂಡ್ಲಿಕಾಯಿ ಒಂದೇ ಎರಡೇ ನೂರಾರು...

ಚೌತಿ, ದೀಪಾವಳಿ, ತುಳಸಿ ಹಬ್ಬ, ದನದ ಹುಣ್ಣಿಮೆ ಮುಂತಾದ ಹಬ್ಬಗಳು ಬಂತೆಂದರೆ ಈ ಮಾರುಕಟ್ಟೆ ಬಣ್ಣ ಬದಲಾಯಿಸಿಕೊಂಡು ಆ ಹಬ್ಬಗಳಿಗೆ ಅಗತ್ಯ ಇರುವ ವಸ್ತುಗಳ ತಾಣವಾಗುತ್ತದೆ. ಆ ಹಬ್ಬಗಳ ಅಗತ್ಯ ವಸ್ತುಗಳು ಹಬ್ಬದ ಮೂರು ನಾಲ್ಕು ದಿನದ ಮೊದಲೇ ಮಾರುಕಟ್ಟೆಗೆ ಬಂದಿರುತ್ತವೆ. ನೂರಕ್ಕೆ ನೂರು ಹಳ್ಳಿಯ ಕೃಷಿ ಮಹಿಳೆಯರೇ ಈ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುತ್ತಿರುವುದು ಮಾರುಕಟ್ಟೆಯ ಮತ್ತೊಂದು ವಿಶೇಷ. ಇಲ್ಲಿ ಪುರುಷ ವ್ಯಾಪಾರಸ್ಥರಿಗೆ ಪ್ರವೇಶ ನಿಷಿದ್ಧ ಎನ್ನುವುದು ಈ ಮಾರುಕಟ್ಟೆಯ ರೂಢಿ ಸಂಪ್ರದಾಯ. ವಸ್ತುಗಳ ದರ ಮಾತ್ರ ಫಿಕ್ಸ್. ಇಲ್ಲಿ ಚೌಕಾಶಿಗೆ ಅವಕಾಶವೇ ಇಲ್ಲ.

ಏನಾದರೂ ಸಾಂಕ್ರಾಮಿಕ ರೋಗ ಈ ಭಾಗದಲ್ಲಿ ಕಾಣಿಸಿಕೊಂಡರೆ, ಅದರ ಪರಿಹಾರಕ್ಕೆ ಪೂರಕವಾದ ಕಾಯಿಪಲ್ಲೆ, ವನಸ್ಪತಿಗಳು ಇಲ್ಲಿ ಕೂಡಲೇ ಲಭ್ಯ.

11ನೇ ಪುಟಕ್ಕೆ...

ನವಶಿಲಾಯುಗದ ನೆಲೆ ಸಂಗನಕಲ್ಲು

ಹರಿಶಂಕರ ಆರ್.

ಅಲೆಮಾರಿಯಾಗಿದ್ದ ಆದಿಮಾನವ ಒಂದೆಡೆ ನೆಲೆ ನಿಲ್ಲಲು ಆರಂಭಿಸಿದ್ದು ಹತ್ತು ಸಾವಿರ ವರ್ಷಗಳ ಹಿಂದೆ. ನೆಲೆ ನಿಂತ ಮಾನವ ತಾನಿರುವಲ್ಲಿ ಕೃಷಿ ಮಾಡಲು, ಜಾನುವಾರು ಸಾಕಲಾರಂಭಿಸಿದ. ತಾನು ಕಂಡದ್ದನ್ನು ತಾನಿರುವಲ್ಲಿಯೇ ಚಿತ್ರಗಳ ಮೂಲಕ ದಾಖಲಿಸುತ್ತಾ ಬಂದ. ಇಂಥ ಕೆಲವೇ ಕೆಲವು ನೆಲೆಗಳು ಭಾರತದಲ್ಲಿವೆ. ಬಳ್ಳಾರಿಯ ಸಂಗನಕಲ್ಲು ಕೂಡ ಅಂಥದ್ದೇ ಒಂದು ನೆಲೆ.

ಬಳ್ಳಾರಿ ಹೊರವಲಯದ ಸಂಗನಕಲ್ಲಿನಲ್ಲಿರುವ ನವಶಿಲಾಯುಗದ ನೆಲೆ ಸುಮಾರು ಒಂದು ಸಾವಿರ ಎಕರೆ ಪ್ರದೇಶ ವ್ಯಾಪಿಸಿದೆ. ಸಣ್ಣರಾಚಮ್ಮ ಗುಡ್ಡ, ಸದಾಶಿವ ಗುಡ್ಡ, ಚೌಡಮ್ಮ ಗುಡ್ಡ, ಸುದ್ದಲಮಟ್ಟಿ ಗುಡ್ಡ ಮತ್ತು ಹಿರೇ ಗುಡ್ಡ ಎಂಬ ಐದು ಗ್ರಾನೈಟ್ ಗುಡ್ಡಗಳಲ್ಲಿ ಮಾನವರು ಜೀವಿಸಿದ್ದ ಕುರುಹುಗಳು ಪತ್ತೆಯಾಗಿವೆ.

ಸಂಗನಕಲ್ಲು ಗುಡ್ಡ

ಚಿತ್ರಗಳು: ಮುರುಳಿಕಾಂತ ರಾವ್

ರಾಬರ್ಟ್ ಬ್ರೂಸ್‌ಫೂಟ್

ಎರಡರಿಂದ ಐದು ಸಾವಿರ ವರ್ಷಗಳ ಇತಿಹಾಸವಿರುವ, ಆದಿಮಾನವರ ಈ ವಸಾಹತು ತಾಣವನ್ನು ಬ್ರಿಟಿಷ್ ಆಳ್ವಿಕೆಯಲ್ಲಿ ಸಿವಿಲ್ ಎಂಜಿನಿಯರ್ ಆಗಿದ್ದ ವಿಲಿಯಂ ಫ್ರೇಸರ್ 19ನೇ ಶತಮಾನದ ಮಧ್ಯಭಾಗದಲ್ಲಿ ಪತ್ತೆ ಹಚ್ಚಿದ್ದರು. ಆದರೆ, ಈ ತಾಣಕ್ಕೆ ಪುರಾತತ್ವ ಸ್ಥಾನಮಾನ ಒದಗಿಸಿಕೊಟ್ಟವರು ಬ್ರಿಟಿಷ್ ಭೂವಿಜ್ಞಾನಿ, ಪುರಾತತ್ವಶಾಸ್ತ್ರಜ್ಞ ರಾಬರ್ಟ್ ಬ್ರೂಸ್‌ಫೂಟ್.

'ಈ ನೆಲೆಗಳು ಪತ್ತೆಯಾದ ಬಳಿಕ ಅಲ್ಲಿ ನಡೆದಿರುವ ಈವರೆಗಿನ ಅಧ್ಯಯನ, ಉತ್ಖನನಗಳು ಸಾವಿರಾರು ವರ್ಷಗಳ ಕೃಷಿ, ಆರ್ಥಿಕತೆ, ಧಾರ್ಮಿಕ ಆಚರಣೆಗಳ ಮೂಲ ಮತ್ತು ಬೆಳವಣಿಗೆಗಳನ್ನು ಅರ್ಥಮಾಡಿಕೊಳ್ಳಲು ಒಳಹುಗಳನ್ನು ನೀಡಿವೆ. ಜತೆಗೆ ನವಶಿಲಾಯುಗದಿಂದ ಕಬ್ಬಿಣದ ಯುಗಕ್ಕೆ ಇದ್ದ ನಂಟನ್ನು ಪತ್ತೆ ಮಾಡಲು ಈ ನೆಲೆಗಳು ನೆರವಾಗಿವೆ' ಎನ್ನುತ್ತಾರೆ ಸಂಶೋಧಕ ಪ್ರೊ. ರವಿ ಕೋರಿಶೆಟ್ಟರ್.

ಇತ್ತೀಚಿನ ದಶಕಗಳವರೆಗೆ ಹೇಗೋ ಉಳಿದುಕೊಂಡು ಬಂದಿದ್ದ ಸಂಗನಕಲ್ಲಿನ ಆದಿಮಾನವರ ನೆಲೆಗಳು ಕಲ್ಲು ಗಣಿಗಾರಿಕೆಯ ಹೊಡೆತಕ್ಕೆ ಸಿಲುಕಿ ಸಾಕಷ್ಟು ಹಾನಿಗೀಡಾಗಿವೆ. ಆದರೆ, ರವಿ ಕೋರಿಶೆಟ್ಟರ್ ಮತ್ತು ಇತಿಹಾಸಜ್ಞರ ಪ್ರಯತ್ನದ ಫಲವಾಗಿ ಸಂಗನಕಲ್ಲಿನ ಎರಡು ಗುಡ್ಡಗಳು ಉಳಿದುಕೊಂಡಿವೆ. ಅಲ್ಲಿ ಸಿಕ್ಕ ಕುರುಹುಗಳು ಬಳ್ಳಾರಿಯ ಡಾ.ರಾಜ್‌ಕುಮಾರ್ ರಸ್ತೆಯಲ್ಲಿರುವ 'ರಾಬರ್ಟ್ ಬ್ರೂಸ್‌ಫೂಟ್ ಸಂಗನಕಲ್ಲು ಪುರಾತತ್ವ ವಸ್ತುಸಂಗ್ರಹಾಲಯ'ದಲ್ಲಿವೆ.

ಸಂಗನಕಲ್ಲಿನ ನವಶಿಲಾಯುಗದ ಪುರಾವೆಗಳ ಉಳಿವಿಗೆಂದೇ ಸ್ಥಾಪಿತವಾಗಿರುವ ಈ ವಸ್ತುಸಂಗ್ರಹಾಲಯ ದೇಶದ ಏಕೈಕ ಪ್ರಾಗೈತಿಹಾಸಿಕ ಸಂಗ್ರಹಾಲಯ.

ತ್ರಿಡಿ ಮುದ್ರಿತ ಆದಿಮಾನವನ ಬುರುಡೆ

ಈ ವಸ್ತುಸಂಗ್ರಹಾಲಯ ಎರಡು ಅಂತಸ್ತುಗಳಲ್ಲಿ ವ್ಯಾಪಿಸಿಕೊಂಡಿದೆ. ನೆಲಮಹಡಿಯು ಆದಿ ಮಾನವರ ಬುರುಡೆ, ಪರಿಕರಗಳಿಗೆ ಮೀಸಲಾಗಿದೆ. ಮೇಲಿನ ಮಹಡಿಯನ್ನು ಸಂಗನಕಲ್ಲು ಮತ್ತು ಅದರ ಸುತ್ತಲ ಪ್ರದೇಶದಲ್ಲಿ ಸಿಕ್ಕ ಪಳೆಯುಳಿಕೆಗಳ ಸಂರಕ್ಷಣೆಗೆಂದು ಇರಿಸಲಾಗಿದೆ. ನೆಲಮಹಡಿಯ ಕೇಂದ್ರ ಸ್ಥಾನದಲ್ಲಿ ಸಂಗನಕಲ್ಲು ಬೆಟ್ಟದ ಸಂಕೀರ್ಣದ ಪ್ರತಿಕೃತಿಯನ್ನು ಸೃಷ್ಟಿಸಲಾಗಿದೆ. ಮೇಲಿನ ಮಹಡಿಯಿಂದ ನೋಡಿದರೆ, ಇಡೀ ಸಂಗನಕಲ್ಲು ಪ್ರದೇಶವೇ ಕಣ್ಣಮುಂದೆ ಬರುತ್ತದೆ.

ಸಂಗನಕಲ್ಲು ಪ್ರದೇಶದಲ್ಲಿ ಸಿಕ್ಕ ಕೊಡಲಿ, ಮಣ್ಣಿನ ಗಡಿಗೆಗಳು, ಕಲ್ಲಿನ ಮಣಿಗಳು, ಅರೆಯುವ ಕಲ್ಲುಗಳು, ದ್ವಿದಳ ಧಾನ್ಯ, ರಾಗಿ ಬಳಕೆಯಲ್ಲಿ ಇದ್ದಿದ್ದಕ್ಕೆ ಸಿಕ್ಕ ಸಾಕ್ಷ್ಯಗಳನ್ನು ಇಲ್ಲಿ ಪ್ರದರ್ಶನಕ್ಕಿಡಲಾಗಿದೆ. ಬಂಡೆಗಲ್ಲುಗಳ ಮೇಲೆ ಬಿಡಿಸಿದ ನಾನಾ ಬಗೆಯ ಚಿತ್ರಕಲೆಯನ್ನೂ ಇಲ್ಲಿ ತಂದಿಡಲಾಗಿದೆ. ನವಶಿಲಾಯುಗ ಮತ್ತು ಕಬ್ಬಿಣ ಯುಗದ ಸಮಗ್ರ ಮಾಹಿತಿಯನ್ನು ಈ ವಸ್ತುಸಂಗ್ರಹಾಲಯ ಕಟ್ಟಿಕೊಡುತ್ತದೆ.

ಆಫ್ರಿಕಾದಲ್ಲಿ ಮಾನವನ ಉಗಮವಾಗಿದ್ದು. ಮೂಲ ಮಾನವ ಹೇಗಿದ್ದ, ಎಲ್ಲೆಲ್ಲಿ ವಲಸೆ ಹೋದ, ಮಂಗನಂತಿದ್ದವನು ವಿಕಾಸದ ಹಾದಿಯಲ್ಲಿ ಯಾವೆಲ್ಲ ಆಯುಧ ಕಂಡು ಹಿಡಿದ, ಯಾವೆಲ್ಲ ಪರಿಕರ ಬಳಸಿದ, ಇಂಥ ನೂರೆಂಟು ಪ್ರಶ್ನೆಗಳಿಗೆ ವಸ್ತುಸಂಗ್ರಹಾಲಯ ಉತ್ತರ ನೀಡುತ್ತದೆ.

ಲಕ್ಷಾಂತರ ವರ್ಷಗಳ ಹಿಂದಿನ ಮಾನವರ ಬುರುಡೆಗಳ ತ್ರಿಡಿ ಪ್ರತಿಕೃತಿಗಳನ್ನು ಇಲ್ಲಿ ನೋಡಬಹುದು. ಈ ಬುರುಡೆಗಳನ್ನು ಇಂಗ್ಲೆಂಡ್‌ನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಮತ್ತು ಅಮೆರಿಕದ ಟೆಕ್ಸಾಸ್ ವಿಶ್ವವಿದ್ಯಾಲಯದ ವಿದ್ವಾಂಸರು ವಸ್ತುಸಂಗ್ರಹಾಲಯಕ್ಕೆ ಉಡುಗೊರೆಯಾಗಿ ನೀಡಿದ್ದಾರೆ. ಜಗತ್ತಿನ ವಿವಿಧ ಭಾಗಗಳಲ್ಲಿ ಸಿಕ್ಕ ಆದಿಮಾನವರ ಹದಿನೈದು ಬುರುಡೆಗಳ ತದ್ರೂಪಗಳನ್ನು ವಸ್ತುಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಬುರುಡೆಗಳು ಮತ್ತು ಆದಿ ಮಾನವರ ಪರಿಕರಗಳ ಅಧ್ಯಯನಕ್ಕೆ ಹಲವು ದೇಶ–ವಿದೇಶಗಳ ಸಂಶೋಧಕರು ಇಲ್ಲಿಗೆ ಭೇಟಿ ನೀಡುತ್ತಾರೆ.

ಇತ್ತೀಚೆಗೆ ಜರ್ಮನಿಯಲ್ಲಿ ಸಿಕ್ಕ ಲಯನ್ ಮೆನ್ (ಸಿಂಹಮುಖದ ಮಾನವ) ಹಾಗೂ ವೀನಸ್ (ಮಹಾ ಮಹಿಳೆ)ನ ತದ್ರೂಪಗಳನ್ನು ಇಲ್ಲಿಗೆ ತಂದಿಡಲಾಗಿದೆ. ಸಿಂಹಮುಖದ ಮನುಷ್ಯನ ಮೂಲ ಪ್ರತಿಮೆ ಜರ್ಮನಿಯ ಸ್ಟಾಡೆಲ್ಜಿಲ್ ಎಂಬ ಊರಿನ ಗುಹೆಯಲ್ಲಿ ಸಿಕ್ಕಿತ್ತು. ಇದು ಸುಮಾರು 40 ಸಾವಿರ ವರ್ಷದ ಹಿಂದಿನದ್ದು ಎಂದು ಅಂದಾಜಿಸಲಾಗಿದೆ. ಡಾಲ್ನಿ ವೇಸ್ಟೊನೈಸ್‌ನಲ್ಲಿ ಸಿಕ್ಕ ವೀನಸ್ ಸುಮಾರು 31 ಸಾವಿರ ವರ್ಷಗಳ ಹಿಂದಿನದ್ದು ಎನ್ನಲಾಗಿದೆ.

ಹೀಗೆ ಒಂದೊಂದೇ ಪರಿಕರಗಳು ಸೇರುತ್ತಾ, ವಸ್ತುಸಂಗ್ರಹಾಲಯ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತಿದೆ. ಸಂಶೋಧಕರು, ವಿದ್ಯಾರ್ಥಿಗಳು ವಸ್ತುಸಂಗ್ರಹಾಲಯಕ್ಕೆ ಭೇಟಿ ಕೊಟ್ಟು ತಮ್ಮದೇ ಅಭಿಪ್ರಾಯಗಳನ್ನು ಇಲ್ಲಿ ದಾಖಲಿಸಿದ್ದಾರೆ. ನಿಮಗೆ ಮಾನವನ ಇತಿಹಾಸದ ಬಗೆಗೆ ಕುತೂಹಲ ಇದ್ದರೆ ಇಲ್ಲಿಗೆ ಭೇಟಿ ಕೊಡಿ; ವಿಸ್ಮಯ ಲೋಕವೇ ತೆರೆದುಕೊಳ್ಳುತ್ತದೆ. ❖

ರಾಬರ್ಟ್ ಬ್ರೂಸ್‌ಫೂಟ್ ಹೆಸರು ಏಕೆ?

ವಸ್ತುಸಂಗ್ರಹಾಲಯಕ್ಕೆ ರಾಬರ್ಟ್ ಬ್ರೂಸ್‌ಫೂಟ್ ಹೆಸರು ಇಡಲಾಗಿದೆ. ಇವರು ಭಾರತದ ಇತಿಹಾಸಪೂರ್ವ ಸ್ಥಳಗಳ ಭೂವೈಜ್ಞಾನಿಕ ಸಮೀಕ್ಷೆ ನಡೆಸಿದ ಮೊದಲಿಗ. ಭಾರತೀಯ ಪುರಾತತ್ವಶಾಸ್ತ್ರಕ್ಕೆ ನೀಡಿದ ಕೊಡುಗೆಗಳಿಗಾಗಿ ಅವರನ್ನು ಭಾರತೀಯ ಪೂರ್ವ ಇತಿಹಾಸದ ಪಿತಾಮಹ ಎನ್ನುತ್ತಾರೆ.

ಸಂಗನಕಲ್ಲಿನ ನವಶಿಲಾಯುಗದ ಕಬ್ಬಿಣದಯುಗವನ್ನು ಅಧ್ಯಯನ ಮಾಡಿದ ಮೊದಲಿಗರು. ಬಳ್ಳಾರಿ-ಚಿತ್ರದುರ್ಗ ಪ್ರದೇಶದಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿದ್ದ ಶಿಲಾಯುಗದ ತಾಣಗಳನ್ನು ಕಂಡು ಹಿಡಿದಿದ್ದೂ ಅವರೇ. ಬೂದಿ ದಿಬ್ಬಗಳೊಂದಿಗೆ ನವಶಿಲಾಯುಗದ ಸಂಸ್ಕೃತಿ ಬೆಸೆದುಕೊಂಡಿದೆ ಎಂದು ಪ್ರತಿಪಾದಿಸಿದ ಮೊದಲ ವ್ಯಕ್ತಿ ಬ್ರೂಸ್‌ಫೂಟ್.

ಉತ್ತರ ಕರ್ನಾಟಕದ ಕಲಾದಗಿ ಮತ್ತು ಭೀಮಾ ಜಲಾನಯನ ಪ್ರದೇಶದಲ್ಲಿನ ಪ್ರಾಚೀನ ಶಿಲಾಯುಗದ ತಾಣಗಳನ್ನು ದಾಖಲಿಸಿದವರಲ್ಲಿ ಮೊದಲಿಗರು. ಅಷ್ಟೇ ಅಲ್ಲ, ದಕ್ಷಿಣ ಭಾರತದಲ್ಲಿ ಚಿನ್ನವನ್ನು ಒಳಗೊಂಡಿರುವ ಬಂಡೆಕಲ್ಲುಗಳನ್ನು ಪತ್ತೆ ಮಾಡಿದವರು. 1863 ಮತ್ತು 1896ರ ನಡುವಿನ ಅವಧಿಯಲ್ಲಿ ದಕ್ಷಿಣ ಭಾರತದಲ್ಲಿ 450ಕ್ಕೂ ಹೆಚ್ಚು ಇತಿಹಾಸಪೂರ್ವ ತಾಣಗಳನ್ನು ಪತ್ತೆ ಮಾಡಿ ಅವುಗಳ ಮೇಲೆ ಬೆಳಕು ಚೆಲ್ಲಿದ್ದರು. ಭಾರತೀಯ ಪ್ರಾಗೈತಿಹಾಸಿಕ ನೆಲೆಗಳನ್ನು ಪತ್ತೆ ಮಾಡುವಲ್ಲಿ ಅವರು ಪ್ರಧಾನ ಪಾತ್ರ ನಿರ್ವಹಿಸಿದ್ದರು.

ಜರ್ಮನಿಯಿಂದ ತಂದು ಇರಿಸಲಾಗಿರುವ ಲಯನ್ ಮೆನ್ (ಸಿಂಹದ ತಲೆ, ಮಾನವನ ಶರೀರ)

ನವಶಿಲಾಯುಗದ ಶವಪೆಟ್ಟಿಗೆ

ವಸ್ತುಸಂಗ್ರಹಾಲಯದಲ್ಲಿರುವ ನವಶಿಲಾಯುಗದ ಶವಪೆಟ್ಟಿಗೆ ಸಂಶೋಧನಕಾರರ ಕುತೂಹಲ ಕೆರಳಿಸುತ್ತದೆ. ಆರು ಕಾಲುಗಳನ್ನು ಹೊಂದಿರುವ ಈ ಶವಪೆಟ್ಟಿಗೆ ಬಳ್ಳಾರಿ-ಹೊಸಪೇಟೆ ರಸ್ತೆಯ ಕುಡುತಿನಿಯ ಬೂದಿಗುಡ್ಡದ ಬಳಿ ಉತ್ಖನನ ಮಾಡುವಾಗ 15 ವರ್ಷಗಳ ಹಿಂದೆ ಸಿಕ್ಕಿತ್ತು. ಬಾಲಕನೊಬ್ಬನ ಅಂತ್ಯಸಂಸ್ಕಾರ ನೆರವೇರಿಸಿ, ಅಸ್ಥಿಪಂಜರದ ಅಳಿದುಳಿದ ಅವಯವಗಳನ್ನು ಸಣ್ಣಸಣ್ಣ ಮಡಕೆಗಳಲ್ಲಿ ಇಟ್ಟು ನಂತರ ಶವಪೆಟ್ಟಿಗೆಯಲ್ಲಿ ಇಡಲಾಗಿತ್ತು. ಬಳಿಕ ಅದನ್ನು ಭೂಮಿಯಲ್ಲಿ ಹುದುಗಿಸಿಡಲಾಗಿತ್ತು. ಶ್ರೀಮಂತ ತನ್ನ ಮಗನ ಅಂತ್ಯಸಂಸ್ಕಾರವನ್ನು ವೈಭವೋಪೇತವಾಗಿ ನೆರವೇರಿಸಿದ್ದ ಎಂಬುದಕ್ಕೆ ಈ ಶವಪೆಟ್ಟಿಗೆ ಸಾಕ್ಷಿಯಾಗಿದೆ. ಶರೀರಗಳನ್ನು 'ಮಮ್ಮಿ'ಯಾಗಿಸಿ ಸಂರಕ್ಷಿಸಿಡುವ ಪದ್ಧತಿ ಈಜಿಪ್ಟ್‌ನಲ್ಲಿ ಮಾತ್ರವಲ್ಲ, ನಮ್ಮಲ್ಲೂ ಅಂಥ ಪದ್ಧತಿ ಇದುದ್ದಕ್ಕೆ ಇದು ಉದಾಹರಣೆ ಎನ್ನುತ್ತಾರೆ ವಸ್ತುಸಂಗ್ರಹಾಲಯದ ಸದಸ್ಯ ಅಹಿರಾಜ.

...ಗೆಡ್ಡೆಗೆಣಸಿಗೆ ಸೋತಮನ

10ನೇ ಪುಟದಿಂದ...

ಗೆಡ್ಡೆಗೆಣಸಿಗೆ ಇಂತಿಷ್ಟೇ ದರ ಇದೆ ಎಂಬುದು ಸ್ಥಳೀಯರಿಗೆ ಗೊತ್ತಿರಲಿಲ್ಲ. ಮೊದಲ ಗೆಡ್ಡೆ ಗೆಣಸು ಮೇಳದಲ್ಲಿ ಭಾಗಿಯಾಗಿದ್ದ ತಿರುವನಂತಪುರದ ಕೇಂದ್ರೀಯ ಗೆಡ್ಡೆಗೆಣಸು ಸಂಶೋಧನಾ ಕೇಂದ್ರದ ವಿಜ್ಞಾನಿಯೊಬ್ಬರು ಗೆಡ್ಡೆ ಖರೀದಿಸಲು ದರ ವಿಚಾರಿಸಿದರೆ ಮಾರಾಟಕ್ಕೆ ಕುಳಿತಿದ್ದ ಮಹಿಳೆಯರು ಏನು ಹೇಳಬೇಕು ಎನ್ನುವುದು ತಿಳಿಯದೆ ಮೌನಕ್ಕೆ ಶರಣಾಗಿದ್ದರು. ಆಗ ವಿಜ್ಞಾನಿಯೇ ₹100 ನೀಡಿ ಗೆಡ್ಡೆ ಖರೀದಿಸಿ, ಅವರಿಗೆ ವ್ಯಾಪಾರದ ಪಾಠ ಹೇಳಿಕೊಟ್ಟಿದ್ದರು.

'ಗೆಡ್ಡೆ ಗೆಣಸು ಮೇಳ ಮೊದಲ ಬಾರಿಗೆ ಆಯೋಜಿಸುವಾಗ ಹಲವು ಸವಾಲುಗಳನ್ನು ಎದುರಿಸಬೇಕಾಯಿತು. ನಮ್ಮ ಜನರಿಗೆ (ಕುಣಬಿ ಸಮುದಾಯದವರಿಗೆ) ಗೆಡ್ಡೆಗೆಣಸು ಮಾರಾಟದ ಸರಕು ಆಗುತ್ತದೆ ಎಂಬ ಅರಿವು ಇರಲಿಲ್ಲ. ಗೆಡ್ಡೆಗಳನ್ನು ಮಾರಾಟ ಮಾಡಲು ಅವಕಾಶ ಮಾಡಿಕೊಡುತ್ತೇವೆ ಬನ್ನಿ ಎಂದಾಗ ನಕ್ಕವರೇ ಹೆಚ್ಚು. 2014ರಲ್ಲಿ ಮೊದಲ ಮೇಳ ಆಯೋಜಿಸಿದ್ದಾಗ 88 ಮಂದಿ ಪಾಲ್ಗೊಂಡು, 18 ಬಗೆಯ ಗೆಡ್ಡೆಗೆಣಸು ಪ್ರದರ್ಶಿಸಿದ್ದರು. ಈಗ 48ಕ್ಕೂ ಹೆಚ್ಚು ಬಗೆಯ ಗೆಡ್ಡೆಗೆಣಸು ಪ್ರದರ್ಶನಕ್ಕೆ ಬರುತ್ತಿವೆ. ಮಾರಾಟಕ್ಕೆ ಬರುವವರ ಸಂಖ್ಯೆ ಹೆಚ್ಚುತ್ತಿದೆ. ಅದಕ್ಕಿಂತ ವೀಕ್ಷಣೆಗೆ ಮತ್ತು ಗೆಡ್ಡೆ ಗೆಣಸು ಖರೀದಿಗೆ ಬರುವವರ ಸಂಖ್ಯೆ ಲೆಕ್ಕಕ್ಕೆ ಸಿಗದಷ್ಟಿದೆ' ಎನ್ನುತ್ತಾರೆ ಮೇಳದ ರೂವಾರಿ, ಜೊಯಿಡಾ ಗೆಡ್ಡೆ ಗೆಣಸು ಬೆಳೆಗಾರರ ಸಂಘದ ಅಧ್ಯಕ್ಷ ಜಯಾನಂದ ಡೇರೆಕರ.

ಮೇಳವು ವರ್ಷದಲ್ಲಿ ಒಂದೇ ದಿನ ನಡೆದರೂ ಗೆಡ್ಡೆ ಗೆಣಸುಗಳ ಮಹತ್ವವನ್ನು ಜೊಯಿಡಾ ಆಚೆಗೆ ಪಸರಿಸಿದೆ. ಮೊದಲ ಕೆಲವು ವರ್ಷ ಮೇಳಕ್ಕೆ ಬರುವವರ ಸಂಖ್ಯೆ ಸೀಮಿತವಾಗಿತ್ತು. ಈ ಬಾರಿ ಮಹಾರಾಷ್ಟ್ರದ ರತ್ನಗಿರಿ, ಸತಾರಾ, ಗೋವಾ, ಬೆಂಗಳೂರು, ಹುಬ್ಬಳ್ಳಿ–ಹೀಗೆ ನಾನಾ ಭಾಗಗಳಿಂದ ಜನರು ಬಂದಿದ್ದರು.

ಕಾಡಿನ ನಡುವಿನ ಹಳ್ಳಿಯ ಜನರು ತಮಗಷ್ಟೆ ಬೆಳೆದುಕೊಳ್ಳುವ ಪದಾರ್ಥವನ್ನು ಹೊರ ಊರಿಗೆ, ಹೊರ ರಾಜ್ಯಕ್ಕೆ ಪರಿಚಯಿಸುವಂತೆ ಮಾಡಿದ್ದು ಜೊಯಿಡಾದಲ್ಲಿ ನಡೆಯುವ ಈ ಗೆಡ್ಡೆಗೆಣಸು ಮೇಳ. ಈ ಮೇಳ ಸತತವಾಗಿ 11 ವರ್ಷಗಳಿಂದ ನಡೆದುಕೊಂಡು ಬಂದಿದೆ. ಕಾಳಿ ಹಿನ್ನೀರಿನಲ್ಲಿ ಮೋಜು ಮಾಡಲು, ವರ್ಷಾಂತ್ಯದ ವೇಳೆ ಇಲ್ಲಿನ ಹೋಮ್ ಸ್ಟೇ, ರೆಸಾರ್ಟ್‌ಗಳಿಗೆ ಮಾತ್ರವೇ ಬರುತ್ತಿದ್ದ ಪ್ರವಾಸಿಗರನ್ನು ಜನವರಿ ತಿಂಗಳಿನಲ್ಲಿ ನಡೆಯುವ 'ಗೆಡ್ಡೆಗೆಣಸು ಮೇಳ' ಸೆಳೆಯತೊಡಗಿದೆ.

ಮೇಳದಲ್ಲಿ ಜಗತ್ತಿನಲ್ಲಿ ಬೇರೆಲ್ಲೂ ಬೆಳೆಯದ ಮುಡ್ಲಿ ಕೋನ್ (ಉದ್ದನೆಯ ಕೆಸವಿನ ಗೆಡ್ಡೆ), ಆನೆಗಾತ್ರದ ಹಾತಿ ಕೋನ್, ನಾಗರಹಾವಿನ ಆಕಾರದ ನಾಗರ ಕೋನ್, ಆಲೆ ಕೋನ್, ತಾಂಬಡೆ ಕೋನ್, ಮುಣಕೆ ಕೋನ್, ಡುಕರ್ ಕೋನ್, ಕಾಟೆ ಕಣಗಾ, ಸುವರ್ಣ ಗೆಡ್ಡೆ, ಚಿರಾಕೆ... ಇಲ್ಲಿ ಸಿಗುತ್ತವೆ.

ಜೊಯಿಡಾದಲ್ಲಿ ನಡೆದ ಗೆಡ್ಡೆಗೆಣಸು ಮೇಳ

ಬಹುಪಾಲು ಕಾಳಿ ಹುಲಿ ಸಂರಕ್ಷಿತಾರಣ್ಯ, ಕಾಳಿನದಿ, ನದಿಯ ಹಿನ್ನೀರುಗಳನ್ನೇ ಆವರಿಸಿಕೊಂಡಿರುವ ಈ ನೆಲದಲ್ಲಿ ಕೃಷಿ ಭೂಮಿ ಪ್ರಮಾಣ ತೀರಾ ಕಡಿಮೆ. ಕಾಡಿನ ಅಂಚಿನಲ್ಲೇ ಜೀವನ ಕಟ್ಟಿಕೊಂಡಿರುವ ಕುಣಬಿ ಸಮುದಾಯದ ಜನರು ಹಸಿವೆ ನೀಗಿಸಿಕೊಳ್ಳಲು ಮನೆಯ ಹಿತ್ತಲಿನಲ್ಲಿ ಬೆಳೆಯುವ ಗೆಡ್ಡೆಗೆಣಸು ಈಗ ಅವರ ಮನೆಯ ಹಿತ್ತಲು ದಾಟಿ ಊರಿನಾಚೆಗೂ ಸಾಗುತ್ತಿದೆ. ಪೇಟೆ, ಪಟ್ಟಣಗಳಿಂದ ದೂರವೇ ಉಳಿದ ಕುಣಬಿ ಜನರಿಗೆ ಮಾತ್ರ ಆಹಾರವಾಗುತ್ತಿದ್ದ ಇವು ಈಗ ಐಷಾರಾಮಿ ಜನರ ಊಟದ ತಟ್ಟೆಯಲ್ಲೂ ಸ್ಥಾನ ಪಡೆದುಕೊಳ್ಳುತ್ತಿವೆ.

ತುಂಡು ಭೂಮಿಯಲ್ಲಿ ಕೃಷಿ, ಜೀವನೋಪಾಯಕ್ಕೆ ಕೂಲಿನಾಲಿ ಮಾಡಿಕೊಂಡು ಬದುಕುವ ಕುಣಬಿ ಜನರನ್ನು ಒಂದೆಡೆ ಸೇರಿಸುತ್ತಿರುವ ಈ ಮೇಳವು ಜೀವನೋಪಾಯಕ್ಕೆ ತಕ್ಕಮಟ್ಟಿಗಿನ ಆದಾಯ ಗಳಿಕೆಗೂ ದಾರಿಮಾಡಿಕೊಡುತ್ತಿದೆ. ಅರ್ಧ ವರ್ಷಕ್ಕೆ ಸಾಲುವಷ್ಟು ಗೆಡ್ಡೆಗೆಣಸು ಬೆಳೆದಿಟ್ಟುಕೊಂಡ ಕುಣಬಿ ಸಮುದಾಯದ ಮಹಿಳೆಯರು ಜೊಯಿಡಾದ ಕುಣಬಿ ಭವನದ ಆವರಣದಲ್ಲಿ ನಡೆಯುವ ಮೇಳಕ್ಕೆ ಇವುಗಳನ್ನು ತಂದು ಪ್ರದರ್ಶಿಸುತ್ತಾರೆ. ಮೇಳ ಬರುವುದನ್ನೇ ಕಾದು ಅಲ್ಲಿ ತರಹೇವಾರಿ ವಿಧದ, ದೊಡ್ಡ ಗಾತ್ರದ ಗೆಡ್ಡೆಗೆಣಸು ಪ್ರದರ್ಶಿಸುವುದು ಹಲವರಿಗೆ ಗತ್ತಿನ ವಿಷಯವೂ ಹೌದು.

ಕುಣಬಿ ಸಮಾಜವು ಸಂರಕ್ಷಿಸಿಕೊಂಡು ಬರುತ್ತಿರುವ ಕೆಸುವನ್ನು ಗುರುತಿಸಿ, ಸಸ್ಯ ತಳಿಗಳು ಹಾಗೂ ರೈತರ ಹಕ್ಕು ಪ್ರಾಧಿಕಾರವು 'ಸಸ್ಯ ವಂಶವಾಹಿ ಸಂರಕ್ಷಣಾ ಪ್ರಶಸ್ತಿ'ಯನ್ನೂ ನೀಡಿದೆ. ❖

...ಜಾಗೃತಿ ಯಾತ್ರೆ

10ನೇ ಪುಟದಿಂದ...

ಜಾಗೃತಿ ಜಾಥಾಗಳ ಜೊತೆ ಗವಿಮಠ ಕಳೆದ ವರ್ಷ 'ಜೀವನ ಸಂಗಾತಿ ಜೊತೆಗೆ ಜೀವನೋಪಾಯ' ಎಂಬ ಘೋಷವಾಕ್ಯದಡಿ ಸಾಮೂಹಿಕ ವಿವಾಹ ಮಾಡಿ ಸೆಲ್ಕೊ ಫೌಂಡೇಷನ್ ನೆರವಿನೊಂದಿಗೆ ನವದಂಪತಿಗೆ ಸೌರಶಕ್ತಿಯ ವಿದ್ಯುತ್ ವ್ಯವಸ್ಥೆಯುಳ್ಳ ಪೆಟ್ಟಿಗೆ ಅಂಗಡಿಗಳನ್ನು ನೀಡಿತ್ತು. ಆಗ ದಾಂಪತ್ಯ ಬದುಕಿಗೆ ಕಾಲಿಟ್ಟವರು ಈಗ ಸ್ವಾವಲಂಬಿ ಬದುಕು ನಡೆಸುತ್ತಿದ್ದಾರೆ. ನಮ್ಮಿಂದ ಏನೂ ಮಾಡಲು ಸಾಧ್ಯವಿಲ್ಲ ಎನ್ನುವ ಅಸಹಾಯಕ ಸ್ಥಿತಿಯಲ್ಲಿದ್ದ ಕುಕನೂರು ತಾಲ್ಲೂಕಿನ ಮಸಬಹಂಚಿನಾಳದ ಅರುಣಕುಮಾರ ಸೋಂಪುರ ಸ್ವಂತ ಅಂಗಡಿ ಆರಂಭಿಸಿದ್ದಾರೆ. ಅವರ ಅಂಗವಿಕಲ ಪತ್ನಿ ಭೀಮವ್ವ ಸೌರಶಕ್ತಿಯಿಂದ ಕಾರ್ಯನಿರ್ವಹಿಸುವ ಯಂತ್ರದ ಮೂಲಕ ಬಟ್ಟೆ ಹೊಲಿಯುತ್ತಾರೆ.

ಮಠದ ಕಾರ್ಯಗಳು ಸಾಮಾನ್ಯ ಜನರ ಬದುಕಿನ ಮೇಲೆ ಸಕಾರಾತ್ಮಕ ಪರಿಣಾಮ ಬೀರಿವೆ. ಸಮಾಜಮುಖಿ ಬದಲಾವಣೆಗೆ ತೆರೆದುಕೊಳ್ಳುವಂತೆಯೂ ಪ್ರೇರೇಪಿಸುತ್ತಿವೆ. ರಕ್ತದಾನದ ಮಹತ್ವ, ಬಾಲ್ಯ ವಿವಾಹ ತಡೆಗೆ ಅರಿವು, ಜಲದೀಕ್ಷೆ, ಒತ್ತಡ ಮುಕ್ತ ಬದುಕಿಗಾಗಿ ಸಶಕ್ತ ಮನ ಸಂತೃಪ್ತ ಜೀವನಕ್ಕೆ ಪಣ, ನೇತ್ರದಾನದ ಮಹತ್ವ ಸಾರಲು ಕೃಪಾದೃಷ್ಟಿ, ಪರಿಸರ ರಕ್ಷಣೆಗಾಗಿ ಲಕ್ಷ ವೃಕ್ಷೋತ್ಸವ, ಸ್ವಯಂ ಉದ್ಯೋಗವನ್ನು ಪ್ರೇರೇಪಿಸಲು ಕಾಯಕ ದೇವೋಭವ ಹೀಗೆ ಅನೇಕ ವಿಷಯಗಳ ಜಾಗೃತಿ ಜಾಥಾ ಜಾತ್ರೆಗೂ ಹೊಸತನ ತಂದುಕೊಟ್ಟಿವೆ.

2020ರಲ್ಲಿ ನಡೆದ ಲಕ್ಷ ವೃಕ್ಷೋತ್ಸವ ಜಾಥಾ ಕೊಪ್ಪಳ ಜಿಲ್ಲೆ ಹಾಗೂ ನಾಡಿನ ಹಲವು ಕಡೆ ಜನರ ಮೇಲೆ ಪರಿಣಾಮ ಬೀರಿವೆ. ಮಠದ ವತಿಯಿಂದಲೇ ಒಂದು ಲಕ್ಷ ಸಸಿಗಳನ್ನು ಜನರಿಗೆ ಉಚಿತವಾಗಿ ಹಂಚಲಾಗಿದೆ. ಹಿರೇಹಳ್ಳದ ಎಡಬಲಗಳಲ್ಲಿ ತೆಂಗು, ನೇರಳೆ ಸಸಿಗಳನ್ನು ನೆಡಲಾಗಿತ್ತು. ಮರಗಳ ಸಂಖ್ಯೆ ಹೆಚ್ಚಿಸುವ ಜೊತೆಗೆ ರೈತರಿಗೆ ಆದಾಯದ ಮೂಲ ಕಂಡುಕೊಳ್ಳಲು ಈ ಅಭಿಯಾನ ನೆರವಾಗಿತ್ತು. ಗವಿಮಠದ ಆವರಣವೇ ಮರಗಳಿಂದ ತುಂಬಿ ಹೋಗಿದೆ. ಎಲ್ಲೇ ಹೋದರೂ ತಂಪಾದ ಗಾಳಿ ಹಾಗೂ ನೆರಳಿಗೆ ಕೊರತೆಯಿಲ್ಲ. ಸಾಕಷ್ಟು ಜನರ ಜೀವ ಉಳಿಸಲು ರಕ್ತದಾನ ಶಿಬಿರಗಳು ನೆರವಾಗಿವೆ. ಹೀಗಾಗಿ ಅಜ್ಜನ ಜಾತ್ರೆಯ ಜಾಗೃತಿ ಯಾತ್ರೆಗಳು ಸಂಕಷ್ಟದಲ್ಲಿರುವ ಮನುಕುಲಕ್ಕೆ ಬೆಳಕು ಹಚ್ಚಿದ ಪ್ರಣತಿಗಳಂತಿವೆ. ❖

ದಾಸೋಹಕ್ಕೆ ಭಕ್ತರೇ ಶಕ್ತಿ

ಗವಿಮಠದ ಜಾತ್ರೆಗೆ ನಿತ್ಯ ಬರುವ ಲಕ್ಷಾಂತರ ಭಕ್ತರಿಗೆ ಅಚ್ಚುಕಟ್ಟಾಗಿ ಮಾಡುವ ದಾಸೋಹದ ವ್ಯವಸ್ಥೆ ಪ್ರಮುಖ ಆಕರ್ಷಣೆ. ಜಾತಿ, ಧರ್ಮ, ಲಿಂಗದ ತಾರತಮ್ಯವಿಲ್ಲದೇ ಜನ ಸ್ವಯಂಪ್ರೇರಿತರಾಗಿ ಆಹಾರ ಸಾಮಗ್ರಿಗಳನ್ನು ನೀಡುತ್ತಾರೆ. ದಿನಸಿ ಹಾಗೂ ತರಕಾರಿ ವ್ಯಾಪಾರಿಗಳು ಪ್ರತಿ ವರ್ಷ ತಮ್ಮ ಗಳಿಕೆಯ ಒಂದಷ್ಟು ಭಾಗ ಮಠಕ್ಕೆ ಅರ್ಪಿಸುತ್ತಾರೆ. ಮಠದ ದಾಸೋಹಕ್ಕೆ ಭಕ್ತರೇ ಶಕ್ತಿಯಾಗಿದ್ದಾರೆ.

ಈಗಲೂ ಕಟ್ಟಿಗೆ ಒಲೆ ಉರಿಸಿ ಅಡುಗೆ ತಯಾರಿಸುತ್ತಾರೆ. ಜಾತ್ರೆಯಲ್ಲಿ ಸುಮಾರು 16 ಲಕ್ಷದಷ್ಟು ಜೋಳದ ರೊಟ್ಟಿ, 800 ಕ್ವಿಂಟಲ್ ಅಕ್ಕಿ, 900 ಕ್ವಿಂಟಲ್‌ನಷ್ಟು ಜಿಲೇಬಿ, ಮಾದಲಿ, ರವೆ ಉಂಡಿ, ಶೇಂಗಾ ಹೋಳಿಗೆ ಹೀಗೆ ಅನೇಕ ಸಿಹಿ ತಿನಿಸುಗಳು, 400 ಕ್ವಿಂಟಲ್ ತರಕಾರಿ, 350 ಕ್ವಿಂಟಲ್ ದ್ವಿದಳ ಧಾನ್ಯಗಳು, 15 ಸಾವಿರ ಲೀಟರ್ ಹಾಲು, ಒಂದು ಸಾವಿರ ಕೆ.ಜಿ. ತುಪ್ಪ, ಐದು ಸಾವಿರ ಕೆ.ಜಿ. ಉಪ್ಪಿನಕಾಯಿ, 15 ಕ್ವಿಂಟಲ್ ಕಡ್ಲೇಪುಡಿ, ಮೂರ್ನಾಲ್ಕು ಲಕ್ಷ ಮಿರ್ಚಿ ಹೀಗೆ ತರಹೇವಾರಿ ತಿನಿಸುಗಳು ಇಲ್ಲಿನ ಜಾತ್ರೆಯ ವೈಶಿಷ್ಟ್ಯ.

ಗವಿಮಠದ ಜಾತ್ರೆಯಲ್ಲಿ ಶೇಂಗಾ ಹೋಳಿಗೆ

ಎಲ್ಲೂ ಇಲ್ಲ ಇಂಥ ಮಾರುಕಟ್ಟೆ!

ಬಗೆಬಗೆಯ ತರಕಾರಿಗಳು

10ನೇ ಪುಟದಿಂದ...

ಕೊರೊನಾ ಸಮಯದಲ್ಲಿ ಈ ಮಾರುಕಟ್ಟೆಯ ವಿಶೇಷ ಸೇವೆ ಮರೆಯಲಾಗದು. ಕೊರೊನಾಕ್ಕೆ ರಾಮಬಾಣ ಎಂದೇ ಹೇಳಲಾದ ನೆಲನೆಲ್ಲಿ ಗಿಡ, ಅಮೃತಬಳ್ಳಿ ಇಲ್ಲಿ ಪೂರೈಕೆ ಆಗುತ್ತಿತ್ತು. ಯಕ್ಷಗಾನ ಕಲಾವಿದ ಪ್ರೊ.ಎಂ.ಎನ್.ಹೆಗಡೆ ಹಳವಳ್ಳಿಯವರು 'ನಾನು ನಮ್ಮ ಮನೆಗೆ ಇಲ್ಲಿಂದಲೇ ನೆಲನೆಲ್ಲಿ ಗಿಡ ಹಾಗೂ ಅಮೃತಬಳ್ಳಿ ಒಯ್ದಿದ್ದೆ' ಎಂದು ಆ ದಿನವನ್ನು ಮೆಲಕು ಹಾಕುತ್ತಾರೆ.

ಸುಮಾರು ಎಂಬತ್ತು ವರುಷದ ಆಸುಪಾಸಿನ ಹಿರಿಯ ಜೀವಿ ಓಮಿ ಮರಾಠೆಯವರು 'ನಾನು ಚಿಕ್ಕಂದಿನಿಂದಲೂ ಇಲ್ಲಿ ವ್ಯಾಪಾರ ಮಾಡಿಯೇ ಹೊಟ್ಟೆಗೆ ಹಿಟ್ಟು ಕಂಡುಕೊಂಡಿದ್ದೇನೆ. ನನ್ನ ಸೊಸೆ, ಮೊಮ್ಮಗಳು ಕೂಡಾ ನಾನು ಬಾರದ ದಿವಸ ಇಲ್ಲಿಗೆ ವ್ಯಾಪಾರಕ್ಕೆ ಬರುತ್ತಾರೆ' ಎನ್ನುತ್ತಾರೆ ನಗುನಗುತ್ತಾ.

ಈ ಮಾರುಕಟ್ಟೆಯಲ್ಲಿ ಎಲ್ಲಿಯೂ ಗಡಸು ಧ್ವನಿ ಕೇಳಿಸದು. ಮೆಲುಧ್ವನಿಯಲ್ಲಿ ಹಿತಮಿತವಾಗಿ ಮಾತನಾಡುವ ಇವರು, ಬಹುತೇಕ ತಮ್ಮ ವಸ್ತುಗಳನ್ನು ತಾಜಾ ಬಾಳೆಲೆಯಲ್ಲಿ ಸುತ್ತಿ ತರುತ್ತಾರೆ.

ಆದರ್ಶ ಕೃಷಿಕರಾದ ರವಿ ಲಕ್ಷ್ಮಣ ಶಾನಭಾಗರು 'ಇಂತಹ ಮಾರುಕಟ್ಟೆ ಅಪರೂಪದಲ್ಲಿ ಅಪರೂಪ. ಈ ಕೃಷಿ ಮಹಿಳೆಯರ ಮಾರಾಟದ ವಸ್ತುಗಳಲ್ಲಿ ಸಾಕಷ್ಟು ಔಷಧಿ ಗುಣವಿದ್ದು ಇಂತಹ ವಿಶೇಷ ಕಾಯಿಪಲ್ಲೆಗಳನ್ನು ಗ್ರಾಹಕರಿಗೆ ಒದಗಿಸುವ ಇವರಿಗೆ ಸರ್ಕಾರದಿಂದ ಹೆಚ್ಚಿನ ಸೌಲಭ್ಯ ಸಿಗುವಂತಾಗಬೇಕು' ಎಂದು ಅಭಿಪ್ರಾಯ ಪಡುತ್ತಾರೆ.

ಒಮ್ಮೆ ಇಲ್ಲಿಗೆ ಭೇಟಿ ಕೊಟ್ಟರೆ ನೀವೇ ಹೇಳುತ್ತೀರಿ, 'ಯಲ್ಲಾಪುರದ ಕಾಯಿಪಲ್ಲೆ ಮಾರುಕಟ್ಟೆ ಎಲ್ಲಾ ಮಾರುಕಟ್ಟೆಯಂತಲ್ಲ' ಎಂದು. ❖

ಮುನ್ನೋಟ 12-01-2025 ರಿಂದ 18-01-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ದೇಹದ ಶಕ್ತಿ, ಸಾಮರ್ಥ್ಯದ ಕಡೆಗೆ ಹೆಚ್ಚು ಗಮನ ಕೊಡುವಿರಿ. ಭಾಷಣಕಾರರಿಗೆ ಉತ್ತಮ ವೇದಿಕೆ ದೊರಕುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಆಸ್ತಿ ಖರೀದಿ ವಿಚಾರದಲ್ಲಿ ಮುಂದುವರಿಯಬಹುದು. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ವೃತ್ತಿಯಲ್ಲಿ ನಿಮ್ಮ ಶ್ರಮಕ್ಕೆ ತಕ್ಕ ಫಲವಿರುತ್ತದೆ. ರಾಜಕೀಯ ನಾಯಕರುಗಳಿಗೆ ಸ್ವಲ್ಪ ಅಭಿವೃದ್ಧಿ ಇದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ಅಧ್ಯಾಪಕರಿಗೆ ಗೌರವ ಹೆಚ್ಚುತ್ತದೆ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಸಂಗೀತದಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಒಡಹುಟ್ಟಿದವರ ಕಾಟ ತಪ್ಪುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ಸಂಬಂಧಿಕರಿಂದ ವಿವಾಹ ಸಂಬಂಧಗಳು ಒದಗಿಬರುತ್ತವೆ. ಹಿರಿಯರ ಸಹಾಯದಿಂದ ವೃತ್ತಿಯಲ್ಲಿ ಮುಂದುವರೆಯಬಹುದು.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ಮನಸ್ಸಿನಲ್ಲಿ ಒಂದು ರೀತಿಯ ಸಂತೋಷವಿದ್ದರೂ, ಅದನ್ನು ಅನುಭವಿಸಲು ಒದ್ದಾಡುವಿರಿ. ಕೃಷಿಯಿಂದ ಆದಾಯವಿರುತ್ತದೆ. ನಿಮ್ಮ ಸಂಬಂಧಿಕರು ನಿಮ್ಮ ಸಂಗಾತಿಯ ಮೇಲೆ ಒತ್ತಡ ಹೇರುವರು. ಆಸ್ತಿ ವ್ಯವಹಾರ ಮಾಡುವವರಿಗೆ ಸ್ವಲ್ಪ ಆದಾಯವಿರುತ್ತದೆ. ಬಾಯಿ ಹುಣ್ಣು ಕೆಲವರಿಗೆ ಕಾಣಿಸಬಹುದು. ಸರ್ಕಾರಿ ವ್ಯವಹಾರಗಳಲ್ಲಿ ಅಭಿವೃದ್ಧಿ ಇರುತ್ತದೆ. ದೈವ ಕಾರ್ಯಗಳಿಗಾಗಿ ಹಣ ಖರ್ಚಾಗುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಕೆಲವರ ಮೇಲೆ ಕೋಪ ಬಂದರು ಅದನ್ನು ತೋರಿಸಿಕೊಳ್ಳಲು ಆಗುವುದಿಲ್ಲ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಕೃಷಿಗಾಗಿ ಹೆಚ್ಚು ಹಣ ಹೂಡಿಕೆ ಮಾಡಬೇಕಾಗುತ್ತದೆ. ಕೃಷಿಯಿಂದ ಬರಬೇಕಾದ ಆದಾಯ ಕಡಿಮೆಯಾಗಬಹುದು. ರಕ್ತ ಪರಿಚಲನೆಯಲ್ಲಿ ವ್ಯತ್ಯಾಸವಿರುವವರು ಸ್ವಲ್ಪ ಎಚ್ಚರವಹಿಸಿ. ಸಂಗಾತಿಯ ಸಿಡುಕು ನುಡಿಗಳು ಮುಜುಗರ ತರಬಹುದು.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ವಿಪರೀತವಾದ ಆತ್ಮ ಗೌರವ ಇರುತ್ತದೆ. ಮಾತನಾಡುವಾಗ ಎಚ್ಚರಿಕೆ ಇರಲಿ. ಸ್ತ್ರೀಯರಿಂದ ಕೆಲಸ ಕಾರ್ಯಗಳಿಗೆ ತೊಂದರೆ ಬರಬಹುದು. ಭೂಮಿಗಾಗಿ ಹಣ ಹೂಡುವಾಗ ಸ್ವಲ್ಪ ಎಚ್ಚರಿಕೆ ಇರಲಿ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವನ್ನು ಪಡೆಯುವ ಯೋಗವಿದೆ. ಸಂಗಾತಿಯ ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆಯನ್ನು ಕಾಣಬಹುದು. ಸಂಸಾರಕ್ಕಾಗಿ ಸಂಗಾತಿ ಸಾಕಷ್ಟು ಶ್ರಮ ಪಡುವರು.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಧಾರ್ಮಿಕ ವಿಷಯಗಳನ್ನು ಕಲಿಯಲು ಆಸಕ್ತಿ ಹೊಂದುವಿರಿ. ಗಂಟಲು ಬೇನೆ ಅಥವಾ ಹಲ್ಲು ನೋವು ಕೆಲವರನ್ನು ಕಾಡಬಹುದು. ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ಹಿರಿಯರಿಂದ ಆಸ್ತಿ ವಿವಾದ ಪರಿಹಾರವಾಗುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ಮಕ್ಕಳ ಸುಖಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತದೆ. ವೃತ್ತಿಯಲ್ಲಿ ಸ್ವಲ್ಪ ಒತ್ತಡ ಹೆಚ್ಚಾಗುವ ಸಾಧ್ಯತೆಯಿದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ಜನರೊಡನೆ ಸುಂದರವಾಗಿ ಮಾತನಾಡುತ್ತಾ ಅವರ ವಿರುದ್ಧವೇ ತಂತ್ರಗಳನ್ನು ರೂಪಿಸುವಿರಿ. ಆದಾಯವಿದ್ದರೂ, ಅದು ನಿಮ್ಮನ್ನು ತಲುಪುವುದು ನಿಧಾನವಾಗಬಹುದು. ಹಿರಿಯರ ಜೊತೆ ನಡೆಸುವ ವ್ಯವಹಾರಗಳಲ್ಲಿ ಸಮಸ್ಯೆಗಳಾಗಬಹುದು. ಆಸ್ತಿ ವಿವಾದ ಮತ್ತೆ ಶುರುವಾಗಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ವೃತ್ತಿಯಲ್ಲಿ ಅಭಿವೃದ್ಧಿ ಇರುತ್ತದೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ಹಿರಿಯರ ಬುದ್ಧಿ ಮಾತುಗಳು ನಿಮಗೆ ಬಹಳ ಒಳಿತನ್ನು ಮಾಡುತ್ತವೆ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ನಿಮ್ಮ ನಡವಳಿಕೆಯಿಂದ ಶತ್ರುಗಳನ್ನು ಗೆಲ್ಲುವಿರಿ. ವೈಮಾನಿಕ ತಂತ್ರಜ್ಞಾನ ಸಂಸ್ಥೆಯಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಹಿರಿಯರ ಆರೋಗ್ಯದ ಬಗ್ಗೆ ಗಮನ ಇರಲಿ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಕೂಡಿ ಬರುವ ಯೋಗವಿದೆ.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ಹಿರಿಯರ ಜೊತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಮಹಿಳೆಯರಿಂದ ನಿಮ್ಮ ಕೆಲಸಗಳಿಗೆ ತೊಡಕು ಬರಬಹುದು. ಕ್ರೀಡಾಪಟುಗಳಿಗೆ ಅನಿರೀಕ್ಷಿತವಾಗಿ ಸೌಲಭ್ಯಗಳು ದೊರೆಯುತ್ತವೆ. ವಾಯು ಪ್ರಕೋಪ ಕೆಲವರನ್ನು ಕಾಡಬಹುದು. ಸಾಹಸ ಕಲಾವಿದರುಗಳು ಸಾಹಸ ಪ್ರದರ್ಶನ ಮಾಡುವಾಗ ಎಚ್ಚರವಹಿಸಿರಿ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಯಾವುದೇ ಕೆಲಸವನ್ನು ಬಹಳ ಶ್ರದ್ಧೆಯಿಂದ ಮಾಡುವಿರಿ. ಆದಾಯದಲ್ಲಿ ಸ್ವಲ್ಪ ಏರಿಕೆಯನ್ನು ಕಾಣಬಹುದು. ಯಾರ ವಿರೋಧವಿದ್ದರೂ ನಿಮ್ಮ ಕೆಲಸವನ್ನು ನೀವು ಸಾಧಿಸುವಿರಿ. ಕೃಷಿಯಲ್ಲಿ ಹೆಚ್ಚು ಸಂಪಾದನೆ ಮಾಡುವಿರಿ. ವಿದ್ಯಾರ್ಥಿಗಳಿಗೆ ನಿರೀಕ್ಷೆಗಿಂತ ಹೆಚ್ಚಿನ ಯಶಸ್ಸು ಸಿಗುತ್ತದೆ. ಶೀತ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಬಂಧುಗಳಲ್ಲಿ ವಿವಾಹಸಂಬಂಧಗಳು ಒದಗುವ ಸಾಧ್ಯತೆಗಳಿವೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ನಿಮ್ಮ ಹಿರಿತನದ ಜೊತೆಗೆ ಜ್ಞಾನವು ಸೇರಿಕೊಂಡು ನಿಮಗೆ ಗೌರವ ತರುತ್ತದೆ. ವ್ಯಾಯಾಮ ಮಾಡುವವರು ಎಚ್ಚರವಹಿಸುವುದು ಒಳ್ಳೆಯದು, ಕೆಲವೊಂದು ಪರಿಣಾಮಗಳು ಎದುರಾಗಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಮಧ್ಯವರ್ತಿ ಕೆಲಸ ಮಾಡುವವರಿಗೆ ಹೆಚ್ಚು ಆದಾಯ ಬರುತ್ತದೆ. ಸಂಗಾತಿಯ ಸಹಾಯದಿಂದ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಲಾಭವಿರುತ್ತದೆ. ವೃತ್ತಿಯಲ್ಲಿ ಸ್ವಲ್ಪ ಏಳಿಗೆ ಇರುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಬಲವಂತವಾಗಿ ದೇಹ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುವಿರಿ. ಹಾಸ್ಯ ಕವಿಗಳಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ಶ್ವಾಸಕೋಶದ ತೊಂದರೆ ಇರುವವರು ಎಚ್ಚರ ವಹಿಸಿರಿ. ಕಬ್ಬಿಣದ ಕೆಲಸ ಮಾಡುವವರಿಗೆ ನಿರೀಕ್ಷಿತ ಆದಾಯ ಇರುತ್ತದೆ. ಆಭರಣ ತಯಾರಕರಿಗೆ ಲಾಭ ಹೆಚ್ಚುತ್ತದೆ.

ಪದಬಂಧ 2874



ಮೇಲಿನಿಂದ ಕೆಳಕ್ಕೆ

1. ಸೂರ್ಯನ ಮಕರ ಪ್ರವೇಶ ಪ್ರಕೃತಿಗೆ ವಿಕಸನ ಸಂಭ್ರಮ 3
2. ಇದು ಕೊಟ್ಟು ತೆಗೆದುಕೊಳ್ಳುವ ವಿಚಾರ 4
3. ಸಂಜೆಯ ಶೃತಿ: ಕಾದಂಬರಿ ಸಾರ್ವಭೌಮನ ಕೊಡುಗೆ 4
4. ಶಬ್ದೋತ್ಪತ್ತಿಗೆ ಹೆಸರಾದ ಕೊರೆಹಲ್ಲು 3
6. ಸಂಕ್ರಾಂತಿಗೆ ಸೂರ್ಯ ಪ್ರವೇಶಿಸುವ ಮೊಸಳೆ ರಾಶಿ 3
7. ಹಿಂದಿ ಹಾಡಿನಲ್ಲಿ ಗೆಲುವಿನ ಉಘೇ 3
8. ಹೆಜ್ಜೇನು ತಿನ್ನಲು ಒಡನಾಡುವ ಗುಂಪು 5
9. ಶ್ರೇಷ್ಠವಾದ ಬೆಟ್ಟದ ಒಡೆಯ 5
10. ಕೊಡವನ್ನು ಹಿಡಿದ ಕೊಡಗುನಾಡಿನವ 3
12. ಮನಃಪೂರ್ವಕ ಅಹವಾಲು 3
15. ನಗರೋತ್ಸವಗಳಲ್ಲಿ ಬಾರಿಸುವ ವಾದ್ಯ 3
17. ದೇವಾನುದೇವತೆಗಳನ್ನು ಪ್ರತಿಷ್ಠಾಪಿಸಿರುವ ಗುಡಿ 3
19. ಆಂಗ್ಲ ಪದಕೋಶ 4
20. ಭಗವಂತನ ಶ್ರೇಷ್ಠ ವಾಸಸ್ಥಾನ 4
21. ಮಸಾಲೆಗಳ ಜೊತೆ ದೀನವಾಗಿ ಬೆರೆಯುವ ಸುವಾಸಿತ ಸೊಪ್ಪು 3
23. ಒಂದೇ ಒಂದು ಗಳಿಗೆಯ ಆನಂದ 3

ಎಡದಿಂದ ಬಲಕ್ಕೆ

1. ವಧೂವರರ ಬಾಂಧವ್ಯದ ಹಾರ 5
3. ನಮ್ಮ ಕಷ್ಟ, ದುಃಖ ದಾರಿದ್ರ್ಯಗಳನ್ನು ನಿವಾರಿಸುವವ 5
5. ಹಿಂದುಮುಂದಾದ ಬುದ್ದಿ 2
7. ಎಲ್ಲಕ್ಕೂ ಬೇಕಾಗುವ ಮಂದಿ ಇವರೇ 2
8. ಸುಲಭವಾದ ನಡಿಗೆ 5
10. ಮಲೆನಾಡ ಕುಟುಂಬದ ಪೂರ್ವಜ ವನವಾಸಿ ದೈವ 4
11. ರುದ್ರಶಿವನ ಪ್ರೀತ್ಯರ್ಥ ನಡೆಸುವ ಅಗ್ನಿಕಾರ್ಯ 4
13. ಮಗುವಿಗಿಡುವ ತಾರಾಬಲದ ಹೆಸರು 5
14. ತ್ರೇತಾಯುಗದ ರಾಮ, ದ್ವಾಪರದ ಪಾಂಡವರು ಅನುಭವಿಸಿದ ಕಷ್ಟ ಕಾರ್ಪಣ್ಯಂ 4
16. ಹಣಕೊಟ್ಟು ಬಡ್ಡಿ ಸಮೇತ ವಾಪಸ್ಸು ಪಡೆಯುವ ದೇವತೆ 4
18. ರಾಜ್ಯ ರಾಷ್ಟ್ರದ ಎಲ್ಲೆಯಲ್ಲಿರುವ ಸರಹದ್ದು ಜಾಗ 5
21. ಸುಸಂಸ್ಕೃತರ ಪುರ 2
22. ಎಣಿಕೆಗೆ ಎಟುಕದ ನೂರು ಸಾವಿರ 2
24. ಪುಸ್ತಕದಲ್ಲಿ ಮರಿ ಹಾಕುವ ಸುಂದರ ಹಕ್ಕಿ ಪುಕ್ಕ 5
25. ಕಿವಿಯನ್ನಲಂಕರಿಸಿದ ಅತ್ಯಮೂಲ್ಯವಾದ ಸುಂದರ ಹರಳಿನಂತಹ ಗಂಗಾ ಸ್ನಾನ ಘಟ್ಟ 5

ಪದಬಂಧ ಉತ್ತರ -2873

ಮೇಲಿಂದ ಕೆಳಕ್ಕೆ

1.ಜೋಗದಸಿರಿ 2.ನನಸು 3.ಅಂಕಣ 4.ಲಟಾಪಟಿ 9.ವಾಸಸ್ಥಾನ 10.ವನಪಾಲಕ 12.ಸಿಡಿಮಿಡಿ 14.ಪುರಂದರ 16.ದಯಾಕರ 19.ಗೆಜ್ಜೆಕುಣಿತ 21.ಕಲಾವಿದ 24.ಸುಮಾರು 25.ಪತ್ರಿಕೆ

ಎಡದಿಂದ ಬಲಕ್ಕೆ

1.ಜೋಪಾನ 3.ಅಂಚಲ 5.ನಕ್ಷತ್ರಲೋಕ 6.ಟಾಕೀಸು 7.ದಕ್ಕಿಸು 8.ಣಟ್ಟಪ 9.ವಾಸ್ತವ 11.ಟಿಸಿಲು 13.ರಿಪುಧ್ವಂಸ 15.ನರ್ಮದ 17.ನಕುಲ 18.ಕರಡಿಗೆ 20.ತಾರಕ 22.ಕಠೋರ 23.ಲಾಲಿಸು 25.ಕುಲುಕು 26.ಶಾಂಭವಿ 27.ಮಾನಸಪುತ್ರಿ 28.ದರ್ಬಾರು 29.ಕೆರತ

ಊರುಕೇರಿಯಲ್ಲಿ ದಾಂಪತ್ಯ ಗೀತ

ಕಿಶನರಾವ್ ಕುಲಕರ್ಣಿ

ರಾಮೇನಹಳ್ಳಿ ಮುಂಡರಗಿ ತಾಲ್ಲೂಕಿನ ಒಂದು ಪುಟ್ಟ ಹಳ್ಳಿ. ಕೃಷಿಯನ್ನೇ ನಂಬಿರುವ ಆ ಹಳ್ಳಿಗರು ಇಡೀ ದಿನ ಹೊಲದಲ್ಲಿ ದುಡಿದು ಸಾಯಂಕಾಲ ಟಿ.ವಿ ಮುಂದೆ ಕುಳಿತು ಧಾರಾವಾಹಿಗಳನ್ನು ನೋಡುವುದು ಸಾಮಾನ್ಯ. ಆದರೆ ಅಂದು ಅವರೆಲ್ಲ ತಮ್ಮ ಮನೆಯ ಟಿ.ವಿ ಆಫ್ ಮಾಡಿ ಹಳ್ಳಿಯ ಮಧ್ಯದಲ್ಲಿದ್ದ ಸಭಾಭವನದ ಮುಂದೆ ಚಾಪೆ ಹಾಸಿಕೊಂಡು ಕುಳಿತು ನಾಟಕ ನೋಡುತ್ತಿದ್ದರು.

> ಈ ರಂಗ ಪ್ರಯೋಗಕ್ಕೆ ರಂಗಮಂದಿರವೇ ಬೇಕು ಎಂದೇನಿಲ್ಲ; ಊರಿನ ಮನೆಯಂಗಳ, ಓಣಿ, ವಠಾರ, ಸಭಾಭವನದಲ್ಲಿ ಜನರು ಕುಳಿತು, ನಿಂತು ನೋಡಬಹುದು. ಈಗಾಗಲೇ ಹಲವಾರು ಯಶಸ್ವಿ ಪ್ರಯೋಗಗಳನ್ನು ಕಂಡಿರುವ ದಾಂಪತ್ಯ ಗೀತ ನಾಟಕ ಜನಮಾನಸದಲ್ಲಿ ಜಾಗಪಡೆದಿದೆ.

ಸಾಮಾಜಿಕ ಜಾಲತಾಣದಲ್ಲಿ 'ದಾಂಪತ್ಯ ಗೀತ' ನಾಟಕದ ಸುದ್ದಿ ಹರಿದಾಡಿದ್ದರಿಂದ ನಾಟಕ ನೋಡಲು ಬಹುತೇಕರು ಸಭಾಭವನದ ಮುಂದೆ ಜಮಾಯಿಸಿದ್ದರೆ, ಮಕ್ಕಳು ಮೊದಲೇ ಚಾಪೆ, ಚೀಲ ಹಾಸಿ ಸ್ಥಳ ಕಾಯ್ದಿರಿಸಿದ್ದರು. ಕೆಲವರು ಬೈಕ್ ಮೇಲೆಯೇ ಕುಳಿತು ನೋಡುತ್ತಿದ್ದರೆ, ಜಾಗ ಸಿಗದವರು ಸಂದು, ಕಟ್ಟೆಯ ಮೇಲೆ ನಿಂತು ನೋಡುತ್ತಿದ್ದರು.

ನಾಟಕದ ದೃಶ್ಯ ಚಿತ್ರಗಳು: ಮುತ್ತು ಹಾಳಕೇರಿ

ಆರು ತಿಂಗಳಿಂದ 'ದಾಂಪತ್ಯ ಗೀತ' ನಾಟಕ ಎಲ್ಲೆಲ್ಲಿ ಪ್ರದರ್ಶನವಾಗಿದೆಯೋ ಅಲ್ಲೆಲ್ಲ ಇದೇ ರೀತಿ ಛಾಪು ಮೂಡಿಸಿದೆ.

ಅಂದಹಾಗೆ ಈ ನಾಟಕ, ಶಿಕ್ಷಕ ದಂಪತಿಯ ಸುತ್ತ ಹೆಣೆದ ಕಥೆ. ಪತಿ ಸಾಹಿತ್ಯ ಪ್ರೇಮಿ. ಸದಾ ಸಾಹಿತ್ಯ ರಚನೆ, ಭಾಷಣ, ಸಮ್ಮೇಳನ, ಹೋರಾಟ, ಬಂಡಾಯದಲ್ಲಿ ಮುಳುಗಿ ಹೋಗಿರುತ್ತಾನೆ. ಹೆಂಡತಿಗೆ ಇದ್ಯಾವುದು ಬೇಕಾಗಿರುವುದಿಲ್ಲ. ತನ್ನ ಪತಿ ತನಗಾಗಿ ಸ್ವಲ್ಪ ಸಮಯ ಮೀಸಲಿಡಬೇಕು ಎಂಬುದು ಅವಳ ಮನದಮಿಡಿತ. ಹೆಂಡತಿ ಎಷ್ಟೇ ಸಿಟ್ಟಾಗಿದ್ದರೂ ಪತಿ ತನ್ನ ಸಾಹಿತ್ಯ, ಪ್ರೇಮ ಸಲ್ಲಾಪದ ಮೂಲಕ ಅವಳ ಮನಸ್ಸನ್ನು ತನ್ನಡೆಗೆ ಆಕರ್ಷಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾನೆ. ಹೆಂಡತಿಯನ್ನು ನೋಡಿ ಅವಳ ಮೇಲೆ ಸಾಹಿತ್ಯ ರಚಿಸುತ್ತಾನೆ, ತಾನು ಬರೆದಿದ್ದನ್ನು ಹಾಡುತ್ತಾನೆ, ನಗಿಸುತ್ತಾನೆ, ಕುಣಿಯುತ್ತಾನೆ, ಅಂತಿಮವಾಗಿ ಹೆಂಡತಿ ತನ್ನ ಸಾಹಿತ್ಯವನ್ನು ಪ್ರೀತಿಸುವ ಹಾಗೆ ಬದಲಾವಣೆ ಮಾಡುತ್ತಾನೆ.

ನಾಟಕದಲ್ಲಿ ಗಂಡ-ಹೆಂಡತಿಯ ಲಘು ಜಗಳ, ಪ್ರೀತಿ, ವಾತ್ಸಲ್ಯ, ಮೋಹದಂತಹ ನವರಸಗಳು ಸೇರಿದಂತೆ ಜನಪದ, ಕೃಷಿ, ಮಳೆ-ಬೆಳೆ, ಗರ್ಭಕಲಿಕೆ, ಮಕ್ಕಳನ್ನು ಬೆಳೆಸುವ ಪರಿ–ಹೀಗೆ ಎಲ್ಲ ವಿಷಯಗಳು ಎಳೆಎಳೆಯಾಗಿ ಬಂದು ಹೋಗುತ್ತವೆ. ಐಸ್ ಫ್ಯಾಕ್ಟರಿ, ಶುಗರ್ ಫ್ಯಾಕ್ಟರಿ, ಲವ್ ಫ್ಯಾಕ್ಟರಿ ಎಂಬ ಪದಗಳು ಸಂಭಾಷಣೆಯಲ್ಲಿ ಅಂತರಾರ್ಥ ಹೊಂದಿವೆ. ಮಧ್ಯದಲ್ಲಿ ಹಾಸ್ಯ, ಕಚಗುಳಿ ನೀಡುವ ಪ್ರಣಯದ ಮಾತುಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತವೆ. ಮಧ್ಯದಲ್ಲಿ ಮಧುರ ಹಾಡುಗಳು, ಮನಸ್ಸಿಗೆ ಮುದನೀಡುವ ಸಂಭಾಷಣೆಯ ಮೂಲಕ ದಾಂಪತ್ಯದ ಮಜಲಿನ ಅನನ್ಯತೆ ಮೆರೆದಿದೆ.

ನಾಟಕ ನೋಡಲು ಸೇರಿರುವ ಜನರು

ನಾಟಕ ನೋಡಿದ ಪ್ರೇಕ್ಷಕರಲ್ಲಿ ದಂಪತಿ ಮಧ್ಯೆ ಪ್ರೀತಿ ಹೇಗಿರಬೇಕು, ಅವರ ಭಾವನೆ, ಭಾಷೆ ಎಂತಹದ್ದಾಗಿರಬೇಕು, ಪರಸ್ಪರ ಸಾಮರಸ್ಯದಿಂದ ಕುಟುಂಬ ಹೇಗೆ ಕಟ್ಟಬಹುದು ಎಂಬ ಸಕಾರಾತ್ಮಕ ಯೋಚನೆಗಳು ಮೊಳಕೆಯೊಡೆದಿರುತ್ತವೆ. ಇಬ್ಬರು ಪಾತ್ರಧಾರಿಗಳ ಮೂಲಕ ಒಂದು ಗಂಟೆಯಲ್ಲಿ ನಾಟಕ ಮುಗಿದು ಹೋದರೂ ಜೀವನದುದ್ದಕ್ಕೂ ಮರೆಯದಂತೆ ಬದುಕಿನ ಪಾಠ ಹೇಳಿಕೊಡುತ್ತದೆ.

ಓಣಿಯಲ್ಲಿ ಪ್ರದರ್ಶನ ನಡೆದಾಗ ನಿಂತು ನೋಡಬಹುದಾದ ಪುಟ್ಟ ನಾಟಕ ಇದು. ಈಗಾಗಲೇ ರಂಗಮಂದಿರದಲ್ಲಿ, ಪುಟ್ಟ ವೇದಿಕೆಯಲ್ಲಿ, ವಠಾರ, ಮನೆಯಂಗಳ ಹೀಗೆ ಸಣ್ಣ ಜಾಗದಲ್ಲಿಯೂ ಹಲವಾರು ಪ್ರಯೋಗಗಳನ್ನು ಕಂಡಿದೆ. ನಾಟಕ ನೋಡುತ್ತಿದ್ದಾಗ ಕಥೆ, ವಿಷಯಗಳು, ಸನ್ನಿವೇಶಗಳು, ಅಲ್ಲಿ ಬರುವ ಪಾತ್ರಗಳು ಕ್ರಮೇಣ ನಾವಾಗಿ ಕಾಣತೊಡಗಿದಂತಾಗುತ್ತವೆ. 'ಈ ನಾಟಕ ಸರಳವಾಗಿ ಓಣಿಯ ಮಧ್ಯದಲ್ಲಿಯೇ ಪ್ರದರ್ಶನವಾಗಬೇಕು' ಎಂದು ನಾಟಕ ರಚನಾಕಾರ ನಿಂಗು ಸೊಲಗಿಯವರ ಹೇಳುತ್ತಾರೆ.

ನಿಜ ಜೀವನದಲ್ಲಿ ದಂಪತಿಯಾಗಿರುವ ಶ್ರೀಕಾಂತ ಮತ್ತು ಅಕ್ಕುಶ್ರೀ ನವಲಗರಿ ರಂಗಾಯಣದ ಕಲಾವಿದರಾಗಿದ್ದು, ನಾಟಕದಲ್ಲೂ ದಂಪತಿಯಾಗಿ ಮನೋಜ್ಞವಾಗಿ ಅಭಿನಯಿಸಿದ್ದಾರೆ. ಒಂದು ಗಂಟೆ ಈ ಇಬ್ಬರೇ ರಂಗದ ಮೇಲೆ ಅಭಿನಯಿಸುತ್ತಿದ್ದರೂ ನೋಡುಗರಿಗೆ ಎಲ್ಲಿಯೂ ಬೇಸರ ಸುಳಿಯುವುದಿಲ್ಲ. ನಾಟಕದ ಕೊನೆಯಲ್ಲಿ ತನ್ನ ಜೀವಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದ ಮನದನ್ನೆ ತೀರಿಕೊಂಡಾಗ ಆ ಶಿಕ್ಷಕ ಅನುಭವಿಸುವ ನೋವು ಪ್ರೇಕ್ಷಕರ ಕಣ್ಣಲ್ಲಿ ನೀರು ಜಿನುಗುವಂತೆ ಮಾಡುತ್ತದೆ. ಶಿಕ್ಷಕ ತಾನು ಬರೆದ ಕೃತಿ ಸಮರ್ಪಿಸಿ 'ಕುಟುಂಬದ ಕುಡಿಯಾಗಿ ಮೂಡಿ ಬಾ' ಎನ್ನುವುದರೊಂದಿಗೆ ನಾಟಕ ಕೊನೆಗೊಳ್ಳುತ್ತದೆ.

ಈ ನಾಟಕ ಉಚಿತವಾಗಿ ಪ್ರದರ್ಶನವಾಗುತ್ತದೆ. ಆದರೆ ಗ್ರಾಮೀಣ ಜನರು ವಂತಿಕೆ ಸೇರಿಸಿ ದಂಪತಿ ಕಲಾವಿದರಿಗೆ ತಕ್ಕಮಟ್ಟಿಗೆ ನೆರವು ನೀಡುತ್ತಿರುವುದರಿಂದ ನಾಟಕ ಯಾವುದೇ ಅಡೆತಡೆ ಇಲ್ಲದೆ ಓಡುತ್ತಿದೆ.

ಮೊದಲ ಓದು

ಕೃಷ್ಣಸ್ತುತಿ ಮತ್ತು ಕೃಷ್ಣಪ್ರಜ್ಞೆಯ ಪಸರಿಸುತ್ತ

ಚೈತನ್ಯಪ್ರಭುಗಳ ಹುಟ್ಟು, ಬಾಲ್ಯ, ಸಂಸಾರ, ಸನ್ಯಾಸ ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಈ ಕಾದಂಬರಿಯಲ್ಲಿ ಆತ್ಮಚರಿತ್ರೆಯನ್ನು ಮನೋಜ್ಞವಾಗಿ ನಿರೂಪಿಸಲಾಗಿದೆ. ಪುಟ್ಟ ನಿಮಾಯ್ ಆಗಿ ತೋರುವ ಬಾಲ್ಯಲೀಲೆಗಳು, ಗೌರಾಂಗನಾಗಿ ಆಡುವ ಎಲ್ಲ ತುಂಟತನಗಳೂ ಕೃಷ್ಣನನ್ನು ನೆನಪಿಸುತ್ತಲೇ ಈ ಕೃತಿಯಲ್ಲಿ ಚೈತನ್ಯಪಾದರು ಬದಲಾದ ಬಗೆಯನ್ನು ವಿವರಿಸುತ್ತ ಹೋಗುತ್ತಾರೆ.

ಶತಮಾನದ ಹಿಂದೆ ಕೃಷ್ಣಸ್ತುತಿ ಪ್ರಚಾರಕ್ಕೆ ತಂದ ಕಥನವು ಪುಟ ತಿರುಗಿಸುತ್ತ ಹೋದಂತೆ ಕೃಷ್ಣಪ್ರಜ್ಞೆಯಾಗಿ ಬದಲಾಗುತ್ತದೆ. ನರನು ನಾನು, ನಾರಾಯಣನು ನೀನು, ನೀನಿಟ್ಟಂತೆ ನಾನಿರುವೆ ಎಂಬ ಸಂಪೂರ್ಣ ಸಮರ್ಪಣಾ ಭಾವದ ಕಥನ ಓದುಗರನ್ನು ಸೆಳೆಯುತ್ತ ಹೋಗುತ್ತದೆ. ವಾರಾಣಸಿಯ ಚಿತ್ರಣ, ಜಗನ್ನಾಥ ಪುರಿಯ ದೇಗುಲ, ಹಿಮಾಲಯದಲ್ಲಿ ಅವರ ಪಾದಯಾತ್ರೆ ಇವೆಲ್ಲವೂ ಓದುಗರಿಗೆ ಚಂದದ ಪ್ರವಾಸವನ್ನೇ ಮಾಡಿಸುತ್ತವೆ. ಎಂಥ ಪವಾಡಪುರುಷನೇ ಆಗಿದ್ದರೂ ಅವಮಾನ ಮತ್ತು ಅಪಮಾನಗಳ ಕುಲುಮೆಯಲ್ಲಿ ಬೆಂದಮೇಲೆಯೇ ನಿಷ್ಕವಾಗುವುದು ಎಂಬುದನ್ನು ಇಲ್ಲಿ ಮತ್ತೆ ಮತ್ತೆ ಹೇಳುತ್ತಲೇ ಹೋಗುತ್ತಾರೆ. ಅನ್ಯಧರ್ಮೀಯರ ಅಸಹನೆಯನ್ನೂ, ತನ್ನ ಬಳಗದವರಿಂದಲೇ ಟೀಕೆಗೊಳಗಾಗುವುದನ್ನೂ ಪ್ರೀತಿಯಿಂದಲೇ ಗೆಲ್ಲುತ್ತ, ಕೃಷ್ಣಪ್ರೀತಿ ಮತ್ತು ಕೃಷ್ಣ ಭಕುತಿಯತ್ತ ಜನರನ್ನು ಸೆಳೆದ ಬಗೆ ಲೇಖಕರು ಸರಾಗವಾಗಿ ದಾಟಿಸುತ್ತ ಹೋಗುತ್ತಾರೆ. ಕಾದಂಬರಿ ಆರಂಭವಾಗುವ ಮುನ್ನ ಪ್ರಕಟಿಸಿದ ಚಿತ್ತಾಕರ್ಷಕ ವರ್ಣಚಿತ್ರಗಳೂ ಸಂಗ್ರಹಯೋಗ್ಯವಾಗಿವೆ.



ವಿಶ್ವಂಭರ
(ಶ್ರೀ ಚೈತನ್ಯ ಮಹಾಪ್ರಭುಗಳ ಜೀವನಾಧಾರಿತ ಕಾದಂಬರಿ)
ಲೇಖಕರು: ನಾ. ಮೊಗಸಾಲೆ
ಪ್ರಕಾಶಕರು: ಟಚ್‌ಸ್ಟೋನ್ ಫೌಂಡೇಶನ್, ಬೆಂಗಳೂರು

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಪಳಿಲಜ್ಜೆ

ಪಳಿಲಜ್ಜೆ (ನಾ). ಅಪವಾದದಿಂದುಂಟಾದ ನಾಚಿಕೆ; ನಿಂದೆಯಿಂದಾದ ನಾಚಿಕೆ.

(ಪಳಿ + ಲಜ್ಜೆ)

ವಿಭೀಷಣನು ಮಗಳು ಅನಲೆಗೆ, ಪರಿಮಳ ದ್ರವ್ಯ ತೈಲಗಳನ್ನು ಪೂಸಿ ಮೀಯಿಸಿ ಸೀತೆಯನ್ನು ಅಲಂಕರಿಸು ಎಂದು ತಿಳಿಸುವನು. ರಾವಣನು ಹತನಾದ ನಂತರ ಕನಕಲಂಕಾಲಕ್ಷ್ಮಿ ಅಪವಾದದಿಂದ ಉಂಟಾದ ನಾಚಿಕೆಯನ್ನು ತೊರೆದು ಬಿಂಕದಿಂದ ತಲೆಯೆತ್ತಿ ನಿಲ್ಲುವಂತೆ, ಸೀತೆಯು ನಿಂದೆಯಿಂದಾದ ನಾಚಿಕೆಯಿಂದ ಮುಕ್ತವಾಗಿ ಶೋಭಿಸಲಿ ಎಂದು ವಿಭೀಷಣ ಹೇಳುವನು. ಕವಿಯು ಆ ಅರ್ಥಬಿಂಬಿಸುವಂತೆ 'ಪಳಿಲಜ್ಜೆ' ಪದ ರಚಿಸಿ ಬಳಸಿದ್ದಾರೆ.

**ಜನಕರಾಜನ ಮಗಳೀ ದಶರಥನ ಸೊಸೆಗೆ,
ರಾಮಪತ್ನಿಗೆ, ಪಳಿಲಜ್ಜೆಯಂ ತೊರೆದು ಬಿಂಕದಿಂ
ಕನಕಲಂಕಾಲಕ್ಷ್ಮಿ ತಲೆಯೆತ್ತಿ ನಿಲ್ವಂತೆವೋಲ್,
ತೊಡಿಸುಡಿಸು ಮುಡಿಸು ದಿವ್ಯಾಂಬರಾಭರಣಮಂ
ಪುಣ್ಯ ಪ್ರಸೂನಂಗಳಂ.**

ಪಾಳ್ದಲೆ

ಕುವೆಂಪು ಅವರು ಪ್ರಯೋಗಿಸಿರುವ 'ಪಾಳ್ದಲೆ' ಪದದ ಅರ್ಥ 'ಹಾಳುತಲೆ', ಸ್ವಾತಂತ್ರ್ಯ ಹೀನರಾಗಿ ಪರರ ಆಳ್ವಿಕೆಯಲ್ಲಿ ಅಂಜಿ ಕುಸಿಯುತ್ತ, ಬಾಗಿ ಬದುಕುವವರು ಹೊತ್ತಿರುವ ತಲೆ ವಿವೇಕ ರಹಿತ 'ಪಾಳ್ದಲೆ'. ಅಂತಹ ತಲೆಹೊತ್ತು ಜೀವಿಸುವುದೇಕೆ ಎಂದು ಪ್ರಶ್ನಿಸಿದ್ದಾರೆ.

**'ಭಾರತ ವೀರರಿಗುಚಿತದಿ ಬಾಳಿ!
ಮಣಿದು ಬದುಕುವ ಪಾಳ್ದಲೆಯೇಕೆ?'**

ಕಥೆ

ಎಂ.ವಿ. ಶಶಿಭೂಷಣ ರಾಜು ಅವರ **ಪ್ರೀತಿ ಹಂಬಲಿಸುವ ಬಗೆ**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಚಂದ್ರಕಾಂತ ಪೋಕಳೆ ಅವರ **ಅಜಾತಶತ್ರುವಿಗೆ ವಿದಾಯ!**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಜ್ಗ ಚಕ್ಕು ಕೇಶ್ರಷ್ಟು ಕಥೆಯ — ದೋಣಿ ಇಬ್ಭಾಗ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ವೆಜ್ ಕ್ವಿಜ್

1. ಯಾವ ತರಕಾರಿ ಹೆಸರನ್ನು ಎಡದಿಂದ ಓದಿದರೂ, ಬಲದಿಂದ ಓದಿದರೂ ಅದೇ ಪದವಾಗುತ್ತದೆ?
2. ಯಾವ ತರಕಾರಿಗೆ 'ಲೇಡೀಸ್ ಫಿಂಗರ್' ಎಂದು ಕರೆಯುತ್ತಾರೆ?
3. ಯಾವ ತರಕಾರಿಗೆ 'ಡ್ರಮ್ ಸ್ಟಿಕ್' ಎಂದು ಕರೆಯುತ್ತಾರೆ?
4. ಒಂದು ಸಿಹಿಪದಾರ್ಥದ ಹೆಸರಿನಿಂದ ಯಾವ ತರಕಾರಿ ಹೆಸರನ್ನು ಕರೆಯುತ್ತಾರೆ?
5. ಅಜ್ಜಿ ಮೈಯೆಲ್ಲಾ ಕಜ್ಜಿ– ಈ ಒಗಟಿನ ಉತ್ತರ ಒಂದು ತರಕಾರಿ. ಅದು ಯಾವುದು?

ಜಾಣಪದ ಆಟ

ಇಲ್ಲಿ 'ರಗು' ಅಕ್ಷರಗಳಿಂದ ಕೊನೆಗೊಳ್ಳುವ ಮೂರು ಅಕ್ಷರದ ಹತ್ತು ಪದಗಳನ್ನು ರಚಿಸಿ.

1		ರ	ಗು
2		ರ	ಗು
3		ರ	ಗು
4		ರ	ಗು
5		ರ	ಗು
6		ರ	ಗು
7		ರ	ಗು
8		ರ	ಗು
9		ರ	ಗು
10		ರ	ಗು

ಮೋಜಿನ ENGLISH

'Y'ವಿಧ್ಯಮಯ ಪದಗಳು ಇಲ್ಲಿ ಕೊನೆಯಲ್ಲಿ Yಯಿಂದ ಕೊನೆಗೊಳ್ಳುವ ಹತ್ತು ಪದಗಳನ್ನು ಬರೆಯಿರಿ.

1				Y
2				Y
3				Y
4				Y
5				Y
6				Y
7				Y
8				Y
9				Y
10				Y

ಗಣಿತದಲ್ಲಿ ಗರ್ದಿ ಗಮ್ಮತ್ತು

11ರಿಂದ ಈ ಲೆಕ್ಕ ಹೀಗೂ ಮಾಡಬಹುದು.

ಎರಡಂಕಿಯ ಒಂದು ಸಂಖ್ಯೆಯನ್ನು 11ರಿಂದ ಹೀಗೆ ಗುಣಿಸಬಹುದು.

1. 84 x11 = 84+8=92 ಬರೆದು ಅದಕ್ಕೆ ಬಿಡಿ 4ನ್ನು ಸೇರಿಸಿ, ಜೋಡಿಸಿ. ಅಂದರೆ=924
2. 84 x11 = 84ನ್ನು ಹೀಗೆ ಬರೆದು ಕೂಡಿಸಿ 84 84 — 924
3. 84 x11 = ಇಲ್ಲಿ 84ರ ಎಡಕ್ಕೆ ಬಲಕ್ಕೆ 0 ಸೇರಿಸಿ. ಬಲಗಡೆಯಿಂದ ಎರಡೆರಡು ಅಂಕಿ ಕೂಡಿಸುತ್ತಾ ಹೋಗಿ

0840=0+4=4
4+8=2
8+0+1(ಕೈಲೆ)=9
ಈಗ ಕೆಳಗಿನಿಂದ ಮೇಲೆ =924

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಕಾರು	+	ಗುಣಿ	+	ಕೆ	=	
2	ಹರಿ	+	ಕುರ	+	ಕೆ	=	
3	ನಾವು	+	ಹಾರ	+	ಗ	=	
4	ಮಂತ್ರಿ	+	ಗಾತ್ರ	+	ಯ	=	
5	ಮರು	+	ಏಡಿ	+	ಹ	=	

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ತಿರುಳು-ಉರುಳು 2.ಬಳಗ-ಕೊಳಗ 3.ತೋರಣ-ಕಾರಣ 4.ಭೈರವಿ-ಗಿರವಿ 5.ಒಲುಮೆ-ಚೆಲುಮೆ 6.ಜವಾರಿ-ಸವಾರಿ

ಮ್ಯಾಚಿಕ್:



ಪದಶೋಧ: ಕೋನೇರುಹಂಪಿ

ಜಾಣಪದ ಆಟ: ಸಾಲಾವಳಿ, ಖಾನಾವಳಿ, ಕರಾವಳಿ, ಚಿತ್ರಾವಳಿ, ದ್ರಶ್ಯಾವಳಿ, ದೀಪಾವಳಿ, ಪ್ರಭಾವಳಿ, ವಂಶಾವಳಿ, ಅರ್ಕಾವಳಿ, ಚಳವಳಿ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ: majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಪ್ರತೀಕ ಆರ್.ಕೊರಿಕೊಪ್ಪ
ಬೆಳಗಾವಿ

ದೀಪಿಕಾ ಆರ್.ಎಂ.
ಬೆಂಗಳೂರು

ಪ್ರತೀಕ್ಷಾ ಕಿಶನರಾವ್ ಕುಲಕರ್ಣಿ, ಕೊಪ್ಪಳ

ಸಮನ್ವಿ ಜಿ.ಆರ್.
ಬೆಂಗಳೂರು

ಸಂಸ್ಕೃತಿ ಎಂ.ಎಸ್.
ಮೈಸೂರು

ಶ್ರೇಯಾ ಗೌಡರ
ಹನುಮಸಾಗರ

ಮಾಯ್ಕಾರ ಸೃಷ್ಟಿಸಿದ ಡಿಸ್ನಿಲ್ಯಾಂಡ್

ವಾಲ್ಟ್ ಡಿಸ್ನಿಯ ಕಲ್ಪನಾಲೋಕದಲ್ಲಿ ಸೃಷ್ಟಿಯಾದ ಕಾರ್ಟೂನ್‌ಗಳು ಭಾರೀ ಫೇಮಸ್ಸು. ಮಕ್ಕಳು ಡೊನಾಲ್ಡ್ ಡಕ್, ಮಿಕ್ಕಿ ಮೌಸ್ ಗುಂಗಿನಿಂದ ಹೊರಬರುವುದೇ ಕಷ್ಟ. ಇಂಥ ಜಾದೂಗಾರ ಕಟ್ಟಿದ ಡಿಸ್ನಿಲ್ಯಾಂಡ್ ಮತ್ತೊಂದು ಮಾಯಾಲೋಕ.

ಪ್ಯಾರಿಸ್‌ನಲ್ಲಿರುವ ಡಿಸ್ನಿಲ್ಯಾಂಡ್ ಪಾರ್ಕ್ ಎದುರು ಪ್ರವಾಸಿಗರ ದಂಡು

ವಿ.ಶ್ರೀನಿವಾಸ

'ಮಿಕ್ಕಿ ಮೌಸ್', 'ಡೊನಾಲ್ಡ್ ಡಕ್'ಗಳು ಭಾರತಕ್ಕೆ ಟಿ.ವಿ ಕಾಲಿಟ್ಟ ದಿನಗಳಿಂದಲೂ ಚಿಕ್ಕ ಮಕ್ಕಳಾದಿಯಾಗಿ ಎಲ್ಲ ವಯಸ್ಸಿನವರನ್ನೂ ಆಕರ್ಷಿಸುತ್ತಿದ್ದ ಕಾರ್ಟೂನುಗಳು. ಈ ಮಿಕ್ಕಿ ಮೌಸ್, ಡೊನಾಲ್ಡ್ ಡಕ್ ಮುಂತಾದ ಕಾರ್ಟೂನುಗಳು ಚಿರಂಜೀವಿಗಳೆಂದು ಅನಿಸುತ್ತದೆ! ಇವುಗಳ ಸೃಷ್ಟಿಕರ್ತ 'ವಾಲ್ಟ್ ಡಿಸ್ನಿ' ಎಂದೇ ಪ್ರಖ್ಯಾತರಾದ 'ವಾಲ್ಟರ್ ಎಲಿಯಾಸ್ ಡಿಸ್ನಿ'. ಅವರು ಚಿತ್ರ ಕಲಾವಿದರಾಗಿ ವೃತ್ತಿ ಆರಂಭಿಸಿದರು. ಆದರೆ ಅವರು ಒಬ್ಬ ಅಪರೂಪದ ಕನಸುಗಾರ ಮಾತ್ರವಲ್ಲ, ಸಾಮಾನ್ಯರಿಗೆ ಕಲ್ಪನಾತೀತವಾದ ಲೋಕವನ್ನು ಸೃಷ್ಟಿಸಿ, ನಮ್ಮನ್ನೂ ಅವರ ಕನಸಿನ ಲೋಕದಲ್ಲಿ ಆನಂದೋಲ್ಲಾಸದಿಂದ ವಿಹರಿಸುವಂತೆ ಮಾಡಿರುವ ಜಾದೂಗಾರ.

ಯೂರೋಪ್ ಪ್ರವಾಸದಲ್ಲಿ ಫ್ರಾನ್ಸ್ ದೇಶದ ಪ್ಯಾರಿಸ್‌ನ ಡಿಸ್ನಿಲ್ಯಾಂಡ್‌ಗೆ ನಾವು ಕೆಲವರು ಭೇಟಿ ಕೊಟ್ಟಿದ್ದೆವು. ನಾವೀಗ ಮನೋಲ್ಲಾಸಕರವಾದ ಕಾರ್ಟೂನುಗಳನ್ನು ಬಿಟ್ಟು ಭಯಂಕರ ಧಾರಾವಾಹಿಗಳನ್ನು ನೋಡುತ್ತಿರುವುದರಿಂದ, 'ಅಯ್ಯೋ ಸಣ್ಣ ಮಕ್ಕಳಿಗೆ ಏನೋ ಒಂದಿಷ್ಟು ಕಾರ್ಟೂನುಗಳಿರುತ್ತವೆ. ನಮ್ಮಂಥ ವಯಸ್ಸಾದವರಿಗೆ ಒಂದು ದಿನ ಪೂರ್ತಿ ನೋಡಲು ಅಲ್ಲಿ ಏನಿರುತ್ತೆ' ಎಂದು ಸ್ವಲ್ಪ ಉಪೇಕ್ಷೆಯಿಂದಲೇ ಹೊರಟೆವು. ಡಿಸ್ನಿಲ್ಯಾಂಡ್‌ನ ಪ್ರವೇಶ ದ್ವಾರದಲ್ಲಿ ನೂರಾರು ಕಾರುಗಳು ಸಾಲುಗಟ್ಟಿ ಕಾಯುತ್ತಿದ್ದುದನ್ನು ಕಂಡು 'ಓಹೋ, ಇಷ್ಟೊಂದು ಜನ ಬರುತ್ತಿದ್ದಾರೆ ಅಂದ್ರೆ ನೋಡಕ್ಕೆ ಪರವಾಗಿಲ್ಲ ಅನ್ಸುತ್ತೆ' ಎಂಬ ಭಾವನೆ ಮೂಡಿತು.

ವಯಸ್ಸು ಮರೆತು ಹೋಯಿತು!

ಒಳಗೆ ಕಾಲಿಟ್ಟಿದ್ದೇ ತಡ ನಮ್ಮ ವಯಸ್ಸು ಮರೆತು ಹೋಯಿತು. ಬಾಲ್ಯದ ಉತ್ಸಾಹ ಮರುಕಳಿಸಿತು. ಅದೊಂದು ಬೆರಗಿನ ಲೋಕ. ನಮಗೆ ಕೊಟ್ಟಿರುವ ಸಮಯದಲ್ಲಿ ಎಲ್ಲವನ್ನೂ ನೋಡಲು ಸಾಧ್ಯವಿಲ್ಲ ಅನಿಸಿತು. ಹೆಚ್ಚಿನ ಕಡೆ ಸರತಿ ಸಾಲಿನಲ್ಲಿ ಕಾಯಬೇಕು. ಸರಿ, ಇನ್ನು ಸಮಯ ವ್ಯರ್ಥ ಮಾಡುವುದು ಬೇಡ, ಇರುವ ಸಮಯದಲ್ಲಿ ಆದಷ್ಟನ್ನು ನೋಡಿಬಿಡಬೇಕೆಂದು ಎಂದು ನಿರ್ಧರಿಸಿದೆವು. ಎಲ್ಲವೂ ಕಣ್ಮನ ಸೆಳೆಯುವ ಆಕರ್ಷಣೆಗಳೇ. ಅಲ್ಲಲ್ಲಿ ಫೋಟೊ ತೆಗೆದುಕೊಳ್ಳುತ್ತಾ ಸಾಗಿದೆವು. ಡಿಸ್ನಿ ಕಾರ್ಟೂನ್, ಅನಿಮೇಷನ್ ಚಿತ್ರಗಳ ವೇಷತೊಟ್ಟ ಕಲಾವಿದರು ಒಂದು ಅತ್ಯಾಕರ್ಷಕ ವಾಹನದಲ್ಲಿ ಮೆರವಣಿಗೆ ಬಂದರು. ಅದನ್ನು ಕಣ್ತುಂಬಿಕೊಂಡು ಅದರ ಚಿತ್ರಗಳನ್ನು ಮೊಬೈಲಿಗೆ ತುಂಬಿಸಿಕೊಂಡು ಹೊರಟೆವು. ಸರತಿಸಾಲಿನಲ್ಲಿ ನಿಂತು ಡಿಸ್ನಿ ಟ್ರೈನ್ ಹತ್ತಿ ಡಿಸ್ನಿಲ್ಯಾಂಡ್‌ನ ಒಂದು ಸುತ್ತು ಹೊಡೆದೆವು. ಅಲ್ಲಿ ಇನ್ನೂ ಏನೇನು ನೋಡಲಿಕ್ಕಿದೆ ಎಂದು ಒಂದು ಅಂದಾಜು ಸಿಕ್ಕಿತು. ಆದರೆ ಟ್ರೈನ್ ಇಳಿದ ನಂತರ ಯಾವುದನ್ನು ನೋಡಲು ಎಲ್ಲಿಗೆ ಹೋಗಬೇಕು ಎಂದು ತಿಳಿಯದಾಯಿತು.

ಅಲ್ಲಲ್ಲೇ ಹಲವು ಕಡೆಗಳಲ್ಲಿ ಡಿಸ್ನಿ ಚಿತ್ರಗಳ ಪಾತ್ರಗಳು ಜೀವಪಡೆದಂತೆ ಓಡಾಡುತ್ತ ಮಕ್ಕಳಾದಿಯಾಗಿ ಎಲ್ಲರನ್ನೂ ರಂಜಿಸುತ್ತಿದ್ದವು. ಮಕ್ಕಳು ಸರತಿ ಸಾಲಿನಲ್ಲಿ ನಿಂತು ತಮ್ಮ ನೆಚ್ಚಿನ ಕಾರ್ಟೂನ್ ಪಾತ್ರಗಳ ಜೊತೆ ಫೋಟೊ ತೆಗೆಸಿಕೊಳ್ಳುತ್ತ, ಆಟೋಗ್ರಾಫ್ ಹಾಕಿಸಿಕೊಳ್ಳುತ್ತ ಸಂಭ್ರಮ ಪಡುತ್ತಿದ್ದರು. ಮಕ್ಕಳ ಸಂಭ್ರಮ ತಂದೆ ತಾಯಿಗಳಿಗೂ ವರ್ಗವಾಗುತ್ತಿತ್ತು. 'ಪೈರೇಟ್ಸ್ ಆಫ್ ಕೆರಿಬಿಯನ್' ಚಲನಚಿತ್ರ ಸರಣಿಯ ಹಡಗು, ಗುಹೆ ಮತ್ತಿತರ ಸೆಟ್‌ಗಳು ಸಿನಿಮಾದ ಒಳಗೆ ಸಂಚರಿಸಿದ ಅನುಭವ ನೀಡಿದವು. ಅಷ್ಟರಲ್ಲಿ ಹೊಟ್ಟೆ ಚುರುಗುಟ್ಟಲಾರಂಭಿಸಿದ್ದರಿಂದ ಹೋಟೆಲ್ ಹುಡುಕಿಕೊಂಡು ಹೊರಟೆವು. ಕ್ಯೂ ನಿಂತು ಪಡೆದ ಊಟ ಏನು ಗೊತ್ತೇ? ಅಲ್ಲಿಯೂ ಮಿಕ್ಕಿ ಮೌಸ್ ಆಕಾರದ ಪಿಜ್ಜಾ!

ವಾಲ್ಟ್ ಡಿಸ್ನಿ 1901ರಲ್ಲಿ ಅಮೆರಿಕದ ಶಿಕಾಗೊದಲ್ಲಿ ಹುಟ್ಟಿದರು. 18ನೇ ವಯಸ್ಸಿನಲ್ಲಿಯೇ ಕ್ಯಾಲಿಫೋರ್ನಿಯಾಗೆ ತೆರಳಿ ಚಿತ್ರಕಾರನಾಗಿ ವೃತ್ತಿ ಪ್ರಾರಂಭಿಸಿದರು. 1920ರಲ್ಲಿ ಸೋದರನ ಜೊತೆಗೂಡಿ 'ಡಿಸ್ನಿ ಬ್ರದರ್ಸ್ ಸ್ಟುಡಿಯೊ' ಪ್ರಾರಂಭಿಸಿದರು. 1928ರಲ್ಲಿ ಇವರು ಸೃಷ್ಟಿಸಿದ 'ಮಿಕ್ಕಿ ಮೌಸ್' ಅವರ ಭವಿಷ್ಯವನ್ನೇ ಬದಲಿಸಿತು. ಕನಸುಗಾರ, ಜಾದೂಗಾರ ಡಿಸ್ನಿ ಮಿಕ್ಕಿ ಮೌಸ್ ಬರೀ ಕಾರ್ಟೂನ್ ಚಿತ್ರವಾಗಿರಲು ಬಿಡಲಿಲ್ಲ. ಅದಕ್ಕೆ ಚಲನೆ ಕೊಟ್ಟು, ಅದಕ್ಕೆ ತಾನೇ ಧ್ವನಿಯಾದರು. ಹೀಗೆ 'ಅನಿಮೇಶನ್' ಉದ್ಯಮದ ಅಧಿಪತಿಯಾದರು. ನಂತರ ಚಲನಚಿತ್ರಗಳ ಉದ್ಯಮಕ್ಕೂ ಪ್ರವೇಶಿಸಿ ಅತಿ ಹೆಚ್ಚು ಅಕಾಡೆಮಿ ಅವಾರ್ಡ್, ಎರಡು ಬಾರಿ ಗೋಲ್ಡನ್ ಗ್ಲೋಬ್ ಅವಾರ್ಡ್, ಎಮ್ಮಿ ಅವಾರ್ಡ್, ಅನೇಕ ಬಾರಿ ಅತ್ಯುತ್ತಮ ಚಲನಚಿತ್ರಗಳನ್ನು ನಿರ್ಮಿಸಿದ ಪ್ರಶಸ್ತಿಗಳು ಅವರ ಖಾತೆ ಸೇರಿವೆ.

ಊಟದ ನಂತರ 'ಒಗಟಿನ ದಾರಿ'ಯಲ್ಲಿ ಆತುರಾತುರವಾಗಿ ನಡೆದು ರಾಜಕುಮಾರಿಯ ಅರಮನೆಯ ಗೋಪುರದ ಮೇಲೇರಿ ಖುಷಿಪಟ್ಟೆವು. ಅರೇಬಿಯಾದ ಅಲ್ಲಾವುದ್ದೀನ್ ಅದ್ಭುತ ದೀಪದ ಕಥೆ ನೋಡಿದೆವು. ಹೀಗೆ ಆದಷ್ಟು ಹೆಚ್ಚು ನೋಡಿಬಿಡಬೇಕೆಂಬ ಧಾವಂತದಲ್ಲಿ ನಮ್ಮ ವಯಸ್ಸನ್ನೂ ಮರೆತು ಅಡ್ಡಾದಿಡ್ಡಿಯಾಗಿ ವೇಗವಾಗಿ ಚಲಿಸುವ, ರಭಸದಿಂದ ತಲೆಕೆಳಗಾಗುವಂತೆ ಸುತ್ತುಹೊಡೆಯುವ 'ರೋಲರ್ ಕೋಸ್ಟರ್'ನಲ್ಲಿ ಕುಳಿತುಕೊಳ್ಳುವ ದುಸ್ಸಾಹಸವನ್ನೂ ಮಾಡಿಬಿಟ್ಟೆವು. ವಯಸ್ಸಾದವರು, ಕಾಯಿಲೆಗಳು, ಭಯ, ಆತಂಕ ಇರುವವರು ಇಂಥ ರೈಡ್‌ಗಳಲ್ಲಿ ಹೋಗುವುದು ಒಳ್ಳೆಯದಲ್ಲ. ಎಲ್ಲ ಕಡೆಯೂ ಸರತಿ ಸಾಲುಗಳು ಹೆಚ್ಚುತ್ತಿದ್ದವು. ಸರತಿ ಸಾಲು ಹೆಚ್ಚಾಗಿದ್ದಷ್ಟೂ ಅದರ ಆಕರ್ಷಣೆಯೂ ಹೆಚ್ಚು ಎಂದು ಅನುಭವದಿಂದ ಕಲಿತಿದ್ದೆವು.

ಹಾಗೆಯೇ ಹೆಚ್ಚು ಹೊತ್ತು ಸರತಿಯಲ್ಲಿ ಕಾದು ನೋಡಿದ 'ಅದೊಂದು ಪುಟ್ಟ ಪ್ರಪಂಚ' ('It is a small world') ನಮ್ಮ ನಿರೀಕ್ಷೆಯನ್ನು ಸುಳ್ಳು ಮಾಡಲಿಲ್ಲ. ಅಲ್ಲಿ ನಾವು ದೋಣಿಯಲ್ಲಿ ತೇಲುತ್ತಾ ಪ್ರಪಂಚದ ಎಲ್ಲ ಖಂಡಗಳ ಸಾಂಸ್ಕೃತಿಕ ಜಗತ್ತನ್ನು ಅನಾವರಣಗೊಳಿಸುವ ಚಲಿಸುವ ಗೊಂಬೆಗಳ ಲೋಕದಲ್ಲಿ ಪಯಣಿಸಿದೆವು. ಆ ಅನುಭವವನ್ನು ಪದಗಳಲ್ಲಿ ಕಟ್ಟಿಕೊಡಲು ಸಾಧ್ಯವಿಲ್ಲ. ಆದರೆ ಎಷ್ಟೊಂದು ಗೊಂಬೆಗಳು, ಎಷ್ಟೊಂದು ಅಲಂಕಾರ...ನೋಡಲು ಎರಡು ಕಣ್ಣುಗಳು ಸಾಲದು. ಏಕೆಂದರೆ ಆ ಪುಟ್ಟ ಪಯಣದಲ್ಲಿ 300ಕ್ಕೂ ಹೆಚ್ಚು ಗೊಂಬೆಗಳಿವೆ. ಒಂದಕ್ಕಿಂತ ಒಂದು ಮುದ್ದಾಗಿವೆ, ಜೊತೆಗೆ ಚಲನೆಯೂ ಕೂಡ.

ಪ್ಯಾರಿಸ್‌ನ ಈ ಡಿಸ್ನಿಲ್ಯಾಂಡ್ 1992ರಲ್ಲಿ ಪ್ರಾರಂಭವಾಗಿ ಈಗ 30ನೇ ವರ್ಷಾಚರಣೆ ನಡೆಯುತ್ತಿದೆ. ಪ್ರಾರಂಭದಲ್ಲಿ ಫ್ರಾನ್ಸ್‌ನಲ್ಲಿ ವಿರೋಧ ಎದುರಿಸಬೇಕಾಯಿತು. ಇದು ಫ್ರಾನ್ಸ್ ಸಂಸ್ಕೃತಿಯ ಮೇಲೆ ಅಮೆರಿಕದ ಸಾಮ್ರಾಜ್ಯಶಾಹಿಯ ದಾಳಿ ಎಂದು ಪ್ರತಿಭಟನೆಗಳು ನಡೆದವು. ನಂತರ ನೌಕರರು ಅಮೆರಿಕ ಮಾದರಿಯ ಸಮವಸ್ತ್ರಗಳು ತಮ್ಮ ಖಾಸಗಿತನದ ಮೇಲೆ ಹೇರಿಕೆ ಎನ್ನುವ ಪ್ರತಿರೋಧ ತೋರಿಸಿದರು. ಕೆಲವು ವರ್ಷಗಳು ಆರ್ಥಿಕ ನಷ್ಟವನ್ನು ಅನುಭವಿಸಿತು. ನಂತರ ಡಿಸ್ನಿಯವರ ನೇರ ಆಡಳಿತದಿಂದ ಪ್ಯಾರಿಸ್‌ನ ಈ ಡಿಸ್ನಿಲ್ಯಾಂಡ್ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಈ 30 ವರ್ಷಗಳಲ್ಲಿ 32 ಕೋಟಿಗೂ ಹೆಚ್ಚು ಪ್ರವಾಸಿಗರು ಭೇಟಿ ನೀಡಿ ಯೂರೋಪಿನಲ್ಲಿ ಅತ್ಯಧಿಕ ಜನರು ವೀಕ್ಷಿಸಿರುವ ಥೀಮ್ ಪಾರ್ಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಇಷ್ಟು ನೋಡುವಷ್ಟರಲ್ಲಿ ನಾವು ಹೊರಡುವ ಸಮಯವಾಯಿತು. 'ಛೇ, ಇಷ್ಟು ಬೇಗ ಒಂದು ದಿನ ಕಳೆದು ಹೋಯಿತೇ? ನಾವು ಬೆಳಗ್ಗೆ ಇನ್ನಷ್ಟು ಬೇಗ ಬರಬೇಕಾಗಿತ್ತು, ಇನ್ನಷ್ಟು ನೋಡಬಹುದಾಗಿತ್ತು, ಆಟ ಆಡಬಹುದಾಗಿತ್ತು' ಎಂದು ನೋಡಿದ ಸಂತೋಷಕ್ಕಿಂತ ನೋಡದೇ ಉಳಿದಿದ್ದರ ಬಗ್ಗೆ ವಿಷಾದದಿಂದಲೇ ಡಿಸ್ನಿಲ್ಯಾಂಡ್‌ಗೆ ವಿದಾಯ ಹೇಳಿದೆವು.

ನಿಜಕ್ಕೂ ವಾಲ್ಟ್ ಡಿಸ್ನಿ ಒರ್ವ ಮಹಾನ್ ಕನಸುಗಾರ, ಜಾದೂಗಾರನೇ ಸರಿ. ಸಿಂಗಪುರದ ಡಿಸ್ನಿಲ್ಯಾಂಡ್ ಉದ್ಘಾಟನೆ ಸಂದರ್ಭದಲ್ಲಿ ಅಲ್ಲಿಯ ಮುಖ್ಯಸ್ಥ 'ಇದನ್ನು ನೋಡಲು ಡಿಸ್ನಿ ಇರಬೇಕಿತ್ತು' ಎಂದರಂತೆ. ಅದಕ್ಕೆ ಡಿಸ್ನಿಯವರ ಪತ್ನಿ 'ಆತ ಇದನ್ನೆಲ್ಲ ಆಗಲೇ ನೋಡಿದ್ದಾನೆ' ಎಂದರಂತೆ. ಹೌದಲ್ಲವೇ ಅನಿಸಿತು.

ADVERTORIAL

ಹೆಸರಿನಲ್ಲಿ ಏನಿದೆ?

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ಸದಾ ನಳನಳಿಸುವ ಹಸುರಿನಿಂದ ಕಂಗೊಳಿಸುವ ದೇಶದ ಹೆಸರು ಐಸ್‌ಲ್ಯಾಂಡ್. ಹಾಗೆಯೇ, 1.7 ಲಕ್ಷ ಚದರ ಕಿ.ಮೀ. ಹಿಮ ಹರಡಿಕೊಂಡಿರುವ ಪ್ರಪಂಚದ ಎರಡನೇ ಅತಿ ದೊಡ್ಡ ಹಿಮಾವೃತ ದೇಶದ ಹೆಸರು ಗ್ರೀನ್‌ಲ್ಯಾಂಡ್. ಈ ದೇಶಗಳ ಹೆಸರಿನಲ್ಲಿ ಇದೇಕೆ ಇಂತಹ ವೈರುದ್ಧ್ಯ ಎಂದು ನೀವು ಯಾವಾಗಲಾದರೂ ಯೋಚಿಸಿದ್ದೀರಾ? ನನಗಂತೂ, ಮೊದಲಿಗೆ ಈ ದೇಶಗಳಿಗೆ ಈ ಹೆಸರುಗಳು ಏಕೆ ಬಂದವು ಎಂಬುದು ಅಚ್ಚರಿಯ ಪ್ರಶ್ನೆಯಾಗಿ ಕಾಡತೊಡಗಿತು. ಅಂದಂತೆ, ಈ ಎರಡೂ ದೇಶಗಳನ್ನು ನಾಸಿಯನ್ನರು, ಅಂದರೆ, ಉತ್ತರ ಸ್ಕ್ಯಾಂಡಿನೇವಿಯನ್ನರು ಸ್ಥಾಪಿಸಿದರು. ಉತ್ತರ ಅಟ್ಲಾಂಟಿಕ್ ಸಾಗರದಾದ್ಯಂತ ಯಾನ ನಡೆಸಿದ ನಾಸಿಯನ್ನರು 9ನೇ ಶತಮಾನದಲ್ಲಿ ಐಸ್‌ಲ್ಯಾಂಡ್‌ನಲ್ಲಿ ಜನವಸತಿ ಪ್ರದೇಶಗಳನ್ನು ಸ್ಥಾಪಿಸಿದರೆ, 10ನೇ ಶತಮಾನದಲ್ಲಿ ಗ್ರೀನ್‌ಲ್ಯಾಂಡ್‌ನಲ್ಲಿ ಜನವಸತಿಗಳನ್ನು ಸ್ಥಾಪಿಸಿದರು.

ಬಹುತೇಕ ಹಿಮಾಚ್ಛಾದಿತ, ಮಂಜು ಮುಸುಕಿದ ಹಾಗೂ ಹಿಮಗಲ್ಲುಗಳಿಂದ ಕೂಡಿದ ಆರ್ಕ್ಟಿಕ್ ದೇಶವಾದ ಗ್ರೀನ್‌ಲ್ಯಾಂಡ್‌ನಲ್ಲಿ ಹೆಚ್ಚುಕಡಿಮೆ ಕಣ್ಣುಹಾಯಿಸಿದಲ್ಲೆಲ್ಲಾ ಬಿಳಿ ಬಣ್ಣದಿಂದ ಕೂಡಿದ ನೋಟವೇ ಕಾಣುತ್ತದೆ. ವಾಸ್ತವದಲ್ಲಿ ಹಸಿರು ಇಲ್ಲದಿರುವ ಈ ದೇಶಕ್ಕೆ 'ಗ್ರೀನ್‌ಲ್ಯಾಂಡ್' ಎಂಬ ಹೆಸರು ಹೇಗೆ ಬಂತು? ಎರಿಕ್ ದಿ ರೆಡ್ ಎಂಬಾತನಿಂದ ಈ ದೇಶಕ್ಕೆ ಈ ಹೆಸರು ಬಂದಿತು. ಕೊಲೆ ಮಾಡಿ ವಲಸೆ ಬಂದಿದ್ದ ಈತ, ಜನರನ್ನು ಆ ದ್ವೀಪದಲ್ಲಿ ನೆಲಸಲು ಆಕರ್ಷಿಸುವ ಉದ್ದೇಶದಿಂದ ಅದನ್ನು 'ಗ್ರೀನ್ ಲ್ಯಾಂಡ್' ಎಂದು ಕರೆದ. ಬೇಸಿಗೆಯ ಅಲ್ಪಾವಧಿಗೆ ಮಾತ್ರ ಇಲ್ಲಿ ಹಸಿರು ಕಾಣವುದನ್ನು ಬಿಟ್ಟರೆ ಉಳಿದಂತೆ ವರ್ಷಪೂರ್ತಿ ಹಿಮ ಹಾಗೂ ಮಂಜಿನದ್ದೇ ಆಧಿಪತ್ಯ. ಹೀಗಾಗಿ, ಇದರ ಹೆಸರು ಗ್ರೀನ್‌ಲ್ಯಾಂಡ್ ಎಂದಿದ್ದರೂ ಇದು ಹಸುರಿನಿಂದ ಕೂಡಿದ ದೇಶವಲ್ಲ. ಜನರನ್ನು ಇಲ್ಲಿ ನೆಲಸುವಂತೆ ಸೆಳೆಯಲು ಶತಮಾನಗಳ ಹಿಂದೆಯೇ ಮಾರ್ಕೆಟಿಂಗ್ ತಂತ್ರಗಾರಿಕೆಯ ಭಾಗವಾಗಿ ಹಾಗೆ ಕರೆಸಿಕೊಂಡ ದೇಶ ಇದು.

ಕುತೂಹಲಕರ ಸಂಗತಿಯೆಂದರೆ, ಐಸ್‌ಲ್ಯಾಂಡ್ ದೇಶದ ಹೆಸರು ಇದಕ್ಕೆ ತದ್ವಿರುದ್ಧವಾಗಿದೆ. ಸಾಗಸ್ ಎಂದು ಕರೆಯಲಾಗುವ ಐಸ್‌ಲ್ಯಾಂಡ್‌ನ ಐತಿಹಾಸಿಕ ಕಥಾನಕಗಳ ಪ್ರಕಾರ, ಈ ದ್ವೀಪಕ್ಕೆ 9ನೇ ಶತಮಾನದಲ್ಲಿ ಯಾನ ನಡೆಸಿದ ನಾಸ್ ಅನ್ವೇಷಕ ಹ್ರಫ್ನಾ–ಫ್ಲಾಕಿ ವಿಲ್ಜೆರಾಸನ್ ಈ ದೇಶಕ್ಕೆ ನಾಮಕರಣ ಮಾಡಿದ. ಐಸ್‌ಲ್ಯಾಂಡ್‌ಗೆ ತೆರಳುವ ಮಾರ್ಗಮಧ್ಯೆ ಆತನ ಮಗಳು ನೀರಿನಲ್ಲಿ ಮುಳುಗಿದಳು; ಜಾನುವಾರುಗಳು ಕೂಡ ಉಪವಾಸ ಬಿದ್ದು ಸಾವಿಗೀಡಾದವು. ವಿಷಣ್ಣನಾದ ಫ್ಲಾಕಿಯು ಪರ್ವತವೊಂದನ್ನು ಏರಿ ದೃಷ್ಟಿ ಹಾಯಿಸಿದಾಗ ಹಿಮಗುಡ್ಡಗಳಿಂದ ಕೂಡಿದ ಸಾಗರದ ಚಾಚು ಭಾಗ ಕಾಣಿಸಿತು. ಆದ್ದರಿಂದ ಆತ ಆ ಪ್ರದೇಶವನ್ನು 'ಐಸ್‌ಲ್ಯಾಂಡ್' ಎಂದು ಕರೆದ. ಅದೇನೇ ಇದ್ದರೂ, ಇತರರು ಅಲ್ಲಿ ಬಂದು ನೆಲೆಯೂರಿ ಸಂಪನ್ಮೂಲಗಳಿಗಾಗಿ ಪೈಪೋಟಿ ನಡೆಸುವುದನ್ನು ತಪ್ಪಿಸಲು ಪ್ರಜ್ಞಾಪೂರ್ವಕವಾಗಿಯೇ ಹೀಗೆ ಕರೆದಿರಬಹುದು ಎಂದು ಅಭಿಪ್ರಾಯಪಡುವವರು ಕೂಡ ಇದ್ದಾರೆ. ಈ ಎರಡನೇ ತರ್ಕವು ಆಸಕ್ತಿದಾಯಕವಾಗಿದ್ದರೂ, ಪ್ರಸ್ತುತ ಮಿಥ್ಯ ಎಂದು ಪರಿಗಣಿತವಾಗಿದೆ ಎಂಬುದು ಬೇರೆ ಮಾತು.

ಗ್ರೀನ್‌ಲ್ಯಾಂಡ್ ದೇಶವು ವಿಸ್ತೀರ್ಣದಲ್ಲಿ ಪ್ರಪಂಚದ ಅತ್ಯಂತ ದೊಡ್ಡ ದ್ವೀಪವಾಗಿದೆ. ಇದೊಂದು ಸ್ವಾಯತ್ತ ದೇಶ ಕೂಡ. ಡೆನ್ಮಾರ್ಕ್ ದೇಶದಷ್ಟೇ ಭೂಪ್ರದೇಶದಿಂದ ಕೂಡಿದೆ. ಇದು ಅತ್ಯಂತ ದುರ್ಗಮವೆನ್ನಿಸುವಂತಹ ಭೂಪ್ರದೇಶವಾಗಿದ್ದರೂ 4,500ಕ್ಕೂ ಹೆಚ್ಚು ವರ್ಷಗಳಿಂದ ಇಲ್ಲಿ ಮನುಷ್ಯರು ನೆಲಸಿದ್ದಾರೆ ಎನ್ನಲಾಗಿದೆ. ಇಲ್ಲಿ ಜನವಸತಿಯ ಹಲವಾರು ನೆಲೆಗಳಿವೆ. ಶತಮಾನಗಳಿಂದಲೂ ಗ್ರೀನ್‌ಲ್ಯಾಂಡ್ ಪ್ರದೇಶವು ಇನ್ಯೂಯಿಟ್ ಮೂಲನಿವಾಸಿಗಳ ನೆಲೆಯಾಗಿದೆ. ಇಲ್ಲಿ ಜನವಸತಿ ನೆಲೆಗಳನ್ನು ಪರಸ್ಪರ ಸಂಪರ್ಕಿಸುವಂತಹ ರಸ್ತೆಗಳು ನಿರ್ಮಾಣಗೊಂಡಿಲ್ಲ. ಹೀಗಾಗಿ, ಇಲ್ಲಿ ಪ್ರಯಾಣಕ್ಕೆ ವಿಮಾನಯಾನವನ್ನು ಅಥವಾ ದೋಣಿಗಳನ್ನೇ ನೆಚ್ಚಿಕೊಳ್ಳುವುದು ಅನಿವಾರ್ಯ. ಗ್ರೀನ್‌ಲ್ಯಾಂಡ್‌ಗೆ ಕ್ರೂಸ್‌ನಲ್ಲಿ ಪ್ರಯಾಣಿಸುವುದೇ ಅತ್ಯುತ್ತಮ.

ಈ ದೇಶಗಳಿಗೆ ನಿಜವಾಗಿಯೂ ವಿರೋಧಾಭಾಸದ ಈ ಹೆಸರುಗಳು ಹೇಗೆ ಬಂದವೆಂಬುದು ನನಗೆ ಆಶ್ಚರ್ಯ ಮೂಡಿಸುತ್ತದೆ. ಅಷ್ಟಕ್ಕೂ, ನಮ್ಮ ದೇಶಕ್ಕೆ ಈಗಿರುವ ಹೆಸರು ಹೇಗೆ ಬಂತು? ಇಂಗ್ಲೆಂಡ್, ಸ್ವಿಟ್ಜರ್‌ಲೆಂಡ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಹೆಸರುಗಳ ಹಿನ್ನೆಲೆ ಏನು? ಇದನ್ನೆಲ್ಲಾ ಕೆದಕಿದಾಗ, ದೇಶಗಳ ಹೆಸರಿನ ಹಿಂದೆ ಚಾರಿತ್ರಿಕ, ಸಾಂಸ್ಕೃತಿಕ, ಭೌಗೋಳಿಕ ಹಾಗೂ ರಾಜಕೀಯ ಸಂಗತಿಗಳ ಪ್ರಭಾವಗಳಿರುತ್ತವೆ ಎಂಬುದು ಮನವರಿಕೆಯಾಗುತ್ತದೆ.

ಪೂರ್ವದಿಂದಲೂ ಅಲ್ಲಿ ನೆಲಸಿದ್ದ ಬುಡಕಟ್ಟು ಅಥವಾ ನಾಯಕತ್ವ ಅಥವಾ ಸಾಮ್ರಾಜ್ಯಗಳನ್ನು ಆಧರಿಸಿ ಆಯಾ ದೇಶಕ್ಕೆ ಹೆಸರಿಡುವುದು ಹೆಚ್ಚಾಗಿ ಕಂಡುಬರುತ್ತದೆ. ಹೀಗಾಗಿ, ಫ್ರಾನ್ಸ್‌ಗೆ ಫ್ರಾಂಕ್ಸ್‌ನಿಂದ, ಸೌದಿ ಅರೇಬಿಯಾಯಕ್ಕೆ ಸೌದ್ ಸಾಮ್ರಾಜ್ಯದಿಂದ, ಕೊಲಂಬಿಯಾಕ್ಕೆ ಕ್ರಿಸ್ಟೋಫರ್ ಕೊಲಂಬಸ್‌ನಿಂದಾಗಿ ಆಯಾ ಹೆಸರು ಬಂದಿದೆ. ಥಾಯ್ಲೆಂಡ್‌ಗೆ ಅಲ್ಲಿ ನೆಲಸಿದ್ದ 'ಥಾಯ್' ಜನರಿಂದಾಗಿ ಹಾಗೂ ವಿಯೆಟ್ನಾಂಗೆ ಅಲ್ಲಿನ 'ವಿಯೆಟ್' ಜನರಿಂದಾಗಿ ಆ ಹೆಸರುಗಳು ಪ್ರಾಪ್ತವಾಗಿವೆ. ಹಾಗೆಯೇ ಇಂಗ್ಲೆಂಡ್ ಎಂಬುದಕ್ಕೂ ಪ್ರಾಚೀನ ಹಿನ್ನೆಲೆ ಇದೆ. ಹಳೆಯ ಇಂಗ್ಲಿಷ್‌ನಲ್ಲಿ 'ಇಂಗ್ಲಾಲ್ಯಾಂಡ್' ಎಂದರೆ 'ದೇವತೆಗಳ ನಾಡು' ಎಂದರ್ಥ.

ಈ ದೇವತೆಗಳು ಮಧ್ಯಕಾಲೀನ ಯುಗದ ಆರಂಭದ ಕಾಲಘಟ್ಟದಲ್ಲಿ ಸ್ಯಾಕ್ಸನ್ ಮತ್ತು ಜೂಟ್‌ಗಳೊಂದಿಗೆ ಬ್ರಿಟನ್‌ಗೆ ವಲಸೆ ಬಂದ ಜೆರ್ಮಾನಿಕ್ ಬುಡಕಟ್ಟುಗಳಿಗೆ ಸೇರಿದವರು. ಕೆಲವೊಮ್ಮೆ ದೇಶಗಳ ಹೆಸರುಗಳು ಜನರು ನಂಬಿದ ಮೌಲ್ಯಗಳು ಹಾಗೂ ನಂಬಿಕೆಗಳನ್ನು ಪ್ರತಿಬಿಂಬಿಸುವ ಆಳವಾದ ಅರ್ಥಗಳನ್ನು ಹೊಂದಿರುತ್ತವೆ. ಉದಾಹರಣೆಗೆ, ಜಪಾನ್ ಎಂಬುದು ನಿಪ್ಪೋನ್ ಎಂಬುದರಿಂದ ಒಡಮೂಡಿದೆ. 'ಸೂರ್ಯ ಮೂಲ' ಎಂಬುದು ಇದರ ಅರ್ಥ. ಈ ದೇಶದ ಜನತೆ ಪ್ರಕೃತಿಯ ಬಗ್ಗೆ ಹೊಂದಿರುವ ಪೂಜ್ಯ ಭಾವನೆಯನ್ನು ಹಾಗೂ ಸೂರ್ಯನನ್ನು ಬದುಕಿನ ಮೂಲ ಎಂದು ಪರಿಭಾವಿಸುವುದನ್ನು ಇದು ಎತ್ತಿ ತೋರಿಸುತ್ತದೆ. ನ್ಯೂಜಿಲೆಂಡ್ ಅನ್ನು ಮೌರಿ ಮೂಲನಿವಾಸಿಗಳು 'ಔಟಿರಾ' ಎನ್ನುತ್ತಾರೆ; 'ಉದ್ದನೆಯ ಬಿಳಿ ಮೋಡದ ನಾಡು' (ಲ್ಯಾಂಡ್ ಆಫ್ ದಿ ಲಾಂಗ್ ವೈಟ್ ಕ್ಲೌಡ್) ಎಂಬುದು ಇದರ ಅರ್ಥ. ಯೂರೋಪಿಯನ್ನರು ಇಲ್ಲಿಗೆ ಬಂದು ನೆಲಸುವುದಕ್ಕೆ ಬಲು ಪೂರ್ವದಲ್ಲೇ ಇಲ್ಲಿನ ದ್ವೀಪಗಳಲ್ಲಿ ನೆಲಸಿದ್ದ ಮೌರಿ ಜನರ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಪ್ರಾಮುಖ್ಯವನ್ನು 'ಔಟಿರಾ' ಹೆಸರು ಬಿಂಬಿಸುತ್ತದೆ. ಡಚ್ ಅನ್ವೇಷಕ ಏಬಲ್ ಟಾಸ್ಮನ್ 1642ರಲ್ಲಿ ನ್ಯೂಜಿಲೆಂಡ್ ದೇಶವನ್ನು ಮೊದಲಿಗೆ ಕಂಡ ಯೂರೋಪಿಯನ್. ಮೊದಲಿಗೆ, ಆತ ಇದನ್ನು 'ಸ್ಟಾಟೆನ್ ಲಾಂಡ್ಟ್' (ಲ್ಯಾಂಡ್ ಆಫ್ ದಿ ಸ್ಟೇಟ್ಸ್) ಎಂದು ಕರೆದ. ನಂತರ, ಡಚ್ಚಿನ ನಕ್ಷಾ ನಿರೂಪಕರು ಲ್ಯಾಟಿನ್‌ನಲ್ಲಿ ಇದನ್ನು 'ನೋವಾ ಜೀಲ್ಯಾಂಡಿಯಾ (ನ್ಯೂಜಿಲೆಂಡ್) ಎಂದು ಕರೆದರು. ತರುವಾಯ, ಬ್ರಿಟಿಷ್ ಅನ್ವೇಷಕ ಜೇಮ್ಸ್ ಕುಕ್ 18ನೇ ಶತಮಾನದಲ್ಲಿ ತನ್ನ ಯಾನಗಳ ವೇಳೆ ಇದನ್ನು ಆಂಗ್ಲೀಕರಣಗೊಳಿಸಿ, ಇಂಗ್ಲಿಷರ ನಾಲಗೆಗೆ ಒಗ್ಗುವಂತೆ 'ನ್ಯೂಜಿಲೆಂಡ್' ಎಂದು ಕರೆದು ಜನಪ್ರಿಯಗೊಳಿಸಿದ.

ಕೆಲವೊಮ್ಮೆ ದೇಶಗಳಿಗೆ ತಮ್ಮ ವ್ಯಾಪ್ತಿಯಲ್ಲಿರುವ ಮಹತ್ವದ ಭೌಗೋಳಿಕ ಲಕ್ಷಣಗಳ ಹಿನ್ನೆಲೆಯಲ್ಲೂ ಹೆಸರು ಮೂಡುತ್ತದೆ. ಪ್ರಮುಖ ನದಿಗಳು, ಬೃಹತ್ ಪರ್ವತಗಳು, ವಿಶಾಲ ಬಯಲು ಪ್ರದೇಶಗಳು, ಬೃಹತ್ ವ್ಯಾಪ್ತಿಯ ಮರುಭೂಮಿಗಳು ಅಥವಾ ವಿಶಿಷ್ಟ ಕರಾವಳಿಗಳು ಇವುಗಳಲ್ಲಿ ಸೇರುತ್ತವೆ. ದೇಶದ ಅಸ್ಮಿತೆ, ಸಂಸ್ಕೃತಿ ಹಾಗೂ ಇತಿಹಾಸವನ್ನು ರೂಪಿಸುವಲ್ಲಿ ಈ ಪ್ರಾಕೃತಿಕ ವಿಸ್ಮಯಗಳ ಪ್ರಾಮುಖ್ಯವನ್ನು ಅಂತಹ ಹೆಸರುಗಳು ಬಿಂಬಿಸುತ್ತವೆ. ಉದಾಹರಣೆಗೆ, ಕೃಷಿಗೆ ನೀರು, ಸಂಚಾರ ಮಾರ್ಗ ಹಾಗೂ ಸಾಂಸ್ಕೃತಿಕ ಮಹತ್ವಕ್ಕೆ ಕೊಡುಗೆ ನೀಡುವ ಮೂಲಕ ನಾಗರಿಕತೆಯ ವಿಕಾಸದಲ್ಲಿ ನದಿಗಳು ನಿರ್ಣಾಯಕ ಪಾತ್ರಗಳನ್ನು ವಹಿಸಿವೆ. ಪರ್ವತಗಳು ದೇಶದ ಸ್ವಾಭಾವಿಕ ಗಡಿಗಳನ್ನು ಗುರುತಿಸುವ ಜೊತೆಗೆ ಸದೃಢತೆ, ಕ್ಷಮತೆ ಹಾಗೂ ಕೆಲವೊಮ್ಮೆ ಪ್ರತ್ಯೇಕತೆಯನ್ನು ಸಂಕೇತಿಸುತ್ತವೆ. ಬಿಬ್ಲಿಕಲ್ ಚರಿತ್ರೆಗೆ ಹೆಸರಾದ ಜಾರ್ಡನ್ ದೇಶಕ್ಕೆ ಅಲ್ಲಿನ ಹೆಸರಾಂತ ಜಾರ್ಡನ್ ನದಿಯಿಂದಾಗಿ ಆ ಹೆಸರು ಬಂದಿದೆ. ಇದು ನಂಬಿಕೆ ಹಾಗೂ ವಿಮೋಚನೆಯ ಸಂಕೇತವೂ ಆಗಿದೆ. ಅದೇ ರೀತಿಯಾಗಿ, ಪಶ್ಚಿಮ ಆಫ್ರಿಕಾದ ಹೃದಯ ಭಾಗದಲ್ಲಿ ಹರಿಯುವ ನೈಜರ್ ನದಿಯಿಂದಾಗಿ ನೈಜರ್ ಮತ್ತು ನೈಜೀರಿಯಾಗಳು ಹೆಸರು ಪಡೆದಿವೆ. ದಕ್ಷಿಣ ಅಮೆರಿಕದಲ್ಲಿ ಅರ್ಜೆಂಟೀನಾದ ಹೆಸರು ಲ್ಯಾಟಿನ್ ಮೂಲದ 'ಅರ್ಜೆಂಟಮ್'ನಿಂದ, ಅಂದರೆ 'ಬೆಳ್ಳಿ' ಎಂಬುದರಿಂದ ಬಂದಿದೆ. ರಿಯೊ ಡ ಲಾ ಪ್ಲಾಟಾ, ಅಂದರೆ ರಿವರ್ ಆಫ್ ಸಿಲ್ವರ್‌ನ ಹೊಳೆಯುವ ಜಲರಾಶಿಯನ್ನು ಸ್ಪೇನ್ ಮೂಲದ ಅನ್ವೇಷಕರು ಆ ರೀತಿಯಾಗಿ ಕರೆದ ಇತಿಹಾಸವನ್ನು ಇದು ನೆನಪಿಸುತ್ತದೆ. ತನ್ನ ಮುಕ್ಕಾಗದ ಸೌಂದರ್ಯದಿಂದ ಇಂದಿಗೂ ಪ್ರವಾಸಿಗರನ್ನು ಚುಂಬಕದಂತೆ ತನ್ನತ್ತ ಸೆಳೆಯುವ ಮನಮೋಹಕ ಭೂಪ್ರದೇಶ ಇದಾಗಿದೆ.

ಹೀಗೆ, ದೇಶದ ಹೆಸರುಗಳೊಂದಿಗೆ ಆಳವಾದ ಐತಿಹಾಸಿಕ ಬೇರುಗಳು, ಪ್ರಾಚೀನ ನಾಗರಿಕತೆಗಳು, ಬುಡಕಟ್ಟುಗಳು ಅಥವಾ ಆಳ್ವಿಕೆಗಾರರ ಹಿನ್ನೆಲೆಗಳು ತಳುಕು ಹಾಕಿಕೊಂಡಿರುತ್ತವೆ. ಉದಾಹರಣೆಗೆ, ಈಜಿಪ್ಟ್ ಎಂಬುದು ಗ್ರೀಕ್‌ನ 'ಐಜಿಪ್ಟಸ್' ಎಂಬುದರಿಂದ ನಾಮಕರಣಗೊಂಡಿದೆ. ಈ ಹೆಸರುಗಳ ಮೂಲ ಹುಡುಕುವ ಪ್ರವೃತ್ತಿ ಹೊಂದಿರುವ ನನಗೆ, ಬುಕೀನಾ ಫ್ಯಾಸೋ ಎಂಬುದು ಕೂಡ ಗಮನಕ್ಕೆ ಬಂತು. ಬುಕೀನಾ ಫ್ಯಾಸೋ ಎನ್ನುವುದರ ಅರ್ಥ 'ಪ್ರಾಮಾಣಿಕರ ನಾಡು' ಅಥವಾ 'ನೇರ ನಡೆನುಡಿಯ ಜನರ ನಾಡು' ಎಂದಾಗಿದೆ.

ಇನ್ನು, ನಮ್ಮ ದೇಶದ ವಿಷಯಕ್ಕೆ ಬಂದರೆ, 'ಭಾರತ್' ಎಂಬುದು ಇಂಡಿಯಾದ ಅಧಿಕೃತ ಹೆಸರುಗಳಲ್ಲಿ ಒಂದಾಗಿದ್ದು, ಸಂವಿಧಾನದ 1ನೇ ವಿಧಿಯಲ್ಲಿ ಇದು ಅಡಕಗೊಂಡಿದೆ. ಸಂಸ್ಕೃತ ಗ್ರಂಥಗಳು ಹಾಗೂ ಪೌರಾಣಿಕ ಕಥನಗಳಲ್ಲಿ ಇದರ ಮೂಲವಿದ್ದು, ಮಹಾಭಾರತ ಮಹಾಕಾವ್ಯದಲ್ಲಿ ಉಲ್ಲೇಖಗೊಂಡಿರುವ ಹೆಸರಾಂತ ಭರತ ಚಕ್ರವರ್ತಿಯ ಗೌರವಾರ್ಥ ಈ ಹೆಸರು ಬಂದಿದೆ ಎಂಬ ವಿವರಣೆಗಳಿವೆ. 'ಇಂಡಿಯಾ' ಎಂಬುದರ ಮೂಲವು ಗ್ರೀಕ್ ಮತ್ತು ಲ್ಯಾಟಿನ್ ಬರಹಗಳಲ್ಲಿದ್ದು, ಇಂಡಸ್ ನದಿಯ ಪರಿಸರದಲ್ಲಿರುವ ಪ್ರದೇಶಕ್ಕೆ ಈ ಹೆಸರು ಬಂದಿರುವುದನ್ನು ಸೂಚಿಸುತ್ತದೆ.

ವ್ಯಕ್ತಿಗಳ ಹೆಸರುಗಳಿಗೆ ಅರ್ಥ ಇರುವಂತೆಯೇ ದೇಶಗಳ ಹೆಸರುಗಳಿಗೂ ಅರ್ಥವಿರುತ್ತದೆ. ಅವುಗಳ ಹಿನ್ನೆಲೆ ಆಸಕ್ತಿದಾಯಕವಾಗಿರುತ್ತದೆ. ದೇಶಗಳ ಹೆಸರನ್ನು ಬದಲಾವಣೆ ಮಾಡುವುದು ಕೂಡ ಶತಮಾನಗಳಿಂದ ನಡೆಯುತ್ತಿದೆ. ಕೆಲವೊಂದು ದೇಶಗಳ ಹೆಸರು ಬದಲಾಗುತ್ತಿರುವುದನ್ನು ವರ್ತಮಾನದಲ್ಲೂ ಕಾಣಬಹುದಾಗಿದೆ.

ಷೇಕ್‌ಸ್ಪಿಯರ್‌ನ ಕೃತಿಯೊಂದರಲ್ಲಿ ಬರುವ, 'ಹೆಸರಿನಲ್ಲಿ ಏನಿದೆ? ಗುಲಾಬಿಯನ್ನು ಬೇರೆ ಯಾವ ಹೆಸರಿನಿಂದ ಕರೆದರೂ ಅದರ ಪರಿಮಳ ಅಂತೆಯೇ ಇರುತ್ತದೆ' ಎಂಬ ಉದ್ಗಾರ ಈ ಸಂದರ್ಭದಲ್ಲಿ ನೆನಪಾಗುತ್ತದೆ. ಪ್ರವಾಸ ಹಾಗೂ ಅನ್ವೇಷಣೆಗೆ ಹೊರಟಾಗ ದೇಶಗಳ ಹೆಸರುಗಳು ಅವು ನೀಡುವ ಸಮೃದ್ಧ ಅನುಭವಗಳನ್ನು ಕೂಡ ಧ್ವನಿಸುತ್ತವೆ. ತನ್ನ ನಿವಾಸಿಗಳಿಂದ 'ಹೆಲ್ಲಾಸ್' ಎಂದು ಕರೆಸಿಕೊಳ್ಳುವ ಗ್ರೀಸ್‌ನ ಪರಿಶುಭ್ರ ಕಡಲ ತೀರಗಳಿರಬಹುದು ಅಥವಾ ಹಳ್ಳಿ (ಹಾಡಿ) ಎಂಬ ಅರ್ಥವಿರುವ 'ಕನಾಟ' ಎಂಬ ಇರೋಕ್ವೋಯಿಯನ್ ಮೂಲದ ಕೆನಡಾದ ಭವ್ಯ ಭೂಪ್ರದೇಶಗಳಿರಬಹುದು, ಪ್ರತಿಯೊಂದು ದೇಶವೂ ಅನ್ವೇಷಣೀಯ ಜಗತ್ತನ್ನು ಪ್ರವಾಸಿಗರ ಮುಂದಿರಿಸುತ್ತದೆ. ಪ್ರಯಾಣದ ಮಹತ್ವವು ಆ ಸ್ಥಳದ ಹೆಸರಿನೊಂದಿಗೆ ತಳುಕು [illegible]

ಚಲೋ, ಬ್ಯಾಗ್ ಭರೋ, ನಿಕಲ್ ಪಡೋ!

ಡಿಸೆಂಬರ್ 15ರ ವೀಣಾ ವರ್ಲ್ಡ್ ಟ್ರಾವೆಲ್ ರಸಪ್ರಶ್ನೆ ಅದೃಷ್ಟಶಾಲಿ ವಿಜೇತರು
'ಶಿಮ್ಲಾ ಮನಾಲಿ'
(ಟೂರ್ ಕೋಡ್– HPPS)
ಜಯಲಕ್ಷ್ಮಿ ಗಣೇಶ್
ಶಿವಮೊಗ್ಗ
ಅಭಿನಂದನೆಗಳು!

Email: travel@veenaworld.com | ಪ್ರತಿವಾರವೂ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುನೀಲಾ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ www.veenaworld.com ನಲ್ಲೂ ಓದಬಹುದು.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿ: ದೇವದತ್ತ ಪಡಿಕ್ಕಲ್ ಶತಕ, ಅನೀಶ್ ಅರ್ಧಶತಕ

ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟ ಕರ್ನಾಟಕ

ಕರ್ನಾಟಕದ ಬ್ಯಾಟರ್ ದೇವದತ್ತ ಪಡಿಕ್ಕಲ್

ವಡೋದರಾ: ಆಸ್ಟ್ರೇಲಿಯಾ ಪ್ರವಾಸದಿಂದ ಮರಳಿ ಬಂದ ನಂತರ ದೇಶಿ ಕ್ರಿಕೆಟ್‌ನಲ್ಲಿ ಮೊದಲ ಪಂದ್ಯವಾಡಿದ ದೇವದತ್ತ ಪಡಿಕ್ಕಲ್ ಶತಕ ಸಂಭ್ರಮ ಆಚರಿಸಿದರು. ಅವರ ಅಮೋಘ ಬ್ಯಾಟಿಂಗ್ ಬಲದಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ನಾಲ್ಕು ಬಾರಿಯ ಚಾಂಪಿಯನ್ ಕರ್ನಾಟಕ ತಂಡವು ಶನಿವಾರ ಮೋತಿ ಭಾಗ್‌ನಲ್ಲಿ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಬರೋಡಾ ತಂಡದ ಎದುರು 5 ರನ್‌ಗಳಿಂದ ರೋಚಕ ಜಯ ಸಾಧಿಸಿತು. ಟಾಸ್ ಗೆದ್ದ ಬರೋಡಾ ತಂಡದ ನಾಯಕ ಕೃಣಾಲ್ ಪಾಂಡ್ಯ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ನಿಕಿನ್ ಜೋಸ್ ಅವರಿಗೆ ವಿಶ್ರಾಂತಿ ನೀಡಿದ ಕರ್ನಾಟಕ ತಂಡಕ್ಕೆ ನಾಯಕ ಮಯಂಕ್ ಅಗರವಾಲ್ ಮತ್ತು ದೇವದತ್ತ ಇನಿಂಗ್ಸ್ ಆರಂಭಿಸಿದರು.

ಕ್ರೀಸ್‌ಗೆ ಬಂದವರೇ ದೇವದತ್ತ ರನ್ ಸೂರೆ ಮಾಡಲು ಆರಂಭಿಸಿದರು. ಈ ಟೂರ್ನಿಯಲ್ಲಿ ನಾಲ್ಕು ಶತಕ ಹೊಡೆದಿರುವ ಮಯಂಕ್ (6; 15ಎ) ಅವರ ಆಟಕ್ಕೆ ತಡೆಯೊಡ್ಡುವಲ್ಲಿ ಲಕ್ಮನ್ ಮೆರಿವಾಲಾ ಯಶಸ್ವಿಯಾದರು. ಐದನೇ ಓವರ್‌ನಲ್ಲಿ ಮಯಂಕ್ ಪೆವಿಲಿಯನ್ ಸೇರಿದರು.

ಆತ್ಮವಿಶ್ವಾಸದಿಂದ ಆಡುತ್ತಿದ್ದ ಪಡಿಕ್ಕಲ್ (102; 99ಎ) ಅವರೊಂದಿಗೆ ಸೇರಿಕೊಂಡ ಕೆ.ವಿ. ಅನೀಶ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 130 ರನ್ ಸೇರಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 281 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಬರೋಡಾ ತಂಡಕ್ಕೆ 49.5 ಓವರ್‌ಗಳಲ್ಲಿ 276 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ತಂಡದ ಆರಂಭಿಕ ಬ್ಯಾಟರ್ ಶಾಶ್ವತ್ ರಾವತ್ (104; 126ಎ, 4X9, 6X1) ಮತ್ತು ಅತಿಥ್ ಶೇಟ್ (56; 59ಎ, 4X7, 6X1) ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಕರ್ನಾಟಕದ ಬೌಲರ್‌ಗಳಾದ ಕೌಶಿಕ್, ಪ್ರಸಿದ್ಧಕೃಷ್ಣ, ಅಭಿಲಾಷ್ ಶೆಟ್ಟಿ ಹಾಗೂ ಶ್ರೇಯಸ್ ತಲಾ 2 ವಿಕೆಟ್ ಗಳಿಸಿದರು.

ಆಸ್ಟ್ರೇಲಿಯಾ ಎ ವಿರುದ್ಧದಸರಣಿಯಲ್ಲಿ ಪಡಿಕ್ಕಲ್ ಆಡಿದ್ದರು.ನಂತರ ಬಾರ್ಡರ್–ಗಾವಸ್ಕರ್ಟ್ರೋಫಿ ಟೆಸ್ಟ್ ಸರಣಿಯಲ್ಲಿಭರತ ತಂಡದಲ್ಲಿಯೂ ಇದ್ದರು. ಆ ಅನುಭವದೊಂದಿಗೆ ಮರಳಿದ್ದ ಅವರು ಇಲ್ಲಿ ಸೊಗಸಾದ ಶತಕ ಬಾರಿಸಿದರು. ಬೆಂಗಳೂರಿನ ಎಡಗೈ ಬ್ಯಾಟರ್ 15 ಬೌಂಡರಿ, 2 ಸಿಕ್ಸರ್ ಸಿಡಿಸಿದರು. ಅನೀಶ್ 64 ಎಸೆತಗಳಲ್ಲಿ 52 ರನ್ ಗಳಿಸಿದರು. 4 ಬೌಂಡರಿ, 1 ಸಿಕ್ಸರ್ ಹೊಡೆದರು.

ಅಭಿನವ್ ಮನೋಹರ್ (21; 18ಎ) ಮತ್ತು ಶ್ರೇಯಸ್ ಗೋಪಾಲ್ (16; 12ಎ) ಚುರುಕಾಗಿ ಬ್ಯಾಟಿಂಗ್ ಮಾಡಿ ತಂಡದ ಮೊತ್ತ ಹೆಚ್ಚಿಸಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರ್‌ಗಳಲ್ಲಿ 8ಕ್ಕೆ281 (ದೇವದತ್ತ ಪಡಿಕ್ಕಲ್ 102, ಕೆ.ವಿ. ಅನೀಶ್ 52, ಸ್ಮರಣ್ ಆರ್. 28, ಕೆ.ಎಲ್. ಶ್ರೀಜಿತ್ 28, ಅಭಿನವ್ ಮನೋಹರ್ 21, ರಾಜ್ ಲಿಂಬಾನಿ 47ಕ್ಕೆ3, ಅತಿಥ್ ಸೇಠ್ 41ಕ್ಕೆ3) ಬರೋಡಾ: 49.5 ಓವರ್‌ಗಳಲ್ಲಿ 276 (ಶಾಶ್ವತ್ ರಾವತ್ 104, ಅತಿಥ್ ಶೇಠ್ 56, ಕೃಣಾಲ್ ಪಾಂಡ್ಯ 30, ಭಾನು ಪನಿಯಾ 22, ಭಾರ್ಗವ್ ಭಟ್ 20, ವಿ. ಕೌಶಿಕ್ 39ಕ್ಕೆ2, ಪ್ರಸಿದ್ಧ ಕೃಷ್ಣ 60ಕ್ಕೆ2, ಅಭಿಲಾಷ್ ಶೆಟ್ಟಿ 70ಕ್ಕೆ2, ಶ್ರೇಯಸ್ ಗೋಪಾಲ್ 38ಕ್ಕೆ2) ಫಲಿತಾಂಶ: ಕರ್ನಾಟಕ ತಂಡಕ್ಕೆ 5 ರನ್‌ಗಳ ಜಯ. ಪಂದ್ಯಶ್ರೇಷ್ಠ: ದೇವದತ್ತ ಪಡಿಕ್ಕಲ್.

ಇಂದಿನ ಕ್ವಾರ್ಟರ್‌ಫೈನಲ್
ಗುಜರಾತ್ –ಹರಿಯಾಣ
ವಿದರ್ಭ–ರಾಜಸ್ಥಾನ
ಆರಂಭ: ಬೆಳಿಗ್ಗೆ 9.
(ಮಾಹಿತಿ: ಬಿಸಿಸಿಐ ಡಾಟ್ ಟಿವಿ)

ಕುಲಕರ್ಣಿ ಶತಕ: ಸೆಮಿಗೆ ಮಹಾರಾಷ್ಟ್ರ

ವಡೋದರಾ: ಅರಿಷಿನ್ ಕುಲಕರ್ಣಿ (107; 137ಎ, 4X14) ಅವರ ಶತಕದ ಬಲದಿಂದ ಮಹಾರಾಷ್ಟ್ರ ತಂಡವು ಕ್ವಾರ್ಟರ್‌ಫೈನಲ್‌ನಲ್ಲಿ 70 ರನ್‌ಗಳಿಂದ ಪಂಜಾಬ್ ಎದುರು ಜಯಿಸಿತು.
ಕೊತಂಬಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಪಂಜಾಬ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಹಾರಾಷ್ಟ್ರ ತಂಡವು 50 ಓವರ್‌ಗಳಲ್ಲಿ 6ಕ್ಕೆ275 ರನ್ ಗಳಿಸಿತು.
ಅದಕ್ಕುತ್ತರವಾಗಿ ಪಂಜಾಬ್ ತಂಡವು 44.4 ಓವರ್‌ಗಳಲ್ಲಿ 205 ರನ್ ಗಳಿಸಿ ಸೋತಿತು. ಮುಕೇಶ್ ಚೌಧರಿ 3 ಮತ್ತು ಪ್ರದೀಪ್ ದಾಧೆ 2 ವಿಕೆಟ್ ಗಳಿಸಿದರು.
ಸಂಕ್ಷಿಪ್ತ ಸ್ಕೋರು: ಮಹಾರಾಷ್ಟ್ರ: 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 275 (ಅರಿಷಿನ್ ಕುಲಕರ್ಣಿ 107, ಅಂಕಿತ್ ಭಾವ್ನೆ 60, ನಿಖಿಲ್ ನಾಯಕ್ ಔಟಾಗದೆ 52, ಸತ್ಯಜೀತ್ ಬಚಾವ್ ಔಟಾಗದೇ 20, ಅರ್ಷದೀಪ್ ಸಿಂಗ್ 56ಕ್ಕೆ3, ನಮನ್ ಧೀರ್ 29ಕ್ಕೆ2) ಪಂಜಾಬ್: 44.4 ಓವರ್‌ಗಳಲ್ಲಿ 205 (ಅನ್ಮೋಲ್‌ಪ್ರೀತ್ ಸಿಂಗ್ 48, ಸನ್ವೀರ್ ಸಿಂಗ್ 24, ಅರ್ಷದೀಪ್ ಸಿಂಗ್ 49, ಮುಕೇಶ್ ಚೌಧರಿ 44ಕ್ಕೆ3, ಪ್ರದೀಪ್ ದಾಧೆ 31ಕ್ಕೆ2) ಫಲಿತಾಂಶ: ಮಹಾರಾಷ್ಟ್ರ ತಂಡಕ್ಕೆ 70 ರನ್ ಜಯ.

14 ತಿಂಗಳ ನಂತರ ತಂಡಕ್ಕೆ ಶಮಿ

ಇಂಗ್ಲೆಂಡ್ ವಿರುದ್ಧ ಟಿ20 ಸರಣಿಗೆ ಸೂರ್ಯಕುಮಾರ್ ನಾಯಕತ್ವ



ಮೊಹಮ್ಮದ್ ಶಮಿ

ಮುಂಬೈ (ಪಿಟಿಐ): ವೇಗದ ಬೌಲರ್ ಮೊಹಮ್ಮದ್ ಶಮಿ ಅವರು 14 ತಿಂಗಳುಗಳ ನಂತರ ಭಾರತ ಟಿ20 ತಂಡಕ್ಕೆ ಮರಳಿದ್ದಾರೆ.

ಇದೇ ತಿಂಗಳು ಇಂಗ್ಲೆಂಡ್ ಎದುರು ನಡೆಯಲಿರುವ ಟಿ20 ಕ್ರಿಕೆಟ್ ಸರಣಿಯಲ್ಲಿ ಆಡಲಿರುವ ತಂಡದಲ್ಲಿ ಅವರು ಸ್ಥಾನ ಪಡೆದಿದ್ದಾರೆ. 2023ರಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ (ನವೆಂಬರ್ 19) ಆಸ್ಟ್ರೇಲಿಯಾ ಎದುರು ಅವರು ಆಡಿದ್ದರು. ಅದರ ನಂತರ ಹಿಮ್ಮಡಿ ಗಾಯದಿಂದಾಗಿ ತಂಡದಿಂದ ಹೊರಗುಳಿದಿದ್ದರು. ಹೋದ ವರ್ಷ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು. ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ(ಎನ್‌ಸಿಎ)ಯಲ್ಲಿ ದೀರ್ಘ ಅವಧಿಗೆ ಆರೈಕೆಯಲ್ಲಿದ್ದರು.

ಈಚೆಗೆ ಆಸ್ಟ್ರೇಲಿಯಾದಲ್ಲಿ ನಡೆದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಆಡಲು ಅವರು ಆಯ್ಕೆಯಾಗಬೇಕಿತ್ತು. ಆದರೆ ಅವರ ಮೊಣಕಾಲಿನಲ್ಲಿ ಉರಿಯೂತ ಇದ್ದ ಕಾರಣ ಆಯ್ಕೆ ಮಾಡಿರಲಿಲ್ಲ. ಅವರು ದೇಶಿ ಟೂರ್ನಿಗಳಲ್ಲಿ ಆಡಿದ್ದರು. ಇದೀಗ ಇಂಗ್ಲೆಂಡ್ ವಿರುದ್ಧ ನಡೆಯಲಿರುವ 5 ಟಿ20 ಪಂದ್ಯಗಳ ಸರಣಿಯಲ್ಲಿ ಸೂರ್ಯಕುಮಾರ್ ಯಾದವ್ ನಾಯಕತ್ವದ ತಂಡದಲ್ಲಿ ಶಮಿ ಆಡುವರು. ಕೋಲ್ಕತ್ತದಲ್ಲಿ ಇದೇ 22ರಂದು ಮೊದಲ ಪಂದ್ಯ ನಡೆಯಲಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆಯ್ಕೆ ಸಮಿತಿಯು ಶನಿವಾರ 15 ಆಟಗಾರರ ತಂಡವನ್ನು ಪ್ರಕಟಿಸಿದೆ.

ತಂಡ: ಸೂರ್ಯಕುಮಾರ್ ಯಾದವ್ (ನಾಯಕ), ಅಕ್ಷರ್ ಪಟೇಲ್ (ಉಪನಾಯಕ), ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್, ನಿತೀಶ್ ಕುಮಾರ್ ರೆಡ್ಡಿ, ಹರ್ಷಿತ್ ರಾಣಾ, ಅರ್ಷದೀಪ್ ಸಿಂಗ್, ಮೊಹಮ್ಮದ್ ಶಮಿ, ವರುಣ ಚಕ್ರವರ್ತಿ, ರವಿ ಬಿಷ್ಣೋಯಿ, ವಾಷಿಂಗ್ಟನ್ ಸುಂದರ್, ಧ್ರುವ ಜುರೆಲ್ (ವಿಕೆಟ್‌ಕೀಪರ್).

ಹಾಕಿ: ತೂಫಾನ್ಸ್ ತಂಡಕ್ಕೆ ಜಯ

ರೂರ್ಕೆಲಾ (ಪಿಟಿಐ): ಹೈದರಾಬಾದ್ ತೂಫಾನ್ಸ್ ತಂಡ ಹಾಕಿ ಇಂಡಿಯಾ ಲೀಗ್ ಪಂದ್ಯದಲ್ಲಿ ಶನಿವಾರ ಸೂರ್ಮಾ ಹಾಕಿ ಕ್ಲಬ್ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 4–3 ಗೋಲುಗಳಿಂದ ಸೋಲಿಸಿತು. ನಿಗದಿ ವೇಳೆ ಸ್ಕೋರ್ 1–1ರಲ್ಲಿ ಸಮನಾಗಿತ್ತು. ತೂಫಾನ್ಸ್ ಗೋಲ್‌ಕೀಪರ್ ಡೊಮಿನಿಕ್ ಡಿಕ್ಸನ್ ಶೂಟೌಟ್‌ನಲ್ಲಿ ಮಿಂಚಿದರು.

ಬೆಂಗಳೂರಿನಲ್ಲಿ ಶನಿವಾರ ನಡೆದ ಐಎಸ್‌ಎಲ್ ಪಂದ್ಯದಲ್ಲಿ ಬಿಎಫ್‌ಸಿಯ ರಯಾನ್ ವಿಲಿಯಮ್ಸ್ ಮತ್ತು ಮೊಹಮ್ಮಡನ್ ಸ್ಪೋರ್ಟಿಂಗ್‌ನ ಝೊಡಿಂಗ್ಲಿಯಾನಾ ನಡುವೆ ಚೆಂಡಿಗಾಗಿ ಪೈಪೋಟಿ ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಬೆಂಗಳೂರಿನ ಡೆಕ್ಕನ್ ಇಂಟರ್‌ನ್ಯಾಷನಲ್ ಸ್ಕೂಲ್ (ಡಿಐಎಸ್) ಆಯೋಜಿಸಿದ್ದ ಎರಡನೇ ಡೆಕ್ಕನ್ ಕಪ್ ಅಂತರಶಾಲಾ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಡೆಲ್ಲಿ ಪಬ್ಲಿಕ್ ಶಾಲೆ ತಂಡ (ಎಡದಿಂದ ಬಲಕ್ಕೆ), ನಿಂತವರು: ದೃಷ್ಟಿ ನಿತ್ಯಾ, ಹರ್ಷಿ, ಮಾನವಿ, ದಿಯಾ ಸಚಿನ್, ಪಿ. ಗಾನವಿ, ಸಮಿತಾ. ಕುಳಿತವರು: ಮೋಕ್ಷದಾ, ಕ್ರಿಯಾ, ಆರುಷಿ, ತನ್ವಿ (ಎಡ ಚಿತ್ರ). ಬಾಲಕರ ವಿಭಾಗದಲ್ಲೂ ಅಗ್ರಸ್ಥಾನ ಪಡೆದ ಡೆಲ್ಲಿ ಪಬ್ಲಿಕ್ ಶಾಲೆ ತಂಡ; ನಿಂತವರು(ಎಡದಿಂದ): ದಕ್ಷ್, ಆದಿತ್ಯ ರೆಡ್ಡಿ, ಚರಿತ್ ಸಹದೇವ್, ದಲ್ಜೀತ್, ಉಜ್ವಲ್. ಕುಳಿತವರು(ಬಲದಿಂದ): ಕಿಶೋರ್, ರೋಹಿತ್, ಡ್ಯಾನಿಯಲ್, ಶೌರ್ಯ, ಆದಿತ್ಯ ರಾಮಚಂದ್

ಡೆಲ್ಲಿ ಪಬ್ಲಿಕ್ ಸ್ಕೂಲ್ ದಕ್ಷಿಣ ತಂಡಕ್ಕೆ ಪ್ರಶಸ್ತಿ ಡಬಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಲ್ಲಿ ಪಬ್ಲಿಕ್ ಸ್ಕೂಲ್ (ದಕ್ಷಿಣ) ಬಾಲಕ ಮತ್ತು ಬಾಲಕಿಯರ ತಂಡಗಳು ಡೆಕ್ಕನ್ ಇಂಟರ್‌ನ್ಯಾಷನಲ್ ಶಾಲೆಯ (ಡಿಐಎಸ್) ಆಶ್ರಯದಲ್ಲಿ ನಡೆದ 2ನೇ ಡೆಕ್ಕನ್ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದವು.

ಶುಕ್ರವಾರ ಮತ್ತು ಶನಿವಾರ ನಡೆದ ಟೂರ್ನಿಯಲ್ಲಿ ಡಿಪಿಎಸ್ ಬಾಲಕರ ತಂಡವು 23–17ರಿಂದ ಡಿಐಎಸ್ ಬಾಲಕರ ತಂಡವನ್ನು ಸೋಲಿಸಿತು.

ಬಾಲಕಿಯರ ವಿಭಾಗದಲ್ಲಿ ಡಿಪಿಎಸ್ ತಂಡವು 30–26ರಿಂದ ಆತಿಥೇಯ ಡಿಐಎಸ್ ವಿರುದ್ಧ ಜಯಿಸಿತು.

ಬಾಲಕರ ವಿಭಾಗದಲ್ಲಿ ಡಿಪಿಎಸ್ ತಂಡದ ಕಿಶೋರ್ ಮತ್ತು ಬಾಲಕಿಯರ ವಿಭಾಗದಲ್ಲಿ ಡಿಐಎಸ್ ತಂಡದ ಅದ್ವೈತಿ ಕ್ರಮವಾಗಿ ಶ್ರೇಷ್ಠ ಆಟಗಾರ ಮತ್ತು ಆಟಗಾರ್ತಿ ಗೌರವ ಗಳಿಸಿದರು.

ಎರಡು ದಿನ ನಡೆದ ಈ ಅಂತರಶಾಲಾ ಟೂರ್ನಿಯಲ್ಲಿ 12 ಶಾಲೆಗಳು ಭಾಗವಹಿಸಿದ್ದವು. ಬಾಲಕರ 12 ಹಾಗೂ ಬಾಲಕಿಯರ 10 ತಂಡಗಳು ಸ್ಪರ್ಧಿಸಿದವು.

ಮೊಹಮ್ಮಡನ್ಸ್‌ಗೆ ಮಣಿದ ಬಿಎಫ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿರ್ಜಾಲೊಲ್ ಕಾಸಿಮೊವ್ ಅವರು 88ನೇ ನಿಮಿಷ ಗಳಿಸಿದ ಗೋಲಿನಿಂದ ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್ ತಂಡ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡವನ್ನು ಶನಿವಾರ 1–0 ಯಿಂದ ಸೋಲಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಆತಿಥೇಯ ತಂಡವೇ ಹೆಚ್ಚುಹೊತ್ತು (ಶೇ 65.8) ಚೆಂಡನ್ನು ನಿಯಂತ್ರಣದಲ್ಲಿರಿಸಿಕೊಂಡಿತ್ತು. ಆದರೆ ಗೋಲ್‌ಕೀಪರ್ ಪದಮ್ ಚೆಟ್ರಿ ನೇತೃತ್ವದ ಮೊಹಮ್ಮಡನ್ಸ್ ತಂಡ, 'ಬ್ಲೂಸ್' ತಂಡದ ಗೋಲು ಯತ್ನಗಳನ್ನೆಲ್ಲಾ ಯಶಸ್ವಿಯಾಗಿ ತಡೆಯಿತು.

ಇದು ಬೆಂಗಳೂರು ತಂಡಕ್ಕೆ ಸತತ ಎರಡನೇ ಹಾಗೂ ಒಟ್ಟಾರೆ 15 ಪಂದ್ಯಗಳಲ್ಲಿ ನಾಲ್ಕನೇ ಸೋಲು. ಅದು 27 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿ ಮುಂದುವರಿದಿದೆ. ಮೊಹಮ್ಮಡನ್ಸ್ ತಂಡ 10 ಪಾಯಿಂಟ್ ಗಳೊಂದಿಗೆ 12ನೇ ಸ್ಥಾನದಲ್ಲಿದೆ.

ಬಿಎಫ್‌ಸಿ ತಂಡಕ್ಕೆ ಆರಂಭದಲ್ಲೇ ಅವಕಾಶಗಳು ದೊರೆತವು. ಮೂರನೇ ನಿಮಿಷ ಆಲ್ಬರ್ಟೊ ನೊಗುಯೆರಾ ಮತ್ತು 38ನೇ ನಿಮಿಷ ಚಿಂಗ್ಲಸೇನಾ ತಮಗೆ ದೊರೆತ ಅವಕಾಶಗಳಲ್ಲಿ ಎಡವಿದರು.

ವಿರಾಮದ ನಂತರ 49ನೇ ನಿಮಿಷ ಮೊಹಮಡನ್ಸ್‌ಗೆ ದೊರೆತ ಅವಕಾಶದಲ್ಲಿ ಅಲೆಕ್ಸಿಸ್ ಗೋಮೆಝ್ ಪ್ರಬಲವಾಗಿ ಒದ್ದ ಚೆಂಡು ಗೋಲು ಗಂಬಕ್ಕೆ ಬಡಿಯಿತು. 56ನೇ ನಿಮಿಷ ಜೊಡಿಂಗ್ಲಿಯಾನ ರಾಲ್ಟೆ ಯತ್ನವನ್ನು ಗೋಲ್ ಕೀಪರ್ ಗುರುಪ್ರೀತ್ ಸಂಧು ಅವರು ಸಕಾಲಕ್ಕೆ ತಡೆದರು.

ಪಂದ್ಯ ಮುಕ್ತಾಯಕ್ಕೆ ಎರಡು ನಿಮಿಷಗಳಿರುವಾಗ ಕಾಸಿಮೊವ್, ಬಾಕ್ಸ್‌ನ ಅಂಚಿ ನಿಂದ ಫ್ರಾಂಕಾ ಅವರು ಕಳಿಸಿದ ಫ್ರೀಕಿಕ್‌ನಲ್ಲಿ ಚೆಂಡನ್ನು ಕ್ಷಣಾರ್ಧದಲ್ಲಿ ಗುರಿತಲುಪಿಸಿದರು.

ಬಿಸಿಸಿಐ ವಿಶೇಷ ಸಭೆ ಇಂದು

ಜಯ್ ಶಾ

ಮುಂಬೈ (ಪಿಟಿಐ): ದೇವಜೀತ್ ಸೈಕಿಯಾ ಮತ್ತು ಪ್ರಭತೇಜ್ ಸಿಂಗ್ ಭಾಟಿಯಾ ಅವರನ್ನು ಕ್ರಮವಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿ ಭಾನುವಾರ ನಡೆಯುವ ಸರ್ವಸದಸ್ಯಸ ವಿಶೇಷ ಸಭೆಯಲ್ಲಿ ಘೋಷಿಸಲಾಗುವುದು.

ಕಳೆದ ಮಂಗಳವಾರ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಸೈಕಿಯಾ ಮತ್ತು ಭಾಟಿಯಾ ಅವರು ಅವಿರೋಧವಾಗಿ ಆಯ್ಕೆಯಾಗಿದ್ದರು. ಕಳೆದ ಡಿಸೆಂಬರ್ 1ರಂದು ಜಯ್ ಶಾ ಅವರು ಐಸಿಸಿಗೆ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದರು. ಅದರಿಂದಾಗಿ ಕಾರ್ಯದರ್ಶಿ ಹುದ್ದೆ ತೆರವಾಗಿತ್ತು. ಈ ಹಿಂದೆ ಖಜಾಂಚಿಯಾಗಿದ್ದ ಆಶಿಶ್ ಶೆಲಾರ್ ಅವರು ಮಹಾರಾಷ್ಟ್ರ ಸರ್ಕಾರದಲ್ಲಿ ಸಚಿವರಾಗಿದ್ದರು.

ಜಯ್ ಶಾಗೆ ಸನ್ಮಾನ

ಇದೇ ಸಭೆಯಲ್ಲಿ ಐಸಿಸಿ ಚೇರಮನ್ ಜಯ್ ಶಾ ಅವರನ್ನು ಸನ್ಮಾನಿಸಲಾಗುವುದು. ಅವರು ಐಸಿಸಿಯ ಮುಖ್ಯಸ್ಥರ ಸ್ಥಾನಕ್ಕೆ ಆಯ್ಕೆಯಾದ ಅತ್ಯಂತ ಕಿರಿಯ ವಯಸ್ಸಿನ ವ್ಯಕ್ತಿಯಾಗಿದ್ದಾರೆ.

ಕೋಚ್ ಗಂಭೀರ್ ಜೊತೆ ಚರ್ಚೆ

ಈಚೆಗೆ ಆಸ್ಟ್ರೇಲಿಯಾದಲ್ಲಿ ನಡೆದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ಭಾರತ ತಂಡವು 1–3ರಿಂದ ಸೋತಿತ್ತು. ಈ ಕುರಿತು ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರೊಂದಿಗೆ ಬಿಸಿಸಿಐ ಪದಾಧಿಕಾರಿಗಳೂ ಚರ್ಚಿಸಲಿದ್ದಾರೆ ಎಂದು ತಿಳಿದುಬಂದಿದೆ.

ಸರಣಿ ಸೋಲಿಗೆ ಕಾರಣಗಳು, ತಂಡದ ಅನುಭವಿ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ವೈಫಲ್ಯ ಕುರಿತು ವರದಿ ಪಡೆಯುವ ಸಾಧ್ಯತೆ ಇದೆ. ಇದರೊಂದಿಗೆ ಮುಂಬರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ, ಸರಣಿಗಳು ಮತ್ತು ಟೂರ್ನಿಗಳ ಬಗ್ಗೆಯೂ ಮಾತನಾಡಲಿದ್ದಾರೆ ಎನ್ನಲಾಗಿದೆ.

ಪ್ರೊ ಬಾಕ್ಸಿಂಗ್‌ಗೆ ನಿಶಾಂತ್ ದೇವ್

ನವದೆಹಲಿ (ಪಿಟಿಐ): ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ್ದ ಭಾರತದ ನಿಶಾಂತ್ ದೇವ್ ಅವರು ಪ್ರೊ ಬಾಕ್ಸಿಂಗ್‌ಗೆ ಪ್ರವೇಶಿಸಿದ್ದಾರೆ.

ಭಾರತದ ಯಶಸ್ವಿ ಬಾಕ್ಸಿಂಗ್ ಕ್ರೀಡಾಪಟುಗಳಲ್ಲಿ ಒಬ್ಬರಾಗಿರುವ ನಿಶಾಂತ್ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದರು. 24 ವರ್ಷದ ನಿಶಾಂತ್ ಅಮೆಚೂರ್ ಬಾಕ್ಸಿಂಗ್ ತೊರೆದಿದ್ದಾರೆ. ಅವರು ಎಡ್ಡಿ ಹೀರ್ನ್ ಮತ್ತು ಮ್ಯಾಚ್‌ರೂಮ್ ಬಾಕ್ಸಿಂಗ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಇದೇ 25ರಂದು ಪದಾರ್ಪಣೆ ಮಾಡುವರು.

ಕೊಡವ ಹಾಕಿ ಲೋಗೊ ಬಿಡುಗಡೆ



ಮಡಿಕೇರಿ: ಮಾರ್ಚ್ 28ರಿಂದ ಏಪ್ರಿಲ್ 27ರವರೆಗೆ ಇಲ್ಲಿ ನಡೆಯಲಿರುವ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ 25ನೇ ಆವೃತಿ 'ಮುದ್ದಂಡ ಹಾಕಿ ಉತ್ಸವ'ದ ಲೋಗೊ ಇಲ್ಲಿನ ಕಾವೇರಿ ಹಾಲ್‌ನಲ್ಲಿ ಶನಿವಾರ ಬಿಡುಗಡೆಗೊಂಡಿತು.

ಬೃಹತ್ ಎಲ್‌ಇಡಿ ಪರದೆಯ ಮೇಲೆ ಅನಾವರಣಗೊಂಡ ಲೋಗೊವನ್ನು ಅತಿಥಿಗಳು ಕಣ್ತುಂಬಿಕೊಂಡರು.

ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ ಮಾತನಾಡಿ, 'ನಮ್ಮ ತಂದೆ ಹಾಕಿ ಪಂದ್ಯಾವಳಿ ಆರಂಭಿಸಿದಾಗ ಈ ಮಟ್ಟಕ್ಕೆ ಬೆಳೆಯುತ್ತದೆಂಬ ನಿರೀಕ್ಷೆ ಇರಲಿಲ್ಲ' ಎಂದರು.

ಸಂಸದ ಯದುವೀರ ಕೃಷ್ಣ ದತ್ತ ಚಾಮರಾಜ ಒಡೆಯರ್,ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಶಾಸಕ ಡಾ.ಮಂತರ್‌ಗೌಡ, ಮಾಜಿ ಶಾಸಕ ಕೆ.ಜಿ.ಬೋಪಯ್ಯ ಭಾಗವಹಿಸಿದ್ದರು.

ಐರ್ಲೆಂಡ್‌ಗೆ ಜಯದ ಸವಾಲು

ಸರಣಿ ಕೈವಶದತ್ತ ಚಿತ್ತ

ಸ್ಮೃತಿ ಮಂದಾನ

ರಾಜ್‌ಕೋಟ್ (ಪಿಟಿಐ): ಐರ್ಲೆಂಡ್ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ ಜಯಿಸಿದ ಸಂಭ್ರಮದಲ್ಲಿರುವ ಭಾರತ ಮಹಿಳಾ ತಂಡವು ಈಗ ಸರಣಿ ಕೈವಶದತ್ತ ಚಿತ್ತ ನೆಟ್ಟಿದೆ.

ಭಾನುವಾರ ಉಭಯ ತಂಡಗಳು ಎರಡನೇ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಸ್ಮೃತಿ ಮಂದಾನ ನಾಯಕತ್ವದ ತಂಡವು ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿದೆ. ಶುಕ್ರವಾರ ನಡೆದ ಪಂದ್ಯದಲ್ಲಿ ಆರಂಭಿಕ ಬ್ಯಾಟರ್ ಪ್ರತೀಕಾ ರಾವಳ್ ಮತ್ತು ತೇಜಲ್ ಸಬ್ನೀಸ್ ಅವರ ಅಮೋಘ ಅರ್ಧಶತಕಗಳ ಬಲದಿಂದ ಭಾರತ ತಂಡವು ಜಯಿಸಿತ್ತು.

ನಾಯಕಿ ಸ್ಮೃತಿ ಮಂದಾನ ಕೂಡ ಉತ್ತಮ ಲಯದಲ್ಲಿದ್ದಾರೆ. ಹರ್ಮನ್‌ಪ್ರೀತ್ ಕೌರ್ ಅವರ ಗೈರು ಹಾಜರಿಯಲ್ಲಿ ತಂಡವನ್ನು ಗೆಲುವಿನತ್ತ ಮುನ್ನಡೆಸುತ್ತಿದ್ದಾರೆ. ಅಲ್ಲದೇ ಇನಿಂಗ್ಸ್‌ಗೆ ಉತ್ತಮ ಆರಂಭ ನೀಡುತ್ತಿರುವುದರಿಂದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಮೇಲೆ ಒತ್ತಡ ಕಡಿಮೆಯಾಗಿದೆ. ಜೆಮಿಮಾ ರಾಡ್ರಿಗಸ್, ಹರ್ಲೀನ್ ಡಿಯೊಲ್ ಕೂಡ ಭರವಸೆಯ ಬ್ಯಾಟರ್‌ಗಳಾಗಿದ್ದಾರೆ.

ಬೌಲಿಂಗ್‌ನಲ್ಲಿ ರೇಣುಕಾ ಸಿಂಗ್ ಅವರ ಗೈರುಹಾಜರಿಯಲ್ಲಿ ಯುವ ಬೌಲರ್ ತಿತಾಸ್ ಸಾಧು, ಸ್ಪಿನ್ನರ್ ಪ್ರಿಯಾ ಮಿಶ್ರಾ ಮತ್ತು ದೀಪ್ತಿ ಶರ್ಮಾ ಅವರು ತಂಡಕ್ಕೆ ನೆರವು ನೀಡಬಲ್ಲವರು.

ಪ್ರವಾಸಿ ತಂಡದ ನಾಯಕ ಗ್ಯಾಬಿ ಲೂಯಿಸ್ ಮೊದಲ ಪಂದ್ಯದಲ್ಲಿ ಅಲ್ಪ ಅಂತರದಿಂದ ಶತಕ ತಪ್ಪಿಸಿಕೊಂಡಿದ್ದರು. ಲಿಹಾ ಪಾಲ್ ಕೂಡ ಅರ್ಧಶತಕ ಗಳಿಸಿದ್ದರು.

ಐಮಿ ಮೆಗೆರ್ 3 ವಿಕೆಟ್ ಪಡೆದು ಮಿಂಚಿದ್ದರು. ಇದೇ ಮೊದಲ ಬಾರಿ ಉಭಯ ತಂಡಗಳು ದ್ವಿಪಕ್ಷೀಯ ಸರಣಿಗಳಲ್ಲಿ ಮುಖಾಮುಖಿಯಾಗಿವೆ. ಆದ್ದರಿಂದ ಸರಣಿ ಜಯದ ಅವಕಾಶವನ್ನು ಜೀವಂತವಾಗಿಟ್ಟುಕೊಳ್ಳುವ ಛಲದಲ್ಲಿ ಪ್ರವಾಸಿ ಬಳಗವೂ ಇದೆ. ಅದರಿಂದಾಗಿ ಎರಡನೇ ಪಂದ್ಯದಲ್ಲಿ ಆತಿಥೇಯರಿಗೆ ಪ್ರತಿರೋಧವೊಡ್ಡಲು ಸಿದ್ಧವಾಗಿದೆ.

ಪಂದ್ಯ ಆರಂಭ: ಬೆಳಿಗ್ಗೆ 11

ಸಾತ್ವಿಕ್–ಚಿರಾಗ್ ಜೋಡಿಗೆ ಸೋಲು

ಕ್ವಾಲಾಲಂಪುರ (ಪಿಟಿಐ): ಮಲೇಷ್ಯಾ ಓಪನ್ 1000 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರ ಸ್ಫೂರ್ತಿಯುತ ಓಟ ಸೆಮಿಫೈನಲ್‌ನಲ್ಲಿ ಅಂತ್ಯಗೊಂಡಿತು ಭಾರತದ ಈ ಜೋಡಿ ಶನಿವಾರ ನಡೆದ ಪಂದ್ಯದಲ್ಲಿ ದಕ್ಷಿಣ-ಕೊರಿಯಾದ ಜೋಡಿಗೆ ನೇರ ಗೇಮ್‌ಗಳಿಂದ ಮಣಿಯಿತು.

ಕಿಮ್ ವಾನ್ ಹೊ- ಸಿಯೊ ಸಿಯೊಂಗ್ ಜೇ ಜೋಡಿ ನಾಲ್ಕರ ಘಟ್ಟದ ಪಂದ್ಯದಲ್ಲಿ 21–10, 21–15 ರಿಂದ ಏಳನೇ ಶ್ರೇಯಾಂಕದ ಸಾತ್ವಿಕ್- ಚಿರಾಗ್ ಜೋಡಿಯನ್ನು ಮಣಿಸಿತು.

ಆಸ್ಟ್ರೇಲಿಯಾ ಓಪನ್ ಟೆನಿಸ್ ಇಂದಿನಿಂದ: ಜೊಕೊವಿಚ್‌ಗೆ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗುರಿ

ಸಿನ್ನರ್, ಅರಿನಾಗೆ ಪ್ರಶಸ್ತಿ ಉಳಿಸುವ ಗುರಿ



ಕಾಂಗರೂ ಮರಿಯೊಂದಿಗೆ ಆರಿನಾ ಸಬಲೆಂಕಾ (ಎಡಚಿತ್ರ); ಕೊವಾಲಾ ಜೊತೆ ಆಟವಾಡಿದ ಯಾನಿಕ್ ಸಿನ್ನರ್

ಮೆಲ್ಬರ್ನ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ಉದ್ದೀಪನ ಮದ್ದುಸೇವನೆ ಹಗರಣವನ್ನು ಸದ್ಯಕ್ಕೆ ಮರೆತು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ನಿಕೋಲಸ್ ಜಾರ್ರಿ ವಿರುದ್ಧ ಆಡುವ ಮೂಲಕ ಪ್ರಶಸ್ತಿ ಅಭಿಯಾನ ಆರಂಭಿಸಲಿದ್ದಾರೆ. ಮಹಿಳಾ ವಿಭಾಗದಲ್ಲಿ ಅರಿನಾ ಸಬಲೆಂಕಾ ಅವರು ಸ್ಲೋನ್ ಸ್ಟೀಫನ್ಸ್ ವಿರುದ್ಧ ಆಡುವುದರೊಂದಿಗೆ ಹ್ಯಾಟ್ರಿಕ್ ಪ್ರಶಸ್ತಿಯೆಡೆಗೆ ಪಯಣ ನಡೆಸಲಿದ್ದಾರೆ.

15 ದಿನಗಳ ಈ ಟೂರ್ನಿ ಭಾನುವಾರ ಆರಂಭವಾಗಲಿದೆ.

2024ರಲ್ಲಿ ತಮ್ಮ ಅಗ್ರಪಟ್ಟ ಬಲಪಡಿಸಿರುವ ಯಾನಿಕ್ ಸಿನ್ನರ್ ಅವರು ಈ ಬಾರಿ 'ಹಾಟ್ ಫೇವರಿಟ್' ಆಗಿದ್ದಾರೆ. ಕಳೆದ ಬಾರಿ ಅವರು ಇದೇ ಟೂರ್ನಿಯ ಫೈನಲ್‌ನಲ್ಲಿ ಎರಡು ಸೆಟ್‌ಗಳ ಹಿನ್ನಡೆಯಿಂದ ಪುಟಿದೆದ್ದು ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರನ್ನು ಸೋಲಿಸಿ ಟ್ರೋಫಿ ಎತ್ತಿಹಿಡಿದಿದ್ದರು. ಸಿನ್ನರ್‌ಗೆ ಅದು ಮೊದಲ ಪ್ರಮುಖ ಪ್ರಶಸ್ತಿಯಾಗಿದ್ದು, ವರ್ಷದ ಕೊನೆಗೆ ಅವರು ಅಮೆರಿಕ ಓಪನ್‌ನಲ್ಲೂ ಪ್ರಾಬಲ್ಯ ಮೆರೆದು ಚಾಂಪಿಯನ್ ಆಗಿದ್ದರು.

23 ವರ್ಷ ವಯಸ್ಸಿನ ಸಿನ್ನರ್ ಪ್ರಾಬಲ್ಯ ಎಷ್ಟರ ಈಗ ಮಟ್ಟಿಗೆ ಇದೆ ಎಂದರೆ ಅವರಿಗೂ ಎರಡನೇ ಕ್ರಮಾಂಕದ ಅಲೆಕ್ಸಾಂಡರ್ ಜ್ವರೇವ್ ಅವರಿಗೂ 4000 ರ‍್ಯಾಂಕಿಂಗ್ ಪಾಯಿಂಟ್ಸ್ ಅಂತರವಿದೆ.

ಈ ಹಿಂದೆ ಜಾರ್ರಿ ವಿರುದ್ಧ ಆಡಿದ ಎರಡೂ ಪಂದ್ಯಗಳಲ್ಲಿ ಸಿನ್ನರ್ ವಿಜಯಿಯಾಗಿದ್ದಾರೆ. ಬೀಜಿಂಗ್‌ನಲ್ಲಿ ಕೊನೆಯ ಬಾರಿ (2024ರ ಸೆಪ್ಟೆಂಬರ್ ಎದುರಾದಾಗ ಸೆಟ್ ಕಳೆದುಕೊಂಡು ಚೇತರಿಸಿ ಗೆದಿದ್ದರು.

ಮಾರ್ಚ್‌ನಲ್ಲಿ ಅವರ ವಿರುದ್ಧ ಉದ್ದೀಪನ ಮದ್ದು (ಕ್ಲೋಸ್ಟ್‌ಬಾಲ್) ಸೇವನೆ ಕಳಂಕ ಕೇಳಿಬಂದಿತ್ತು. ಅವರಿಗೆ ಟೆನಿಸ್ ಇಂಟೆಗ್ರಿಟಿ ಏಜನ್ಸಿ ಕ್ಲೀನ್ ಚಿಟ್ ನೀಡಿದರೂ, ಇದರ ವಿರುದ್ಧ 'ವಾಡಾ' ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯದ ಮೊರೆ ಹೋಗಿದ್ದು, ಏಪ್ರಿಲ್ 16–17ಕ್ಕೆ ವಿಚಾರಣೆ ನಿಗದಿಯಾಗಿದೆ.

ಕಡೆಯ ನಾಲ್ಕು ಪ್ರಯತ್ನಗಳಲ್ಲಿ ಮೂರು ಬಾರಿ ಫೈನಲ್ ತಲುಪಿರುವ ಮೆಡ್ವೆಡೇವ್ ಅವರ ಮೊದಲ ಸುತ್ತಿನ ಎದುರಾಳಿ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿರುವ ಥಾಯ್ಲೆಂಡ್‌ನ ಕಸಿದಿತ್ ಸಮ್ರೆಜ್.

ಡ್ರಾದ ಇನ್ನೊಂದು ಭಾಗದಲ್ಲಿ ಹತ್ತು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಮತ್ತು ಕಾರ್ಲೊಸ್ ಅಲ್ಕರಾಜ್ ಇದ್ದಾರೆ. ಎಲ್ಲವೂ ನಿರೀಕ್ಷೆಯಂತೆ ಸಾಗಿದಲ್ಲಿ ಇವರಿಬ್ಬರು ಎಂಟರ ಘಟ್ಟದಲ್ಲಿ ಮುಖಾಮುಖಿಯಾಗಬಹುದು.

21 ವರ್ಷ ವಯಸ್ಸಿನ ಅಲ್ಕರಾಜ್ ಅವರು ಇಲ್ಲಿ ಗೆದ್ದರೆ ಎಲ್ಲ ಪ್ರಮುಖ ನಾಲ್ಕು ಗ್ರ್ಯಾನ್‌ಸ್ಲಾಮ್ ಟೂರ್ನಿಗಳನ್ನು ಗೆದ್ದಂತಾಗಲಿದೆ. ಮೆಲ್ಬರ್ನ್‌ನಲ್ಲಿ ಅವರು ಎಂದೂ ಎಂಟರ ಘಟ್ಟಕ್ಕಿಂತ ಮೇಲೆ ಏರಿಲ್ಲ.

37ರ ವಯಸ್ಸಿನಲ್ಲೂ ಗಂಭೀರ ಸವಾಲಿಗನಾಗಿರುವ ಜೊಕೊವಿಚ್, ಇಲ್ಲಿ 11ನೇ ಪ್ರಶಸ್ತಿಯ ಯತ್ನದಲ್ಲಿದ್ದಾರೆ. ಅವರು ಇಲ್ಲಿ ಚಾಂಪಿಯನ್ ಆದಲ್ಲಿ, ಆಸ್ಟ್ರೇಲಿಯಾದ ಆಟಗಾರ್ತಿ ಮಾರ್ಗರೇಟ್ ಕೋರ್ಟ್ ಅವರನ್ನು ಹಿಂದೆಹಾಕಿ 25 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡೆಯ ಎನಿಸಲಿದ್ದಾರೆ. ಅವರು ಅಮೆರಿಕದ ಹದಿ ಹರೆಯದ ಆಟಗಾರ, ಆಂಧ್ರ ಮೂಲದ ನಿಶೇಷ್ ಬಸವರೆಡ್ಡಿ ವಿರುದ್ಧ ಅಭಿಯಾನ ಆರಂಭಿಸುವರು.

ಮಹಿಳೆಯರ ವಿಭಾಗದಲ್ಲಿ ಮಾರ್ಟಿನಾ ಹಿಂಗಿಸ್ ನಂತರ (1997–99) ಸತತ ಮೂರು ವರ್ಷ ಪ್ರಶಸ್ತಿ ಗೆದ್ದ ಮೊದಲ ಆಟಗಾರ್ತಿ ಎಂಬ ಗೌರವ ಪಡೆಯಲು ಬೆಲಾರಸ್‌ನ ಅರಿನಾ ಸಬಲೆಂಕಾ ಪ್ರಯತ್ನ ನಡೆಸಲಿದ್ದಾರೆ.

ಮೂರನೇ ಕ್ರಮಾಂಕದ ಕೋಕೊ ಗಾಫ್ ಅವರು ಮೊದಲ ಸುತ್ತಿನಲ್ಲಿ 2020ರ ಚಾಂಪಿಯನ್ ಸೋಫಿಯಾ ಕೆನಿನ್ ಅವರ ಸವಾಲನ್ನು ಎದುರಿಸಬೇಕಿದೆ. ಪೋಲೆಂಡ್‌ನ ಆಟಗಾರ್ತಿ ಇಗಾ ಶ್ವಾಂಟೆಕ್ ಅವರ ಮೊದಲ ಸುತ್ತಿನ ಎದುರಾಳಿ ಡಬಲ್ಸ್ ಪರಿಣತೆ ಕ್ಯಾತರಿನಾ ಸಿನಿಕೋವಾ.